Roll No.3

Roll No.3

# Roll No. 3

Roll No: 3

Roll No. 3

# MYSORE ROYAL FAMILY
# ANNALS

COLLECTIONS BY.

Y. S. Shankaran. Mysore
Contd:

# MYSORE ROYAL FAMILY
## ANNALS

COLLECTIONS BY.

Y. S. Shankaran. Mysore
Contd:

ಮೈಸೂರಿನ ಆಳಿದ ಮಹಾಸ್ವಾಮಿಯವರಾದ

# ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರವರು

ಮಹಾಸ್ವಾಮಿಯವರ ಪುಜೂರು ಸೆಕ್ರೆಟರಿಯವರಾದ

ರಾಜಸಭಾಭೂಷಣ

ಶ್ರೀಮಾನ್ ಟಿ. ತಂಬೂಚೆಟ್ಟಿ, ಬಿ.ಎ., ಫ್.ಬಿ.ಇ., ಕೆ.ಎಸ್.ಜಿ. ಅವರು

ಸಂಗ್ರಹಿಸಿಕೊಟ್ಟರು

ಎಂ. ಕಿಂಗ್ಸ್ಯ್ಯನವರು ರವರಿಂದ ಪ್ರಕಟಿಸಲ್ಪಟ್ಟಿತು

ಮೈಸೂರು

ನ್ಯೂ ಫ್ರೆಂಡ್ಸ್ ಮೆಷ್ಟ್ರಿಪ್ರಿಂಟಿಂಗ್ ಹೌಸ್

೧೯೪೦

(*All Rights Reserved*)

ಆಳಿದ ಮಹಾಸ್ವಾಮಿಯವರಾದ

ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್,

ಜಿ.ಸಿ.ಎಸ್.ಐ., ಜಿ.ಬಿ.ಇ., ಇವರು

ಆಳಿದ ಮಹಾಸ್ವಾಮಿಯವರಾದ

ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್

ಜಿ.ಸಿ.ಎಸ್.ಐ., ಜಿ.ಬಿ.ಇ., ಅವರು

ಮೈಸೂರಿನ ಅಳಿದ ಮಹಾಸ್ವಾಮಿಯವರಾದ

# ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರವರು

ವ ಶ್ರೀ ಲಣ

ಮಹಾರಾಣ್ಮಿಯವರ ಮಜೂರು ಸೆಕ್ರೆಟೆರಿಯವರಾದ

ರಾಜನಭಾಭೂಷಣ

ಶ್ರೀಮಾನ್ ಟಿ. ತಂಬೂಜೆಟ್ಟಿ, ಬಿ.ಎ., ಓ.ಬಿ.ಇ., ಕೆ.ಎಸ್.ಜಿ. ಅವರು

ಮಾಡಿಸಿದ ಚರಿತ್ರೆ

ಎಂ. ಶಿಂಗ್ರಯ್ಯನವರಿಂದ ರಚಿಸಲ್ಪಟ್ಟದ್ದು

ಮೈಸೂರು

ವೆಸ್ಲಿ ಪ್ರೆಸ್ ಮತ್ತು ಪಬ್ಲಿಷಿಂಗ್ ಹೌಸ್

೧೯೪೧

(*All Rights Reserved*)

ಚಿರಸ್ಮರ್ಣೀಯರ್ಹರಾಂ ಯದುಸಂತಾನ ಶ್ರೀಃ

ಈ ಪುಸ್ತಕದ ಸರ್ವಸ್ವಾಮ್ಯವೂ ಗ್ರಂಥಕರ್ತರಿಗೇ ಸೇರಿದೆ

ಶ್ರೀಮತ್ಕರ್ನಾಟಕ ಸಿಂಹಾಸನಾಧೀಶ್ವರ

**ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್**

ಮಹಾಸ್ವಾಮಿಯವರ ದಿವ್ಯ ಸನ್ನಿಧಾನದಲ್ಲಿ

ಗ್ರಂಥಕರ್ತನು

ರಾಜಭಕ್ತಿಪೂರ್ವಕವಾಗಿ ಗೌರವದಿಂದ ಸಮರ್ಪಿಸಿದ ಕಾಣಿಕೆ

# ಉಪೋದ್ಘಾತ

ಒಬ್ಬ ಸಾಮಾನ್ಯ ಪುರುಷನ ಜರಿತ್ರೆಯೂ ಕೂಡ ಪಾಠಕರಿಗೆ ಮನೋಹರವೂ ಜ್ಞಾನಬೋಧಕವೂ ಆಗಿ ಏರ್ಪಡುವ ಸಂದರ್ಭದಲ್ಲಿ ಈ ಗ್ರಂಥಕ್ಕೆ ಅಧಿನಾಯಕರಾಗಿ ಆದರ್ಶಪ್ರಭುಗಳೆಂದು ಪ್ರಖ್ಯಾತರಾದ ಶ್ರೀಮನ್ಮಾಲ್ಲಡಿ ಶ್ರೀ ಕೃಷ್ಣರಾಜ ಒಡೆಯರವರ ಜೀವನ ಚರಿತ್ರೆಯು ಎಷ್ಟು ಮಹತ್ವವುಳ್ಳದೆಂಬುದನ್ನು ಹೇಳಬೇಕಾದುದಿಲ್ಲ. ಮಹಾಸಾಮ್ರಾಜ್ಞಿಯವರ ಪರಲೋಕವಾಸದಿಂದ ಮೈಸೂರು ಸಂಸ್ಥಾನವು ಪ್ರಜಾವತ್ಸಲರಾದ ಅರಸರನ್ನೂ ಭಾರತವು ರಾಜರ್ಷಿಸಮಾನರಾದ ಆದರ್ಶನರೇಶ್ವರನ್ನೂ, ಜಗತ್ತು ಪುಣ್ಯಮಾನ್ವಿತರಾದ ಮಹಾಪುರುಷರೊಬ್ಬರನ್ನೂ ಕಳೆದುಕೊಂಡಿರುತ್ತದೆ. ರಾಷ್ಟ್ರದ ನಾನಾಭಾಗಗಳಲ್ಲಿರುವ ರಾಜಾಧ್ಯಕ್ಷಜೀವ ಸಮರ್ಥರೂ, ರಾಜಕಾರ್ಯ ಧುರಂಧರರೂ, ಪ್ರಜಾಪ್ರಮುಖರೂ ಮಹಾಸಾಮ್ರಾಜ್ಞಿಯವರ ಸ್ವರ್ಗಾರೋಹಣದ ವಾರ್ತೆಯನ್ನು ಕೇಳಿದ ಕೂಡಲೇ ಶೋಕಪೂರಿತ ಹೃದಯದಿಂದ ವ್ಯಕ್ತಪಡಿಸಿರುವ ಸಹಸ್ರಾರು ಅಭಿಪ್ರಾಯಗಳು ಮೈಸೂರು ಸಂಸ್ಥಾನದಲ್ಲಿ ಮಾತ್ರವಲ್ಲದೆ, ಅಖಿಲ ಭಾರತದಲ್ಲೂ ಯದುವಂಶತಿಲಕರಾದ ನಮ್ಮ ಪ್ರಭುಗಳು ಎಂತಹ ಗಣ್ಯಸ್ಥಾನವನ್ನು ಪಡೆದಿದ್ದರೆಂಬುವುದಕ್ಕೆ ನಿದರ್ಶನವಾಗಿರುತ್ತವೆ. ಯೋಗಿ, ರಾಜರ್ಷಿ, ಆದರ್ಶನರೇಂದ್ರ ಎಂಬ ಪ್ರಶಸ್ತಿಗಳು ಶ್ರೀ ಕೃಷ್ಣರಾಜರವರ ವಿಚಾರದಲ್ಲಿ ಔಪಚಾರಿಕವಲ್ಲ, ವಾಸ್ತವದಲ್ಲಿ ಅವುಗಳ ಸಾರ್ಥಕತೆಯು ಭಾರತದಲ್ಲಿ ಮೈಸೂರರಸರಿಗೆ ಮಾತ್ರವೇ ಸಲ್ಲತಕ್ಕದ್ದೆಂಬುದನ್ನು ಖಚಿತವಾಗಿ ಸ್ಪಷ್ಟಗೊಳಿಸಿದೆ.

ಶ್ರೀಮನ್ಮಹಾರಾಜರವರು ಆದರ್ಶಗಳೆನಿಸಿದ ರಾಜಕೀಯವಾದ ಆಡಳಿತಗಳು, ರಾಜ್ಯಾಂಗ ಪದ್ಧತಿಗಳ ಪರಿವರ್ತನದ ಸಂಧಿಕಾಲದಲ್ಲಿ, ೩೮ ವರ್ಷಗಳ ಕಾಲ ಆಡಳಿತ ನಡೆಸಿದರಾದರೂ ಅವರ ಆಳಿಕೆಯ ಇತಿಹಾಸವೂ, ಜೀವನ ಚರಿತ್ರೆಯೂ, ಬಂದು ದೇಶಕ್ಕೆ ಬಂದು ಜನಾಂಗಕ್ಕೆ ಉತ್ಸಾಹಸ್ಫೂರ್ತಿಗಳನ್ನು ಉಂಟುಮಾಡುವಂತಹ ರಾಷ್ಟ್ರೀಯ ಪ್ರಗಾಥವಾಗಿರುತ್ತವೆ. ಮಹಾಸಾಮ್ರಾಜ್ಞಿಯವರ ಸಮಯಸ್ಫೂರ್ತಿ, ಧರ್ಮಪ್ರಿಯತೆ,

ನ್ಯಾಯಸಿಷ್ಠೆ, ಪ್ರಜಾವಾತ್ಸಲ್ಯ, ಕಲಾಪ್ರೇಮ, ಸಂಗೀತಾಭಿರುಚಿ, ದೂರದೃಷ್ಟಿಗಳೇ ಅವರ ಜೀವನದ ಮಟ್ಟವನ್ನು ದೇವತ್ವಕ್ಕೇರಿಸಿತು. ಅವರನ್ನು ಪಡೆದ ಯದುಸಂತಾನವನ್ನು ಪಾವನಗೊಳಿಸಿತು. ಅವರನ್ನು ಬೆಳೆಸಿದ ಮೈಸೂರನ್ನು ಸರ್ವತೋಮುಖವಾದ ಪ್ರಗತಿಪಥದಲ್ಲಿ ನಡೆಸಿ, ಅದನ್ನು ಭಾರತದ ಆದರ್ಶ ಸಂಸ್ಥಾನವನ್ನಾಗಿ ಮಾಡಿತು. ಇಂತಹ ಪ್ರಭುವರ್ಯರ ಸೇವೆಯನ್ನು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಮಾಡಿ, ಅದನ್ನು ಒಂದು ಗ್ರಂಥರೂಪವಾಗಿ ಬರೆಯುವ ಸುಯೋಗವು ನನಗೆ ದೊರೆತುದು ಒಂದು ಭಾಗ್ಯವಿಶೇಷವೆಂದು ಭಾವಿಸುತ್ತೇನೆ.

ನಾನು ಹಿಂದೆ ೧೯೦೩ನೆಯ ಇಸವಿಯಲ್ಲಿ ಮಹಾಸ್ವಾಮಿಯವರ ಕಿರಿಯ ಸಹೋದರರಾದ ಶ್ರೀ ಚಾಮರಾಜೇಂದ್ರ ಒಡೆಯರ್ ಬಹದ್ದೂರ್. ಜೆ.ಸಿ.ಎಸ್.ಐ., ಅವರ ಜೀವನ ಚರಿತ್ರೆಯನ್ನು ಬರೆದು ವಾಚಕರ ಬ್ರುಂದದ ಚರಣಾಗಳಲ್ಲಿ ಸಮರ್ಪಿಸಿರುವುದು ಅನೇಕರು ನೆನಸಿನಲ್ಲಿರಬಹುದು. ಈಗ ಅವರ ಪುತ್ರವರ್ಯರಾದ ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್, ಜೆ.ಸಿ.ಎಂ.ಎಸ್.ಐ., ಜಿ.ಬಿ.ಇ., ಯವರ ಚರಿತ್ರೆಯನ್ನು ಬರೆದು ಕನ್ನಡ ವಾಙ್ಮಯದ ಸೇವೆಯನ್ನು ಕೈಲಾದ ಮಟ್ಟಿಗೂ ಮಾಡುವ ಯೋಗವು ಪುನಃ ನನ್ನ ಪಾಲಿಗೆ ಲಭಿಸಿದುದನ್ನು ಕರ್ನಾಟದೇಶದ ಪ್ರಜೆಗಳ ಸನ್ನಿಧಿಯಲ್ಲಿ ಅರಿಕೆಮಾಡುತ್ತೇನೆ.

ನಾನು ಈ ಗ್ರಂಥವನ್ನು ಬರೆದ ಬಳಿಕ, ಈಗ ನಮ್ಮಗಳನ್ನೆಲ್ಲ ಆಳುತ್ತಿರುವ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಮಹಾ ಪ್ರಭುಗಳು, ನನ್ನ ವಿಜ್ಞಾಪನೆಯನ್ನು ದಯಾರ್ದ್ರಹೃದಯರಾಗಿ ಲಾಲಿಸಿ ಈ ಪುಸ್ತಕಕ್ಕೆ ಮೂಲ ಪ್ರತಿಯಾದ ಹಸ್ತಲೇಖನವನ್ನು ಆಮೂಲಾಗ್ರವಾಗಿ ಪರಾಮರ್ಶಿಸಿ, ರಾಜಪದವ್ಯಾಪ್ತಿಗೆ ತಕ್ಕಂತೆ ದ್ರವ್ಯಸಹಾಯವನ್ನೂ ಮುದ್ರಣಕ್ಕೆ ಅಪ್ಪಣೆಯನ್ನೂ ದಯಪಾಲಿಸಿದರು. ಇದನ್ನು ನೋಡಿದರೆ, ವಿದ್ಯಾವಿದಗ್ಧತೆಯಿಂದ ಶೋಭಿಸುತ್ತ ನಾನಾ ಶಾಸ್ತ್ರ ವಿಶೇಷ ವಿಜ್ಞಾನದಿಂದ ವಿರಾಜಮಾನರಾದ ಮಹಾಸ್ವಾಮಿಯವರ ಉದಾರತೆಯೂ ಆಶ್ರಿತ ವಾತ್ಸಲ್ಯವೂ ಸ್ಪಷ್ಟವಾಗಿ ಸ್ಫುರಿಸುತ್ತಿರುವುದಲ್ಲವೆ?

ಬಳಿಕ ಮಹಾಸ್ವಾಮಿಯವರ ಹುಜೂರು ಸೆಕ್ರೆಟೆರಿಯವರಾದ ರಾಜ ಸಭಾಭೂಷಣ ಶ್ರೀಯುತ ಟಿ. ತಂಬೂಚೆಟ್ಟಿ, ಬಿ.ಎ., ಬಿ.ಬಿ.ಇ.

ಕೆ.ಎಸ್.ಜಿ., ಯವರು ಈ ಗ್ರಂಥವನ್ನು ಪ್ರಕಾರ ಮೊದಲು ಬೆಳಕಿಗೆ ಬರುವಂತೆ ಮಾಡಿ, ಅರಮನೆಯಿಂದ ಸಕಲವಿಧವಾದ ಸಹಾಯವನ್ನೂ ಒದಗಿಸಿಕೊಟ್ಟ ಮುನ್ನುಡಿಯನ್ನು ಬರೆದುಕೊಟ್ಟಿದಕ್ಕಾಗಿ ಆ ಮಹಾನುಭಾವರಿಗೆ ಚಿರ ಋಣಿಯಾಗಿರುತ್ತೇನೆ.

ನಾನು ಈ ಪುಸ್ತಕವನ್ನು ಬರೆಯುವಾಗ, ಅನೇಕ ವೃತ್ತಪತ್ರಿಕೆಗಳು ಬಲುಮಟ್ಟಿಗೆ ಸಹಾಯಮಾಡಿರುವುದರಿಂದ, ಅವುಗಳ ಸಂಪಾದಕರುಗಳಲ್ಲಿ ನನ್ನ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ. ಈ ಪುಸ್ತಕವನ್ನು ದಯವಿಟ್ಟು ಪರಿಶೋಧಿಸಿಕೊಟ್ಟ ಅರಮನೆ ಧರ್ಮಾಧಿಕಾರಿ ರಿಟೈರ್ಡ್ ಪಂಡಿತರು ತಿರುವಳ್ಳೂರು ಶ್ರೀನಿವಾಸರಾಘವಾಚಾರ್ಯರಿಗೂ ಮತ್ತು ನನ್ನ ಮಿತ್ರರಾದ ಆ. ನ. ಕೃಷ್ಣರಾಯರಿಗೂ ನನ್ನ ವಂದನೆಗಳನ್ನು ಸಮರ್ಪಿಸುವೆನು.

ಈ ಉಪೋದ್ಘಾತದ ಉಪಸಂಹಾರದಲ್ಲಿ ಪಾಠಕಮಹಾಶಯರನ್ನು ಕೇಳಿಕೊಳ್ಳಬೇಕಾದ ಕ್ಷುಲ್ಲಕವಾದೊಂದುಂಟು. ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರವರ ಜೀವನಚರಿತ್ರೆಯಲ್ಲಿ ನಡೆದ ಅನೇಕ ವಿಷಯಗಳು ಈ ಗ್ರಂಥದಲ್ಲಿ ಅಡಕವಾಗದೆ ಇರಬಹುದು. ನನಗೆ ತಿಳಿದಂತೆಯೇ ಅವರ ದೇಶಸಂಚಾರಕ್ಕೆ ಸಂಬಂಧಪಟ್ಟು ಅವರ ಕಾಲದಲ್ಲಿ ಬಂದಿದ್ದ ವೈಸರಾಯರುಗಳ ಮತ್ತು ರಾಜರುಗಳ ಹಲವು ಸಂಗತಿಗಳನ್ನು ಗ್ರಂಥವಿಸ್ತಾರ ಭಯದಿಂದ ಬಿಟ್ಟಿರುವೆನು. ಆದರೆ ಈಗ ರಚಿಸಿರುವ ಗ್ರಂಥವೇ ನನ್ನ ಉದ್ದೇಶವನ್ನು ಸಾರ್ಥಕಗೊಳಿಸಿ ಪಾಠಕಮಹಾಶಯರ ಮನಸ್ಸನ್ನು ತೃಪ್ತಿಗೊಳಿಸುವುದಾದರೆ, ಇದರಲ್ಲಿ ಕಾಣಬರುವ ನ್ಯೂನತೆಗಳನ್ನೆಲ್ಲ ಮುಂದಿನ ಮುದ್ರಣದಲ್ಲಿ ಪರಿಹಾರಮಾಡಿ ಗ್ರಂಥವನ್ನು ಇನ್ನೂ ವೃದ್ಧಿಗೊಳಿಸಬೇಕೆಂದಿರುವೆನು. ಆದುದರಿಂದ ಪಾಠಕಮಹಾಶಯರು ಈ ನನ್ನ ಪ್ರಯತ್ನದಲ್ಲಿ ಗುಣದೋಷ ವಿಚಾರ ಮಾಡಿ ಕಿಂಚಿನ್ನೂನತೆಗಳಿದ್ದರೆ ಉದಾರಚಿತ್ತದಿಂದ ನನಗೆ ತಿಳಿಯಪಡಿಸುವೀಕೆಂದು ವಿನಯವಾಗಿ ಪ್ರಾರ್ಥಿಸುತ್ತೇನೆ.

ನಾರಾಯಣ ಕಾಲೇಜ್,
ಕೃಷ್ಣರಾಜ ಮೊಹಲ್ಲಾ, ಮೈಸೂರು,
ತಾರೀಖು ೧೯೧೧.

ಎಂ. ಶೇಷಗಿರಿ ರಾವ್

ನ್ಯಾಯನಿಷ್ಠೆ, ಪ್ರಜಾವಾತ್ಸಲ್ಯ, ಕಲಾಪ್ರೇಮ, ಸಂಗೀತಾಭಿರುಚಿ ದೂರದೃಷ್ಟಿಗಳೇ ಅವರ ಜೀವನದ ಬುಟ್ಟಿವನ್ನು ದೇವತ್ವಕ್ಕೇರಿಸಿತು. ಅವರನ್ನು ಬೆಳೆಸಿದ ಮೈಸೂರನ್ನು ಸರ್ವತೋಮುಖವಾದ ಪ್ರಗತಿಪಥದಲ್ಲಿ ನಡೆಸಿ, ಅದನ್ನು ಭಾರತದ ಆದರ್ಶಸಂಸ್ಥಾನವನ್ನಾಗಿ ಮಾಡಿತು. ಇಂತಹ ಪ್ರಭುವರ್ಯರ ಸೇವೆಯನ್ನು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಮಾಡಿ, ಅದನ್ನು ಒಂದು ಗ್ರಂಥರೂಪವಾಗಿ ಬರೆಯುವ ಸುಯೋಗವು ನನಗೆ ದೊರೆತುದು ಒಂದು ಭಾಗ್ಯವಿಶೇಷವೆಂದು ಭಾವಿಸುತ್ತೇನೆ.

ನಾನು ಹಿಂದೆ ೧೯೧೩ನೆಯ ಇಸವಿಯಲ್ಲಿ ಮಹಾನ್ವಾಮಿಯವರ ಪಿತೃವರ್ಯರಾದ ಶ್ರೀ ಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಐ.ಎ., ಅವರ ಜೀವನ ಚರಿತ್ರೆಯನ್ನು ಬರೆದು ವಾಚಕರ ಮನಂದಣಿಗಳಲ್ಲಿ ಸಮರ್ಪಿಸಿರುವುದು ಅನೇಕರ ನೆನಪಿನಲ್ಲಿರಬಹುದು. ಈಗ ಅವರ ಪುತ್ರವರ್ಯರಾದ ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ.ಸಿ.ಐ.ಎಸ್.ಐ., ಜಿ.ಬಿ.ಇ., ಯವರ ಚರಿತ್ರೆಯನ್ನು ಬರೆದು ಕನ್ನಡ ವಾಙ್ಮಯದ ಸೇವೆಯನ್ನು ಕೈಲಾದ ಮಟ್ಟಿಗೂ ಮಾಡುವ ಯೋಗವು ಪುನಃ ನನ್ನ ಪಾಲಿಗೆ ಲಭಿಸಿದುದನ್ನು ಕರ್ಣಾಟದೇಶದ ಪ್ರಜೆಗಳ ಸನ್ನಿಧಿಯಲ್ಲಿ ಅರಿಕೆಮಾಡುತ್ತೇನೆ.

ನಾನು ಈ ಗ್ರಂಥವನ್ನು ಬರೆದ ಬಳಿಕ, ಈಗ ನಮ್ಮ ಗಳನ್ನೆಲ್ಲ ಆಳುತ್ತಿರುವ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಮಹಾ ಪ್ರಭುಗಳು, ನನ್ನ ವಿಜ್ಞಾಪನೆಯನ್ನು ದಯಾರ್ದ್ರಹೃದಯರಾಗಿ ಆಲಿಸಿ, ಈ ಪುಸ್ತಕಕ್ಕೆ ಮೂಲ ಪ್ರತಿಯಾದ ಹಸ್ತಲೇಖನವನ್ನು ಆಮೂಲಾಗ್ರವಾಗಿ ಪರಾಮರ್ಶಿಸಿ, ರಾಜಪದಾನ್ಯತೆಗೆ ತಕ್ಕಂತೆ ದ್ರವ್ಯಸಹಾಯವನ್ನೂ ಮುದ್ರಣಕ್ಕೆ ಅಪ್ಪಣೆಯನ್ನೂ ದಯಪಾಲಿಸಿದರು. ಇದನ್ನು ನೋಡಿದರೆ ವಿದ್ಯಾವಿದಗ್ಧತೆಯಿಂದ ಶೋಭಿಸುತ್ತ ನಾನಾ ಶಾಸ್ತ್ರ ವಿಶೇಷ ವಿಜ್ಞಾನ ನಿಧಿಯಿಂದ ವಿರಾಜಮಾನರಾದ ಮಹಾನ್ವಾಮಿಯವರ ಉದಾರತೆಯೂ ಚಿತ್ರಕ ವಾತ್ಸಲ್ಯವೂ ಸ್ಪಷ್ಟವಾಗಿ ಸ್ಫುರಿಸುತ್ತಿರುವುದಲ್ಲವೆ?

ಬಳಿಕ ಮಹಾನ್ವಾಮಿಯವರ ಹುಜೂರು ಸೆಕ್ರೆಟೆರಿಯವರಾದ ರಾವ್ ಸಾಹೇಬ್ ಶ್ರೀಮಾನ್ ಟಿ. ತಂಬೂಚೆಟ್ಟಿ, ಬಿ.ಎ., ಬಿ.ಜಿ.ಇ.

ಕೆ.ಎನ್.ಜಿ., ಯವರು ಈ ಗ್ರಂಥವನ್ನು ಪ್ರಕಾರ ಹೊಂದಿ ಬೆಳಕಿಗೆ ಬರುವಂತೆ ಮಾಡಿ, ಅರಮನೆಯಿಂದ ಸಕಲಸಂಭವವಾದ ಸಹಾಯವನ್ನೂ ಒದಗಿಸಿಮನ್ನುಡಿಯನ್ನು ಬರೆದುಕೊಟ್ಟುದಕ್ಕಾಗಿ ಆ ಮಹಾನುಭಾವರಿಗೆ ಚಿರಋಣಿಯಾಗಿರುತ್ತೇನೆ.

ನಾನು ಈ ಪುಸ್ತಕವನ್ನು ಬರೆಯುವಾಗ, ಅನೇಕ ವೃತ್ತಪತ್ರಿಕೆಗಳು ಬಲುಮಟ್ಟಿಗೆ ಸಹಾಯಮಾಡಿರುವುದರಿಂದ, ಅವುಗಳ ಸಂಪಾದಕರುಗಳಲ್ಲನನ್ನ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ. ಈ ಪುಸ್ತಕವನ್ನು ದಯಪಟ್ಟು ಪರಿಶೋಧಿಸಿಕೊಟ್ಟ ಅರಮನೆ ಧರ್ಮಾಧಿಕಾರಿ ರಟ್ಟಿಹಳ್ಳಿ ಪಂಡಿತರು ತಿರುವಳ್ಳೂರು ಶ್ರೀನಿವಾಸರಾಘವಾಚಾರ್ಯರಿಗೂ ಮತ್ತು ನನ್ನ ಮಿತ್ರರಾದ ಆ. ನ. ಕೃಷ್ಣರಾಯರಿಗೂ ನನ್ನ ವಂದನೆಗಳನ್ನು ಸಮರ್ಪಿಸುವೆನು.

ಈ ಉಪೋದ್ಘಾತದ ಉಪಸಂಹಾರದಲ್ಲಿ ಪಾಠಕಮಹಾಶಯರನ್ನು ಕೇಳಿಕೊಳ್ಳಬೇಕಾದ ಕ್ಷಮಾಪಣೆಯೊಂದುಂಟು. ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರವರ ಜೀವನಚರಿತ್ರೆಯಲ್ಲಿ ಸೇರಿದ ಅನೇಕ ವಿಷಯಗಳು ಈ ಗ್ರಂಥದಲ್ಲಿ ಅಚಕವಾಗದೆ ಇರಬಹುದು. ನನಗೆ ತಿಳಿದಂತೆಯೇ ಅವರ ದೇಶಸಂಚಾರಕ್ಕೆ ಸಂಬಂಧಪಟ್ಟ, ಅವರ ಕಾಲದಲ್ಲಿ ಬಂದಿದ್ದ ವೈಸರಾಯರುಗಳ ಮತ್ತು ರಾಜರುಗಳ ಹಲವು ಸಂಗತಿಗಳನ್ನು ಗ್ರಂಥವಿಸ್ತಾರ ಭಯದಿಂದ ಬಿಟ್ಟಿರುವೆನು. ಆದರೆ ಈಗ ರಚಿಸಿರುವ ಗ್ರಂಥವೇ ನನ್ನ ಉದ್ದೇಶವನ್ನು ಸಾರ್ಥಕಗೊಳಿಸಿ ಪಾಠಕಮಹಾಶಯರ ಮನಸ್ಸನ್ನು ಹರ್ಷಗೊಳಿಸುವುದಾದರೆ, ಇದರಲ್ಲಿ ಕಾಣಬರುವ ನ್ಯೂನತೆಗಳನ್ನೆಲ್ಲ ಮುಂದಿನ ಮುದ್ರಣದಲ್ಲಿ ಪರಿಹಾರಮಾಡಿ ಗ್ರಂಥವನ್ನು ಇನ್ನೂ ವೃದ್ಧಿಗೊಳಿಸಬೇಕೆಂದಿರುವೆನು. ಆದುದರಿಂದ ಪಾಠಕಮಹಾಶಯರು ಈ ನನ್ನ ಪ್ರಯತ್ನದಲ್ಲಿ ಗುಣದೋಷ ವಿಚಾರ ಮಾಡಿ ಕಿಂಚಿನ್ನ್ಯೂನತೆಗಳಿದ್ದರೆ ಉದಾರಚಿತ್ತದಿಂದ ನನಗೆ ತಿಳಿಯಪಡಿಸಬೇಕೆಂದು ಸವಿನಯವಾಗಿ ಪ್ರಾರ್ಥಿಸುತ್ತೇನೆ.

ನಾರಾಯಣ ಕಾಟೇಜ್,
ಕೃಷ್ಣರಾಜ ಮೊಹಲ್ಲಾ, ಮೈಸೂರು,
ಇಸೇ ಮಾರ್ಚಿ ೧೯೪೧.

ಎಂ. ಗೋಪಾಲಯ್ಯ

ಎಂ. ಶಿಂಗ್ರಯ್ಯ, ಗ್ರಂಥಕರ್ತ

# ವಿಷಯ ಸೂಚಿಕೆ


| | ಪುಟ |
|---|---|
| ೧ನೆಯ ಅಧ್ಯಾಯ—ಜನನ ಮತ್ತು ನಾಮಕರಣ ಮಹೋತ್ಸವ .... | ೧ |
| ೨ನೆಯ ಅಧ್ಯಾಯ—ಚೌಲ, ಅಕ್ಷರಾಭ್ಯಾಸ, ಬೊಂಬಾಯಿಗೆ ಪ್ರಯಾಣ, ಪಿತೃವಿಯೋಗ, ರೀಜನ್ಸಿ ಏರ್ಪಾಡು .... .... | ೫ |
| ೩ನೆಯ ಅಧ್ಯಾಯ—ಪಟ್ಟಾಭಿಷೇಕ ಮಹೋತ್ಸವ .... .... | ೧೦ |
| ೪ನೆಯ ಅಧ್ಯಾಯ—ಲಾರ್ಡ್ ಎಲ್ಗಿನ್‌ರವರ ಆಗಮನ, ಉಪನಯನ, ವಿದ್ಯಾಭ್ಯಾಸವೆಲ್ಲಿ ಬಡಲಾವಣೆ, ಶ್ರೀ ಜಯಲಕ್ಷ್ಮಮ್ಮಣ್ಣಿಯವರ ವಿವಾಹ, ಅರಮನೆಗೆ ಅಗ್ನಿಯಿಂದುಂಟಾದ ಅಪಘಾತ, ಸ್ವದೇಶ ಸಂಚಾರ, ಉತ್ತರದೇಶ ಸಂಚಾರ .... | ೧೫ |
| ೫ನೆಯ ಅಧ್ಯಾಯ—ವಿವಾಹ ಮಹೋತ್ಸವ, ಬರ್ಮಾ ಪ್ರಯಾಣ .... | ೨೨ |
| ೬ನೆಯ ಅಧ್ಯಾಯ—ರಾಜ್ಯಾಭಿಷೇಕೋತ್ಸವ .... .... | ೨೮ |
| ೭ನೆಯ ಅಧ್ಯಾಯ—ದೆಹಲಿ ದರ್ಬಾರು, ಲೇಡಿ ಮಿಂಟೊರವರ ಲೇಖನ, ಯೂರೋಪಿನ ಘೋರಯುದ್ಧ, ಮಹಾರಾಜರವರ ನಪಾಯ | ೩೪ |
| ೮ನೆಯ ಅಧ್ಯಾಯ—ರಾಜ್ಯಭಾರ ಕೌಶಲ, ಪ್ರಜಾಪ್ರತಿನಿಧಿ ಸಭೆ, ರಾಜನ ಸಭೆ .... .... .... .... | ೪೮ |
| ೯ನೆಯ ಅಧ್ಯಾಯ—ನೀರಾನರಿ ಕೆಲಸಗಳು, ವಿದ್ಯುಚ್ಛಕ್ತಿಯ ಏರ್ಪಾಡು ವಿದ್ಯಾಪ್ರಚಾರ, ವೈದ್ಯಸಹಾಯ, ಸಹಕಾರ ಸಂಘಗಳು .... | ೪೫ |
| ೧೦ನೆಯ ಅಧ್ಯಾಯ—ನಗರ ನಿರ್ಮಾಣಕಾರ್ಯ, ಕೈಗಾರಿಕೆ ಮತ್ತು ವಾಣಿಜ್ಯ, ಪ್ರಯಾಣ ಸೌಲಭ್ಯ .... .... | ೫೨ |
| ೧೧ನೆಯ ಅಧ್ಯಾಯ—ಕಲಾಪ್ರೇಮ .... .... .... | ೫೬ |
| ೧೨ನೆಯ ಅಧ್ಯಾಯ—ಮಹಾರಾಜರವರ ಕಾಲದಲ್ಲಿ ಆಸ್ಥಾನವನ್ನಲಂಕರಿಸಿದ್ದ ಮಂತ್ರಿಗಳು .... .... .... .... | ೬೦ |
| ೧೩ನೆಯ ಅಧ್ಯಾಯ—ರಜತ ಮಹೋತ್ಸವ .... .... | ೬೩ |
| ೧೪ನೆಯ ಅಧ್ಯಾಯ—ಮಹಾಯಾತ್ರೆಗಳು .... .... | ೭೨ |
| ೧೫ನೆಯ ಅಧ್ಯಾಯ—ಮಾತೃವಿಯೋಗ, ಯೂರೋಪಿನ ಪ್ರವಾಸ .... | ೮೪ |

೧೬ನೆಯ ಅಧ್ಯಾಯ—ಭ್ರಾತೃವಿಯೋಗ .... .. ..
೧೭ನೆಯ ಅಧ್ಯಾಯ—ಗೋಮಟೇಶ್ವರಸ್ವಾಮಿಯ ಮಸ್ತಕಾಭಿಷೇಕ, ಕನ್ನಡ ಸಾಹಿತ್ಯ ಪರಿಷತ್ತಿನ ಬೆಳ್ಳಿಯ ಹಬ್ಬ, ನಿರ್ವಾಣ .... ೧೧
೧೮ನೆಯ ಅಧ್ಯಾಯ—ಗುಣಕಥನ .... .... .... ೧೮೫
೧೯ನೆಯ ಅಧ್ಯಾಯ—ಮಹನೀಯರ ವಾಕ್ಯಾವಳಿ .... .... ೧೧೮
೨೦ನೆಯ ಅಧ್ಯಾಯ—ವೃತ್ತಪತ್ರಿಕೆಗಳ ಪ್ರಶಂಸೆ, ಶ್ರೀ ಜಯಚಾಮರಾಜೇಂದ್ರ ಒಡೆಯರವರ ಪಟ್ಟಾಭಿಷೇಕ ಮಹೋತ್ಸವ ಮತ್ತು ಮಹಾಸ್ವಾಮಿಯವರು ಆಕಾಶವಾಣಿಯ ಮೂಲಕ ಪ್ರಜೆಗಳಿಗಿತ್ತ ಸಂದೇಶ .... .... .... .... ೧೨೬

# ಮುನ್ನುಡಿ

ನಮ್ಮ ಪ್ರೀತಿಪಾತ್ರರಾದ ಶ್ರೀಮನ್ಮಹಾರಾಜ ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರವರು ನಮ್ಮನ್ನಗಲಿದರು. ಸಂಸ್ಥಾನಕ್ಕೂದಗುರುವ ಈ ಸಂಕಟವನ್ನು ನೆನಸಿಕೊಂಡರೆ ದುಃಖವು ಉಕ್ಕಿಬರುತ್ತದೆ. ಮಹಾ ಸ್ವಾಮಿಯವರು ನಮ್ಮೆಲ್ಲರಿಗೂ ಪಿತೃಸಮಾನರಾಗಿದ್ದರು. ಅವರ ಪ್ರಜಾ ವಾತ್ಸಲ್ಯವೂ ಧರ್ಮನಿಷ್ಠೆಯೂ ಆಡಳಿತ ದಕ್ಷತೆಯೂ ಇಡೀ ಜಗತ್ತಿಗೇ ಒಂದು ಮಾದರಿಯಾಗಿತ್ತು. ಮಹಾಸ್ವಾಮಿಯವರು ೧೯೧೨ ರಲ್ಲಿ ರಾಜ್ಯ ಸೂತ್ರವನ್ನು ಕೈಕೊಂಡಾಗ, ರಾಜ್ಯದ ಆದಾಯವು ೧೯೨ ಲಕ್ಷ ರೂಪಾಯಿ ಮಾತ್ರವಾಗಿತ್ತು. ಅವರ ಪ್ರಖ್ಯಾತವಾದ ೩೮ ವರ್ಷಗಳ ಆಡಳಿತದಲ್ಲಿ ರಾಜ್ಯದ ಸುವರ್ಣಾದಾಯವು ೪೩೮ ಲಕ್ಷಕ್ಕೆ ಏರಿತು. ಎಲ್ಲೆಲ್ಲೂ ಭಾರಿಭಾರಿ ನೀರಾವರಿ ಕೆಲಸಗಳು ಬೆಳೆದುವು. ಗ್ರಾಮಾಭಿವೃದ್ಧಿಯ ಕೆಲಸಗಳೆಲ್ಲ ಮುಂದುವರಿದುವು. ದೇಶವನ್ನು ಕೈಗಾರಿಕೆಯ ಒಂದು ಪಟ್ಟಣವನ್ನಾಗಿ ಮಾಡಬೇಕೆಂಬುದು ಮಹಾಸ್ವಾಮಿಯವರ ಮನೋರಥವಾಗಿತ್ತು. ಅದರಂತೆಯೇ ದೇಶದ ನಾನಾ ಭಾಗಗಳಲ್ಲಿ ಭಾರಿಭಾರಿ ಉದ್ಯಮಗಳ ಕಾರ್ಖಾನೆಗಳು ಸ್ಥಾಪಿತವಾದುವು. ಮೈಸೂರಿನ ಕಬ್ಬಿಣ, ಮೈಸೂರಿನ ಕಾಗದ, ಮೈಸೂರಿನ ಸಕ್ಕರೆ, ಮೈಸೂರಿನ ಸಾಬೂನು ಮುಂತಾದುವೆಲ್ಲ ಮೈಸೂರಿಗೆ ಭಾರತದಲ್ಲೆಲ್ಲಾ ಹೆಸರು ತಂದಿವೆ. ಶ್ರೀಮನ್ಮಹಾರಾಜರವರು ಆಡಳಿತದಲ್ಲಿ ಎಷ್ಟು ಮೇಧಾವಿಗಳಾಗಿದ್ದರೋ, ವ್ಯಾಯಾಮ ಕ್ರೀಡೆಗಳಲ್ಲಿಯೂ, ಲಲಿತಕಲೆಗಳ ಪೋಷಣೆಯಲ್ಲಿಯೂ ಅಷ್ಟೇ ತೀಯರೆಂದೆನಿಸಿಕೊಂಡಿದ್ದರು. ನಿಷ್ಕಳಂಕವಾದ ಪವಿತ್ರಮಯವಾದ ಜೀವನದಲ್ಲಿ ನಿರತರಾಗಿ ಪರಮ ವೇದಾಂತಿಗಳಾಗಿದ್ದರು. ಅವರ ದೈವ ಭಕ್ತಿಯು ಹಿರಿದು. ಕಷ್ಟಸಾಧ್ಯವಾದ ಅನೇಕ ಯಾತ್ರೆಗಳನ್ನು ಮಾಡಿ ಅಲ್ಲಿನ ದಿವ್ಯ ದೃಶ್ಯಗಳನ್ನೆಲ್ಲಾ ನೋಡಿಕೊಂಡು ಬಂದರು. ೧೯೩೬ರಲ್ಲಿ ಶ್ರೀಮದ್ಯುವರಾಜರೊಡನೆ ಪಾಶ್ಚಾತ್ಯ ದೇಶಗಳ ಪ್ರವಾಸವನ್ನು ಕೈಕೊಂಡರು. ಬೆಂಗಳೂರು, ಮೈಸೂರು ಪಟ್ಟಣಗಳನ್ನು ಭವ್ಯವಾದ ಕಟ್ಟಡಗ

ಳಿಂದಲೂ ನಾಲುಮೂಲೆಗಳಿಂದ ಕೂಡಿದ ರಸ್ತೆಗಳಿಂದಲೂ ಚಿತ್ರದಂತಿರುವ
ಚೌಕಗಳಿಂದಲೂ ಮನೋಹರವಾದ ಉದ್ಯಾನ ಮಾಲೆಗಳಿಂದಲೂ ಉದ್ಯ
ತ್ತಿನ ಪ್ರಕಾಶದಿಂದಲೂ ಬೆಳಗುವಂತೆ ಮಾಡಿ ಮಾದರಿ ರಾಜ್ಯವೆಂಬ
ಹೆಸರು ಮೈಸೂರಿಗೆ ಬರುವಂತೆ ಮಾಡಿದರು. ಅವರು ಮಾಡಿರುವ ಕೆಲಸ
ಗಳು ದಿವಂಗತರಾದ ಆ ಪ್ರಭುಗಳ ಸತ್ಕೀರ್ತಿಗೂ, ಅವರ ಪ್ರಜೆಗಳ
ಸೌಖ್ಯಕ್ಕೂ ಆಧಾರವಾಗಿವೆ. ಆ ಪ್ರಭುವರ್ಯರ ಅಳಿಕೆಯ ಮೂರು
ಮಂತ್ರವು ತಮ್ಮ ಪ್ರಜೆಗಳ ಹಿತವನ್ನೇ ಬಯಸುವುದಾಗಿತ್ತು.

ನನ್ನ ಪೂಜ್ಯ ಪಿತೃವರ್ಯರಾದ ರಾಜಧರ್ಮಪ್ರವೀಣ ಟಿ. ಆರ್. ಎ
ತಂಬೂಜೆಟ್ಟಿ, ಸಿ.ಐ.ಇ., ಯವರು ಈ ಗ್ರಂಥಕರ್ತರಾದ ಎಂ. ಶಿಂಗ್ರಯ್ಯ
ನವರು ಆ ಕಾಲದಲ್ಲಿ ಬರೆದಿದ್ದ ಮಹಾಸ್ವಾಮಿಯವರ ಪಿತೃವರ್ಯರಾದ
ಶ್ರೀ ಚಾಮರಾಜೇಂದ್ರ ಒಡೆಯರವರ ಚರಿತ್ರೆಗೆ ಅವತರಣಿಕೆಯನ್ನು
ಬರೆದುಕೊಟ್ಟಿರುವರು. ಬಳಿಕ ಅದೇ ಸನ್ನಿವೇಶವು ನನಗೆ ಲಭಿಸಿ ದಿವಂಗತ
ರಾದ ಮಹಾಸ್ವಾಮಿಯವರ ಸೇವೆಯನ್ನು ಇಪ್ಪತ್ತಾರು ವರ್ಷಗಳ
ಕಾಲ ಮಾಡುವ ದೊಡ್ಡ ಭಾಗ್ಯವು ನನ್ನ ಪಾಲಿಗೆ ಬಂದಿದ್ದುದರಿಂದ
ನಾನು ಮೈಸೂರು ರಾಜವಂಶಕ್ಕೆ ಚಿರಋಣಿಯಾಗಿರುತ್ತೇನೆ. ಅಲ್ಲದೆ
ಎಂ. ಶಿಂಗ್ರಯ್ಯನವರು ಈಗ ಬರೆದಿರುವ ಆದರ್ಶಮೂರ್ತಿಗಳಾದ ಶ್ರೀಮತ್ಕೃ
ಷ್ಣರಾಜ ಒಡೆಯರವರ ಜೀವನಚರಿತ್ರೆಗೆ ಮುನ್ನುಡಿಯನ್ನು ಬರೆಯು
ವುದೂ ನನಗೆ ಒಂದು ಪವಿತ್ರ ಕಾರ್ಯವಾಗಿರುತ್ತದೆ. ಈ ಪುಸ್ತಕದಲ್ಲಿ
ಮಹಾಸ್ವಾಮಿಯವರ ಜೀವನಚರಿತ್ರೆಯೂ ರಾಜ್ಯಭಾರಕ್ರಮವೂ ಸುಗ್ರಥಿ
ವಾಗಿ ಮನೋಹರವಾದ ಕಥನದಿಂದಲೂ ಸಮಯೋಚಿತವಾದ ವಿಶೇಷಣ
ಗಳಿಂದಲೂ ಗರ್ಭೀಕೃತವಾಗಿರುವುವು. ಈ ಪುಸ್ತಕವನ್ನು ಲಲಿತವಾದ
ಶೈಲಿಯಿಂದ ಬರೆಯುವುದರಲ್ಲಿ ತೋರ್ಪಡಿಸಿಕೊಂಡಿರುವ ಪ್ರಜ್ಞಾವಿಶೇಷ
ಕ್ಕಾಗಿ ಮು|| ರಾ|| ಎಂ. ಶಿಂಗ್ರಯ್ಯನವರು ಸ್ತೋತಾರ್ಹರಾಗಿರುತ್ತಾರೆ.
ಈ ಪುಸ್ತಕವನ್ನು ಮೈಸೂರು ದೇಶದ ಪ್ರತಿಯೊಬ್ಬರೂ ಓದಿ ಆನಂದಿಸ
ಬೇಕೆಂಬುದು ನನ್ನ ಮನವಿಣಿಕೆಯಾಗಿದೆ.

ರುಕ್ಮಾಲಯ, ಮೈಸೂರು,
೩೧ನೇ ಮಾರ್ಚ್ ೧೯೧೦.

**ಟಿ. ತಂಬೂಚೆಟ್ಟಿ,**
ಹುಜೂರ್ ಸೆಕ್ರೆಟೇ



ಮೈಸೂರಿನ ಮಹಾಸ್ವಾಮಿಯವರಾದ

# ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರವರು

## ೧ನೆಯ ಅಧ್ಯಾಯ

ಜನನ ಮತ್ತು ನಾಮಕರಣಮಹೋತ್ಸವ

**ಪ್ರಸ್ತಾವನಾ.**—ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರವರು ೫೬ ವರ್ಷ ಕಾಲ ಪ್ರಜೆಗಳ ಶ್ರೇಯಸ್ಸೇ ತಮ್ಮ ಜೀವಮಾನದ ಮುಖ್ಯ ಗುರಿಯಾಗಿ ಆಳಿ, ಬಾಳಿ, ದೇಶವನ್ನು ಸರ್ವತೋಮುಖವಾದ ಅಭಿವೃದ್ಧಿಗೆ ತಂದು, ಆರ್ಥಿಕ ಸಾಮಾಜಿಕ ನೈತಿಕ ರಂಗಗಳಲ್ಲಿ ಮೈಸೂರಿಗೆ ಸಮನಾದ ರಾಜ್ಯವು ಮತ್ತೊಂದಿಲ್ಲವೆಂಬ ಖ್ಯಾತಿಬರುವಂತೆ ಮಾಡಿ, ಪ್ರಜೆಗಳಿಗೆ ರಾಜರಾಗಿಯೂ ಗುರುವಾಗಿಯೂ ತಂದೆಯಾಗಿಯೂ ಮಿತ್ರರಾಗಿಯೂ ಇದ್ದುಕೊಂಡು, ನಾನಾವಿಧ ಕಲೆಗಳಿಂದ ಜನಜೀವನೋಪಾಯಗಳನ್ನು ಕಲ್ಪಿಸಿ, ಕೃಷಿಯ ಸೌಕರ್ಯಾರ್ಥವಾಗಿ ಅನೇಕ ನೀರಾವರಿ ಕೆಲಸಗಳನ್ನು ಮಾಡಿಸಿ, ರೋಗಿಗಳ ರೋಗಪರಿಹಾರಾರ್ಥವಾಗಿ ಅನೇಕ ಆಸ್ಪತ್ರೆಗಳನ್ನು ಕಟ್ಟಿಸಿ, ಪ್ರಜೆಗಳ ಜ್ಞಾನಮಾರ್ಗಕ್ಕಾಗಿ ಎಲ್ಲಾ ವಿಧವಾದ ವಿದ್ಯಾಶಾಲೆಗಳನ್ನು ಸ್ಥಾಪಿಸಿ, ದೇಶವೆಲ್ಲ ವಿದ್ಯುದ್ದೀಪಗಳಿಂದ ಬೆಳಗುವಂತೆ ಮಾಡಿದರು. ಸಮದರ್ಶಿತ್ವ, ದೂರದೃಷ್ಟಿ, ಧರ್ಮಪ್ರಿಯತೆ, ನ್ಯಾಯನಿಷ್ಠತೆ, ಪ್ರಜಾವಾತ್ಸಲ್ಯ, ಕಲಾಪ್ರೇಮ, ಸಂಗೀತಾಭಿರುಚಿ ಮೊದಲಾದವುಗಳ ಅಭಿಮಾನಿಗಳಲ್ಲಿ ಅಗ್ರಗಣ್ಯರೆಂದರೆ ಅತಿಶಯೋಕ್ತಿಯಾಗಲಾರದು.

**ಜನನ.**—ಶ್ರೀ ಕೃಷ್ಣರಾಜ ಒಡೆಯರವರು ತಾರಣನಾಮ ಸಂವತ್ಸರದ ಜ್ಯೇಷ್ಠ ಶುದ್ಧ ಏಕಾದಶಿ ಭಾನುವಾರಕ್ಕೆ ಸರಿಯಾದ ಗಿಲಲಳ ನೆಯ ಇಸವಿ ಜುಲೈ ೪ ನೆಯ ತಾರೀಖಿನ ದಿನ ಶ್ರೀಮನ್ಮಹಾರಾಜ ಶ್ರೀ ಚಾಮರಾಜೇಂದ್ರ ಒಡೆಯರವರ ಧರ್ಮಪತ್ನಿಯವರಾದ ಪಾಣೀವಿಲಾಸ



ಮೈಸೂರಿನ ಮಹಾಸ್ಥಾಪಿಯವರಾದ

# ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರವರು

## ೧ನೆಯ ಅಧ್ಯಾಯ

### ಜನನ ಮತ್ತು ನಾಮಕರಣಮಹೋತ್ಸವ

**ಪ್ರಸ್ತಾವನಾ.**—ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರವರು ೫೭ ವರ್ಷ ಕಾಲ ಪ್ರಜೆಗಳ ಶ್ರೇಯಸ್ಸೇ ತಮ್ಮ ಜೀವನಾನದ ಮುಖ್ಯ ಗುರಿಯಾಗಿ ಆಳಿ, ಬಾಳಿ, ದೇಶವನ್ನು ಸರ್ವತೋಮುಖವಾದ ಅಭಿವೃದ್ಧಿಗೆ ತಂದು, ಆರ್ಥಿಕ ಸಾಮಾಜಿಕ ಸ್ಥೈತಿಕ ರಂಗಗಳಲ್ಲಿ ಮೈಸೂರಿಗೆ ಸಮನಾದ ರಾಜ್ಯವು ಮತ್ತೊಂದಿಲ್ಲವೆಂಬ ಖ್ಯಾತಿಬರುವಂತೆ ಮಾಡಿ, ಪ್ರಜೆಗಳಿಗೆ ರಾಜರಾಗಿಯೂ ಗುರುವಾಗಿಯೂ ತಂದೆಯಾಗಿಯೂ ಮಿತ್ರರಾಗಿಯೂ ಇದ್ದುಕೊಂಡು, ನಾನಾವಿಧ ಕಲೆಗಳಿಂದ ಜನಜೀವನೋಪಾಯಗಳನ್ನು ಕಲ್ಪಿಸಿ, ಕೃಷಿಯ ಸೌಕರ್ಯಾರ್ಥವಾಗಿ ಅನೇಕ ನೀರಾವರಿ ಕೆಲಸಗಳನ್ನು ಮಾಡಿಸಿ, ರೋಗಿಗಳ ರೋಗಪರಿಹಾರಾರ್ಥವಾಗಿ ಅನೇಕ ಆಸ್ಪತ್ರೆಗಳನ್ನು ಕಟ್ಟಿಸಿ, ಪ್ರಜೆಗಳ ಜ್ಞಾನಮಾರ್ಗಕ್ಕಾಗಿ ಎಲ್ಲಾ ನಿಧಾನವಾದ ವಿದ್ಯಾಶಾಲೆಗಳನ್ನು ಸ್ಥಾಪಿಸಿ, ದೇಶವೆಲ್ಲ ವಿದ್ಯುದ್ದೀಪಗಳಿಂದ ಬೆಳಗುವಂತೆ ಮಾಡಿದರು. ಸಮದರ್ಶಿತ್ವ, ದೂರದೃಷ್ಟಿ, ಧರ್ಮಪ್ರಿಯತೆ, ನ್ಯಾಯನಿಷ್ಠತೆ, ಪ್ರಜಾವಾತ್ಸಲ್ಯ, ಕಲಾಪ್ರೇಮ, ಸಂಗೀತಾಭಿರುಚಿ ಮೊದಲಾದವುಗಳ ಅಭಿವಾಸಿಗಳಲ್ಲಿ ಅಗ್ರಗಣ್ಯರೆಂದರೆ ಅತಿಶಯೋಕ್ತಿಯಾಗಲಾರದು.

**ಜನನ.**—ಶ್ರೀ ಕೃಷ್ಣರಾಜ ಒಡೆಯರವರು ತಾರಣನಾಮ ಸಂವತ್ಸರದ ಜ್ಯೇಷ್ಠ ಶುದ್ಧ ಏಕಾದಶಿ ಭಾನುವಾರಕ್ಕೆ ಸರಿಯಾದ ೧೮೭೯ನೆಯ ಇಸವಿ ಜುಲೈ ೪ನೆಯ ತಾರೀಖಿನ ದಿನ ಶ್ರೀಮನ್ಮಹಾರಾಜ ಶ್ರೀ ಚಾಮರಾಜೇಂದ್ರ ಒಡೆಯರವರ ಧರ್ಮಪತ್ನಿಯವರಾದ ವಾಣೀವಿಲಾಸ

ಸ್ಥಾನದ ಜಂಘನಂಬಮ್ಮಣ್ಣಿಯವರ ಗರ್ಭಾಂಬುಧಿಯಲ್ಲಿ ಜನಿಸಿದರು. ಪುತ್ರೋತ್ಸವವಾದ ಕೂಡಲೇ ಸರ್ವರಿಗೂ ಉಂಟಾದ ಆನಂದವನ್ನು ಹೇಳತೀರದು. ಆಗ ತತ್ಕಾಲೋಚಿತಗಳಾದ ಪುತ್ರೋತ್ಸವ ವೈಭವಗಳಿಂದ ರಾಜಧಾನಿಯೆಲ್ಲಾ ಮಂಗಳಮಯವಾಯಿತು. ಸಂತೋಷ ಸೂಚನಾರ್ಥವಾಗಿ ಕೋಟೆಯ ದಕ್ಷಿಣೋತ್ತರ ಅಲಂಗಗಳಲ್ಲಿ ಕುಶಾಲು ಫಿರಂಗಿಗಳು ಹಾರಿಸಲ್ಪಟ್ಟುವು. ಆ ಶಬ್ದವು ಸಮೀಪದಲ್ಲಿರುವ ಪರ್ವತ ಗುಹಾಂತರ್ಭಾಗಗಳನ್ನು ಹೊಕ್ಕು, ಈಗ ಉದಯಿಸಿದ ರಾಜಕುಮಾರನು ಭೂಧರತ್ವವನ್ನು ವಹಿಸಿ ಲೋಕವಿಖ್ಯಾತನಾಗುವನೆಂದು ಸೂಚಿಸುತ್ತದೆಯೋ ಎಂಬಂತೆ ನಾಲ್ಕು ದಿಕ್ಕುಗಳಲ್ಲೂ ಪ್ರತಿಧ್ವನಿಗೊಳಿಸಿತು.

**ನಾಮಕರಣ ಮಹೋತ್ಸವ.**—ಬಳಿಕ ಎಲ್ಲಾ ದೇವಾಲಯಗಳಲ್ಲಿಯೂ ಘನತರವಾದ ಪ್ರಾರ್ಥನೆ ಪ್ರಾರಂಭವಾಗಿ ಅಸದೃಶವಾದ ಪೂಜೋತ್ಸವಗಳು ನಡೆದುವು. ರಾಜಧಾನಿಯ ಸಕಲ ವೀಧಿಗಳಲ್ಲಿಯೂ ಹಣ್ಣು ಸಕ್ಕರೆಗಳನ್ನು ಹಂಚಿದರು. ಈ ಶುಭಸಮಾಚಾರವನ್ನು ಕೇಳಿದ ಪುರನಿವಾಸಿಗಳು ತಮ್ಮ ಭವಿಷ್ಯತ್ಕಾಲದ ಉದ್ಧಾರಕರ್ತನು ಉದಯಿಸಿದನೆಂಬುದಾಗಿ ಸಂತೋಷ ಸಮುದ್ರದಲ್ಲಿ ಮುಳುಗಿ ತಂತಮ್ಮ ಮನೆಮಠಗಳನ್ನು ತಳಿರುತೋರಣಗಳಿಂದಲಂಕರಿಸಿ, ಆ ದಿನವನ್ನು ಒಂದು ದೊಡ್ಡ ಹಬ್ಬದಂತೆ ಕಳೆದರು. ಮಠಸತ್ರಗಳಲ್ಲಿ ದೊಡ್ಡದೊಡ್ಡ ಸಂತರ್ಪಣೆಗಳು ಜರುಗಿದುವು. ರಾಷ್ಟ್ರದ ಕಾರಾಗೃಹಗಳಲ್ಲಿ ಸೆರೆಯಲ್ಲಿದ್ದ ಬಹುಮಂದಿ ಶಿಕ್ಷಿತರಿಗೆ ಬಂಧ ವಿಮೋಚನೆಯಾಯಿತು. ದೀನಾನಾಥರಿಗೆಲ್ಲ ಧನಕನಕ ವಸ್ತ್ರಾದಿಗಳು ಕೊಡಲ್ಪಟ್ಟುವು. ಹನ್ನೊಂದನೆಯ ದಿನ ಶಿಶುವಿಗೆ ದೇವಾ ಶ್ರೀರಂಗನಾಥ ಬ್ರಹ್ಮತಂತ್ರ ಪರಕಾಲಸ್ವಾಮಿಗಳ ಅಪ್ಪಣೆಯಂತೆ ಶ್ರೀ ಕೃಷ್ಣರಾಜ ಒಡೆಯರೆಂಬುದಾಗಿ ನಾಮಕರಣ ಮಾಡಿದರು.

ಈ ರೀತಿಯಲ್ಲಿ ಕೃಷ್ಣರಾಜೋದಯದಿಂದ ಮಹೀಶೂರ ಸಂಸ್ಥಾನದ ಪ್ರಜೆಗಳ ಆನಂದಾತಿಶಯವೆಂಬ ಧವಳ ಚಂದ್ರಿಕಾ ಲಹರಿಯು ಎಲ್ಲೆಲ್ಲೂ ವ್ಯಾಪಿಸಿ, ಚಂದ್ರವಂಶ ದುಗ್ಧಾಂಬುಧಿಯು ಉಕ್ಕಿ, ಖ್ಯಾತಿಯೆಂಬ ತರಂಗಮಾಲೆಯು ಮೇಲ್ಪರಿದು ಸಮಸ್ತ ದಿಗ್ದೇಶಗಳಿಗೂ ಪ್ರಸರಿಸತೊಡಗಿತು. ಆಗ ಚಾಮರಾಜೇಂದ್ರ ಒಡೆಯರಿಗೆ ಒಂದು ಕಡೆ ವಂಶವರ್ಧಕನಾದ ಕುಮಾರನುದಯಿಸಿದ ಆನಂದ. ಮತ್ತೊಂದು ಕಡೆ ಅದೇ ಸಮಯಕ್ಕೆ

ಚಕ್ರವರ್ತಿನಿಯವರಿಂದ ಬಂದ ಜಿ.ಸಿ.ಎಸ್.ಐ. ಬಿರುದಿನ ಸಂತೋಷ. ಇವೆರಡೂ ಏಕಕಾಲದಲ್ಲಿ ಸಂಭವಿಸಿದುದರಿಂದ, ತಕ್ಕೂಜಕಗಳೂ ಕಾಲೋಚಿತಗಳೂ ರಾಜಗೌರವಾರ್ಹಗಳೂ ಆದ ಉತ್ಸವಗಳು ರಾಜಧಾನಿಯಲ್ಲಿ

ಶ್ರೀ ಚಾಮರಾಜೇಂದ್ರ ಒಡೆಯರವರು

ಅನೇಕವಾಗಿ ಜರುಗಿದುವು. ಈ ಉತ್ಸವಕಾಲದಲ್ಲಿ ಶ್ರೀಮನ್ಮಹಾರಾಜರವರಿಗೆ ಕ್ಷೇಯೋಭಿವೃದ್ಧಿಯನ್ನೂ ಆನಂದಾತಿಶಯವನ್ನೂ ಸೂಚಿಸುವ ಅನೇಕ ಅಭಿನಂದನ ಪತ್ರಿಕೆಗಳೂ ಸ್ನೇಹಪತ್ರಿಕೆಗಳೂ ಬಂದುವು. ಮಹಾರಾಜರು ಅವಕ್ಕೆಲ್ಲ ಸದುತ್ತರಗಳನ್ನು ದಯಪಾಲಿಸಿದರು. ಅವುಗಳೊಳಗೆ,

ಇಂಗ್ಲೆಂಡಿನಲ್ಲಿದ್ದ ತಮ್ಮ ಮಿತ್ರರಾದ ಸರ್ ರಿಚರ್ಡ್ ಮೀಡ್ ಸಾಹೇಬರಿಗೆ "ನನಗೆ ಪುತ್ರೋತ್ಸವವಾದುದಕ್ಕಾಗಿಯೂ ಈಚೆಗೆ ಜಿ.ಸಿ.ಎಸ್.ಐ. ಬಿರುದು ಲಭಿಸಿದುದಕ್ಕಾಗಿಯೂ ತಾವು ಬರೆದ ಸಂತೋಷ ಸೂಚಕವಾದ ಸ್ನೇಹಪತ್ರಿಕೆಗಾಗಿ ತಮ್ಮನ್ನು ಪ್ರೇಮಪೂರ್ವಕವಾಗಿ ವಂದಿಸುತ್ತೇನೆ. ಈ ಎರಡು ಉತ್ಸವ ಸಮಯಗಳೂ ನನ್ನ ಸಂಸ್ಥಾನದಲ್ಲಿ ಅಪಾರವಾದ ಸಂತೋಷಕ್ಕೆ ಕಾರಣಭೂತಗಳು" ಎಂದು ತಿಳಿಸಿರುವರು.

ಶ್ರೀ ಕೃಷ್ಣರಾಜ ಒಡೆಯರವರ ವರ್ಷವರ್ಧಂತೀ ಮಹೋತ್ಸವ

**ವರ್ಷ ವರ್ಧಂತೀ ಮಹೋತ್ಸವ.**—ಈ ರೀತಿಯಾಗಿ ಶ್ರೀ ಕೃಷ್ಣರಾಜ ಒಡೆಯರವರು ಯದುವಂಶದಲ್ಲಿ ಅವತರಿಸಿ, ರಾಜಕುಟುಂಬಕ್ಕೂ

ರಾಜ್ಯಕ್ಕೂ ವಿಶೇಷವಾದ ಆನಂದವನ್ನುಂಟುಮಾಡುತ್ತ ಶುಕ್ಲಪಕ್ಷದ ಚಂದ್ರನಂತೆ ಪ್ರವರ್ಧಮಾನರಾಗುತ್ತಿದ್ದರು. ಹೀಗೆ ಶೈಶವಾವಸ್ಥೆಯಲ್ಲಿರುವಾಗ, ಶ್ರೀ ಚಾಮರಾಜೇಂದ್ರ ಮಹಾರಾಜರು ತಮ್ಮ ಕುಲದೇವತೆಯಾದ ಚಾಮುಂಜೇಶ್ವರಿಯ ಸನ್ನಿಧಿಗೆ ಮಗುವನ್ನು ಕರೆದುಕೊಂಡು ಹೋಗಿ ಅಲ್ಲಿ ಅಮ್ಮನವರಿಗೆ ವಿಶೇಷೋತ್ಸವಗಳನ್ನು ನಡೆಸಿ ಆವರಣದ ಒಳಗಿರುವ ಸಂಪಗೆಯ ಮರಕ್ಕೆ ಚಿನ್ನದ ಸರಪಣಿಗಳಿಂದ ರತ್ನಖಚಿತವಾದ ತೊಟ್ಟಿಲನ್ನು ಕಟ್ಟಿಸಿ ಅದರಲ್ಲಿ ಮಗುವನ್ನು ಕುಳ್ಳಿರಿಸಿ ಡೋಲೋತ್ಸವವನ್ನು ನಡೆಸಿದರು. ಇಷ್ಟರೊಳಗೆ ಚಿಕ್ಕ ಮಹಾರಾಜರವರ ವರ್ಧಂತೀ ಮಹೋತ್ಸವವು ಸಮಾಪಿಸಿತು. ಆ ದಿನವನ್ನು ಶ್ರೀಮನ್ಮಹಾರಾಜರವರು ಪರಮವೈಭವದಿಂದ ಕಳೆದರು. ವ್ಯಾತಕಾಲ ಮಂಗಳಸ್ನಾನವು ಬೆಳಿಗ್ಗೆ ಬಳಿಕ, ಕೂಸಿಗೆ ರಾಜಯೋಗ್ಯವಾದ ದಿವ್ಯಾಲಂಕಾರವನ್ನು ಮಾಡಿಸಿ, ಅಂಬಾವಿಲಾಸದಲ್ಲಿ ಅರತಿ ಅಕ್ಷತೆಯನ್ನು ನಡೆಸಿದರು. ಆ ಕಾಲಕ್ಕೆ ಸಂಸ್ಥಾನದ ಸಕಲಾಧಿಕಾರಿಗಳೂ ರಾಜಧಾನಿಗೆ ಆಹ್ವಾನಿಸಲ್ಪಟ್ಟಿದ್ದರು. ನಾಯಂಕಾಲ ರಾಜಕುಮಾರರನ್ನೂ ಶ್ರೀ ಜಯಲಕ್ಷ್ಮಮ್ಮಣ್ಣಿಯವರನ್ನೂ ಸಾವರ್ಣ ಖಚಿತವಾದ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಮಹಾವೈಭವದಿಂದ ಕೋಟೆಯ ನಾಲ್ಕು ಬೀದಿಗಳಲ್ಲಿಯೂ ಮೆರವಣಿಗೆ ಬೆಳೆಯಿಸಿ, ತೃಣೇಶ್ವರ, ವರಾಹಸ್ವಾಮಿ, ಪ್ರಸನ್ನಕೃಷ್ಣಸ್ವಾಮಿ, ಲಕ್ಷ್ಮೀರಮಣಸ್ವಾಮಿ ದೇವಾಲಯಗಳಿಗೆ ಕಳುಹಿಸಿ ಕೊಟ್ಟಿದ್ದರು. ಸಂಸ್ಥಾನದ ಸಕಲ ದೇವಾಲಯಗಳಲ್ಲೂ ಅಭಿಷೇಕೋತ್ಸವಾದಿಗಳೂ ಸಂತರ್ಪಣೆಗಳೂ ನಡೆದು, ಶಾಲೆಗಳ ಬಾಲಕ ಬಾಲಕಿಯರಿಗೆಲ್ಲ ಸಿಹಿ ತಿಂಡಿಯನ್ನು ಹಂಚಿದರು.

## ೨ನೆಯ ಅಧ್ಯಾಯ

ಚೌಲ, ಅಕ್ಷರಾಭ್ಯಾಸ, ಬೊಂಬಾಯಿಗೆ ಪ್ರಯಾಣ, ಪಿಟ್ಸ್‌ಬಿಯೋಗ

ಹೀಗಿರುವಲ್ಲಿ, ಶ್ರೀ ಕೃಷ್ಣರಾಜರಿಗೆ ಆರು ವರ್ಷಗಳು ತುಂಬಿದುವು. ಚಾಮರಾಜೇಂದ್ರ ಒಡೆಯರವರು ವಿದ್ಯಾಭ್ಯಾಸದ ವಿಚಾರದಲ್ಲಿ ತಮ್ಮ ಮಕ್ಕಳಲ್ಲಿ ವಿಶೇಷಾಸಕ್ತಿಯನ್ನು ತೋರಿಸಿ ಜೂಡಾಕರ್ಮವನ್ನು ನೆರವೇರಿಸಿದರು. ವಿದ್ಯಾಭ್ಯಾಸಕ್ಕಾಗಿ ಬಾಸಲಿಂಗಲೆಯಲ್ಲಿ ರಾಯಲ್ ಸ್ಕೂಲ್ ಎಂಬ ಹೆಸರಿನಿಂದ

ಒಂದು ರಾಜಪಾಠಶಾಲೆಯು ಸ್ಥಾಪಿಸಲ್ಪಟ್ಟಿತು. ಅದಕ್ಕೆ ಮೆ|| ವೈ
ಯವರನ್ನೂ ಶ್ರೀ ಪಿ. ರಾಘವೇಂದ್ರರಾಯರನ್ನೂ ಮುಖ್ಯೋಪಾಧ್ಯಾ
ರನ್ನಾಗಿ ನೇಮಿಸಿದರು. ಇವರ ಜೊತೆಗೆ ಎಂ. ಎ. ನಾರಣಯ್ಯಂಗಾರ್ಯರ

ಮಹಾಸ್ವಾಮಿಯವರೂ ಮತ್ತು ಅವರ ಜಸಕರೂ

ಬಿ. ಭೀಮರಾಯರು, ಎಂ. ಹಸನ್ ಆಲಿಯವರು ಮತ್ತು ಅಯ್ಯಾಶಾಸ್ತ್ರಿಗಳು
ಸಹಾಯಕೋಪಾಧ್ಯಾಯರಾದರು. ರಾಜಕುಮಾರರ ಆಟಪಾಟಗಳಲ್ಲಿ
ಸಹಪಾಠಿಗಳಾಗಿರುವುದಕ್ಕೆ ರಾಜಧಾನಿಯ ಗಣ್ಯರಾದ ಕೆಲವರು ದೊಡ್ಡ

ಮನುಷ್ಯರ ಮಕ್ಕಳು ಸೇರಿಸಲ್ಪಟ್ಟರು. ಇವರಲ್ಲಿ ನಮ್ಮ ದಿವಾನರಾದ ಸರ್ ಮಿರ್ಜಾ ಸಾಹೇಬರೊಬ್ಬರು. ಪ್ರತಿದಿನವೂ ಸಾಯಂಪ್ರಾರ್ಥನಾಕಾಲಗಳಲ್ಲಿ ಶ್ರೀ ಕೃಷ್ಣರಾಜರು ತಮ್ಮ ಸಹೋದರೀ ಸಹೋದರರೊಡನೆ ಸಾಲಾಗಿ ನಿಂತು ದೇವತಾ ಪ್ರಾರ್ಥನೆಯನ್ನು ಮಾಡುತ್ತಿದ್ದರು.

ಮಹಾಸ್ವಾಮಿಯವರು ಮತ್ತು ರಾಜಸಹೋದರಿಯರು

ಬೆಂಗಳೂರು ನೀಲಗಿರಿಗಳಿಗೆ ಸವಾರಿಯು ಚಿತ್ತೈಸುತ್ತಿದ್ದಾಗ, ಅಲ್ಲಿನ ಅರಮನೆಗಳಲ್ಲಿ ರಾಜಪುತ್ರರು ಬೆಳಗಿನ ಪಾಠಗಳು ನಡೆದನಂತರ ಕೆಲಸಮಾಡಿ ದೀಪದಾರ್ಢ್ಯವನ್ನು ಪಡೆಯಲೆಂಬುದಾಗಿ ಮಕ್ಕಳಿಗೆಲ್ಲ ಪ್ರತ್ಯೇಕಪ್ರತ್ಯೇಕವಾಗಿ ಸಣ್ಣಸಣ್ಣ ಹೂದೋಟಗಳನ್ನು ಏರ್ಪಡಿಸಿದ್ದರು. ಅಲ್ಲಿ ಶ್ರೀ ಕೃಷ್ಣರಾಜೇಂದ್ರರು ತಮ್ಮ ಸಹೋದರಿಯರೊಡನೆ ಹೂವಿನ ಗಿಡಗಳನ್ನು ಬೆಳೆಯುತ್ತಿದ್ದರು. ಇವರು ಬೆಳೆದ ಗಿಡಗಳಲ್ಲಿ ಉತ್ಕೃಷ್ಟವಾದವುಗಳನ್ನು ಆ ಕಾಲದಲ್ಲಿ ನಡೆದ ಬಂದೆರಡು ಪುಷ್ಪ ಪ್ರದರ್ಶನಗಳಿಗೂ ಕಳುಹಿಸಿದ್ದರು. ವಾರಕ್ಕೊಂದುಸಾರಿ ಅರಮನೆ ಚಂದ್ರಶಾಲೆ ತೊಟ್ಟಿಯಲ್ಲಿ ಮಾಯಾದೀಪದಿಂದ ಸಸ್ಯಾದಿಗಳ ಜೀವಣಿಗೆ, ಪ್ರಾಣಿವರ್ಗಗಳ ವಾಸಸ್ಥಾನ,

ಗ್ರಹನಕ್ಷತ್ರಾದಿಗಳ ಚಲನ, ಸಮುದ್ರಾದಿಗಳ ವರ್ಣನೆ ಮುಂತಾದ ಭೂಗೋಳಪಾಠಕ್ಕೆ ಅನುಕೂಲವಾದ ಸಾಧನಗಳನ್ನು ತೋರಿಸುತ್ತಿದ್ದರು. ಪ್ರತಿದಿನವೂ ಚಿತ್ರಗಳನ್ನು ನೋಡಿಕೊಂಡು ಕಿಂಡರ್‌ಗಾರ್ಟನ್ ಸಾಮಾನುಗಳಿಂದ ಕಟ್ಟಡಗಳನ್ನು ಕಟ್ಟುವುದು, ಪ್ರಾಣಿಗಳನ್ನು ಜೋಡಿಸುವುದು ಮುಂತಾದುವುಗಳಲ್ಲಿ ಅಸಕ್ತರಾಗಿರುತ್ತಿದ್ದರು. ಇವುಗಳಲ್ಲದೆ, ವಿದ್ಯಾವ್ಯಾಸಂಗದ ಬಹು ಮುಖ್ಯಭಾಗಗಳ ಮೇಲ್ವಿಚಾರಣೆಯನ್ನು ಶ್ರೀಮನ್ಮಹಾರಾಜರವರೇ ಏರ್ಪಿಸಿಕೊಂಡು, ಬಾಲಕರಿಗೆ ಸನ್ಮಾರ್ಗ ಸದಾಚಾರ ಸದ್ವಿದ್ಯೆಗಳಲ್ಲಿ ಅಭಿರುಚಿ ಹುಟ್ಟುವಂತೆ ಬೋಧಿಸುತ್ತಾ ಅಶ್ವಾರೋಹಣಾದಿಗಳನ್ನು ತಾವೇ ಕಲಿಸಿಕೊಡುತ್ತಿದ್ದರು.

**ಅನಾರೋಗ್ಯದಿಂದ ಪಾರಾದುದು.**—ಹೀಗಿರುವಲ್ಲಿ, ೧೮೯೨ರಲ್ಲಿ ಕೃಷ್ಣರಾಜ ಒಡೆಯರಿಗೆ ಪ್ರಬಲವಾದ ವಿಷಮಶೀತಜ್ವರವು ಕಾಣಿಸಿಕೊಂಡು ಪ್ರಜಾಕೋಟಿಗೆಲ್ಲಾ ಅತ್ಯಂತ ವ್ಯಾಕುಲತೆಯನ್ನುಂಟುಮಾಡಿತು. ಆದರೆ ಕೆಲವು ದಿವಸಗಳಲ್ಲಿಯೇ ಆರೋಗ್ಯಭಾಗ್ಯವುಂಟಾಯಿತು. ಇದಕ್ಕಾಗಿ ಮಹಾರಾಜರವರು ಕುಲದೇವತೆಯಾದ ಚಾಮುಂಡೇಶ್ವರಿಗೆ ನವರತ್ನಖಚಿತವಾದ ಕಿರೀಟವೊಂದನ್ನು ಮಾಡಿಸಿ ಹರಕೆ ಒಪ್ಪಿಸಿದರು. ಇದಕ್ಕೇ ಚಾಮರಾಜಮುಡಿ ಎಂದು ಹೇಳುವರು.

**ಬೊಂಬಾಯಿಗೆ ಪ್ರಯಾಣ.**—ಕೆಲವು ದಿವಸಗಳಾದ ಬಳಿಕ, ೧೮೯೩ರಲ್ಲಿ ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರವರು ವಿದ್ಯಾಭ್ಯಾಸ ಮಾಡುತ್ತಿರುವ ಪುತ್ರರಿಗೆ ದೇಶಾಟನದಿಂದ ವ್ಯಾವಂಚ ಸ್ವರೂಪಜ್ಞಾನವನ್ನುಂಟುಮಾಡಬೇಕೆಂಬ ಅಭಿಲಾಷೆಯಿಂದ ಇವರನ್ನು ಬೊಂಬಾಯಿಗೆ ಕರೆದುಕೊಂಡುಹೋದರು. ಅಲ್ಲಿ ಒಂದೆರಡು ತಿಂಗಳಿದ್ದು, ಮನೋಹರವಾದ ಆ ದೇವ್ರವಟ್ಟಣದ ಕೈಗಾರಿಕೆ ವಿದ್ಯಾಕುಶಲತೆ, ನಾಗರಿಕತೆಯ ವೈಭವಗಳನ್ನೂ, ಪ್ರಜೆಗಳ ಪ್ರಗತಿಯನ್ನೂ, ಉತ್ಕೃಷ್ಟಗಳಾದ ಕಟ್ಟಡಗಳ ಸೊಗಸನ್ನೂ ನೋಡಿಕೊಂಡು, ಮಹೋದಯ ಪುಣ್ಯಕಾಲವನ್ನು ಪ್ರಯಾಗಕ್ಷೇತ್ರದಲ್ಲಿ ಕಳೆದು, ಕಾಶಿಯನ್ನು ಹೊಕ್ಕು ವಿಶ್ವೇಶ್ವರನ ದರ್ಶನಮಾಡಿಕೊಂಡು ಹಿಂದಕ್ಕೆ ದಯಮಾಡಿಸಿದರು.

**ಪಿತೃವಿಯೋಗ.**—ಈ ಬೊಂಬಾಯಿ ಪ್ರಯಾಣವನ್ನು ಪೂರೈಸಿಕೊಂಡು ಒಂದಬಿಕೆ, ಶ್ರೀಚಾಮರಾಜೇಂದ್ರ ಒಡೆಯರವರು ಸುಖದಿಂದ



ಬಾಪುರಾಜೇಂದ್ರ ಒಡೆಯರವರ ಸ್ವಾಭಾಗ.

ರಾಜ್ಯಭಾರವನ್ನು ಮಾಡುತ್ತಿದ್ದರು. ಆದೇ ವರ್ಷದ ಡಿಸೆಂಬರ್ ೧೯ನೆಯ ತಾರೀಖು ಭಾನುವಾರ ಪುತ್ರಮಿತ್ರಕಳತ್ರ ಪರಿವಾರದೊಡನೆ ಮತ್ತೆ ಉತ್ತರ ದೇಶ ಸಂಚಾರಾರ್ಥವಾಗಿ ಹೊರಟರು. ಆದರೆ ಈಗೊದಗಿದ ಪಯಣವು ಅವರಿಗೆ ಪುನಃ ರಾಜಧಾನಿಯನ್ನು ನೋಡಲವಕಾಶವೀಯದೆ ಹೋಯಿತು. ಪ್ರಶಾಂತವಾಗಿರುವ ಸಾಗರವು ಬಿರುಗಾಳಿಯಿಂದ ಉಲ್ಲೋಲಕಲ್ಲೋಲವಾದಂತೆ, ಮಿರುಗುವ ತಾರೆಗಳಿಂದ ಬೆಳಗುತ್ತಿದ್ದ ಆಕಾಶವು ಕಾರ್ಮೋಡದಿಂದ ಮುಸುಕಿಹೋದಂತೆ, ಹಸುರಾದ ವೃಕ್ಷರಾಜಿಯಿಂದ ಸುರಿಯುತ್ತಿದ್ದ ವನವು ಕಾಡುಗಿಚ್ಚಿನಿಂದ ಬೆಂದುಹೋದಂತೆ ಶ್ರೀ ಚಾಮರಾಜೇಂದ್ರ ಒಡೆಯರವರು ಕಲ್ಕತ್ತೆಗೆ ದಯಮಾಡಿಸಿದ್ದಾಗ, ಕಂಠನಾಳೋಪದ್ರವದಿಂದ ಅಕಾಲಮೃತ್ಯುವಿಗೆ ತುತ್ತಾದರು. ಇಷ್ಟು ಚಿಕ್ಕ ವಯಸ್ಸಿನಲ್ಲಿ ಶ್ರೀ ಕೃಷ್ಣರಾಜ ಒಡೆಯರಿಗೆ ಪಿತೃವಿಯೋಗ ಉಂಟಾಗಲು, ಸಂಸ್ಥಾನವೆಲ್ಲ ಅತ್ಯಂತ ದುಃಖಮಯವಾದ ಘೋರಾಂಧಕಾರದಲ್ಲಿ ಮುಳುಗಿತು. ಆಗ ರಾಜಧಾನಿಯಲ್ಲಿ ರಾಜ್ಯಭಾರ ಕ್ರಮವು ಬಹಳಮಟ್ಟಿಗೆ ಬದಲಾಯಿಸಿತು.

**ರೀಜನ್ಸೀ ವಿಷಾರ್ಡು.**—ಚಾಮರಾಜೇಂದ್ರ ಒಡೆಯರವರು ಸ್ವರ್ಗಸ್ಥರಾಗಲು, ಶ್ರೀ ವಾಣೀವಿಲಾಸ ಸನ್ನಿಧಾನ ಕೆಂಪನಂಜಮ್ಮಣ್ಣಿ, ಸಿ.ಐ. ಯವರು ಪತಿವಿಯೋಗದಿಂದುಂಟಾದ ಘೋರದುಃಖವನ್ನು ಸಹಿಸಿಕೊಂಡು, ಪ್ರಜಾಕ್ಷೇಮವೇ ತಮ್ಮ ಮುಖ್ಯ ಕರ್ತವ್ಯವೆಂದು ಭಾವಿಸಿ, ಉದಾರ ಭಾವದಿಂದ ಮುಂದೆ ಬಂದು, ತಮ್ಮ ಪತಿಯ ಸ್ಥಾನದಲ್ಲಿ ನಿಂತು, ರಾಜ್ಯ ಲಕ್ಷ್ಮ್ಯಯ ಸೇವೆಗಾಗಿ ತಮ್ಮ ಜನ್ಮವನ್ನು ಧಾರೆಯೆರೆದು, ಸಂಸ್ಥಾನದ ರೀಜನ್ಸೀ ಪದವಿಯನ್ನು ಕೈಕೊಂಡರು. ಆಗ ದಿವಾನರಾಗಿದ್ದ ಸರ್ ಶೇಷಾದ್ರಿ ಐಯ್ಯರ್‌ರವರು ತಂಬೂಸೆಟ್ಟಿ ಮೊದಲಾದ ಮಂತ್ರ್ಯಾಲೋಚನಾ ಸಚಿವರ ಸಹಾಯದಿಂದ ರಾಜ್ಯಭಾರವನ್ನು ಜರುಗಿಸತಕ್ಕುದೆಂದು ಇಂಡಿಯಾ ಸರ್ಕಾರದವರು ನಿರ್ಣಯ ಮಾಡಿದರು. ಸಂಸ್ಥಾನದ ಜವಾಬ್ದಾರಿಯು ಶ್ರೀಮನ್ಮಹಾರಾಣಿಯವರ ಮೇಲೂ ದಿವಾನರ ಮೇಲೂ ಬಿದ್ದಿತು.

# ೩ನೆಯ ಅಧ್ಯಾಯ

## ಪಟ್ಟಾಭಿಷೇಕ ಮಹೋತ್ಸವ

ಬಳಿಕ ೧೮೯೯ನೆಯ ಇಸವಿ ಫೆಬ್ರವರಿ ೧೫ನೆಯ ತಾರೀಖಿನಲ್ಲಿ ಯುವ ರಾಜರಾಗಿದ್ದ ಶ್ರೀ ಕೃಷ್ಣರಾಜ ಒಡೆಯರಿಗೆ ಪಟ್ಟಾಭಿಷೇಕ ಮಹೋತ್ಸವವು ನಡೆಯತಕ್ಕುದೆಂದು ನಿಷ್ಕರ್ಷೆಯಾಯಿತು. ಅದನ್ನು ಕೇಳಿದ ಪ್ರಜೆಗಳಿಗೆ, ಸಮುದ್ರಮಧ್ಯದಲ್ಲಿ ಹಡಗೊಡೆದ ನಾವಿಕರಿಗೆ ಹೊಸ ನಾವೆಯು ಧ್ವಜಪಟವು ಕಾಣಿಸಿದಂತಾಯಿತು. ಇದಕ್ಕಾಗಿ ಉಚಿತ ಸನ್ನಾಹಗಳು ಅಣಿಯಾಗಲಾರಂಭಿಸಿದುವು. ಪ್ರಜೆಗಳೆಲ್ಲರೂ ದುರಂತವಾದ ತಮ್ಮ ವ್ಯಸನವನ್ನು ಒಂದು ಕಡೆಯಲ್ಲಿಟ್ಟು ಅತ್ಯಂತಾಸಕ್ತಿಯಿಂದ ಪಟ್ಟಾಭಿಷೇಕ ಮಹೋತ್ಸವವನ್ನು ಇದಿರುನೋಡುತ್ತಿದ್ದರು. ಶ್ರೀಮನ್ಮಹಾರಾಣಿಯವರೇ ಯಾಜಮಾನ್ಯವನ್ನು ವಹಿಸಿ, ಲಗ್ನಪತ್ರಿಕೆಗಳನ್ನು ಬರೆಸಿ, ಇಂಡಿಯಾ ದೇಶದ ವೈಸರಾಯರು, ಗೌರ್ನರುಗಳು, ಸಕಲ ಸಂಸ್ಥಾನಗಳ ರಾಜರು, ದೊಡ್ಡ ಮನುಷ್ಯರು, ಅಧಿಕಾರಿಗಳು ಎಲ್ಲರಿಗೂ ಕಳುಹಿಸಿಕೊಟ್ಟರು. ರಾಜಧಾನಿಯು ತುಂಬಿದ ಪ್ರಜಾಸಮುದಾಯದಿಂದ ನಲಿದಾಡತೊಡಗಿತು. ರಾಜಬೀದಿಗಳಲ್ಲಿ ಎಲ್ಲೆಲ್ಲಿಯೂ ತಳಿರುತೋರಣಗಳು, ಬಾಳೆಯ ಕಂಬಗಳು ತೊನೆದು ಮೆರೆಯುತ್ತಿದ್ದುವು. ವಿವಿಧವರ್ಣದ ಧ್ವಜಪತಾಕೆಗಳು ಮುಗಿಲ ಮುಟ್ಟಿದುವು. ಯಾವ ಸ್ಥಳದಲ್ಲಿ ಮುಮ್ಮಡಿ ಶ್ರೀ ಕೃಷ್ಣಭೂಪತಿಗಳು ಧರ್ಮಪೀಠವನ್ನಲಂಕರಿಸಿ ಪ್ರಜೆಗಳ ಕಷ್ಟನಿಷ್ಠುರಗಳನ್ನು ವಿಚಾರಿಸುತ್ತಿದ್ದರೋ, ಎಲ್ಲಿ ಶ್ರೀ ಚಾಮರಾಜೇಂದ್ರ ಒಡೆಯರು ಕುಳಿತು ಅನೇಕ ವಿನೋದಗಳನ್ನು ನೋಡಿ ವಿನಂದಿಸುತ್ತಿದ್ದರೋ ಅಂತಹ ಬಾಲಾಖಾನೆಯು ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರವರ ಪಟ್ಟಾಭಿಷೇಕಕ್ಕಾಗಿ ನಾನಾವರ್ಣದ ರತ್ನಗಂಬಳಿಗಳಿಂದಲೂ ಮೇಲ್ಕಟ್ಟುಗಳಿಂದಲೂ ಮನೋಹರವಾದ ಮಂಟಪದಿಂದಲೂ ಹೂವಿನ ಕುಚ್ಚುಗಳಿಂದಲೂ ದೊಡ್ಡ ದೊಡ್ಡ ಕನ್ನಡಿಗಳಿಂದಲೂ ಅಲಂಕರಿಸಲ್ಪಟ್ಟಿತು. ಅಲ್ಲಿಯೇ ಪೂರ್ವಾಭಿಮುಖವಾಗಿ ಕೆಂಪುಕಾವಿನ ಉಲಾರದ ಮೇಲೆ ರತ್ನಸಿಂಹಾಸನವು ಜೋಡಿಸಲ್ಪಟ್ಟಿತು. ಸಿಂಹಾಸನದ ಬಲಗಡೆ ಆಂಗ್ಲೇಯ ಅಧಿಕಾರಿಗಳಿಗೂ ಎಡಗಡೆ ದೇಶೀಯ ಅಧಿಕಾರಿಗಳಿಗೂ ರಾಜಬಂಧುಗಳಿಗೂ ಮತ್ತು ಎಲ್ಲಾ ದೊಡ್ಡ

ಮನುಷ್ಯರಿಗೂ ಸ್ಥಳವು ಏರ್ಪಡಿಸಲ್ಪಟ್ಟಿತ್ತು. ಭುವನೇಶ್ವರೀ ಮಂಟಪದಲ್ಲಿ ಪ್ರಜಾಪ್ರತಿನಿಧಿಗಳಿಗೂ ಏಜೆಂಟರಿಗೂ ಇತರ ಅಧಿಕಾರಿಗಳಿಗೂ ಸ್ಥಳವನ್ನು ಗೊತ್ತುಮಾಡಿದ್ದರು. ಉಳಿದ ಅಂಗಳದಲ್ಲಿ ಪಟ್ಟದ ಆನೆ

ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕ

ಕುದುರೆ, ಹಸುಗಳು ವಿವಿಧ ಅಲಂಕಾರಗಳಿಂದ ಕೂಡಿ, ರಾಜವೈಭವದಿಂದ ನಿಂತುಕೊಂಡಿದ್ದುವು. ಅವುಗಳಿಗೆ ಎದುರಾಗಿ ವಾದ್ಯಕಾರರು, ಮಂದಿ ಮಾಗಧರು, ವಾರಾಂಗನೆಯರು, ಬಿರುದಾವಳಿಗಳನ್ನು ಹಿಡಿದಿರುವ ಜೋಯಿಸರು ಸಾಲುಸಾಲಾಗಿ ನಿಂತಿದ್ದರು. ಉಳಿದ ಸೈನ್ಯವೆಲ್ಲವೂ ಆನೆ ಬಾಗಿಲ ಮುಂಭಾಗದ ಮೈದಾನದಲ್ಲಿ ನಿಂತಿದ್ದವು.

ಶ್ರೀಮನ್ಮಹಾರಾಜರವರು ಶಾಸ್ತ್ರೋಕ್ತವಾದ ಪೂಜೆಗಳನ್ನೆಲ್ಲ ನೆರವೇರಿಸಿಕೊಂಡು ಸಿಂಹಾಸನಾರೋಹಣ ಮುಹೂರ್ತವನ್ನು ನಿರೀಕ್ಷಿಸುತ್ತಿದ್ದರು. ಅಷ್ಟರಲ್ಲಿ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಹೆಂಡರ್ಸನ್ ಸಾಹೇಬರು, ಪದ್ಧತಿಯಾಗಿ ಬಂದ ಮರ್ಯಾದೆಗಳೊಡನೆ ಅರಮನೆಗೆ ಬಂದರು. ದಿವಾನರೇ ಮುಂತಾದ ಮುಖ್ಯಾಧಿಕಾರಿಗಳು ಅವರನ್ನು ಆಸನಯ ಜಾಗಿಲಲ್ಲಿ ಇರಿಗೊಂಡು ಶ್ರೀಮನ್ಮಹಾರಾಜರಿದ್ದ ಸ್ಥಳಕ್ಕೆ ಕರೆದುಕೊಂಡು ಹೋದರು. ರೆಸಿಡೆಂಟರು ಮಹಾರಾಜರಿಗೆ ಹಸ್ತಲಾಘವನನ್ನಿತ್ತು, ಸಿಂಹಾಸನದ ಮುಂಭಾಗಕ್ಕೆ ಕರೆದುಕೊಂಡು ಒಂದು, ವೈಸರಾಯರಿಂದ ಬಂದಿದ್ದ *ಖರೀತಾ ಪತ್ರಿಕೆಯನ್ನು ಓದಿಹೇಳಿ, ಶ್ರೀಮನ್ಮಹಾರಾಜರವರನ್ನು ಸಿಂಹಾ

---

* ಮಹನೀಯರಾಗಿಯೂ ಪೂಜ್ಯರಾಗಿಯೂ ಇರುವ ನಮ್ಮ ಮಿತ್ರರಾದ ಮಹಿಶೂರು ಸಂಸ್ಥಾನದ ಮಹಾರಾಜಾ ಶ್ರೀಮತ್ಕೃಷ್ಣರಾಜ ಒಡೆಯರ್ ಬಹದ್ದರ್ರವರಿಗೆ—

ತಮ್ಮ ತಂದೆಗಳಾದ ಶ್ರೀಮನ್ಮಹಾರಾಜಾ ಶ್ರೀ ಚಾಮರಾಜೇಂದ್ರ ಒಡೆಯರ್ ಬಹದ್ದರ್, ಜಿ.ಸಿ.ಎಸ್.ಐ., ರವರ ಅತಿಶೋಚನೀಯವಾದ ಮರಣವು ಕಲ್ಕತ್ತಾ ಪಟ್ಟಣದಲ್ಲಿ ಪ್ರಾಪ್ತವಾದ ವೇಳೆಯಲ್ಲಿ ಈ ಅಕಾಲವಿಪತ್ತಿನ ವಿಷಯದಲ್ಲಿ ಈ ಶೀಮೆಯಲ್ಲಿಯೂ ಇಂಗ್ಲೆಂಡಿನಲ್ಲಿಯೂ ಉಂಟಾದ ನಿಜವಾದ ಅನುತಾಪಗಳನ್ನು ತಮಗೂ ತಮ್ಮ ಮಾತೋಶ್ರೀಯವರಾದ ಶ್ರೀಮನ್ಮಹಾರಾಣಿಯವರಿಗೂ ಕೂಡಲೆ ನಾವು ತಿಳಿಸಿರುತ್ತೇವೆ.

ಮೈಸೂರು ಸಂಸ್ಥಾನಪಟ್ಟದ ತಮ್ಮ ಬಾಧ್ಯತೆಯನ್ನು ಇಂಡಿಯಾ ಗವರ್ನಮೆಂಟಿನವರು ಅಂಗೀಕರಿಸಿರುವ ಅಂಶವನ್ನು ಮೊದಲೇ ತಿಳಿಸಿರುತ್ತೇವಷ್ಟೆ. ಆ ಅಂಗೀಕಾರವನ್ನು ಈಗ ಯಥಾಕ್ರಮವಾಗಿ ನಾವು ಅನುಮೋದಿಸಿರುತ್ತೇವೆ. ತಾವು ಪ್ರಾಪ್ತವಯಸ್ಕರಾಗಿ ಶೀಲಸಾಮರ್ಥ್ಯಸಂಪನ್ನರಾಗಿ ಪೂಜ್ಯನಾದ ಈ ಮಹೋನ್ನತ ಪದವಿಯನ್ನು ವಹಿಸುವುದಕ್ಕೆ ಅರ್ಹರಾದರೆ ತಮ್ಮ ತಂದೆಗಳಿಂದ ಪ್ರಖ್ಯಾತಿಯೊಡನೆ ನಡೆಸಲ್ಪಟ್ಟ ರಾಜ್ಯಾಧಿಕಾರವನ್ನು ತಮ್ಮ ಸುಪರ್ದು ಮಾಡುತ್ತೆ. ಏತನ್ಮಧ್ಯಕಾಲದ ರಾಜ್ಯಾಡಳಿತಕ್ರಮವನ್ನೂ ತಮ್ಮ ವಿದ್ಯಾಭ್ಯಾಸ ಕ್ರಮವನ್ನೂ ಮೇಲ್ವಿಚಾರಣೆ ತೆಗೆದುಕೊಳ್ಳುತಕ್ಕ ಮಹತ್ತಾದ ಜವಾಬ್ದಾರಿಯು ಬ್ರಿಟಿಷ್ ಗವರ್ನಮೆಂಟಿನವರನ್ನು ಹೊಂದಿರುತ್ತೆ. ಈ ವಿಷಯವಲ್ಲಿ ನಾವು ವಿಶೇಷವಾದ ಪರ್ಯಾಲೋಚನೆಯಂಗೈದಿರುತ್ತೇವೆ. ಅಲ್ಲದೆ ದೈವಾತ್ ಈಗಿನ ಸಂದರ್ಭಗಳು ಸುಮುಖವಾಗಿರುತ್ತವೆ. ತಮ್ಮ ಬಾಲ್ಯಾವಸ್ಥೆಯಲ್ಲಿ ರಾಜ್ಯಾಡಳಿತವನ್ನು ನಡೆಸುವುದಕ್ಕೆ ಅರ್ಹವಾದ ಮುಖ್ಯಾಧಿಕಾರಸ್ಥಾನವನ್ನು ಏರ್ಪಡಿಸಬೇಕಾಗಿರುತ್ತೆ. ಶ್ರೀಮನ್ಮಹಾರಾಣಿ ವಾಣೀವಿಲಾಸ ಸನ್ನಿಧಾನ, ಸಿ.ಐ., ರವರಿಗೆ ಮೈಸೂರ ಸಂಸ್ಥಾನದ ರೀಜೆಂಟ್ ಎಂಬ ಗೌರವವನ್ನೂ ಪದವಿಯನ್ನೂ ಕೊಡುವುದರ ಮೂಲಕ, ಗತಕಾಲಾನುಭವದಿಂದ ಸಫಲವೆಂದು ವ್ಯಕ್ತಪಟ್ಟಿರುವ ಇದುವರೆವಿಗೆ ನಡೆದುಬಂದ ರಾಜ್ಯಾಡಳಿತಕ್ರಮವನ್ನು ಇಂಡಿಯಾ ಗವರ್ನಮೆಂಟಿನವರ ಸ್ವಂತ ವೃಷ್ಟಿಗೆ ಒಳಪಟ್ಟು ಮುಂದೆಯೂ

ಸನಾರೋಹಣ ಮಾಡಿಸಿದರು. ಕೂಡಲೇ ಮಂಗಳವಾದ್ಯಗಳು ಮೊಳ
ಗಿದುವು. ಸಕಲ ದಿಕ್ಕುಗಳಿಂದಲೂ ಪ್ರಜೆಗಳು ಪೂಮಳೆಗರೆದರು. ಸೈನಿಕರು
ಪ್ರಮುಪ್ರಕಾರ ಸುರುಟಿ ಮಾಡಿದರು. ಇಪ್ಪತ್ತೊಂದು ತೋಪುಗಳು
ಹಾರಿಸಲ್ಪಟ್ಟುವು. ಪುರೋಹಿತರೇ ಮೊದಲಾದ ವೈದಿಕಮಂಡಲಿಯವರು
ಯಥಾವಿಧಿಯಾಗಿ ಪಟ್ಟಾಭಿಷೇಕ ಶುಭಕರ್ಮವನ್ನು ನೆರವೇರಿಸಿದ ಒಳಿಕ,
ವೈದಿಕರೆಲ್ಲರೂ ಕೈಯೆತ್ತಿ—

ಶ್ಲೋಕ—ಆಯುಷ್ಮಾನ್ಭವ ಕೀರ್ತಿಮಾನ್ಮಹಿಶುಭಾಂ ವೃತ್ತಾಶ್ಚಿರಂಜೀವಿನೊ |
ಜಾಯಂತಾಂ ಭಜಸಂಪದಂ ಸ್ಥಿರಕರಂ ರಾಜ್ಯಂ ಚಿರಂ ಪಾಲಯ ||
ಧರ್ಮಂರಕ್ಷ ಬುಧಾನನ ಕ್ಷಿತಿತಲೇ ಪ್ರೀತ್ಯಾಪ್ರಜಾರಂಜಯ |
ಶ್ರೀಕೃಷ್ಣೇಂದ್ರ ಭವಾಬ್ಧಿ ಸದಾ ವಿಜಯತಾಮಾಚಂದ್ರಮಾತಾರಕಂ ||

ಎಂದು ಮಂಗಳಾಶೀರ್ವಾದಗಳಂ ಮಾಡಿದರು. ಬಳಿಕ ದರ್ಬಾರ್‌ಬಕ್ಷಿ
ರಾಯಬಹದ್ದೂರ್ ಅಂಬಲ್ ನರಸಿಂಹೈಯ್ಯಂಗಾರ್ಯರು ರಾಜವಂಶಾ

---

ನಡೆಸತಕ್ಕದ್ದಕ್ಕೆ, ಶ್ರೀಮನ್ಮಹಾರಾಣಿಯವರೂ, ದುರ್ನಿವಹವಾದ ದಿವಾಣ್ಗಿರಿ ಅಧಿ
ಕಾರವನ್ನು ನಾಮಮಾತ್ರದಿಂದ ನಡೆಸುತ್ತಲಿರುವ ಅಮಾತ್ಯರೂ ಮತ್ತು ಅವರೊಡನೆ
ಸೇರಬಹುದಾದ ಅನುಭವಶಾಲಿಗಳಾದ ಅಧಿಕಾರಿಗಳೂ ಸಹ ಸಾಧನಗಳಾಗಿರುವವರೆಂಬ
ನಂಬಿಕೆಯನ್ನು ಇಂಡಿಯಾ ಗವರ್ನ್‌ಮೆಂಟಿನವರು ಸ್ಪಷ್ಟವಾಗಿ ತೋರಿಸಿರುತ್ತಾರೆ.

ಮೈಸೂರು ಸಂಸ್ಥಾನದ ಮತ್ತು ತಮ್ಮ ಯೋಗಕ್ಷೇಮಗಳನ್ನು ಜಾಗರೂಕಭಾವ
ದಿಂದ ಇಂಡಿಯಾ ಗವರ್ನ್‌ಮೆಂಟಿನವರು ಅವಲೋಕಿಸುತ್ತಾ ಬರುತ್ತಾರೆಂಬ ಅಂಶವನ್ನು
ತಮಗೂ ತಮ್ಮ ಮೂಲಕ ಶ್ರೀಮನ್ಮಹಾರಾಣಿಯವರಿಗೂ ದೃಢವಾಗಿ ತಿಳಿಸುತ್ತೇವೆ.
ನಮ್ಮ ಗವರ್ನ್‌ಮೆಂಟಿನ ನಂಬಿಕೆಗೆ ಪಾತ್ರರಾಗಿರುವ ರೆಸಿಡೆಂಟರು ಸರ್ವದಾ ತಮಗೆ
ನಿತ್ರರಾಗಿಯೂ ಸಲಹೆ ಕೊಡತಕ್ಕವರಾಗಿಯೂ ತಮ್ಮ ಸಾನ್ನಿಧ್ಯದಲ್ಲಿರುವರು.
ಮತ್ತು ಇವರ ಸಹಾಯವು ಮೈಸೂರು ಸಂಸ್ಥಾನದವರಿಂದ ಉಪಯೋಗಿಸಿಕೊಳ್ಳ
ಬಹುದಾಗಿರುತ್ತೆ. ಸಂಸ್ಥಾನದ ನಿರಂತರನಾದ ಸೌಖ್ಯಾಭಿವೃದ್ಧಿಯನ್ನುಂಟುಮಾಡ
ತಕ್ಕದ್ದೇ ನಮ್ಮ ಮುಖ್ಯಪ್ರಯತ್ನವಾಗಿರುವುದು.

ನಮ್ಮ ಅವಾರ್ಡ ಶ್ಲೋಕಕ್ಕೆ ಅಕಾಲವಿಯೋಗದಿಂದ ವಿಷಯರಾದ ತಮ್ಮ ತಂದೆಗಳ
ಸ್ಥಾನಕ್ಕೆ ತಾವು ಅರ್ಹರಾಗುತ್ತೀರೆಂದು ನಾವು ದೃಢವಾಗಿ ನಂಬುತ್ತೇವೆ.

ತಮ್ಮಲ್ಲಿ ವಿಶೇಷ ಗೌರವಭಾವದಿಂದೊಡಗೂಡಿರುವ
ತಮ್ಮ ನಿಜವಾದ ಮಿತ್ರರು,

ಫೋರ್ಟ್ ವಿಲಿಯಂ,
ತಾ|| ೨೫ನೆಯ ಜನವರಿ, ೧೯೦೬.

ಎಲ್‌ಗಿನ್,
ವೈಸರಾಯಿ ಮತ್ತು ಗೌರ್ನರ್ ಜನರಲ್.

ಪತ್ರಿಕೆಯನ್ನು ಓದಿದಮೇಲೆ—ಶ್ರೀಮತ್ಸಮಸ್ತ ಭೂಮಂಡಲಮಂಡನಾಯ
ಮಾನ ನಿಖಿಲದೇಶಾವತಂಸ ಕರ್ನಾಟಕ ಜನಪದಸಂಪದಧಿಷ್ಠಾನಭೂತ
ಶ್ರೀಮನ್ಮಹೀಶೂರ ಮಹಾಸಂಸ್ಥಾನ ಮಧ್ಯದೇದಿಪ್ಯಮಾನಾಖಿಲಕಲಾ
ನಿಧಿ ಕುಲಕ್ರಮಾಗತ ರಾಜಕ್ಷಿತಿಪಾಲವ್ರಮುಖ ನಿಖಿಲರಾಜಾಧಿರಾಜ
ಮಹಾರಾಜ ಚಕ್ರವರ್ತಿಮಂಡಲಾನುಭೂತ ದಿವ್ಯರತ್ನ ಸಿಂಹಾಸನಾರೂಢ
ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪಾಪ್ರತಿಮವೀರ
ನರಪತಿ ಬಿರುದೆಂತೆಂಬರಗಂಡ ಲೋಕೈಕವೀರ ಯದುಕುಲಪಯಃವಾರಾ
ವಾರ ಕಲಾನಿಧಿ ಶಂಕಜಕ್ರಾಂಕುಶಕುಠಾರ ಮಕರಮತ್ಸ್ಯಶರಭಸಾಳ್ವ
ಗಂಡಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೇಕ
ಬಿರುದಾಂಕಿತ ಶ್ರೀ ಚಾಮರಾಜೇಂದ್ರ ಮಹೀವಾಲ ಧರ್ಮಪತ್ನೀ ವಾಣೀ
ವಿಲಾಸ ಸನ್ನಿಧಾನ ಕೆಂಪನಂಜಮ್ಮಾಂಬಾ ಗರ್ಭಸುಧಾಂಬುಧಿ ರಾಕಾ
ಸುಧಾಕರಾಯಮಾನ ಶ್ರೀ ಚಾಮುಂಡಿಕಾಂಬಾ ವರಪ್ರಸಾದೋದ್ಭವ
ರಾದ ಆತ್ರೇಯಸಗೋತ್ರ ಅಶ್ವಲಾಯನಸೂತ್ರ ಋಕ್ಶಾಖಾನುವರ್ತಿ
ಗಳಾದ ಶ್ರೀಮನ್ಮಹಿಶೂರ ಪುರವರಾಧೀಶ ಶ್ರೀ ಕೃಷ್ಣರಾಜ ಒಡೆಯರವರು
ಶಾಲಿವಾಹನಶಕ ೧೮೦೭ನೇ ತಾರಣನಾಮ ಸಂವತ್ಸರದ ಜ್ಯೇಷ್ಠ ಶುದ್ಧ
ಏಕಾದಶೀ ಭಾನುವಾರ ಚಿತ್ತಾನಕ್ಷತ್ರ ತುಲಾರಾಶಿ ಕರ್ಕಾಟಕ ಲಗ್ನದಲ್ಲಿ
ಅವತರಿಸಿ, ೧೮೧೭ನೇ ಜಯನಾಮಸಂವತ್ಸರದ ಪೂರ್ವಶುದ್ಧ ಷಷ್ಠಿ
ಶುಕ್ರವಾರ ಅಶ್ವಿನೀ ನಕ್ಷತ್ರ ಹಗಲು ೧೨॥ ಗಂಟೆಯ ವೃಷಭಲಗ್ನ
ಉಚ್ಚಾಂಶದಲ್ಲಿ ಪಟ್ಟಾಭಿಷಿಕ್ತರಾಗಿ ನಿಜಕುಲಕ್ರಮಾಗತವಾದ ರತ್ನ
ಸಿಂಹಾಸನಾರೂಢರಾಗಿ ಸುಖದಿಂ ಅಮಾತ್ಯಾದಿ ಪರಿವಾರಗಳೊಡನೆ
ಉರ್ವೀಚಂದ್ರಾರ್ಕವಾಗಿ ವೃದ್ಧಿಸೀನಾಮಾಭ್ಯುದಯವನ್ನೈತ್ತಿರುವರು ಎಂದು ಪ್ರಸಿದ್ಧ
ಪತ್ರಿಕೆಯನ್ನು ಓದಿದರು. ರೆಸಿಡೆಂಟರು ವೈನಾಯರವರು ಕಳುಹಿಸಿದ್ದ
೨೧ ತಟ್ಟೆ ಬೆಲ್ಲತ್ತುಗಳನ್ನು ಶ್ರೀಮನ್ಮಹಾರಾಜರವರಿಗೆ ಒಪ್ಪಿಸಿ, ಒಂದು
ಮುತ್ತಿನಹಾರವನ್ನು ಮಹಾರಾಜರವರ ಕಂಠಕ್ಕೆ ಅರ್ಪಿಸಿದರು. ತರುವಾಯ
ಶ್ರೀಮನ್ಮಹಾರಾಜರವರ ಕಡೆಯಿಂದ ವೈನಾಯರವರಿಗೆ ಕಳುಹಿಸುವುದ
ಕ್ಕೋಸ್ಕರ ಇನ್ನೊಂದು ತಟ್ಟೆ ಬೆಲ್ಲತ್ತುಗಳು ದಿವಾನರ ಮೂಲಕ
ರೆಸಿಡೆಂಟರಿಗೆ ಒಪ್ಪಿಸಲ್ಪಟ್ಟವು. ಒಳಕ ಸರದಾರರೂ ರಾಜಬಂಧುಗಳೂ
ಅಧಿಕಾರಿಗಳೂ ಶ್ರೀಮನ್ಮಹಾರಾಜರವರಿಗೂ ವಾಣೀವಿಲಾಸ ಸನ್ನಿಧಾ

ಸಕಲ್ಪ ನಜರು ಮುಜರೆಗಳನ್ನು ಮಾಡಿದರು. ರೆಸಿಡೆಂಟರೇ ಮೊದಲಾಗಿ ಅಲ್ಲಿಗೆ ದಯಮಾಡಿಸಿದ್ದ ಅತಿಥಿಗಳಿಗೆಲ್ಲಾ ಸೂಕ್ತಮಯರ್ಯಾದೆಗಳು ಸಲ್ಲಿಸಲ್ಪಟ್ಟ ಬಳಿಕ ಮಹಾಧಿಪತಿಗಳ ಕಡೆಯಿಂದ ಒಂದಿದ್ದ ಪೈದಿಕಮಂಡಲಿಯವರು ಶ್ರೀಮನ್ಮಹಾರಾಜರವರಿಗೆ ವೇದೋಕ್ತಾಶೀರ್ವಾದಗಳನ್ನು ಮಾಡಿ ಫಲಮಂತ್ರಾಕ್ಷತೆಗಳನ್ನು ಒಪ್ಪಿಸಿದರು. ಈ ಮಹೋತ್ಸವ ನಿಮಿತ್ತವಾಗಿ ನಡೆಯಬೇಕಾದ ಸಂಕಲ್ಪಣೆಗಳೂ ದಾನಧರ್ಮಗಳೂ ಉತ್ಸವ ಪರಂಪರೆಗಳೂ ಬಹು ವಿಜೃಂಭಣೆಯಿಂದ ಜರುಗಿದುವು. ಸಂಸ್ಥಾನದ ಸಕಲ ಪ್ರದೇಶಗಳ ಪ್ರಜೆಗಳೂ ಮಹಾರಾಜರವರಿಗೆ ವಿಜ್ಞಾಪನಾ ಪತ್ರಿಕೆಗಳನ್ನು ಒಪ್ಪಿಸಿದರು. ಮಹಾರಾಜರವರು ಉತ್ಸವಕ್ಕಾಗಿ ಬಂದಿದ್ದ ಸಕಲರಿಗೂ ಶಿಲ್ಲತ್ತುಗಳನ್ನೂ ಉಡುಗೊರೆಗಳನ್ನೂ ಕೊಟ್ಟು ಅವರವರ ನೆಲೆಗಳಿಗೆ ಕಳುಹಿಸಿಕೊಟ್ಟರು.

---

# ೪ನೆಯ ಅಧ್ಯಾಯ

ಲಾರ್ಡ್ ಎಲ್ಗಿನ್‌ರವರ ಆಗಮನ, ಉಪನಯನ, ವಿದ್ಯಾಭ್ಯಾಸದಲ್ಲಿ ಬದಲಾವಣೆ, ಶ್ರೀ ಜಯಲಕ್ಷ್ಮಮ್ಮಣ್ಣಿಯವರ ವಿವಾಹ, ಅರಮನೆಗೆ ಅಗ್ನಿಯಿಂದುಂಟಾದ ಅಪಘಾತ, ಸ್ವದೇಶ ಸಂಚಾರ, ಉತ್ತರದೇಶ ಸಂಚಾರ

ಪಟ್ಟಾಭಿಷೇಕ ನಡೆದ ಕೆಲವು ದಿವಸಗಳಲ್ಲೇ ಮೈಸರಾಯರಾದ ಅರ್ಲ್ ಆಫ್ ಎಲ್ಗಿನ್‌ರವರು ಪರಿವಾರದೊಡನೆ ರಾಜಧಾನಿಗೆ ಚಿತ್ತೈಸಿ, ತರುಣ ಮಹಾರಾಜರವರ ಭೇಟಿಯನ್ನು ಮಾಡಿಕೊಂಡು ಶ್ರೀರಂಗಪಟ್ಟಣದಲ್ಲಿರುವ ಚಾರಿತ್ರಾರ್ಹವಾದ ಕಟ್ಟಡಗಳನ್ನೂ ಕಾಕನಕೋಟೆಯ ಕಾಡಿನಲ್ಲಿ ಹಿಡಿಯುವ ಕಾಡಾನೆಗಳ ವಿನೋದವನ್ನೂ ನೋಡಿಕೊಂಡು ಹಿಂದಿರುಗಿದರು.

**ಉಪನಯನ.**—ಬಳಿಕ ೧೮೯೯ನೆಯ ಇಸವಿ ಏಪ್ರಿಲ್ ೭ನೆಯ ದಿನ ಶ್ರೀಮನ್ಮಹಾರಾಜರವರಿಗೆ ಉಪನಯನ ಮಹೋತ್ಸವವು ನಡೆಯಿತು. ಅದೇ ಕಾಲದಲ್ಲಿ ಮಹಾಸ್ವಾಮಿಯವರ ಎರಡನೇ ಅಕ್ಕಯ್ಯನವರಾದ ಶ್ರೀ ಕೃಷ್ಣಾಜಮ್ಮಣ್ಣಿಯವರನ್ನು ಕರ್ನಾಲ್ ದೇಶರಾಜೆ ಅರಸಿನವರಿಗೆ ಕೊಟ್ಟು ಜರಿಸಿದ ವಿವಾಹ ಮಹೋತ್ಸವವೂ ಕೂಡ ಸಂಘಟಿಸಿತು. ಈ ಮಹೋತ್ಸವಗಳಿಗೆ ಕಾರ್ಯಾರ್ಥವಾಗಿ ದೇಶಕ್ಕೆ ಸೇರಿದ ಪೌರ್ವ ಸಂಸ್ಥಾನದ

ಮಹಾರಾಜರವರೇ ಮೊದಲಾದ ಅನೇಕ ರಾಜವಾಡೆಗಳ ಶ್ರೀಮಂತರುಗಳ ದಯಮಾಡಿಸಿದ್ದರು. ಆಗ ರಾಜಧಾನಿಯು ಪುನಃ ನಾನಾ ವಿಧವಾ ವೈಭವಗಳಿಂದಲೂ ಉತ್ಸವಗಳಿಂದಲೂ ಕೂಡಿ ಸುಮನೋಹರವಾ ಕಂಗೊಳಿಸುತ್ತಿದ್ದಿತು.

**ವಿದ್ಯಾಭ್ಯಾಸದಲ್ಲಿ ಬದಲಾವಣೆ.**—ಈ ಮಧ್ಯದಲ್ಲಿ ಇಂಡಿಯ ಸರ್ಕಾರದವರು ತಾವು ಮಾಡಿದ್ದ ವಾಗ್ದಾನಪ್ರಕಾರ ತರುಣ ಮಹಾರಾ ರವರ ವಿದ್ಯಾಭ್ಯಾಸಕ್ಕೋಸ್ಕರ ಇಂಡಿಯಾ ಗವರ್ನಮೆಂಟಿನ ಪೊಲಿಟಿಕ ಇಲಾಖೆಯಲ್ಲಿದ್ದ ಸೆ|| ಎಸ್. ಎಮ್. ಫ್ರೇಸರ್, ಐ.ಸಿ.ಎಸ್. ಯವರ ಬೋಧಕರನ್ನಾಗಿಯೂ ಮೇಲ್ವಿಚಾರಕರನ್ನಾಗಿಯೂ ನೇಮಿಸಿ ಕಳು ಸಿದರು. ಅವರು ಬಂದ ಒಳಿಕ ಮಹಾರಾಜರವರ ವಿದ್ಯಾಭ್ಯಾಸಕ್ರಮ ಅನೇಕವಾಗಿ ಬದಲಾಯಿಸಲ್ಪಟ್ಟಿತು. ಮಹಾರಾಜರೊಡನೆ ವಿದ್ಯಾಭ್ಯಾ ಮಾಡುವುದಕ್ಕೆ ರಾಯಲ್ ಸ್ಕೂಲಿನ ಕೆಲವುಮಂದಿ ವಿದ್ಯಾರ್ಥಿಗಳನ್ನ ಮಾತ್ರ ಆಯ್ದುಕೊಂಡು ಮಹಾರಾಜರವರು ಖಾಸಬಂಗಲೆಯಲ್ಲೆ ಇರುವಂತೆ ಮಾಡಿದರು. ಮಹಾರಾಜರಿಗೆ ದೇಹದಾರ್ಢ್ಯವನ್ನುಂ ಮಾಡಲು ಪ್ರತಿನಿತ್ಯವೂ ಪ್ರಾತಃಕಾಲಗಳಲ್ಲಿ ಕುದುರೆ ಸವಾರಿ ಮೊದಲಾ ವ್ಯಾಯಾಮವೂ, ಸೋಮವಾರ ಮೈಸೂರು ಇನ್‌ಫೆಂಟ್ರಿ ಸಿಪಾಯಿ ಗಳೊಡನೆ ಡ್ರಿಲ್ ಮಾಡುವುದೂ, ಗುರಿನೋಡಿ ಗುಂಡು ಹೊಡೆಯುವುದು ಎರಡರಿಂದ ನಾಲ್ಕು ಕುದುರೆ ಕಟ್ಟಿದ ರಥಗಳನ್ನು ನಡೆಸುವುದು, ಬೇಟೆನಾಯಿಗಳೊಡನೆ ಷಿಕಾರಿಮಾಡುವುದೂ, ಪೋಲೋ, ಟೆನ್ನಿಸ್ ಕ್ರಿಕೆಟ್ ಆಟಗಳನ್ನೂ, ಈಜುವುದು ಮೊದಲಾದವುಗಳನ್ನೂ ಕಲಿ ಕೊಡುತ್ತಿದ್ದರು. ವಯಸ್ಸಾಗುತ್ತ ಬಂದಹಾಗೆಲ್ಲ ಅವರು ಓದುತ್ತಿ ಇಂಗ್ಲಿಷ್, ಕನ್ನಡ, ಸಂಸ್ಕೃತ, ಹಿಂದೂಸ್ಥಾನಿ ಪುಸ್ತಕಗಳಲ್ಲಿ ಪ್ರಾ ಗ್ರಂಥಗಳು ನೇಮಿಸಲ್ಪಡುತ್ತಿದ್ದುವು.

**ಜಯಲಕ್ಷ್ಮಮ್ಮಣ್ಣಿಯವರ ವಿವಾಹ, ಅರಮನೆಗೆ ಅಗ್ನಿಯಿಂದುಂಟಾದ ಅಪಘಾತ.**—ಬಳಿಕ ೧೮೯೭ನೆಯ ಫೆಬ್ರವರಿ ತಿಂಗಳ ರಾಜಧಾನಿಯು ಪುನಃ ವಿವಾಹ ಮಂಗಳಮಹೋತ್ಸವದಿಂದ ಶೋಭಾಯ ಮಾನವಾಯಿತು. ಅದೇ ಶ್ರೀಮನ್ಮಹಾರಾಜರವರ ಜ್ಯೇಷ್ಠ ಸಹೋದ ಯವರಾದ ಶ್ರೀ ಜಯಲಕ್ಷ್ಮಮ್ಮಣ್ಣಿಯವರ ವಿವಾಹಮಹೋತ್ಸವ

ಫ್ರೇಜರ್ ಸಾಹೇಬರು ಮತ್ತು ಶ್ರೀಮನ್ಮಹಾರಾಜರವರು

ಇವರನ್ನು ಸರ್ವಾಧಿಕಾರಿಯಾಗಿ ಆರಿಸಿಸಬೇಕೆಂದು ಕೂಟದವರು. ಈ ಮಂತ್ರಿ ಕಾರ್ಯವನ್ನು ಪೂರ್ಣವಾಗಿ ನಿರ್ವಹಿಸಲಿಕ್ಕಾಗಿಯೇ ಸಮ್ಮೇಳನಕ್ಕೆ ಮುಂಚಿತವಾಗಿ ಸ್ವಲ್ಪ ಸಮಯಾವಕಾಶವಾದ ಒಂದು ಅಸಾಧಾರಣ ಸಂಧಿಯನ್ನು ಸಿದ್ಧಪಡಿಸಿತು. ಫೆಬ್ರವರಿ ತಿಂಗಳಿನ ಭಾನುವಾರದ ದಿನ ಆರಮನೆಯಲ್ಲಿ ವಿವಾಹಕ್ಕೆ ಸಂಬಂಧಪಟ್ಟ ಬೀಗರೌತಣವನ್ನು ನಡೆಯಬೇಕಾಗಿದ್ದುದರಿಂದ, ಸರ್ವರೂ ಆನಂದದ ಸಡಗರದಲ್ಲಿ ನಿರತರಾಗಿದ್ದರು. ಸಾಯಂಕಾಲ ೯ ಗಂಟೆ ಸಮಯದಲ್ಲಿ ಇದ್ದಕ್ಕಿದ್ದಂತೆ ಆರಮನೆ ಮೈದಾನದ ಚಪ್ಪರದಲ್ಲಿ ಅಗ್ನಿಯು ಕಾಣಿಸಿಕೊಂಡು ಒಮ್ಮೆಲೆ ಸಮನಾಗಿ ಬೆಂಕಿಯಲಾರಂಭಿಸಿತು. ಇದನ್ನು ಆಗ ಆರಮನೆಯಲ್ಲೇ ಇದ್ದ ದಿವಾನರು, ಕೌನ್ಸಿಲರು, ಕಂಟ್ರೋಲರು ಮೊದಲಾದವರಿಗೆ ತಿಳಿಸಿದರು. ಆವರೆಲ್ಲ ಒಂದು ನೋಡುವಷ್ಟರಲ್ಲಿ ಬೆಂಕಿಯು ಪ್ರಬಲವಾಗಿತ್ತು. ಬೆಂಕಿಯನ್ನು ಆರಿಸಲು ಏರ್ಪಾಡು ಮಾಡಿದರು, ನಾಶವಾಗಲಿಲ್ಲ. ಪ್ರಜೆಗಳು ಕನಿಕರದಿಂದ ಕಣ್ಣೀರು ಸುರಿಸಿದರು. ದೈವವನ್ನು ನಿಂದಿಸಿದರು. ಹೇಗೂ ಬೆಂಕಿಯ ಬೆಂಗಳೂರಿಂದ ಒಂದ ಸ್ಯಾಪರ್ಸ್ ಮೈನರ್ಸ್ ಎಂಬ ಸೈನಿಕರ ಸಹಾಯದಿಂದ ಆರಿಸಲ್ಪಟ್ಟಿತು. ಆದರೂ ಲಕ್ಷಾಂತರ ರೂಪಾಯಿಗಳ ಸಾಮಾನುಗಳೂ, ಭರತಖಂಡದಲ್ಲೇ ಅಪೂರ್ವವಾದ ಸರಸ್ವತೀ ಭಂಡಾರವೂ, ಆಯುಧಶಾಲೆಯೂ, ಅನೇಕ ಚಿತ್ರಪಟಗಳಿಂದ ರಂಜಿಸುತ್ತಿದ್ದ ಅಂಬಾವಿಲಾಸ ಆರ್ಗನ್ ರೂಂ (ಸಂಗೀತಶಾಲೆ) ಮುಂತಾದುವೂ ನಾಶವಾದುವು. ಆರಮನೆ ಸುಟ್ಟದ್ದರಿಂದ ಇದ ನಷ್ಟವನ್ನು ಇಷ್ಟೆಂದು ಪರಿಗಣಿಸಲು ಸಾಧ್ಯವಿಲ್ಲ.

**ಸ್ವದೇಶ ಸಂಚಾರ.**—ಇಲ್ಲಿಗೆ ಮಹಾರಾಜರವರಿಗೆ ಹದಿಮೂರು ವರ್ಷಗಳು ತುಂಬಿದುವು. ಅವರು ಚಳಿಗಾಲದಲ್ಲಿ ಬೆಂಗಳೂರಿನಲ್ಲಿಯೂ ಬೇಸಗೆಯಲ್ಲಿ ನೀಲಗಿರಿಯಲ್ಲಿಯೂ ಇದ್ದುಕೊಂಡು ರಾಜ್ಯಭಾರ ಮಾಡುತ್ತಿದ್ದರು. ಪ್ರಕೃತಿ ಸೌಂದರ್ಯದ ಸೊಬಗನ್ನು ತೋರಿಸಬೇಕೆಂಬಾಸೆಯಿಂದ ಮಹಾರಾಜರವರನ್ನೂ ಅವರ ಸಹಪಾತಿಗಳನ್ನೂ ೧೯೨೬ನೆಯ ಇಸವಿ ನವೆಂಬರ್ ತಿಂಗಳಲ್ಲಿ ಶಿವಸಮುದ್ರ, ಕಪಿಲೂರು, ಹಾಸನ ಡಿಸ್ಟ್ರಿಕ್ಟ್‌ಗಳಿಗೆ ಕರೆದುಕೊಂಡು ಹೋದರು. ಪ್ರೇಮಮನ್ನಹಾರಾಜರವರು ಶಿವಸಮುದ್ರ ಡಿಸ್ಟ್ರಿಕ್ಟಿನ ಗೇರುಸೊಪ್ಪೆ ಎಂಬ ಸ್ಥಳದಲ್ಲಿರುವ ಅದ್ಭುತವೂ ಮನೋಹರವೂ ಆದ ಜೋಗಿನ ಜಲಪಾತವನ್ನು ನೋಡಿದರು. ಈ ಪ್ರಪಾತವನ್ನು ನೋಡುವ ಮೊದಲು ಮಹಾರಾಜರವರು

ಮಲೆನಾಡಿನ ಮೂಲಕ ಸಾಗರ, ಕೊಡಚಾದ್ರಿ, ತೀರ್ಥಹಳ್ಳಿ, ಶೃಂಗೇರಿ, ಚಿಕ್ಕಮಗಳೂರು ಕಲ್ಯತ್ತಿಗಿರಿ, ಮುಂತಾದ ಸ್ಥಳಗಳನ್ನು ಪರಾಂಬರಿಸಿದರು.

ಯುಗಾಂತರದಲ್ಲಿ ಪರುಶುರಾಮನು ತೀರ್ಥಹಳ್ಳಿಯ ತುಂಗಾತೀರದಲ್ಲಿಯೇ ತಪಸ್ಸನ್ನಾಚರಿಸಿ ತನ್ನ ಮಾತೃಹತ್ಯಾ ದೋಷವನ್ನು ಪೋಗ

ಲಾಡಿಸಿಕೊಂಡನಂತೆ. ಆದುದರಿಂದಲೇ ಇಲ್ಲಿಯ ತೊಂಡಕ್ಕೆ ರಾ ತೀರ್ಥವೆಂದು ಹೆಸರು ಒಂದಿತೆಂದು ಹೇಳುತ್ತಾರೆ. ತುಂಗಾನದಿಯ ಸುತ್ತಲೂ ಕಲ್ಲುಬಂಡೆಗಳು ಜನಗಳಂತೆಯೂ ತಿಮ್ಮಿಂಗಿಲಗಳಂತೆಯೂ ಮಲಗಿರುವುವು. ತಿಳಿಯಾದ ನದಿಯ ನೀರು, ಕಲ್ಲುಬಂಡೆಗಳ ಮೇ ಮೊರೆಯುತ್ತ ಬಂಡೆಯಿಂದ ಬಂಡೆಗೆ ಹಾರಿ ಚಾರಿ ತುಂತುರು ತುಂತುರಾ ಸೊರೆಸೊರೆಯಾಗಿ ಸುಳಿಸುಳಿಯಾಗಿ ಸುತ್ತುತ್ತ ಹರಿಯುತ್ತಿರುವುದ ವಿಭಾಂಡಕ ಋಷಿಗಳ ಆಶ್ರಮವಾದ ಶೃಂಗೇರಿಯಲ್ಲಿ ಮಹಾಸ್ವಾಮಿಯವ ಪಲ್ಲಕ್ಕಿ ಉತ್ಸವವು ಒಂದು ಏಚ್ಚರಿಕೆಯಿಂದ ನಡೆಯಿತು.

ಬಳಿಕ ಮಹಾಸ್ವಾಮಿಯವರ ಸವಾರಿ ಪೂರ್ವಕಾಲದ ಶಿಲ್ಪ ಚಾತು ವನ್ನು ತೋರ್ಪಡಿಸುವ ಹಳೇಬೀಡು, ಬೇಲೂರುಗಳಿಗೆ ದಯಮಾಡಿಸಿ ಆಗ ಬಾಲ್ಯಾವಸ್ಥೆಯಲ್ಲಿ ಏಕಾಸನವನ್ನು ಪಡೆಯುತ್ತಿದ್ದ ಶ್ರೀಮನ್ಮಹಾರಾ ರವರ ಕೋಮಲ ಚಿತ್ತಕ್ಕೆ ಆಯಾ ಸ್ಥಳಗಳ ನದೀ, ವನ, ಗಿರಿ, ದುರ್ಗಾ ಸಂದರ್ಶನದಿಂದ ಆಹ್ಲಾದವೂ, ಅಲ್ಲಲ್ಲಿರುವ ಜನಗಳ ಪರಿಚಯವೂ ಆ ಸ್ಥಿತಿಗತಿಗಳೂ ಆಚಾರ ವ್ಯವಹಾರಗಳೂ ಒಳ್ಳೆ ಪುಟ್ಟಿಗೆ ತಿಳಿಯಬಂದು ಮೋದ ಕಡೆಯಲ್ಲೆಲ್ಲಾ ಶ್ರೀಮನ್ಮಹಾರಾಜರವರು ದರ್ಬಾರುಗಳನ್ನ ಮಾಡುವುದೂ ಸ್ಕೂಲ್ ಬಾಲಕರಿಗೆ ಬಹುಮಾನಗಳನ್ನು ಹಂಚುವುದ ಮುಂತಾದ ಕೆಲಸಗಳನ್ನು ಮಾಡುತ್ತಿದ್ದರು.

**ಉತ್ತರದೇಶ ಸಂಚಾರ.**—ಇಷ್ಟರಲ್ಲಿ ಶ್ರೀಮನ್ಮಹಾರಾಜರವ ಬರೋದ, ಜಯಪುರ ಮುಂತಾದ ಮಿತ್ರರಾಜರ ರಾಜ್ಯಭಾರಕ್ರಮಗಳನ್ನ ಮದ್ರಾಸ್, ಬೊಂಬಾಯಿ ಮೊದಲಾದ ದೊಡ್ಡ ಪಟ್ಟಣಗಳ ಸೌಂದರ್ಯ ವನ್ನೂ ಪೈಸರಾಯರೇ ಮುಂತಾದ ಮಹನೀಯರ ದರ್ಶನವನ್ನೂ ಮಾ ಬೇಕೆಂಬ ಕುತೂಹಲದಿಂದ ೧೯೦೦ನೆಯ ಜನವರಿಯಲ್ಲಿ ರಸಿಡೆಂಟರು ದಿವಾನರು, ಜೋಧಕರು ಮುಂತಾದವರೊಡನೆ ಉತ್ತರದೇಶ ಸಂಚಾರಾರ್ಥ ವಾಗಿ ಹೊರಟರು, ಮದ್ರಾಸಿನಲ್ಲಿ ನಿದ್ದವಾಗಿದ್ದ ಡ್ಯೂಕ್ಕೆ ಎಂಬ ಹಡಗನ ಹತ್ತಿ, ಕಲ್ಕತ್ತೆಗೆ ಪ್ರಯಾಣ ಬೆಳೆಸಿದರು. ಯಾನವು ತುಂಬಾ ಆನಂದಕ ವಾಗಿತ್ತು. ಮಹಾರಾಜರು ಕಲ್ಕತ್ತೆಯಲ್ಲಿ ವೈಸರಾಯರ ಲಾರ್ಡ್ ಕರ್ಜನ್ ರವರನ್ನೂ ಇಂಡಿಯಾ ಸೈನ್ಯಾಧಿಪತಿಯಾದ ಲಾರ್ಡ್ ಕಿಚ್ನರ್‌ರವರನ್ನೂ ಭೇಟಿಮಾಡಿಕೊಂಡು ಹೊರಟು, ಹಿಮಾಲಯ ಪರ್ವತದಲ್ಲಿರುವ ಡಾರ್ಜ್

ಚಿಕ್ಕಮಗಳೂರು ಹೈಸ್ಕೂಲಿನ ಬಹುಸೂತ್ರ ಸಿನಿಯೋಗ

ಲಂಗಾ ಪಟ್ಟಣವನ್ನು ಸೇರಿಕೊಂಡರು. ಗಂಗಾನದಿಯು ಪಶ್ಚಿಮದ ಸೇತುರೂಪ ಗುಡಿಗೋಪುರಗಳಿಂದ ರಾಜಿಸುವ ವಾರಣಾಸಿಯನ್ನು ನೋ ಗಂಗಾವಾಸವನ್ನೂ ವಿಶ್ವೇಶ್ವರ ದರ್ಶನವನ್ನೂ ತೀರಿಸಿಕೊಂಡರು. ಕಾ ಮಹಾರಾಜರು ಮಾಡಿದ ಆತಿಥ್ಯವನ್ನು ಸ್ವೀಕರಿಸಿ, ಚರಿತ್ರಾರ್ಹವಾ ಲಕ್ನೌ, ಕಾನ್ಪುರ, ದೆಹಲಿ, ಜಗಾ್ರ ಮುಂತಾದ ಪಟ್ಟಣಗಳ ಅಂದಚಂ ವನ್ನು ಅವಲೋಕಿಸಿದರು. ಮುಮ್ಮಡಿವಾಗಿ ಜಗಾ್ರದಲ್ಲಿ ಮಹಾಪ್ರತಾ ಚಕ್ರವರ್ತಿಯು ತನ್ನ ಪ್ರಿಯತಮೆಯಾದ ಮುಮ್ತಾಜಾ ಮಹಲ್ ಬಂ ನಾಲ್ಕೇಣಿಯ ನೆನಪಿಗಾಗಿ ಯಮುನಾನದೀ ತೀರದಲ್ಲಿ ಕಟ್ಟಿಸಿದ ತಾಜಾ ಮಹಲನ್ನೂ ನೋಡಿಕೊಂಡರು, ಗಾಯಕವಾಡರಿಂದ ಆಹ್ವಾನಿತರಾ ಬರೋಡಾ ಪಟ್ಟಣಕ್ಕೆ ಭೇಟಿಯಿತ್ತು, ಅವರು ಮಾಡಿದ ಆತಿಥ್ಯವನ್ನು ಕೈಕೊಂಡರು, ಅಲ್ಲಿಂದ ವಿಜಯನಗರ, ಹಂಪೆ ಮುಂತಾದ ಭಗ್ನಾವಶೇಷ ಗಳ ದರ್ಶನಮಾಡಿಕೊಂಡರು ಮೈಸೂರಿಗೆ ಆಗಮಿಸಿದರು.

---

## ಐನೆಯ ಅಧ್ಯಾಯ

ವಿವಾಹಮಹೋತ್ಸವ, ಬರ್ಮಾ ಪ್ರಯಾಣ

ಓಗರುವಲ್ಲಿ, ರಾಜಕೀಯ ವಿದ್ಯಾಭ್ಯಾಸವನ್ನು ಮಾಡಿ ಪ್ರಬುದ್ಧವಾದ ರಾಗುತ್ತಿರುವ, ತರುಣ ಕೃಷ್ಣರಾಜ ಒಡೆಯರಿಗೆ ಹೋತಕ ವರ್ಷಗಳು ತುಂಬಿದುವು. ಉತ್ತರದೇಶ ಯಾತ್ರೆಯನ್ನು ಪೂರೈಸಿಕೊಂಡು ಬಂದ ಒಕೆಕ, ವಾಣೀವಿಲಾಸ ಸನ್ನಿಧಾನದ ಮಹಾರಾಣಿಯವರು ಮಹಾರಾಜ ರವರಿಗೆ ವಿವಾಹ ಮಹೋತ್ಸವವನ್ನು ಮಾಡಬೇಕೆಂಬ ಕುತೂಹಲವುಳ್ಳ ರಾಗಿ ದಿವಾನರನ್ನು ಕರೆಸಿ ಉತ್ತರದೇಶದಲ್ಲಿ ಯಾವುದಾದರೂ ಒಂದು ರಾಜ ಮಂಶದಿಂದ ಕನ್ಯಾಪ್ರತಿಗ್ರಹವನ್ನು ಮಾಡಬೇಕೆಂಬುದಾಗಿಯೂ ಅದೇ ಕೈಲಾಸವಾಸಿಗಳಾದ ತಮ್ಮ ಯಜಮಾನರ ಅಭಿಪ್ರಾಯವಾಗಿತ್ತೆಂದೂ ಸೂಚಿಸಿದರು. ಅದರಂತೆ ದಿವಾನರು ಕಾಥ್ಯಾವಾಡ ಸಂಸ್ಥಾನದ ವನ ಬಂ ರಾಜವಾಡೆಯ ಸುವಿಖ್ಯಾತರಾದ ರಾಣಾ ವಿನಯಸಿಂಹರವರ ಎರಡನೇ ಕುಮಾರ್ತಿ ಪ್ರತಾಪಕುಮಾರಿಯವರನ್ನು ನೋಡಿಕೊಂಡರು ಒಂದರು ವಿವಾಹವು ೧೯೧೦ನೆಯ ಜೂಲೈ ಒಸೆಯ ತಾರೀಖು ನಡೆಯುತಕ್ಕದೆಂದೂ

ನಿಶ್ಚಿತವಾಯಿತು. ಅದಕ್ಕಾಗಿ ಒಗಸ್ಟ್ ಮಾಹದ ಒಂಗಲೆಯಲ್ಲಿ ವಿವಾಹವಾದ ಒಂದು ಏವಾಹ ಮಂಟಪವನ್ನು ಕಟ್ಟಲ್ಪಟ್ಟಿತು. ಒಳಕ ಲಗ್ನ ಪತ್ರಿಕೆಗಳನ್ನು ಬರಸಿ, ಹೈದರಾಬಾದ್, ಒರೋಚ, ಕಾಶ್ಮೀರ, ನೇಪಾಳ ಮುಂತಾದ ಸಕಲ ರಾಜರುಗಳಿಗೂ ಮೈಸರಾಯರು, ಗೌರ್ನರುಗಳಿಗೂ, ಅನೆಗೊಂದಿ. ಜೀರಕ ಮುಂತಾದ ವಾಕಯಗಾರರಿಗೂ, ಬ್ರಟಿಷ್ ಸಂಪ್ರಾಜ್ಯದಲ್ಲಿರುವ ಸಕಲ ಅಧಿಕಾರಿಗಳಿಗೂ, ನಾಯಕರಿಗೂ ಕಳುಹಿಸಿಕೊಟ್ಟರು. ಆಹೂತರು ಒಬ್ಬೊಬ್ಬರಾಗಿ ತಮ್ಮ ಪರಿವಾರಸಹಿತ ಬರಲಾರಂಭಿಸಿದರು.

ಜೂನ್ ೩೦ನೆಯ ತಾರೀಖಿನ ದಿನ ಸಾಯಂಕಾಲ ಕೂಟೆಯಲ್ಲಿ ಮಹಾರಾಜರವರ ಕಾಶೀಯಾತ್ರೆಯ ಮಹೋತ್ಸವವು ಮಹೋತ್ಸವದ ಪ್ರಯುಕ್ತದಿಂದ ನಡೆಯಿತು. ಈ ಉತ್ಸವವನ್ನು ನೋಡಲು ಜನಸಂದಣಿಯು ನಾನಾ ಬಣ್ಣದ ವಸ್ತ್ರಾಭರಣಗಳಿಂದಲಂಕೃತರಾಗಿ ಕಣ್ಣನ್ನು ಬೋಪಿಸುತ್ತ ದಟ್ಟವಾಗಿಯೂ ಸುಂದರವಾಗಿಯೂ ಬೆಳೆದ ಜಲಿಸುವ ಹೂದೋಟದಂತೆ ಕಂಗೊಳಿಸುತ್ತಿತ್ತು. ಕಾಶಿಯಾತ್ರೆ ನಡೆದ ಒಳಕ, ಜೂನೆಯ ತಾರೀಖಿನ ದಿನ ಮಹಾನ್ವಿಯಿಯವರು ಬಹ್ಮಾಲಂಕಾರ ಭೂಷಿತರಾಗಿ ಕರೀಕರ ತೊಟ್ಟಿಯಿಂದ ಆನೆಯ ಮೇಲೆ ವಿವಾಹ ಮಂಟಪಕ್ಕೆ ದಯಮಾಡಿಸಿದರು. ಮೇಲೆ ಉಕ್ತಕರ್ಮಗಳೆಲ್ಲವೂ ನಡೆದು, ಶಾಸ್ತ್ರೋಕ್ತವಾಗಿ ವಿವಾಹ ಕಾರ್ಯವೂ ಗಳೆಲ್ಲವೂ ಮುಗಿದುವು. ಬಳಿಕ ಮದ್ರಾಸ್ ಗೌರ್ನರವರು ಎದ್ದು ಇಂಡಿಯಾ ಸರ್ಕಾರದವತಿ ಮಹಾರಾಜರವರ ವಿವಾಹ ಮಹೋತ್ಸವದಲ್ಲಿ ತಮಗಿರುವ ಸಂತೋಷವನ್ನು ಸೂಚಿಸಿ ಒಪಿದ್ದ ರಾಜೋಪಚಾರ ಪತ್ರಿಕೆಯನ್ನೂ ಮೈಸರಾಯರವರು ಕಳುಹಿಸಿದ್ದ ಪಿಲ್ಲತ್ತಿಗೆಗಳನ್ನೂ ಒಪ್ಪಿಸಿದರು. ಸಕಲ ಸಂಸ್ಥಾನದ ಶ್ರೀಸಂತರುಗಳು ತಮ್ಮ ರಾಜರುಗಳು ಕಳುಹಿಸಿದ್ದ ಪಿಲ್ಲತ್ತಿಗೆಗಳನ್ನೂ ಓದಿಸಿದರು. ಸಕಲರಿಗೂ ಗಂಧಪುಷ್ಪತಾಂಬೂಲಗಳು ಕೊಡಲ್ಪಟ್ಟವು.

೧೫ನೆಯ ತಾರೀಖಿನ ಸಾಯಂಕಾಲ ಶ್ರೀಮನ್ಮಹಾರಾಜರವರಿಗೆ ಕೋಚಾರದ ಚಿನ್ನದ ಗಣಿಯವರು, ಕೊಡಗು ದೇಶದವರು, ಯುರೋಪಿಯರ್ ಮತ್ತು ನೇಟಿವ್ ಸ್ಟಾಂಟರುಗಳು, ಅನೇಕ ಸಮಾಜಗಳ ಪ್ರತಿನಿಧಿಗಳು ನಿಜ್ಞಾಪನಾ ಪತ್ರಿಕೆಗಳನ್ನು ಒಪ್ಪಿಸಿದರು. ಆಗ ಮಹಾರಾಜರು ಅವರುಗಳನ್ನು ಕುರಿತು "ಎಲ್ಲಿ ಮಹನೀಯರೇ, ಈ ಮಹೋತ್ಸವದಲ್ಲಿ



ನೀವುಗಳೆಲ್ಲ ಪ್ರತಿನಿಧಿಯಾಗಿ ಬಂದು, ನಿಮ್ಮ ಕಡೆಯವರ ಸಂತೋಷವನ್ನು ನನಗೆ ತೀರಿದ್ದನ್ನು ನಾವು ಅಂಗೀಕರಿಸಿರುತ್ತೇವೆ. ನಮ್ಮ ಕ್ಷೇಮ ಆಹಾರದಲ್ಲಿಯೂ ರಾಜ್ಯಭಾರದ ಏಳಿಗೆಯಲ್ಲಿಯೂ ನೀವುಗಳು ಸಂತೋಷ ಪಡುತ್ತಿರುವುದಕ್ಕಾಗಿ ನಿಮ್ಮೆಗಳನ್ನೆಲ್ಲಾ ಮನಃಪೂರ್ವಕವಾಗಿ ಬಂದಿಸುತ್ತೇವೆ. ನಮ್ಮ ಕ್ಷೇಮವಲ್ಲದ ವಿಷಯದಲ್ಲೂ ನಿಮ್ಮಲ್ಲಿರುವ ರಾಜಭಕ್ತಿಯ ವಿಷಯದಲ್ಲೂ ನೀವು ಮೇಲಿರುವ ವಾಕ್ಯಗಳು ನಮ್ಮ ಮನಸ್ಸಿಗೆ ಹರ್ಷವನ್ನುಂಟುಮಾಡಿವೆ. ಭಗವಂತನ ದಯೆಯಿಂದಲೂ ಮಹಾರಾಣ್ಣೀ ಚಕ್ರವರ್ತಿನಿಯವರ ಕೃಪೆಯಿಂದಲೂ ನಮ್ಮ ಮಾತೃಶ್ರೀಯವರ ಆಶೀರ್ವಾದ ಬಲದಿಂದಲೂ ನಾವೂ ಚಿರಸ್ಮರಣೀಯರಾಗಿರುವ ನಮ್ಮ ತಂದೆಯವರ ವೀರ ಬ್ರಿಟಿಷ್ಯನ್ನೇ ಅನುಸರಿಸಿ ನಡೆಯಬೇಕೆಂಬ ಕುತೂಹಲವುಳ್ಳವರಾಗಿದ್ದೇವೆಂದು ನಿಮ್ಮಗಳಿಗೆಲ್ಲಾ ತಿಳಿಸುವೆವು. ನೀವುಗಳೆಲ್ಲಾ ನಮಗೆ ಆಯುರಾರೋಗ್ಯ ಸಂತೋಷಗಳನ್ನು ಕೋರುತ್ತಿರುವುದಕ್ಕಾಗಿ ನಿಮ್ಮೆಲ್ಲರನ್ನೂ ವಂದಿಸುವೆವು" ಎಂದು ಅಪ್ಪಣೆ ಕೊಡಿಸಿದರು. ಈ ವಿವಾಹ ಮಹೋತ್ಸವದ ವೈಭವಿಯೂ ಇಷ್ಟು ಮಹಾರಾಜರ ಸಮೂಹವೂ ಹಿಂದೆ ಎಂದೂ ಮೈಸೂರಿನಲ್ಲಿ ಕೂಡಿರಲಿಲ್ಲವೆಂದು ಎಲ್ಲರೂ ಕೊಂಡಾಡುವಷ್ಟು ಅತಿಶಯವಾಗಿ ಜರುಗಿತು. ಆ ಕಾಲದಲ್ಲಿ ರಾಜಧಾನಿಗೆ ಬಂದಿದ್ದ ಅತಿಥಿಗಳ ವಿನೋದಕ್ಕಾ ಭೋಜನಾದಿಗಳಿಗೂ ಮಾಡಿದ್ದ ಏರ್ಪಾಡುಗಳು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡುತ್ತಿದ್ದುವು.

**ಲಾರ್ಡ್ ಕರ್ಜನ್‌ರವರ ಆಗಮನ.**—ಅದೇ ವರ್ಷದ ಕೊನೆಯಲ್ಲಿ ಲಾರ್ಡ್ ಕರ್ಜನ್‌ರವರು ರಾಜಧಾನಿಗೆ ದಯಮಾಡಿ ಶ್ರೀಮನ್ಮಹಾರಾಜ ರವರ ಭೇಟಿಯನ್ನು ಮಾಡಿಕೊಂಡು ಸುಪ್ರಿಯಾತರಾದ ಶ್ರೀ ಚಾಮರಾಜೇಂದ್ರ ಒಡೆಯರವರ ಅಶ್ವಾರೋಹಿ ಲೋಹಪ್ರತಿಮೆಯನ್ನು ಟೌನ್ ಹಾಲಿನ ಮೈದಾನದಲ್ಲಿ ಪ್ರತಿಷ್ಠೆಮಾಡಿ ದಯಮಾಡಿಸಿದರು.

**ಬರ್ಮಾ ಪ್ರಯಾಣ.**—ಶ್ರೀಮನ್ಮಹಾರಾಜರವರು ಮೈಸೂರಾಯರನ್ನು ಕರೆಯಿಸಿಕೊಟ್ಟು ಒಳಿಕ ಬರ್ಮಾ ದೇಶವನ್ನು ನೋಡಬೇಕೆಂಬುದಾಗಿ ನಿರ್ಣಯಿಸಿ ಇಸವಿ ೧೯೦೨ರಲ್ಲಿ ಜೋಧಕರನ್ನೂ ಸನ್ಮೋದರರನ್ನೂ

---

* ಈ ಪ್ರತಿಮೆಯು ಈಗ ಬೆಂಗಳೂರು ಲಾಲ್‌ಬಾಗಿನಲ್ಲಿ ಸ್ಥಾಪಿಸಲ್ಪಟ್ಟಿದೆ ಈಗ ಈ ಸ್ಥಳದಲ್ಲಿ ಶ್ವೇತಶಿಲಾ ಪ್ರತಿಮೆಯಿದೆ

ಶ್ರೀಮನ್ಮಹಾರಾಜರವರು ಮತ್ತು ಶ್ರೀ ಯುವರಾಜರವರು

ಸಂಗಡ ಕರೆದುಕೊಂಡು ಪರಿವಾರಸಹಿತ ಮದ್ರಾಸಿನಲ್ಲಿ ಪ್ರಯಾಣವನ್ನು
ಗೊತ್ತಾಗಿದ್ದ "ಜೈ ಬೆಂಗಳ್ಳಾ" ಎಂಬ ಹಡಗಿನಲ್ಲಿ ಕುಳಿತು, ಬರ್ಮಾ
ರಾಜಧಾನಿಯಾದ ರಂಗೂನಿಗೆ ಪ್ರಯಾಣ ಮಾಡಿದರು. ಮಹಾರಾಜರನ್ನು

ಏರುಗೊಳ್ಳಲು ಅಲ್ಲಿನ ಮಹಾಜನಗಳು ಗಿರಿ ಮೈಲಿ ದೂರ ಸಮುದ್ರದಲ್ಲಿ ಜೀಪ್ಸ್‌ಗಳಲ್ಲಿ ಒಂದು, ಮಹಾನ್ಯಾಯಾಧಿಪತಿಗಳನ್ನು ಏರುಗೊಂಡು ಕರೆದುಕೊಂಡು ಹೋದರು. ಬರ್ಮಾ ಸರ್ಕಾರದ ಚೀಫ್ ಸೆಕ್ರೆಟರಿಯವರಾದ ಮೆ|| ಫೆಲಾರವರೂ, ಬರ್ಮಾ ಲೆಜಿಸ್ಲೇಟಿವ್ ಗೌನ್ಸಿಲರವರ ಅಂಗರಕ್ಷಕರಾದ ಕ್ಯಾಪ್ಟನ್ ಡಲಾಲಾವರವರೂ ಪುರದ ಮುಖ್ಯಸ್ಥರಾದ ರಾಯಬಹದ್ದೂರ್ ಮಘರಾಜಿ ಶಿಕ್ಕೆ, ಮೆ|| ಮಯಮಾ ಇನ್ಸೂರೆನ್ಸ್ ಸೇಟರು, ಮೆ|| ಚಿಂಗಾಟ್ಟಿಂಕಾ, ಮೆ|| ಚಿಂಗಾಟಸಿಂಗಾ ಮೊದಲಾದವರು ಮಹಾರಾಜರವರನ್ನು ಆಹ್ವಾನಿಸಿದರು. ಅಲ್ಲಿನ ಪುರಸ್ಕಾರವನ್ನು ಮುಖ್ಯರಾದ ಹಿಂದುಗಳು, ಮಹಮದೀಯರು, ಜೈನೀಯರು, ಬರ್ಮಾಯರೂ ಸೇರಿ ಶ್ರೀಮನ್ಮಹಾರಾಜರವರಿಗೆ ಒಂದು ಮಾಙ್ಗಲ್ಯಾಸನಾ ಪತ್ರಿಕೆಯನ್ನು ಓದಿ, ಅತಿಸುಸ್ವೀಕರವಾದ ಬೆಳ್ಳಿಯ ಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು. ಶ್ರೀಮನ್ಮಹಾರಾಜರವರು ಅವರುಗಳನ್ನು ಕುರಿತು–"ಮಯೀಯರೇ, ನಾನು ಹಿಂದೂಸ್ಥಾನವನ್ನು ಬಿಟ್ಟಾಗ, ಅಖಾರ ಸಾಮ್ರಾಜ್ಯದ ಜಡಿಯ ದಾಡಿದ್ದಲ್ಲೂ ಕೂಡ ಸ್ವೀಪಿತರೂಪವೆಂಬುದಾಗಿ ಸ್ವಲ್ಪವೂ ಯೋಚಿಸಿರಲಿಲ್ಲ. ನನ್ನ ಆಗಮನವನ್ನು ಅಭಿನಂದಿಸಿದ್ದು, ನನ್ನ ಸ್ವಂತ ದೇಶಸ್ಥರೂ ಹಿಂದೂಸ್ಥಾನದ ಮಹಮದೀಯರೂ ಮಾತ್ರವಲ್ಲ. ರಂಗೂನ್ ಪಟ್ಟಣದ ದೊಡ್ಡ ಮನುಷ್ಯರುಗಳೆಲ್ಲ ಮುಖ್ಯರಾದ ಬರ್ಮಾಯರೂ ಜೈನೀಯರೂ ಆಗಿರುವುದರಿಂದ, ಇದು ನನಗೆ ಆತ್ಯಾಶ್ಚರ್ಯವನ್ನುಂಟುಮಾಡುತ್ತದೆ. ತಾವು ದಯಪಟ್ಟು ಒಪ್ಪಿಸಿದ ವಿಜ್ಞಾಪನಾ ಪತ್ರಿಕೆಗೂ, ಇದನ್ನು ಒಳಗೊಂಡಿರುವ ಸುಂದರವಾದ ಬೆಳ್ಳಿ ಪೆಟ್ಟಿಗೆಗೂ, ನಾನು ಅರ್ಪಿಸುವ ವಂದನೆಗಳನ್ನು ತಾವು ಸ್ವೀಕರಿಸುವೆಕೆಂದು ತಮ್ಮಗಳನ್ನು ಬೇಡಿಕೊಳ್ಳುತ್ತೇನೆ" ಎಂದು ಅಪ್ಪಣೆಕೊಟ್ಟು ತಮ್ಮ ಬಿಡಾರಕ್ಕಾಗಿ ಸೇಮುಕವಾಗಿದ್ದ ಬಂಗ್ಲೆಗೆ ದಯಮಾಡಿಸಿದರು.

ಶ್ರೀಮನ್ಮಹಾರಾಜರವರು ಬರ್ಮಾ ಲೆಜಿಸ್ಲೇಟಿವ್ ಗೌನ್ಸಿಲರವರ ಛೋಟಿ ಮರುಛೋಟಿಗಳನ್ನು ತೀರಿಸಿಕೊಂಡು ಅತ್ಯಂತ ಸುಂದರವೂ ಸುಸಜ್ಜಿತವೂ ಆದ ಬರ್ಮಾಯರ ದೇವಾಲಯವನ್ನು, ಸರ್ಕಾರದ ವಾನ ಕಾರ್ಯಾನೆಯನ್ನು, ಸೀಮೆಯೆಣ್ಣೆ ಬಾವಿಗಳನ್ನು ವರಾಂಬಿಸಿ, ಗೌನ್ಸಿಲರವರ ಆತಿಥ್ಯವನ್ನು ಸ್ವೀಕರಿಸಿ, ಕುದುರೆಗಳಿಗೆ ಪ್ರಖ್ಯಾತವಾದ ಪೆಗುಯೆಗೆ ದಯಮಾಡಿ, ಗಂಧವನ ವಿಗ್ರಹವೇ ಮೊದಲಾದ ಬುದ್ಧನ

ಕಾಲದ ಸ್ಮಾರಕಗಳನ್ನು ಪರಾಂಬರಿಸಿದರು. ನಗರ ಪಟ್ಟಣದ ಜೈನ ಕವಿವಾಕ್ಯರು ಮಹಾರಾಣಿಯವರ ಬದಾರದಲ್ಲಿ ಮಾಡಿದ ಜನಿರ್ವಾಣ ಸಂಗೀತ ನರ್ತನಾವಳಿಗಳನ್ನೂ ನೋಡಿಕೊಂಡು, ಮಾಂಡಲಿಯನ್ನು ನೆ ಅರ್ಕಾನ ದೇವಾಲಯವೆಂಬಲ್ಲಿ ಬುದ್ಧನಿಂದ ಪ್ರತಿಷ್ಠೆಮಾಡಲ್ಪಟ್ಟ ಲೋಹ ದೊಡ್ಡ ವಿಗ್ರಹವನ್ನೂ ಧೀಬಾ ದೊರೆಯವರ ಅರಮನೆಯನ್ನೂ ದುಬಾಷಿ ಹಾಲನ್ನೂ ಸರಾಂಬರಿಸಿ, ಯುನೈಟೆಡ್ ಕ್ಲಬ್ಬಿನಲ್ಲಿ ಆ ಪಟ್ಟಣದ ಪಾರಿದ ಅತಿಥ್ಯವನ್ನು ಕೈಕೊಂಡು, ಮೈಸೂರು ಪಟ್ಟಣಕ್ಕೆ ಪ್ರಯಾ ಬೆಳೆಸಿದರು. ಅಲ್ಲಿನ ದೆಹ್ಲಿಟಿ ಕವಿವಾಕ್ಯರೇ ಮುಂತಾದ ಯೂರೋ ಯನರುಗಳು ನಡೆಸಿದ ಔಟ್ ಡೋರ್ ಎಂಬ ಪ್ರೀಂಕರ್ಮಗಳನ್ನು ಸ್ವೀಕಾ ಅವರಿಸ್ಪಾದ, ಗೋಟಿಕಾ ಎಂಬ ಸ್ವಾಗತ ಆಂದಾವಂದಗಳನ್ನೂ ಭಾವಿ ಮಾಂಡಲಿಗಳ ಸೌಂದರ್ಯವನ್ನೂ ನೋಡಿಕೊಂಡು ಪುನಃ ರಾಜಧಾ ಯನ್ನು ಸೇರಿದರು. ಈ ಸಂಚಾರಕಾಲದಲ್ಲಿಲ್ಲಾ ಯಾನವೇ ಆಗುತ್ತು.

---

## ೬ನೆಯ ಅಧ್ಯಾಯ

### ರಾಜ್ಯಾಭಿಷೇಕ ಮಹೋತ್ಸವ

ಬಲ್ಲಿಗೆ ಶ್ರೀಮನ್ಮಹಾರಾಜರವರಿಗೆ ಪದಿನಂಟು ವರ್ಷಗಳು ತುಂಬಿದು ರಿಂದ, ೧೯೦೨ನೆಯ ಅಗಸ್ಟು ೨೪ನೆಯ ತಾರೀಖಿನ ಶ್ರೀಮನ್ಮಹಾರಾಜರವರ ರಾಜ್ಯಾಭಿಷೇಕ ಜರಗಬೇಕಾಯಿತು. ಅದಕ್ಕಾಗಿ ಮೈಸೂರಾಯ ಲಾಡ ಕರ್ನಾಡವರು ಬರಡಸಿಕಾರಿ ರಾಜಧಾನಿಗೆ ದಯಮಾಡಿಸಿದರು. ಮೈ ರಾಯರವರ ಸಂಗಡ ಬೆಂಗಳೂರಲ್ಲಿರುವ ಇಂಗ್ಲಿಷ್ ಸೈನ್ಯದ ಕಮಾಂಡಿ ರಾದ ಜನರಲ್ ಸರ್ ಜೇಂಸ್ ಲಿಲ್ಲ್ ಮಹೆಯವರೂ, ಫಾರಿಜ್ ಸೆಕ್ರೆಟ ಲಿಷ್ ನಾಷೇಬರೂ, ಮಿಲಿಟರಿ ಸೆಕ್ರೆಟರಿ ಕರ್ನಲ್ ಬೇರಿಂಗ್‌ರವರು ಸರ್ಜನ್ ಕ್ಯಾಪ್ಟನ್ ಅರಂಸ್ಟ್ರಾಂಗ್‌ರವರೂ ಮತ್ತು ಮೈಸೂರಾಯರ ಇತ ಸಲಹಾರಾದವರೂ ೪೦೦ ಜನ ಇಂಗ್ಲಿಷ್ ಸೈನಿಕರೂ ಅವರ ಹಿರ ಅಧಿಕಾರಿ ಕುದುರೆಗಳಿಂದ ಬಳಿಯಲ್ಪಟ್ಟ ಇಂಗ್ಲಿಷ್ ಫಿರಂಗಿ ಸೈನ್ಯವೂ ಬಂದುವು. ಇಷ್ಟೊಂದು ಇಂಗ್ಲಿಷ್ ಕುದುರೆ ಸೈನಿಕರನ್ನು ಮೈಸೂರ ಪ್ರಜೆಗಳು ಎಂದೂ ನೋಡಿರಲಿಲ್ಲ. ಮೈಸೂರಾಯರವರೂ ಅವರ ಅಧಿಕಾ

ಗಳು ಇಂಗ್ಲಿಷ್ ಸೈನಿಕರೂ ಫಿರಂಗಿ ಯೂನಿಫಾರಂ ತೊಡಿಸಿ ಮೆರವಣಿಗೆಯಲ್ಲಿ ಅವರ ಬಳಿಯಲ್ಲಿಯೇ ಸಾಗಿದರು, ಸಾರ್ವಜನಿಕರ ಕಣ್ಮನ ಗಳನ್ನು ಸೆಳೆಯುತ್ತಿದ್ದುವು. ಮೈಸರಾಯರವರು ಸಭಾಂಗಣಕ್ಕೆ ಬಂದಾಗ, ಬಗಸ್ಟ್ರೀಹಸ ಬಂಗ್ಲೆಯ ಮುಂದೆ ನಿಂತಿದ್ದ ಬಂಗ್ಲಿಷ್ ಪದಾತಿ ಸೈನ್ಯದ ಬ್ಯಾಂಡಿನವರು ಬ್ರಿಟಿಷ್ ಸಾಮ್ರಾಜ್ಯದ ಗೀರ್ವಾಣಮಸ್ತು ಪಾಲಿಸುತ್ತಿದ್ದರು. ಶ್ರೀಮನ್ಮಹಾರಾಜರವರು ಮೈಸರಾಯರಿಗೆ ಹಸ್ತಲಾಘವವನ್ನಿತ್ತು ಕರೆದುಕೊಂಡು ಬಂದು, ಸಭಾಮಂಟಪದ ಮೇಲ್ಭಾಗದಲ್ಲಿ ಹಾಕಿದ್ದ ಸುವರ್ಣದ ಆಸನದಲ್ಲಿ ಕುಳ್ಳಿರಿಸಿ ತಾವೂ ಕುಳಿತುಕೊಂಡರು. ಕೂಡಲೇ ಮೈಸರಾಯರವರು ನಿಂತುಕೊಂಡು ಮಹಾ ಸ್ವಾಮಿಯವರ ಕೃಪಾಪಲಾಭವನ್ನು ಬಯಸಿ ಅನ್ನಣೆಕೂಡಿಸಿದ್ದೇನೆಂದರು: "ನಾನು ಈ ದೇಶಕ್ಕೆ ಬಂದಂದಿನಿಂದ ದೇವೀಯ ಮಹಾರಾಜರಿಗೆ ರಾಜ್ಯ ಭಾರವನ್ನು ಒಪ್ಪಿಸಿಕೊಡುವುದಕ್ಕೋಸ್ಕರ ವ್ಯತ್ಯಕ್ಷವಾಗಿ ಬಂದುದು ಇದೇ ಮೊದಲನೆಯದು. ಬಾಲ್ಯವಯಸ್ಕರಾದ ಮೈಸೂರು ಸಂಸ್ಥಾನದ ಈ ಮಹಾರಾಜರವರ ಅಭಿವೃದ್ಧಿಯನ್ನು ಬಹು ಲಕ್ಷ್ಯಪೂರ್ವಕವಾಗಿ ನೋಡಿಕೊಳ್ಳುತ್ತಾ ಬಂದಿರುವುದರಿಂದಲೂ ಇವರ ವಿಷಯದಲ್ಲಿ ನನಗೆ ಯಥಾರ್ಥವಾದ ಪಿತಚಿಂತನೆ ಇರುವುದರಿಂದಲೂ ಇವರನ್ನು ರಾಜ್ಯಾಭಿ ಷಿಕ್ತರನ್ನಾಗಿ ಮಾಡತಕ್ಕ ಈ ಶುಭಕಾರ್ಯದಲ್ಲಿ ನನಗೆ ವರ್ಣಿಸಲಸಾಧ್ಯವಾದ ಸಂತೋಷವಾಗಿದೆ. ಈ ರಾಜ್ಯದ ಪಕ್ಷಗೆಯಲ್ಲಿಯೂ ಈ ಮಹಾರಾಜರವರ ಸಂಪೂರ್ಣ ಅಭಿವೃದ್ಧಿಯಲ್ಲಿಯೂ ನಾನು ಪಿತೃಸಮಾನನಾಗಿರದಿದ್ದರೆ ನಿಮ್ಮನ್ನು ಬಿಟ್ಟು ಇಷ್ಟು ದೂರ ಪ್ರಯಾಣಮಾಡಿ ಬರುತ್ತಿರಲಿಲ್ಲ" ಮುಂತಾದ ತಮ್ಮ ಸಂದೇಶವನ್ನು ಅನ್ನಣೆಕೂಡಿಸಿದ ಒಡನೆ, ಮಹಾರಾಜರವರಿಗೆ ಹಸ್ತಲಾಘವವನ್ನಿತ್ತು ಗಾದಿಯ ಮೇಲೆ ಕೂರಿಸಿ ಮೈಸೂರು ಸಂಸ್ಥಾನ ವನ್ನು ಆಳುವುದಕ್ಕೆ ಸಂಪೂರ್ಣಾಧಿಕಾರವನ್ನು ಕೊಟ್ಟಿರುವುದಾಗಿ ಹೇಳಿ, ತಾವು ಮತ್ತೊಂದು ಕುರ್ಚಿಯ ಮೇಲೆ ಕುಳಿತುಕೊಂಡರು. ತರುವಾಯ ಫಾರಿನ್ ಸೆಕ್ರೆಟರಿಯವರು ಮಹಾರಾಜರವರ ಒಕ್ಕಣೆಯನ್ನು ಸಭಿಕರಿಗೆಲ್ಲಾ ಓದಿ ಹೇಳಿದರು. ಬ್ರಿಟಿಷ್ ಸೈನ್ಯದ ಬ್ಯಾಂಡಿನವರು ಮೈಸೂರು ರಾಷ್ಟ್ರಗೀತೆಯನ್ನು ಬಾಜಿಸಿದರು. ಕೋಟೆಯ ಒತ್ತೆಲೆಯಿಂದ ೨೧ ತೋಪುಗಳು ಪಾರಿದುವು. ಮೈಸರಾಯರವರ ಕಡೆಯವರು ಮಿಲ್ಟ್ರಿಯ

Bangalore
To
Nandidroog

Financial Year 1900 ... 1901

We left the palace at 7-30 A M, party being as
by Naser, Captain Carr White, Mr Raghavendra
Alikhan Basavaraja Urs and Shamker Rao
The Cyclone having blown over, the morning
was fine though Cloudy. The first place on the
yalahanka; met here by Assistant Com: K R Sa
Iyangar. Stopped at the Hunsmarana halli and
the Lingayat Gurus of some importance under
Baley Honnoor mutt. Has Seven Gode Villages worth
about 4000 Rs per annum, partly given by Krishna Raja
wadiyar. Halted next at Jalar where we were met
by Venkata Rama Chetty whose grand father built the
Chatram at this place where travellers between
Bangalore and Bellary used to halt at noon.
Devandahalli met by Dep: Com: Venkata Varada Iyengar
who had prepared refreshments. This is the place of
Serje of which Hyderali first distinguished himself
and here Tippu was born. Then onwards from here
entered the grand road which was in very heavy
Condition with the rains and one pair "Bottom

ಶ್ರೀಮನ್ಮಹಾರಾಜರವರ ಸುಂದರವಾದ ಹಸ್ತಾಕ್ಷರ (ಅವರ ಡೈರಿಯಿಂದ)

ಗಳನ್ನು ತಂದು ಮಹಾರಾಜರಿಗೆ ಒಪ್ಪಿಸಿದರು. ಬಳಿಕ ಮಹಾರಾಜರು ಮೈಸೂರಾಯರನ್ನು ಕುರಿತು, "ಶ್ರೀಮಂತರೇ, ತಮ್ಮ ಕೈಯಿಂದ ಈ ನಾಡನ್ನು ನನ್ನ ರಾಜ್ಯಭಾರವನ್ನು ಪಡೆದುಕೊಂಡು ಇಂದಿಯವರೆಗೂ ಜಕ್ಕಪ್ಪನವರವರೆಗೂ ಎಲ್ಲರಿಗೂ ಸಾರ್ವಭೌಮರವರಲ್ಲಿ ನನಗಿರುವ ರಾಜಭಕ್ತಿಯನ್ನು

ಸ್ಮತಿನಿಧಿಯಾಗಿ ದಯಮಾಡಿಸಿರುವ ತಮ್ಮೆಲ್ಲ ನಾಸಿಟ್ಟಿರುವ ಕೃತ
ಯನ್ನೂ ಮನಃಪೂರ್ವಕವಾದ ಪ್ರೀತಿಯಿಂದ ಅರ್ಪಿಸುತ್ತೇನೆ.
ವ್ಯ ದೇಹಶ್ರಮವನ್ನು ಲಕ್ಷ್ಯಮಾಡದೆ ಬರಲೇ ನಾರಿ ನಮ್ಮ ಸಂಸ್ಥಾ
ದಯಮಾಡಿದ್ದರಿಂದ, ನಾನು ತಮ್ಮೆಲ್ಲಿ ಅಧಿಕ ಋಣಿಯಾಗಿರುತ್ತೇನೆ.
ನ್ನಲ್ಲಿ ಕೃಪೆಯಿಟ್ಟು ಸ್ವತಃ ಬರುಗಿಸಿದ ಈ ಶುಭಕಾರ್ಯವನ್ನು
ಂದಿಗೂ ಮರೆಯಲಾರನು. ನನ್ನ ಮೇಲೆ ಈ ದಿನ ಹೊರಿಸಲ್ಪಟ್ಟ
ವ್ಯ, ಬಹು ಮಹತ್ತರವಾದುದೆಂಬುದನ್ನು ನಾನು ಸಂಪೂರ್ಣವಾಗಿ
ರುತ್ತೇನೆ. ಅದನ್ನು ಪೂರೈಸಿದಲ್ಲಿ, ಕಾರ್ಯದಿಂದ ದೃಷ್ಟಾಂತಪಡಿಸ
ಂದು ನಿಶ್ಚಯಿಸಿಕೊಂಡಿರುತ್ತೇನೆ. ಏತಾವ್ರಜಿತವಾಗಿ ಪ್ರಾಪ್ತವಾಗಿ
ಈ ರಾಜ್ಯಭಾರವು ನಾಮಮಾತ್ರವಾದುದಲ್ಲ. ಪ್ರಾಜ್ಞರೂ ರಾಜನೀತಿ
ರರೂ ಆದ ಮಂತ್ರಿಗಳು ನಡೆಸುತ್ತಿದ್ದ ಆಡಳಿತಕ್ಕೂ, ಬ್ರಿಟಿಷ್
ರವು ತೆಗೆದುಕೊಳ್ಳುತ್ತಿದ್ದ ಮೇಲ್ವಿಚಾರಣೆಗೂ ಒಳಪಟ್ಟು ನಮ್ಮ
ತ್ಯಪ್ರೀಯವರು ನಡೆಸಿದ ರಾಜ್ಯಭಾರದಿಂದ ನಮ್ಮ ಈ ಸಂಸ್ಥಾನಕ್ಕೆ
ಸಿರುವ ಫಲವೆಂಥಾದ್ದೆಂಬುದನ್ನು ನಾನು ಚೆನ್ನಾಗಿ ತಿಳಿದು ಸಂತೋಷ
ಡುತ್ತಿದ್ದೇನೆ. ಆದರೆ ಕೆಲವರು ಹೇಳುವಂತೆ ಪ್ರಖ್ಯಾತಿಗೆ ಕಾರಣವಾದ
ಲವನ್ನು ನುಗುಮಿಸಿಕೊಂಡಿರುವುದು ಮಾತ್ರ ನಾಕೆಂದು ನುಮ್ಮನಿರುವುದಕ್ಕೆ
ನಸ್ಸು ಒಪ್ಪಲಾರದು. ನನ್ನ ಪ್ರಜೆಗಳು ಈಗ ಅನುಭವಿಸುತ್ತಿರುವ
ಸಂತೋಷಗಳಿಗೆ ಕೊರತೆಯುಂಟಾಗದಂತೆ ಪ್ರಯತ್ನ ಮಾಡುವುದು
ಕರ್ತವ್ಯವೆಂದು ಭಾವಿಸಿರುವೆನಲ್ಲದೆ, ಸಂಸ್ಥಾನದ ಸ್ಥಿತಿಯು ಇನ್ನೂ
ಮ್ಯವಾಗಿರುವಂತೆ ಮಾಡತಕ್ಕ ಭಾರವೇ ನನ್ನ ಮೇಲೆ ನಂತಿದೆಯೆಂದು
ದು ಆ ಕಾರ್ಯದಲ್ಲಿ ಉತ್ಸುಕನಾಗಿರುವೆನು.

"ನಾನು ನಮ್ಮ ಸಂಸ್ಥಾನವನ್ನೂ, ಅದರ ಮನೋಹರವಾದ ನನ್ನ ದೇಶ
ಗಳ ಸೌಂದರ್ಯವನ್ನೂ, ರಾಜಭಕ್ತಿಯುಕ್ತರಾದ ನನ್ನ ಪ್ರಜೆಗಳನ್ನೂ
ಸ್ವತಃ ನೋಡಿ ಒಂದಿರುತ್ತೇನೆ. ಇಂತಹ ರಾಜ್ಯವೈಭವವನ್ನು ಅಂಗೀಕರಿಸದ
ಮನಸ್ಸನ್ನೂ, ಇಂತಹ ಪ್ರಜೆಗಳನ್ನು ಪ್ರೀತಿಸದ ಹೃದಯವೂ ಏತಕ್ಕು?
ನನಗೆ ಲಭಿಸಿರುವ ಈ ಉನ್ನತಪದವಿಯಲ್ಲಿ ಸತ್ಕೀರ್ತಿಯನ್ನು ಪಡೆಯು
ವುದಕ್ಕೆ ಅಸಾಧಾರಣವಾದ ಅನೇಕ ಸಂದರ್ಭಗಳು ಬರುವುವು. ಅದನ್ನು
ಪೂರ್ಣ ವಿವೇಕದಿಂದ ಉಪಯೋಗಿಸಿಕೊಳ್ಳುವುದು ಬಂದು ಹುಟ್ಟಿ

ವಾದುಂಕ. ಯಾರ ಭಯವಾಗಲಿ ಯಾರ ದಾಕ್ಷಿಣ್ಯವಾಗಲಿ ಯಾರ ತಂತ್ರಕ್ಕೂ ಹಿಂಜರಿಯದೆ, ಯಾವ ಸಂತ್ರಕ್ಕೂ ಮಣಿ ಸನ್ನ ಸ್ವಜಿಗಳಿಗೆ ನಿರಂತರವಾದ ನೌಖ್ಯವನ್ನು ಒದಗಿಸಿಕೊ ರಾಜ್ಯಭಾರವನ್ನು ನಿರ್ವಹಿಸುವುದು ಮುಖ್ಯತಮವಾದುದು. ಈ ಕಾರಣಗಳಲ್ಲೂ ಸಂಪೂರ್ಣವಾದ ಸಾಮರ್ಥ್ಯವನ್ನು ಅನುಗ್ರಹಿಸಬೇಕ ಸರ್ವಶಕ್ತನಾದ ಭಗವಂತನನ್ನು ಪ್ರಾರ್ಥಿಸುತ್ತೇನೆ" ಎಂದು ಕುಳಿತುಕೊಂಡರು. ಬಳಿಕ ದಿವಾನರು, ಕೌನ್ಸಿಲರು, ಮುಂತಾದ ಮು ಧಿಕಾರಿಗಳೆಲ್ಲ ವೈಸರಾಯರಿಗೆ ನಜರನ್ನು ಒಪ್ಪಿಸಿದರು. ಯೂರೋಪಿಯ ಅಧಿಕಾರಿಗಳೆಲ್ಲ ಮುಬರೆ ಮಾಡಿದರು. ಇಷ್ಟೆಲ್ಲಾ ನಡೆದ ನಂತರ ವೈಸರಾ ರವರು ಎದ್ದು ಮಹಾರಾಜರವರಿಗೆ ಗಂಧಪುಷ್ಪ ತಾಂಬೂಲಗಳ ಕೊಟ್ಟರು. ದಿವಾನರಿಗೆ ವೈಸರಾಯರ ಸೆಕ್ರೆಟರಿಯವರೂ, ಉಳಿದ ಸಂಸ್ಥಾ ಅಧಿಕಾರಿಗಳಿಗೆಲ್ಲ ಅಸಿಸ್ಟೆಂಟ್ ರೆಸಿಡೆಂಟರೂ ಮರ್ಯಾದೆ ಮಾಡಿದ ಒಕಿಕ ಸಭೆಯು ಮುಕ್ತಾಯವಾಯಿತು.

ಮಾರನೆ ದಿನ ಇಂಡಿಯಾ ಚಕ್ರವರ್ತಿಯವರ ಪಟ್ಟಾಭಿಷೇಕ ನಡೆಯಿತು. ವೈಸರಾಯರವರು ರೆಸಿಡೆನ್ಸಿಯಲ್ಲಿ ದರ್ಬಾರ್ ಮಾಡಿದ ಶ್ರೀಮನ್ಮಹಾರಾಜರವರ ರಾಜ್ಯಾಭಿಷೇಕೋತ್ಸವದ ಸಂಗಡ ಚಕ್ರವ- ಯವರ ಕಿರೀಟಧಾರಣೋತ್ಸವವೂ ಮೈಸೂರಿನಲ್ಲೇ ನಡೆಯಿತು. ರಾಜ್ಯಾ ಷೇಕವಾದ ಒಂದು ವಾರದೊಳಗೆ ಅರಮನೆಯಲ್ಲೇ ಒಂದು ಕಾ ಏರ್ಪಾಡಾಯಿತು. ಮೆ|| ಮೆಕಾನಕಿ, ಸಿ.ಐ.ಇ., ಯವರು ಮೊದ ಪ್ರೈವೆಟ್ ಸೆಕ್ರೆಟರಿಗಳಾಗಿ ನೇಮಿಸಲ್ಪಟ್ಟರು. ಹಿಂದಿದ್ದ ರೀ ಕೌನ್ಸಿಲ್ಲು ಮಹಾರಾಜರವರ ಮುಂತ್ರಾಲೋಚನಾ ಸಭೆಯ ಏರ್ಪಾಟ್ಟಿತು. ದಿವಾನರು ಆ ಮುಂತ್ರಾಲೋಚನಾ ಸಭೆಯ ಮೊದ ಸದಸ್ಯರಾದರು. ಈ ಸಮಯದಲ್ಲಿ ಮಹಾರಾಜರವರು ರಾಜ್ಯಾಡ ವಿಚಾರಗಳಲ್ಲಿ ವಿಶೇಷ ಆಸಕ್ತಿಯನ್ನೂ ಶ್ರಮವನ್ನೂ ವಹಿಸುತ್ತಿದ್ದ ಮಹಾರಾಜರು ೧೨ ಗಂಟೆಗೆ ಕಛೇರಿಗೆ ದಯಮಾಡಿ ೪ ವರೆಸದ ಕಾ ಕಾರ್ಯಗಳು ಮುಗಿಯುವವರೆಗೆ ತಮ್ಮ ಮೇಜನ್ನು ಬಿಟ್ಟು ಕದಲುತ್ತಿರಲ

ಪ್ರಧಾನಮಂತ್ರಿಗಳ ಆಫೀಸು—ಅವರ ಪ್ರೈವೇಟ್ ಸೆಕ್ರೆಟರಿ, ಹುಜೂರು ಸೆಕ್ರೆಟರಿ ಮತ್ತು ಅಸಿಸ್ಟೆಂಟ್ ಸೆಕ್ರೆಟರಿಗಳು

# ೭ನೆಯ ಅಧ್ಯಾಯ

## ದೆಹಲಿ ದರ್ಬಾರು ಲೇಡಿ ಮಿಂಟೋರವರ ಲೇಖನ, ಯೂರೋಪಿನ ಸ್ನೇಹಯುದ್ಧ, ಮಹಾರಾಜರವರ ಸಹಾಯ

ಜಗನ್ಪ್ರಖ್ಯಾತರಾಗಿ ಆಳಿದ ಶ್ರೀ ವಿಕ್ಟೋರಿಯಾ ಚಕ್ರವರ್ತಿನಿಯವರು ಭೂಸ್ಥರಾದ ಮೇಲೆ ಅವರ ಜ್ಯೇಷ್ಠ ಕುಮಾರರಾದ ಆಲ್ಬರ್ಟ್ ವಿಕ್ಟರ್ ರವರು ಪಟ್ಟಕ್ಕೆ ಒಂದರಷ್ಟೆ. ಅವರ ಸಾರ್ವಭೌಮ ಪದವಿಯನ್ನು ಸೂಚಿಸುವ ಮಹೋತ್ಸವವು ದೆಹಲಿಯಲ್ಲಿ ನಡೆಯುವಂತೆ ನಿಶ್ಚಯವಾಗಿ ಭರತಖಂಡದ ಭೂಪಾಲಕರಿಗೆಲ್ಲ ಈ ಮಹೋತ್ಸವಕ್ಕೆ ಬರಲು ಆಹ್ವಾನ ಪತ್ರಿಕೆಗಳು ಕಳುಹಿಸಲ್ಪಟ್ಟವು. ವೈಸರಾಯರು ಶ್ರೀಮನ್ಮಹಾರಾಜ ರವರಿಗೆ ಈ ಕಳಿಗೆ ಕಾಣಂಪ ಪತ್ರವನ್ನು ಆಹ್ವಾನಪೂರ್ವಕ ಕಳುಹಿಸಿದರು.

ಕಲ್ಕತ್ತಾ, ೧೯ನೆಯ ಮಾರ್ಚ್, ೧೯೦೫

ನನ್ನ ಪೂಜ್ಯ ಮಿತ್ರರೇ,

ಭಾರತದ ಚಕ್ರವರ್ತಿಗಳಾದ ನಿಮ್ಮನೆಯ ಎಡ್ವರ್ಡ್ ಪೊರೆಗಳ ಮತ್ತು ಅವರ ಪ್ರಿಯ ಪತ್ನಿಯವರ ರಾಜ್ಯಾರೋಹಣ ಮಹೋತ್ಸವವನ್ನು ಯೋಗ್ಯರೀತಿಯಿಂದ ಆಚರಿಸಲು ನಾನು ೧೯೦೩ನೆಯ ಜನವರಿ ಒಂದನೆಯ ತಾರೀಖು ದೆಹಲಿಯಲ್ಲಿ ಒಂದು ಇಂಪೀರಿಯಲ್ ದರ್ಬಾರನ್ನು ನಡೆಯಿಸಬೇಕೆಂದು ಆಸೆಯುಳ್ಳವನಾಗಿ ಅದನ್ನು ತಮಗೆ ಅತ್ಯಂತ ಸಂತೋಷದಿಂದ ತಿಳಿಸುತ್ತಿದ್ದೇನೆ.

ಬ್ರಿಟಿಷ್ ಸಾರ್ವಭೌಮತ್ವಕ್ಕೆ ಭಾರತೀಯ ರಾಜಮಹಾರಾಜರು ತಮ್ಮ ರಾಜಭಕ್ತಿಯನ್ನು ತೋರಿಸುವುದಕ್ಕೆ ಇದು ಸದವಕಾಶವೆಂದೂ, ದೆಹಲಿಯ ದರ್ಬಾರಿನಲ್ಲಿ ಭಾಗವಹಿಸಿದರೆ ಇಂಗ್ಲೆಂಡಿನಲ್ಲಿ ಆಗುವ ತಮ್ಮ ಕಿರೀಟಧಾರಣ ಮಹೋತ್ಸವದಲ್ಲಿ ಭಾಗವಹಿಸಿದಂತೆ ಆಗುತ್ತದೆಂದೂ ತಮಗೆ ತಿಳಿಸಲು ಚಕ್ರವರ್ತಿಗಳಿಂದ ಆಜ್ಞಾಪ್ತನಾಗಿದ್ದೇನೆ. 'ಗೆಜೆಟ್ ಆಫ್ ಇಂಡಿಯಾ' ದಲ್ಲಿ ನಾನು ಪ್ರಕಟಿಸಿರುವ ವರ್ತಮಾನವನ್ನು ತಮ್ಮ ಅವಗಾಹನೆಗೋಸ್ಕರ ಇದರೊಂದಿಗೆ ಕಳುಹಿಸಿದ್ದೇನೆ. ಆ ಮಹೋತ್ಸವದ ಸಂದರ್ಭದಲ್ಲಿ ತಮ್ಮ ಘನತನ್ನಿಧ್ಯವನ್ನು ಬಯಸುತ್ತೇನೆ.

ತಾವು ದಹಲಿಗೆ ಬರಬೇಕಾದ ದಿನವನ್ನು ಯಥಾರೀತಿಯಲ್ಲಿ ತಿಳಿಸಲಾಗುತ್ತದೆ.

ತಮ್ಮಲ್ಲಿ ನನಗಿರುವ ಪೂಜ್ಯಭಾವನೆಯನ್ನು ಈ ಮುಂಚಿತ
ವಾಗಿ ವ್ಯಕ್ತಪಡಿಸಲಿಚ್ಛಿಸಿ ತಮ್ಮ ಸ್ನೇಹಿತನೆಂದು
ಕರೆದುಕೊಳ್ಳಲು ಬಯಸುವ

ಕರ್ಜನ್

ವೈಸರಾಯ್ ಮತ್ತು ಗವರ್ನರ್ ಜನರಲ್ ಆಫ್ ಇಂಡಿಯಾ

ಶ್ರೀಮನ್ಮಹಾರಾಜರವರು ಈ ಆಹ್ವಾನವನ್ನು ಅಂಗೀಕರಿಸಿ, ಮಹಾರಾಣಿಯವರುಗಳು, ಯುವರಾಜರು, ಲೆಸಿತೆಂಟರು, ದಿವಾನರು, ಪ್ರೈವೆಟ ಸೆಕ್ರೆಟರಿಯವರು ಮುಂತಾದ ಸಕಲ ಪರಿವಾರದೊಡನೆ ಬೆಲ್ಲೀ ಪಟ್ಟಣಕ್ಕೆ ದಯಮಾಡಿಸಿದರು. ಆ ಮಹಾನಗರದಲ್ಲಿ ನಡೆದ ಚಿರಸ್ಮರಣೀಯವಾದ ದರ್ಬಾರಿನ ದಿವ್ಯಮಹೋತ್ಸವಕ್ಕೆ ಶ್ರೀಮನ್ಮಹಾರಾಜರವರು ದಯಮಾಡಿದ್ದು, ಮೈಸೂರಿನ ಚರಿತ್ರೆಯಲ್ಲಿ ಒಂದು ಮುಖ್ಯ ವಿಷಯವಾಗಿದೆ ಏಕೆಂದರೆ : ಪೂರ್ವದಲ್ಲಿ ಅಷ್ಟದಿಕ್ಪಾಲಕರೆಲ್ಲರೂ ಸಕಲ ವೈಭವೋಪೇತರಾಗಿ ಒಟ್ಟಿಸಿದ ಭೂಲೋಕಾಧಿಪತಿಯು ಕೈಕೊಳ್ಳುತ್ತಿದ್ದ ರಾಜಸೂಯಾಶ್ವಮೇಧ ಮುಂತಾದ ಯಾಗಗಳ ಸಂದರ್ಭದಲ್ಲಿ ಅಂತಹ ಮಹಾಸಭೆಗಳು ಸೇರುತ್ತಿದ್ದವು. ಆದರೆ ಕೀರ್ತಿಶೇಷನಾದ ಧರ್ಮರಾಯನ ಕಾಲದಿಂದೀಚೆಗೆ ಈವರೆಲ್ಲ ಕಷ್ಟಸಾಧ್ಯವಾದ ಈ ಯಾಗಗಳನ್ನು ಯಾವ ರಾಜನೂ ಕೈಕೊಳ್ಳಲಿಲ್ಲ, ಇಂತಹ ಸಭೆಯೂ ಸೇರಲಿಲ್ಲ. ಮಹಾರಾಜರು ಈ ದಿವ್ಯಮಹೋತ್ಸವವನ್ನು ಸರಜೋರಿನಿಂದ ಮುಗಿಸಿ, ಆಗ್ರಾ, ಗೋಕುಲಬೃಂದಾವನ, ಕಾಶಿ ಮುಂತಾದುವುಗಳನ್ನು ನೋಡಿಕೊಂಡು ರಾಜಧಾನಿಯನ್ನು ಸೇರಿದರು.

ಬಳಿಕ ಇಂಡಿಯಾ ದೇಶವನ್ನು ನೋಡುವುದಕ್ಕೆ ಬಂದ ಬ್ರಿಟಿಷ್ ಯುವರಾಜರಾದ ಡ್ಯೂಕ್ ಆಫ್ ಕನಾಟ್‌ರವರನ್ನೂ ಅವರ ಪತ್ನಿ ಡೋರಿಯವರನ್ನೂ ಮೈಸೂರಿಗೆ ಒರಜೇಕೆಂದು ಮಹಾನಾಸ್ತಿಯವರು ಆಹ್ವಾನಿಸಿದರು. ಅವರು ಮಹಾನಾಸ್ತಿಯವರ ಆಹ್ವಾನವನ್ನು ಅಂಗೀಕರಿಸಿ ಮೈಸೂರಿಗೆ ಆಗಮಿಸಿದರು. ಬ್ರಿಟಿಷ್ ಸಿಂಹಾಸನಕ್ಕೆ ಉತ್ತರಾಧಿಕಾರಿಗಳಾದ ಯುವರಾಜ ದಂಪತಿಗಳನ್ನು ಸತ್ಕರಿಸುವ ಮಹಾಭಾಗ್ಯವು ಮೈಸೂರಿಗೆ ಲಭಿಸಿದ್ದು ಇದೇ ಮೊದಲನೆಯ ಸಾರಿ. ಅವರು ೧೯೦೬ನೆಯ ಜನವರಿ ತಿಂಗಳ ತಾರೀಖು ಮೈಸೂರಿಗೆ ಒಂದು ಮಹಾರಾಜರವರ ಅತಿಥ್ಯವನ್ನು ಕೈಕೊಂಡು ಕಾಕನಕೋಟೆಯ ಕಾಡಿನಲ್ಲಿ ಕಾಡಾನೆಗಳನ್ನು ಹಿಡಿಯುವ ಕ್ರಮವನ್ನು ನೋಡಿಕೊಂಡು ತೆರಳಿದರು.

ಇವರು ೧೯೦೬ನೆಯ ನವೆಂಬರ್ ತಿಂಗಳ ತಾರೀಖಿನ ದಿನ ಬಾಹ್ಯ ಮಂಜೂರವರು ಪತ್ನೀ ಸಮೇತರಾಗಿ ಮೈಸೂರಿಗೆ ದಯಮಾಡಿಸಿದರು. ಒಂದಾಗ್ಗೆ ಗೇರುಸೊಪ್ಪೆ ಜಲಪಾತವನ್ನು ನೋಡಿಕೊಂಡು ಮೈಸೂರಿಗೆ ಆಗಮಿಸಿದರು. ಬಂದಿಸಂತೆ ಶ್ರೀಮನ್ಮಹಾರಾಜರವರು ಅವರನ್ನು ಸ್ವಾಗತ



ಮೈಸೂರು ಹೂನ ಅರಮನೆ

ಸಿದರು. ಮೈಸರಾಯರವರ ಪತ್ನಿಯವರು ತಮ್ಮ "ಇಂಡಿಯ, ಮಿಂಚೆ ಅಂಡ್ ಮಾರ್ಲೆ" ಎಂಬ ಗ್ರಂಥದಲ್ಲಿ ಕೆಲವು ಅಂಶಗಳನ್ನು ಈ ರೀ ಸಿರೂಪಿಸಿರುವರು :—

"ಮಹಾರಾಜರವರು ಹಿಂದೂ ಧರ್ಮದ ಕಟ್ಟಳೆಗಳನ್ನು ಚಾಚೂ ತಪ್ಪದೆ ಅನುಸರಿಸುತ್ತಾರೆ. . . . ಅವರು ತಮ್ಮ ಅರಮನೆಯ ಖಾಸಗಿ ಖಾನೆಯಲ್ಲಿ ನಮಗಾಗಿ ಸಂಗೀತವನ್ನೇರ್ಪಡಿಸಿದ್ದರು. ಅಚ್ಚ ಹಿಂದೂ ಸಂಪ್ರದಾಯದಿಂದ ತುಂಬಿದ ಅರಮನೆಯಲ್ಲಿ ನುಸ್ಸಿದ್ದ ಸ್ಪೆಂಕಾಚಕ್ಕಸ ಹದಿನಾರನೆಯ ಲೂಯಿಯ ಖಾಸಗಿ ಖಾನೆಯನ್ನು ಮೀರಿಲುವ ಕೊಠಡಿಯನ್ನೂ, ಅಲ್ಲಿನ ವ್ಯವಸ್ಥೆಯನ್ನೂ ಕಂಡು ನಮಗೆ ಆಶ್ಚರ್ಯವಾಯಿತು. ನಮಗಾಗಿ ಏರ್ಪಡಿಸಿದ್ದ ಸಂಗೀತ ಕಛೇರಿಯಲ್ಲಿ ನುಡಿಸಬೇಕಾದ ಮಾದಗಳು, ನುಡಿಯಬೇಕಾದ ಹಾಡುಗಳು ಎಲ್ಲವನ್ನೂ ಮಹಾರಾಜರವರೇ ತಾವೇ ಜುನಾಯಿಸಿದ್ದರು. ಗೊನಾ, ಮೆಂಡಲ್‌ಸಾಹಾ, ಷೋಪಿನ್ ಮುಂತಾದ ಪ್ರಸಿದ್ಧ ಸಂಗೀತಗಾರರ ಉತ್ತಮ ಕೃತಿಗಳಿಂದ ಆರಿ ಸಂಗೀತವನ್ನು ಜುನಾಯಿಸಲಾಗಿತ್ತು. ಮಹಾರಾಜರೂ ತಾವೇ ಅನೇ ವಾದ್ಯಗಳನ್ನು ನುಡಿಸಬಲ್ಲರು. . . . ಡಿಸೆಂಬರ್ ೩ನೆಯ ತಾರೀಖಿನ ದಿ ಮಹಾರಾಜರನ್ನೂ ಯುವರಾಜರನ್ನೂ ಬಿಟ್ಟು ಮೈಸೂರಿಂದ ಮುಂದೆ ಪ್ರಯಾಣಮಾಡಲು ನಮಗೆ ತುಂಬಾ ದುಃಖವಾಯಿತು."

೧೯೧೫ರಲ್ಲಿ ಲಾರ್ಡ್ ಹಾರ್ಡಿಂಜ್‌ರವರು ಮೈಸೂರಿಗೆ ಆಗಮಿಸಿದು ಆಗಲೂ ರಾಜಧಾನಿಯು ವೈಭವದಿಂದ ಕೂಡಿತು. ಮನುಷ್ಯನಿಗೆ ತಿಳಿದ ದಂತೆ ಅಕಲ್ಪಿತ ರೀತಿಯಿಂದ ಎಷ್ಟೋ ಸಂಗತಿಗಳು ಆಗಾಗ್ಗೆ ನಡೆದುಹೋ ಗುತ್ತವೆ. ಹಿಂದೆ ಮಹಾರಾಜರವರ ಜನಕರಾದ ಶ್ರೀ ಚಾಮರಾಜೇಂದ್ರ ಒಡೆಯರವರಿಗೆ ರಾಜ್ಯಭಾರವನ್ನು ಕೊಡುವಾಗ, ೧೮೮೧ರಲ್ಲಿ "ಇಕ್ಸ್ಟ್ ಮೆಂಟ್ ಆಫ್ ಟ್ರಾಕ್ಟಾಫರ್" ಎಂಬ ಪ್ರತ್ಯಕ್ಷಣ ಸನ್ನದ್ದಿನ ರಾಜ್ಯಭಾರವನ್ನು ಅರ್ಪಣ ಮಾಡಿದ್ದರು. ಈಗ ಅದಕ್ಕೆ ಬದಲಾಗಿ ಒಂದು ಯೂನಿಯನ್ ಜಾಕ್ ಹಾರ್ಡಿಂಜರು ಇಲ್ಲಿಗೆ ಆಗಮಿಸಿದ್ದಾಗ ಹುಟ್ಟಿತು.

**ಯೂರೋಪಿನ ಘೋರಯುದ್ಧ, ಮಹಾರಾಜರವರ ಸಹಾಯ.**—೧೯೧೪ನೆಯ ಇಸವಿಯಲ್ಲಿ ಯೂರೋಪ್ ಖಂಡದ ಇಂಗ್ಲೆಂಡಿಗೂ ಜರ್ಮನಿಗೂ ಘೋರಯುದ್ಧವು ಸಂಪ್ರಾಪ್ತವಾಯಿತ

ಆಗ ಶ್ರೀಮನ್ಮಹಾರಾಜರವರು ಜಕ್ಕಾಧಿಪತ್ಯಕ್ಕೆ ಧನಸಹಾಯವನ್ನೂ ಜನಸಹಾಯವನ್ನೂ ಒದಗಿಸಿಕೊಟ್ಟು ಬಹಳವಾಗಿ ಸಹಾಯ ಮಾಡಿದರು. ಅಲ್ಲದೆ, ಇಂಡಿಯಾ ದೇಶದಿಂದ ಯುದ್ಧಭೂಮಿಗೆ ಕಳುಹಿಸಲ್ಪಟ್ಟ ಸೈನ್ಯದ ಖರ್ಚಿಗಾಗಿ ೫೦ ಲಕ್ಷ ರೂಪಾಯಿಗಳನ್ನು ಕೊಟ್ಟರು. ಇದರಿಂದ ನಮ್ಮ ದೇಶಕ್ಕೆ ಹೆಚ್ಚು ಗೌರವವೂ ಕೀರ್ತಿಯೂ ಲಭಿಸಿತು. ಜಕ್ಕವರ್ತಿಯವರೂ ವೈಸರಾಯರವರೂ ಮಹಾರಾಜರವರ ರಾಜಭಕ್ತಿ, ದೇಶಾಭಿಮಾನ, ಔದಾರ್ಯಗಳನ್ನು ಬಹಳವಾಗಿ ಕೊಂಡಾಡಿರುವರು. ಅಷ್ಟೇ ಅಲ್ಲ, ಪುನಃ ಮಹಾಸ್ವಾಮಿಯವರೂ ಅವರ ಸ್ನೇಹಿತರೂ ಸೇರಿ ಒಂದೂವರೆ ಕೋಟಿ ರೂಪಾಯಿಗಳನ್ನು ಒದಗಿಸಿಕೊಟ್ಟರು.

ಈ ಯುದ್ಧದಲ್ಲಿ ಮೈಸೂರು ಯೋಧರು ತೋರಿಸಿದ ಸಾಹಸವೂ ಪರಾಕ್ರಮವೂ ಅಸದೃಶವಾಗಿದ್ದುವು. ಮೈಸೂರು ಸೈನ್ಯದ ಜೋಫಾ ಕವ್ಯಾಲೆಂಟರಾಗಿದ್ದ ಕರ್ನಲ್ ಜೆ. ದೇಶರಾಜೇ ಅರಸುನವರು ಮಾಡಿದ ಸಾಹಸಕಾರ್ಯಗಳಿಗೆ ಇಂಡಿಯಾ ಚಕ್ರವರ್ತಿಗಳು ಅವರನ್ನು ಸನ್ಮಾನಿಸಿದರು. ಸೈನ್ಯಾಧಿಕಾರಿಗಳಲ್ಲಿ ಅನೇಕರು ಬಹುಮಾನವನ್ನು ಪಡೆದು ಕೀರ್ತಿವಂತರಾದರು. ಮೈಸೂರು ಸೈನ್ಯವು ಹೀಗೆ ದೂರದೇಶಗಳಿಗೆ ಹೋದುದು ಇದೇ ಮೊದಲು. ಈ ಘೋರಯುದ್ಧವು ಸುಮಾರು ನಾಲ್ಕುವರ್ಷಕಾಲ ನಡೆಯಿತು. ಯುದ್ಧದಲ್ಲಿ ಜಯಶೀಲರಾಗಿ ಹಿಂದಿರುಗಿ ಬಂದ ಮೈಸೂರು ಸೈನಿಕರುಗಳೆಲ್ಲ ಶ್ರೀಮನ್ಮಹಾರಾಜರವರು ಅಪ್ಪಣೆಕೊಡಿಸಿದ್ದೇನೆಂದರೆ:—"ಭಲ್ಲೆಯ ಸಪಾರಸೇನೆಯ ಅಧಿಕಾರಿಗಳೇ ಮತ್ತು ಯೋಧರೇ—ನಿಮ್ಮ ಸಂಸಾರಗಳನ್ನು ಒಹುದಿನಗಳ ವರೆಗೆ ಸಂರಕ್ಷಿಸಿ ಕ್ಷೇಮವಾಗಿ ಹಿಂದಿರುಗಿ ಬಂದ ನಿಮಗೆ ಮಂಗಳಾಶಂಸನಪೂರ್ವಕ ಬಂಬೆರಡು ಮಾತುಗಳನ್ನು ಹೇಳುವುದಕ್ಕೂ, ಯುದ್ಧರಂಗದಲ್ಲಿ ನೀವು ಮಾಡಿದ ಸಾಹಸ ಕಾರ್ಯಗಳಿಂದ ನಮಗುಂಟಾದ ಹೆಮ್ಮೆಯನ್ನು ನಿಮಗೆ ತಿಳಿಯಪಡಿಸುವುದಕ್ಕೂ ನಾವು ಬಂದು ತೆರದ ಸಂತೋಷದಿಂದಲೂ ನಿಮ್ಮಲ್ಲಿ ಬಂದಿರುವೆವು. ರಣರಂಗದಲ್ಲಾಗಲಿ ನಿಮ್ಮ ಅನುವರ್ತನವೂ ಉತ್ಸಾಹವೂ ಅತಿ ಶ್ಲಾಘ್ಯವಾಗಿದ್ದುವು. ನೀವು ಸೇನಾಗ್ರಹಾರದಲ್ಲಿ ನಿಂತು ನಿಮ್ಮ ಕರ್ತವ್ಯಗಳನ್ನು ಸಮರ್ಪಕವಾದ ರೀತಿಯಲ್ಲಿ ನಿರ್ವಹಿಸಿ, ಮೈಸೂರಿನ ಯೋಧರು ರಣಧೀರರು ಎಂಬ ಪುರಾತನ ಕೀರ್ತಿಯನ್ನು ಕಾಪಾಡಿ

ಕೊಂಡು ಬಂದುದಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇವೆ. ಈ ಸಮಯದಲ್ಲಿ ನಿಮ್ಮ ಸಂಗಡಿಗರಾದ ದೇಶೀಯರೆಲ್ಲರೂ ನಮ್ಮಂಗುಂಟಾದ ಸಂತೋಷದಲ್ಲಿ ಸಹಭಾಗಿಗಳಾಗಿ ನೀವು ಮಾಡಿದ ಅತಿಶಯವಾದ ತ್ಯಾಗವನ್ನೂ, ತೋರಿಸಿದ ಪರಾಕ್ರಮವನ್ನೂ ಕೇಳಿ ತಲೆದೂಗಿ ಮೆಚ್ಚಿದೆ ಇರರು ಎಂಬ ನಿರ್ಧಾರವು ನಮ್ಮ ಮನಸ್ಸಿನಲ್ಲಿ ಉಂಟಾಗಿದೆ. ನೀವು ಸೂತನವಾಗಿ ಸಂಪಾದಿಸಿದ ಯಶೋವಲಿಕೆಯೊಡನೆಯೂ ಮತ್ತು ನಿಮಗೆ ಯಾವ ಪ್ರಬಲಿಷ್ಠ ಸೇನಾಧಿಪತಿಗಳ ಕೈಕೆಳಗೆ ಯುದ್ಧಮಾಡುವ ಭಾಗ್ಯವು ಒದಗಿದ್ದಿತೋ ಆ ಸೇನಾಧಿಪತಿಗಳಿಗೆ ಸಂಪೂರ್ಣ ತೃಪ್ತಿಯುಂಟಾಗುವಂತೆ ನೀವು ನಿಮ್ಮ ಕರ್ತವ್ಯಗಳನ್ನು ನಡೆಸಿದಿರೆಂಬ ಅಹಂಭಾವನೆಯೊಡನೆಯೂ ಕೂಡಿ ಈಗ ಹಿಂದಿರುಗಿ ಬಂದಿರುವಿರಿ. ನಿಮಗೆಲ್ಲಾ ಚಿರಕಾಲ ವಿಶ್ರಾಂತಿಯೂ ಸೌಖ್ಯವೂ ಉಂಟಾಗಲಿ ಎಂದು ನಾವು ಹಾರೈಸುತ್ತೇವೆ" ಎಂದು ಅಪ್ಪಣೆ ಕೊಟ್ಟುದಲ್ಲದೆ, ಅವರಿಗೆಲ್ಲ ಅನೇಕ ಅನುಕೂಲ್ಯಗಳನ್ನು ಕಲ್ಪಿಸಿಕೊಟ್ಟರು. ಈ ಯುದ್ಧಕಾಲದಲ್ಲಿ ಶ್ರೀಮನ್ಮಹಾರಾಜರವರು ಯುದ್ಧಭೂಮಿಯಲ್ಲಿರುವ ಯೋಧರಿಗೆಲ್ಲ ಬೇಕುಬೇಕಾದವನ್ನೆಲ್ಲ ಕಳುಹಿಸಿಕೊಡುತ್ತಿದ್ದರು.

## ಎನೆಯ ಅಧ್ಯಾಯ

### ರಾಜ್ಯಭಾರ ಕೌಶಲ, ಪ್ರಜಾಪ್ರತಿನಿಧಿ ಸಭೆ, ಶಾಸನಸಭೆ

ಶ್ರೀಮನ್ಮಹಾರಾಜರವರಲ್ಲಿ ಅಖಿಲ ಪ್ರಜೆಗಳು ಪಿತೃಸಮಾನ ಪ್ರೀತಿಯನ್ನಿಟ್ಟುಕೊಂಡಿದ್ದರು. ಅವರ ವಿನಯ ಸೌಶೀಲ್ಯಾದಿ ಗುಣಗಳು, ಹಿರಿಯ ಆಶಯಗಳು, ಪ್ರಗತಿಭಾವನೆಗಳು, ಇವೇ ಜನಾದರಕ್ಕೆ ಕಾರಣ. ಅವರಲ್ಲಿ ಕೋಮಲವಾದ ಮನಸ್ಸು, ಗಂಭೀರವಾದ ನಡೆನುಡಿ, ಮೃದು ಮಧುರವಾದ ಭಾಷಣ, ಚರಹಸನ್ಮುಖತೆ, ದೇಹಕ್ಕೊಪ್ಪುವ ಸುಂದರವಾದ ವಸ್ತ್ರಭೂಷಣ, ದಾರಿಯಲ್ಲಿ ಕೈಮುಗಿಯುವವರನ್ನು ಅಂತಃಕರಣ ಪೂರ್ವಕವಾಗಿ ನೋಡಿ ಪ್ರತಿಯಾಗಿ ಗೌರವವನ್ನು ಸೂಚಿಸುತ್ತಿದ್ದ ಸೊಗಸು, ಸೌಂದರ್ಯಾಭಿವೇಶದಿಂದ ಪ್ರೇರಿತವಾದ ಕಲಾಭಿವಾಸ, ಯೋಗ್ಯತರ ಕ್ರೀಡೆಗಳಲ್ಲಿ ಆಚಿತೋಚಿತವಾಗಿ, ಸರಳಜೀವನ, ಹಿಂದೂ ಧರ್ಮದಲ್ಲಿ ಅದ್ದಿ



ಬೆಂಗಳೂರು ಅರಮನೆ

ಪೆನಿಸಿದ ಶ್ರದ್ಧಾಭರಿತನು—ಇವುಗಳಲ್ಲಿ ಒತ್ತಟ್ಟಿಗೆ ರೂಪುಗೊಂಡಿದ್ದು
ಅವರ ಜೀವನವೇ ಒಂದು ಅದ್ಭುತ, ಅವರು ಮೇಧಾವಿಗಳಲ್ಲಿ ಮೊದಲ
ಯವರು, ರಸಿಕರಲ್ಲಿ ಅಗ್ರಣಿಗಳು, ಸುಧಾರಕರಿಗೆ ಸುಧಾರಕರು, ನಾಗರಿಕ
ಆದರ್ಶರು, ಅವರ ನೋಟವೇ ಮುನ್ನೋಟ, ಅವರ ನಡೆಯೇ ಮುನ್ನ
ಅವರ ವಾಣಿಯೇ ಅಮೃತವಾಣಿ, ಅವರ ತೇಜಸ್ಸೇ ಕ್ಷಾತ್ರತೇಜಸ್ಸ
ಅವರ ದಾರಿಯೇ ಹೆದ್ದಾರಿ, ಅವರ ಮಾರ್ಗವೇ ರಾಜಮಾರ್ಗ, ಭೋಗದ
ಇಂದ್ರಭೋಗ, ಗಾಂಭೀರ್ಯದಲ್ಲಿ ಸಮುದ್ರಗಾಂಭೀರ್ಯ, ವೈಭವದ
ರಾಜವೈಭವ, ತ್ಯಾಗದಲ್ಲಿ ವೀರತ್ಯಾಗ, ಅವರು ಜನಗಣದಲ್ಲಿ ಶ್ರೇಷ್ಠರ
ರಾಜರಲ್ಲಿ ತಿಲಕಪ್ರಾಯರೂ ಆಗಿದ್ದರೆಂದರೆ ಅತಿಶಯೋಕ್ತಿಯಾಗದ
೧೯೦೨ರಲ್ಲಿ ಶ್ರೀಮನ್ಮಹಾರಾಜರವರು ಸಿಂಹಾಸನಾರೂಢರಾಗಿ ರಾ
ಭಾರವನ್ನು ಕೈಕೊಂಡರು. ಆಗಿದ್ದ ಮೈಸೂರೆಲ್ಲಿ? ಲೋಕವಿಖ್ಯಾತವಾಗಿರು
ಇಂದಿನ ಮೈಸೂರೆಲ್ಲಿ? ೧೯೦೨ರಲ್ಲಿ ಸಂಸ್ಥಾನದ ವಾರ್ಷಿಕಾದಾಯ
೧೯ ಲಕ್ಷ ರೂಪಾಯಿ. ಈಗ ೩೫ ಲಕ್ಷ ರೂಪಾಯಿಗಳಿಗೆ ಏರು
ಅರ್ಥಶಾಸ್ತ್ರಾಭಿಜ್ಞರಾದ ಮಂತ್ರಿಶ್ರೇಷ್ಠರ ಮಂತ್ರಾಲೋಚನ ಬಲದಿಂ
ಭಾರತೀಯರೂಕಗೆಲ್ಲ ಬೆಲ್ಲದರಸಿನಿಕೊಂಡ ಮಹಾಸ್ವಾಮಿಯವರ ರಾ
ಭಾರ ಕೌಶಲವು ನಮಗೆ ಸದುಪದೇಶವಲ್ಲವೆ? 'ದುಡಿದು ಗಳಿಸಬೇಕ
ಗಳಿಸಿ ಉಳಿಸಬೇಕು' ಎಂಬ ವಾಕ್ಯವು ಇಂತಹ ಮಹಾನುಭಾವರಿಗೆ ತಾ
ಅನ್ವಯಿಸುವುದು. ಇಂದು ಭಾರತದಲ್ಲಿರುವ ಐನೂರಾಮತ್ತೈರಡು ಸಂಸ್ಥಾ
ಗಳಲ್ಲಿ ಮೈಸೂರು ಕೃಷಿ, ಕೈಗಾರಿಕೆ, ವಾಣಿಜ್ಯ, ಜೀವನವಸತಿ, ಪ್ರಯಾ
ಸೌಕರ್ಯ, ಚಿಕಿತ್ಸಾ ಸೌಲಭ್ಯ, ಶಿಕ್ಷಣವ್ಯವಸ್ಥೆ, ಜಲವಸತಿ ಮೊದಲಾ
ಪ್ರಜಾಸೌಖ್ಯದ ಅಂಗಗಳೆಲ್ಲೆಲ್ಲ ಅಗ್ರಸ್ಥಾನವನ್ನು ಗಳಿಸಿದೆ. ಶ್ರೀ ಕೃಷ್ಣ
ರಾಜರ ಆಳಿಕೆಯೆಂದರೆ ಒಂದು ಮಹಾ ಜೈತ್ರಯಾತ್ರೆ. ಪ್ರತಿ ದಿವಸವೂ
ಮೈಸೂರು ಪ್ರಜೆಗಳ ಹೊಸವು ಆಶೋತ್ತರಗಳು, ಒಕ್ಕಲು ಮಕ್ಕ
ಸಂಕಷ್ಟಗಳು, ವಾಣಿಜ್ಯ ಕೈಗಾರಿಕೆಗಳ ಪ್ರಗತಿಗಳು, ಮೇಲಿಂದಮೇ
ಬೆಳಗುತ್ತಿದ್ದ ರಾಷ್ಟ್ರೀಯ ಸಮಸ್ಯೆಗಳು ಸಮಂತಾದುವುಗಳಿಂದ ಮೈಸೂ
ಮುಂದಡಿಯಿಡಬೇಕು. ಇಲ್ಲಿದ್ದರೆ ಪ್ರಭುಗಳ ಚಿತ್ತಕ್ಕೆ ಸಮಾಧಾನವಿಲ್ಲ
ಹೀಗೆ ವಿರಾಮವಿಲ್ಲದೆ ೩೮ ವರ್ಷಕಾಲ ದುಡಿದುದರ ಫಲವಾಗಿ ಮೈಸೂ
ಸಂಸ್ಥಾನದಲ್ಲಿ ಎತ್ತಕಡೆ ತಿರುಗಿದರೂ ಅತ್ತಕಡೆಯೆಲ್ಲಾ ಮಹಾಸ್ವಾಮಿ

ಯವರು ತಮ್ಮ ಪ್ರಜೆಗಳ ಸೌಖ್ಯಕ್ಕಾಗಿ, ಆರೋಗ್ಯಕ್ಕಾಗಿ, ಬದುಕಿಗಾಗಿ, ವಿಹಾರಕ್ಕಾಗಿ ಮತ್ತು ಮುಂದುವರಿಯುವುದಕ್ಕಾಗಿ ಮಾಡಿರತಕ್ಕ ಮಹಾ ಕಾರ್ಯಗಳೇ ಕಂಗೊಳಿಸುತ್ತವೆ. ೧೯೨೪ರಲ್ಲಿ ಶ್ರೀಮನ್ಮಹಾರಾಜರವರು "ನಮ್ಮ ರಾಜ್ಯದ ಪ್ರಜೆಗಳು ತಮ್ಮ ಸಮಸ್ತ ಆಡಳಿತಗಳನ್ನು ಅತ್ಯಾವಲಂಬನದಿಂದ ತಾವೇ ಸರಿಪಡಿಸಿಕೊಳ್ಳತಕ್ಕ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಿಕೊಂಡು, ಮಹಾಕಾರ್ಯಗಳನ್ನು ಧೈರ್ಯದಿಂದ ಪ್ರಾರಂಭಿಸತಕ್ಕವರೂ, ಉತ್ಸಾಹಶಾಲಿಗಳೂ ಅಧ್ಯವಸಾಯ ಪಟುಗಳೂ ಆಗಿ, ಸಮಸ್ತ ಪುರೋಭಿವೃದ್ಧಿಯ ಕಾರ್ಯಕಲಾಪಗಳಲ್ಲಿ ಮುಂದಾಗಿ ನಿಂತು, ಕೃತಕೃತ್ಯರಾಗುವುದನ್ನು ನೋಡಿ ಆನಂದಪಡಬೇಕೆಂಬುದೇ ನಮ್ಮ ಮನೋರಥವಾಗಿದೆ"— ಎಂದು ಅಪ್ಪಣೆಕೊಡಿಸಿರುವುದು ಅವರ ಆದರ್ಶಭಾವನೆಯಾಗಿದೆ. "ಧರ್ಮಜ್ಞಶ್ಚ ಸತ್ಯಸಂಧಶ್ಚ ಪ್ರಜಾನಾಂ ಚ ಹಿತೇ ರತಃ" ಎಂಬ ವಾಲ್ಮೀಕಿಯ ವಚನವು ಇಂತಹ ಮಹಾನುಭಾವರಿಗೆ ತಾನೇ ಅನ್ವಯಿಸುವುದು!

ಮೈಸೂರು ದೇಶವು ಚಿತ್ರಿತಸಂಸ್ಥಾನಗಳಲ್ಲಿ ಒಂದಾಗಿ ಬ್ರಿಟಿಷ್ ಸಾರ್ವಭೌಮರ ಮೇಲ್ವಿಚಾರಣೆಯಲ್ಲಿದ್ದರೂ ಕೇವಲ ರಾಜಕೀಯ ಸಂದರ್ಭದಲ್ಲಿ ಅವರ ಅಧಿಕಾರವೇ ಹೊರತು, ದೇಶದ ಎಲ್ಲಾ ಒಳ ಆಡಳಿತಗಳಲ್ಲಿಯೂ ಶ್ರೀಮನ್ಮಹಾರಾಜರವರೇ ಪ್ರಭುಗಳು. ಅವರೇ ಸರ್ಕಾರ; ಅವರೇ ಸಕಲಾಧಿಕಾರಿಗಳನ್ನೂ ನೇಮಿಸತಕ್ಕವರು. ದೇಶದ ಶಿಕ್ಷೆಗಳೂ ನ್ಯಾಯನಿಷ್ಠೆಗಳೂ ಅವರ ಅಪ್ಪಣೆಯಂತೆ ನಡೆಯುತ್ತಿದ್ದುವು. ಅವರ ಪ್ರಜಾವಾತ್ಸಲ್ಯ ಕಾರ್ಯಗಳಿಂದ ದೇಶವು ಸುಂದರವೂ ಸಂಪತ್ತಿನಿಂದ ಕೂಡಿದುದೂ ಆಗಿದೆ. ದೇಶದಲ್ಲಿ ಆರೋಗ್ಯವೂ ಸೌಖ್ಯವೂ ಸಂಪದಭಿವರ್ಧಕ ಕಾರ್ಯಗಳೂ ಸುಧಾರಕ ಸಮಿತಿಗಳೂ ನಾನಾಸ್ಥಾನಗಳಲ್ಲಿವೆ. ನಡೆಯುತ್ತವೆ. ಪ್ರಜೆಗಳು ತಮ್ಮ ಹಕ್ಕುಗಳನ್ನು ತಿಳಿದುಕೊಂಡು ನ್ಯಾಯನಿಷ್ಠರಾಗಿ ಸ್ವಾವಲಂಬನದಿಂದ ಬಾಳುವಂತೆ ಹಲವು ಏರ್ಪಾಡುಗಳು ಆಚರಣೆಗೆ ಬಂದಿವೆ.

ಮೈಸೂರು ಸಂಸ್ಥಾನದಲ್ಲಿ ಪ್ರಾಕೃತಿಕ ಸಂಪತ್ತು ವಿಶೇಷವಾಗಿರುವುದು. ವಿಸ್ತೀರ್ಣವಾದ ಮತ್ತು ಬಹಳ ಬೆಲೆಬಾಳುವ ಮರಗಳುಳ್ಳ ಕಾಡುಗಳೂ, ಫಲವತ್ತಾದ ಭೂಮಿಯೂ, ಹಲವು ಬಗೆಯ ಖನಿಜಗಳೂ ಸಂಸ್ಥಾನದಲ್ಲಿ ಕಂಗೊಳಿಸುತ್ತಿರುವುವು. ಇದರಿಂದ ಮಹಾಸ್ವಾಮಿಯು

ವರು ಪ್ರಕೃತಿ ಸಂಪತ್ತನ್ನು ರೂಢಿಸುವುದರ ಮೂಲಕ ಜನರ ಸು
ಸಂತೋಷಗಳನ್ನು ಹೆಚ್ಚಿಸಬೇಕೆಂದು ಯೋಚಿಸಿ, ಅಮೇರಿಕಾ, ಇಂಗ್ಲೆಂಡ
ಮತ್ತು ಬ್ರಿಟಿಷ್ ಇಂಡಿಯಾದ ಮಹಾ ಮೇಧಾವಿಗಳನ್ನು ಕರೆಸಿ
ಅವರಿಂದ ಕೂಲಂಕಷವಾದ ಆರ್ಥಿಕ ಸರ್ವೆಯನ್ನು ನಡೆಸಿದರು. ಆನಂ
ಒಪ್ಪಿಸಿರುವ ವರದಿಗಳ ಆಧಾರದ ಮೇಲೆ ಹಲವು ದೊಡ್ಡದೊಡ್ಡ
ಯೋಜನೆಗಳನ್ನು ಕೈಕೊಳ್ಳಲಾಯಿತು.



ಲಲಿತಮಹಲ್

ಶ್ರೀಮನ್ಮಹಾರಾಜರವರು ಆದರ್ಶ ಹಿಂದೂಗಳೂ ಶ್ರೇಷ್ಠ ಸನಾತನಿ
ಗಳೂ ಆದರೂ, ಅನ್ಯಮತೀಯರ ಧರ್ಮಗಳಲ್ಲಿ ಅವರಿಗೆ ಸ್ವಲ್ಪವೂ
ಭೇದಭಾವವಿರಲಿಲ್ಲ. ಹಿಂದುವಾಗಲಿ, ಮುಸಲ್ಮಾನನಾಗಲಿ, ಕ್ರೈಸ್ತಿಯ
ನಾಗಲಿ ಎಲ್ಲರ ಧರ್ಮತತ್ತ್ವಗಳೂ ಒಂದೇ ಎಂದು ಭಾವಿಸಿದ್ದರು.
ಹಿಂದೂ ದೇವಾಲಯಗಳಿಗೆ ಉತ್ತೇಜನ ಕೊಡುತ್ತಿದ್ದುದು ಮಾತ್ರವಲ್ಲ
ಮುಸಲ್ಮಾನರ ಮಸೀದಿಗಳಿಗೂ ಕ್ರೈಸ್ತರ ಚರ್ಚುಗಳಿಗೂ ಅದೇ ಗೌರವ
ಕೊಡುತ್ತಿದ್ದರು. ಹಿಂದೂಗಳಿಗೆ ಯಾವ ಶಕ್ತಿಯು ಹರಹರನಾಗಿ
ಗೋಚರಿಸುವುದೋ ಕ್ರೈಸ್ತರಿಗೆ ಅದೇ ಶಕ್ತಿಯು ಯೇಸುವಾಗಿಯೂ
ಮುಸಲ್ಮಾನರಿಗೆ ಅಲ್ಲಾವಾಗಿಯೂ ಗೋಚರಿಸುವುದೆಂದು ಹೇಳುತ್ತಿದ್ದರು.

ಇದಕ್ಕೆ ಸಿದರ್ಶನವಾಗಿ ಬಾಡಿಗಾರ್ಡ್ (ಅಂಗರಕ್ಷಕ ಸೈನಿಕರ) ಮಸೀದಿ, ಜುಮ್ಮಾ ಮಸೀದಿ, ಚಾಮುರಾಜಿಪೇಟೆ ಮಸೀದಿ ಮುಂತಾದುವುಗಳಿಗೆಲ್ಲ ತಮ್ಮ ಸ್ವಂತ ಪೊಕ್ಕಸದಿಂದ ನಾಲ್ಕಾರು ರೂಪಾಯಿಗಳನ್ನು ಕೊಟ್ಟಿರುವರಲ್ಲದೆ, ಅವುಗಳ ಸಮುದಾರಂಭೋತ್ಸವವನ್ನು ತಾವೇ ಸರಸೋರಸಿದರು. ಸೆಂಟ್ ಫಿಲೋಮಿನಾ ಅಮ್ಮನವರಿಗೆ ಧರಿಸಲು ನವಿರಾರು ರೂಪಾಯಿಗಳ ಸಗನಾಣ್ಯಗಳನ್ನೂ ಹೀರಾಂಬರಗಳನ್ನೂ ಕೊಟ್ಟಿರುವರು.

ಶ್ರೀಮನ್ಮಹಾರಾಜರವರು ಬಾಡಿಗಾರ್ಡ್ ಸೈನಿಕರ ಉಪಯೋಗಾರ್ಥವಾಗಿ ಕಟ್ಟಿಸಿದ ಮಸೀದಿಯ ಪ್ರವೇಶ ಮಹೋತ್ಸವವನ್ನು ಸವಿೇರಿಸುವ ಕಾಲದಲ್ಲಿ ಉರ್ದೂ ಭಾಷೆಯಲ್ಲಿ ಅಪ್ಪಣೆ ಕೊಡಿಸಿದ್ದೇನೆಂದರೆ:—"ಈ ಮಸೀದಿಯನ್ನು ಮುಖ್ಯವಾಗಿ ಅಂಗರಕ್ಷಕ ಸೈನಿಕರ ಕೇರಿಗಳಲ್ಲಿ ವಾಸ ಮಾಡುವ ಮುಸಲ್ಮಾನರ ಉಪಯೋಗಾರ್ಥವಾಗಿ ನಾವು ಕೇವಲ ಧರ್ಮದಿಂದ ಕಟ್ಟಿಸಿರುತ್ತೇವೆ. ಅಕಾರಣವಾದ ಫಲಾಪೇಕ್ಷೆಗಳಿಲ್ಲದೆ ಭಗವತ್ಪ್ರಾರ್ಥನೆಯು ಅಮೂಲ್ಯವಾದುದೆಂಬುದಾಗಿ ಜನ್ಮಾಂತರ ಸುತದಲ್ಲಿ ಉಕ್ತವಾಗಿದೆ. ಜನ್ಮಾಂತರ ಪತಿವ ನಿಯಮಗಳಲ್ಲಿ ಇದು ಗಮನಿಸತಕ್ಕ ಮುಖ್ಯಲಕ್ಷಣವಾಗಿದೆ. ದೈವಪ್ರಾರ್ಥನೆಯೇ ಸುತಾನುವಾದವು ಮುಖ್ಯವಾಗಿ ಸಂಸಾರವೆನಿಸುತ್ತದೆ. ಮಾನವನು ಮುಂಜಾವಾಗಾನಲಂಬಿಯಾಗಿದ್ದು ಸಾಧುಜೀವಿಯೆನಿಸಲು ಶ್ರದ್ಧಾಭಕ್ತಿಗಳಿಂದ ಕೂಡಿದ ಭಗವತ್ಪ್ರಾರ್ಥನೆಯೇ ಮುಖ್ಯಸಾಧನವಾಗಿದೆ. ಮುಸಲ್ಮಾನ ಅಂಗರಕ್ಷಕರು ಸಮಾಜ ಅಥವಾ ಭಗವದಾರ್ಧನೆಕ್ಕೆ ಇದೇ ಮಸೀದಿಯನ್ನೇ ಸಂತತವೂ ಬಳಸಿಕೊಳ್ಳುವಂತೆ ಮಾಡಿಸಿದರೆ, ನಮ್ಮ ಮನಸ್ಸಿಗೆ ಏಕೋಪ ಹರ್ಷವುಂಟಾಗುವುದು" ಎಂದು ಅಪ್ಪಣೆ ಕೊಟ್ಟಿರುವುದು ಅವರ ಸರಪಣಿ ಸಹಿಷ್ಣುತೆಗೆ ಮತ್ತೊಂದು ನಿದರ್ಶನವಾಗಿರುವದು.

೧೯೨೮ನೆಯ ಡಿಸೆಂಬರ್ ತಿಂಗಳಲ್ಲಿ ಮೈಸೂರಿನಲ್ಲಿ ನಡೆದ "ದಿಪ್ರಿನ್ಸಸ್ ಸೆಂಟ್ ಫೆಂಟ್ಸ್ ಕ್ರಿಶ್ಚಿಯನ್ ಪೆಡೆರೇಷನ್" ಉದ್ಘಾಟನ ಸಮಾರಂಭವನ್ನು ಮಹಾಸ್ವಾಮಿಯವರೇ ಸವಿೇರಿಸಿದರು. ಆ ಸಮಾರಂಭಕ್ಕೆ ಪ್ರಾಂತದ ನಾನಾ ಭಾಗಗಳಿಂದ ಜನರು ಆಹ್ವಾನಿಸಲ್ಪಟ್ಟಿದ್ದರು. ಅವರ ಪರಧರ್ಮ ಸಹಿಷ್ಣುತೆ, ಉದಾರ ಮನೋವೃತ್ತಿ, ವಿಶಾಲ ಭಾವನೆಗಳು ಸ್ಪಷ್ಟವಾಗಿ ಕಾಣುವ. ಶ್ರೀಮನ್ಮಹಾರಾಜರವರು ಅಮೋಘವಾದ ದೇಶೋನ್ನತಿಗಾಗಿ

ಮಾಡುತ್ತಿದ್ದ ಕಾರ್ಯದಕ್ಷತೆಗಾಗಿಯೂ, ದೇಶದ ಪ್ರಜೆಗಳು ಅವರನ್ನು ಕಾಣುತ್ತಿದ್ದ ಅಪೂರ್ವ ಗೌರವಕ್ಕಾಗಿಯೂ, ಅವರು ಬ್ರಿಟಿಷ್ ಸಾರ್ವಭೌಮರಲ್ಲಿ ಇಟ್ಟಿರುವ ಅಕೃತ್ರಿಮವಾದ ರಾಜಭಕ್ತಿ ವಿಶ್ವಾಸಗಳಿಗಾಗಿಯೂ, ಮೊಚ್ಚಿ, ೧೯೨೫ರಲ್ಲಿ ಮೈಸೂರು ಸರ್ಕಾರದವರು ಬ್ರಿಟಿಷ್ ಸರ್ಕಾರಕ್ಕೆ ಕೊಡುತ್ತಿದ್ದ ೫೫|| ಲಕ್ಷ ರೂಪಾಯಿಗಳ ಪೊಗದಿಯಲ್ಲಿ ಹತ್ತೊಂಬತ್ತೆರೆ ಲಕ್ಷ ರೂಪಾಯಿಗಳನ್ನು ಕಡಮೆಮಾಡಿದರು. ಅಲ್ಲದೆ, ಈಚೆಗೆ ಪುನಃ ೫,೩೯,೦೦೦ ರೂಪಾಯಿಗಳನ್ನು ಕಡಮೆ ಮಾಡಿರುವರು. ಇನ್ನು ಮುಂದೆ ಪೊಗದಿಯನ್ನು ಸಂಪೂರ್ಣವಾಗಿ ತೆಗೆದುಹಾಕಬೇಕೆಂದೂ, ಬೆಂಗಳೂರು ಕಂಟೋನ್ಮೆಂಟಿನ ಕೆಲವು ಭಾಗಗಳನ್ನು ಮೈಸೂರು ಸರ್ಕಾರದವರಿಗೆ ಬಿಟ್ಟುಕೊಡಬೇಕೆಂದೂ ಸಾರ್ವಭೌಮ ಸರ್ಕಾರದವರೊಡನೆ ಪತ್ರವ್ಯವಹಾರ ನಡೆಸುತ್ತಿರುವರು. ಇಷ್ಟೇ ಅಲ್ಲ, ಮೈಸೂರು ದೇಶವು ಭರತಖಂಡದ ಮಹಾರಾಜರುಗಳ ಪಾಠಶಾಲೆಯಾಗಿಯೂ ಇರುತ್ತದೆ. ಇಲ್ಲಿಗೆ ಇತರ ಸಂಸ್ಥಾನದ ರಾಜರುಗಳು ಬಂದು, ಬಾಲ್ಯದಲ್ಲಿ ಶಿಕ್ಷಣವನ್ನು ಪಡೆದು ತಮ್ಮ ಸಂಸ್ಥಾನಕ್ಕೆ ಹೋಗುತ್ತಿರುವುದು ಮೈಸೂರಿಗೆ ಒಂದು ಹೆಮ್ಮೆಯಾಗಿದೆ.

**ಪ್ರಜಾಪ್ರತಿನಿಧಿ ಸಭೆ.**—ಇದು ಈಗಿನ ರೂಪ ಪಡೆಯುವುದಕ್ಕೆ ಮೊದಲು ಸಂಸ್ಥಾನದ ಅರ್ಜಿದಾರರ ಬಂದು ದೊಡ್ಡ ಗೋಷ್ಠಿಯಂತಿದ್ದಿತು. ಶ್ರೀ ಕೃಷ್ಣರಾಜ ಒಡೆಯರವರ ಕಾಲದಲ್ಲಿ ೧೯೨೩ರಲ್ಲಿ ಇದಕ್ಕೊಂದು ರಾಜಕೀಯರೂಪು ದೊರೆತು ಕಾನೂನು ಬದ್ಧವಾದ ಸಂಸ್ಥೆಯಾಯಿತು. ಈಗ ಇದಕ್ಕೆ ಹಲವು ಹಕ್ಕುಗಳು ದೊರೆತಿವೆ. ಈ ಸಭೆಯು ರಾಜಧಾನಿಯಲ್ಲಿ ವರ್ಧಂತಿ ಮತ್ತು ದಸರಾ ಮಹೋತ್ಸವಗಳ ಕಾಲದಲ್ಲಿ ವರ್ಷಕ್ಕೆ ಎರಡು ಸಾರಿ ದಿವಾನರ ಅಧ್ಯಕ್ಷತೆಯಲ್ಲಿ ನೇರಿ ತನ್ನ ಕಾರ್ಯಕಲಾಪಗಳನ್ನು ಜರುಗಿಸುತ್ತಿದೆ. ಈ ಸಭೆಯಲ್ಲಿ ಸುಮಾರು ೬೦ಕ್ಕೆ ಮಂದಿ ಸದಸ್ಯರಿರುವರು. ಇವರ ಪೈಕಿ ಪ್ರಜೆಗಳಿಂದ ಚುನಾಯಿಸಲ್ಪಟ್ಟವರೇ ಹೆಚ್ಚು ಮಂದಿ. ಈಚೀಚೆಗೆ ಈ ಸಭೆಯಲ್ಲಿ ಸ್ತ್ರೀಯರೂ ಸದಸ್ಯರಾಗಲು ಅವಕಾಶವನ್ನು ಕಲ್ಪಿಸಿರುವರು.

**ಶಾಸನ ಸಭೆ.**—ಇದು ಮತ್ತೊಂದು ಮುಖ್ಯವಾದ ಸಂಸ್ಥೆ, ೧೯೨೩ರಲ್ಲಿ ಸ್ಥಾಪಿತವಾಯಿತು. ಇದರ ಸದಸ್ಯರು ೬೦ ಮಂದಿ. ಇವರ ಪೈಕಿ ೨೨ ಮಂದಿಯನ್ನು ಪ್ರಜೆಗಳೇ ಚುನಾಯಿಸುತ್ತಾರೆ. ಈ ಸಭೆಯು ವರ್ಷಕ್ಕೆ

ದಷ್ಟುಸಾರಿ ಬೆಂಗಳೂರಿನಲ್ಲಿ ಸೇರುತ್ತವೆ. ಪ್ರತಿಯೊಂದು ಏಥವಾದ ಸಾಮಾನುಗಳೂ ರಾಜ್ಯದಲ್ಲಿ ಆಚರಣೆಗೆ ಒರುವ್ವದಕ್ಕು ಮುಂಚೆ ಈ ಸಭೆಯಲ್ಲಿ ಸರ್ಕಿಸಲ್ಪಟ್ಟು ಸಭೆಯ ಅನುಮತಿಯನ್ನು ಪಡೆಯಬೇಜೇಕೆಂಬ ನಿಯಮವುಂಟು. ರಾಜ್ಯದ ಆಯವ್ಯಯದ ಪಟ್ಟಿಯು ಸಹ ಈ ಸಭೆಕರಿಂದ ಪರಿಶೀಸಲ್ಪಟ್ಟು ಮುಂಜೂರಾತಿಯನ್ನು ಪಡೆಯಬೇಕು. ಈ ಸಭೆಕರಿಗೆ ಸರ್ಕಾರದ ಖರ್ಚು ಬಾಬುಗಳನ್ನು ಖೋತಾ ಮಾಡುವ್ವದಕ್ಕೂ, ತರಾವ್ರಗಳನ್ನು ತಂದು ಚರ್ಚಿಸುವ್ವದಕ್ಕೂ, ಆಡಳಿತಕ್ಕು ಸಂಬಂಧಪಟ್ಟ ಪ್ರಶ್ನೆಗಳನ್ನು ಹಾಕುವ್ವದಕ್ಕೂ ಅಧಿಕಾರವುಂಟು. ಈ ಸಭೆಗಳು ಇದುವರೆಗೆ ಮಾಡಿದ ಕಾರ್ಯಕಲಾಪವನ್ನು ಶ್ರೀಮನ್ಮಹಾರಾಜರವರು ಪರಾಮರ್ಶಿಸಿ, ಈ ಸಂಸ್ಥೆಗಳ ಅಧಿಕಾರ ವ್ಯಾಪ್ತಿಯನ್ನು ಹೆಚ್ಚಿಸಿ, ೧೯೨೧ರಲ್ಲಿ "ಮೈಸೂರು ರಾಜ್ಯಾಂಗ ವ್ಯವಸ್ಥಾ ಸಮಿತಿ" ಯನ್ನು ಏರ್ಪಡಿಸಿ, ಯೊಸ ಸುಧಾರಣೆಗಳನ್ನು ಪ್ರಜೆಗಳಿಗೆ ದಯಪಾಲಿಸಿದರು. ಇವ್ರು ಇಷ್ಟರಲ್ಲೇ ಆಚರಣೆಗೆ ಒರುವ್ವದರಲ್ಲಿವೆ.

ಈ ಸಂಸ್ಥೆಯಲ್ಲದೆ, ಮ್ಯುನಿಸಿಪಾಲಿಟಿಗಳು, ಡಿಸ್ಟ್ರಿಕ್ಟ್ ಬೋರ್ಡುಗಳು, ಗ್ರಾಮ ಪಂಚಾಯಿತಿಗಳು ಆಯಾ ಊರುಗಳಿಗೆ ಅನುಗುಣವಾಗಿ ಸ್ಥಾಪಿಸಲ್ಪಟ್ಟು, ಗ್ರಾಮಸುಧಾರಣೆ, ವೈದ್ಯಸಹಾಯ, ವಿದ್ಯಾಪ್ರಚಾರ, ನೀರಾವರಿ ಸೌಕರ್ಯ, ಪ್ರಯಾಣಸೌಲಭ್ಯ ಮುಂತಾದುವ್ವುಗಳನ್ನು ಮಾಡುತ್ತಿವೆ.

# ೯ನೆಯ ಅಧ್ಯಾಯ

## ನೀರಾವರಿ ಕೆಲಸಗಳು, ವಿದ್ಯುಚ್ಛಕ್ತಿಯ ಏರ್ಪಾಡು, ವಿದ್ಯಾಪ್ರಚಾರ, ವೈದ್ಯಸಹಾಯ, ಸದಕಾರ ಸಂಸ್ಥೆಗಳು

ಮಹಾರಾಜ್ಞಿಯವರ ಪ್ರಜೆಗಳ ಪೈಕಿ ಬಹುಮಂದಿ ವ್ಯವಸಾಯದಿಂದ ಜೀವಿಸುತ್ತಾರೆ. ಆದುದರಿಂದ ವ್ಯವಸಾಯಾಭಿವೃದ್ಧಿ ಸಾಧಕವಾದ ಕೆಲಸಗಳಿಗೆ ವಿಶೇಷ ಗಮನವನ್ನು ಕೊಟ್ಟರು. ಮಹಾರಾಜರುಗಳ ಆಳಿಕೆಯಲ್ಲಿ ಸೀತಮಂಗಲ, ಮಳಲವಾಡಿ, ಜೈರಮಂಗಲ, ತಿಪ್ಪಗೊಂಡನಹಳ್ಳಿ ಮುಂತಾದ ಅನೇಕ ಭಾರಿಭಾರಿ ನೀರಾವರಿ ಕೆಲಸಗಳನ್ನು ಮಾಡಿಸಿದರು. ಇವ್ರುಗಳಲ್ಲಿ

ಧರತೆಯಂತಹದಲ್ಲೆಲ್ಲಾ ಹೊಡಲಸೆಯ ಕೃತಕ ಸರೋವರಗಳಿಂದಾಗಿ ವ್ಯಾಪ್ತಿ ಗೊಂಡ ಕೃಷ್ಣರಾಜ ನಾಗರಸೇ ಸುಖ್ಯವಾಯಿತು. ಬರಕ್ಕು, ಬಿದಕ್ಕೆ ಸೇರಿದ ಕೆಲಸಗಳಿಗೂ ಸುಮಾರು ೫-೬ ಕೋಟಿ ರೂಪಾಯಿಗಳು ವಿನಿಯೋಗವಾಗಿರುವುದು. ಈ ಜಲಾಶಯದ ಸುತ್ತಿಯು ೧೫೦ ಅಡಿ ಎತ್ತರವಿದೆ. ಜಲಾಶಯದಲ್ಲಿ ನಿಲ್ಲಿ ಅಡಿಗಳಷ್ಟು ಎತ್ತರ ನೀರು ನಿಲ್ಲುತ್ತದೆ. ಇದರಿಂದ ಲಕ್ಷಾಂತರ ಎಕರೆ ಒಂಬರು ಜಮೀನುಗಳು ತರಿ ನಾಗುವಂಗೆ ಬಹಳ ಅನುಕೂಲ ವಾಯಿತು. ಅನೇಕ ನಾಲೆಗಳು ದೇಶದಲ್ಲೆಲ್ಲಾ ಹರಡಿ ನಾನಿರಾರು ಹಳ್ಳಿಗಳ ಕೈತರಿಗೆ ಅನುಕೂಲವಾಯಿತು. ಪಂಗಾಮಗಳಲ್ಲಿ ಫಲವತ್ತಾದ ಬೇಡಾಗಿ ಒತ್ತಿದ ಗದ್ದೆಗಳಿಂದಲೂ ತೆಂಗಿನ ಮರಗಳಿಂದಲೂ ಬಾಳೇ ತೋಟ ಗಳಿಂದಲೂ ಕಬ್ಬಿನ ಗದ್ದೆಗಳಿಂದಲೂ ಕೋಳಿಸುತ್ತಿರುವುವು. ಅಲ್ಲಲ್ಲಿ ಸುಂದರಗಳಾದ ನಗರಗಳೇರ್ಪಟ್ಟು ಆ ಜನರ ಆಹಾರಪೋಷಾಕಗಳು ಬಹಳ ಪಟ್ಟಿಗೆ ಬದಲಾಯಿಸಿರುವುವು. ಇದಕ್ಕೆ ಮುಂಚೆಯೇ ನಿದರ್ಶನ.

ಹೇಳಿ ಹೇಳಿದವುಗಳಲ್ಲದೆ, ಅನೇಕ ಕೆರೆಗಳನ್ನೂ ನಾಲಗಳನ್ನೂ ಅಭಿವೃದ್ಧಿಗೆ ತರುವುದರಲ್ಲಿ ಮಹಾರಾಜರವರ ಸರ್ಕಾರದವರು ಎಷ್ಟು ಪಟ್ಟಿನ ಪರಿಶ್ರಮವನ್ನು ಮಾಡಿದ್ದಾರೆಂಬುದನ್ನು ಹೇಳಲು ಆಗದು. ಮುಖ್ಯವಾಗಿ ಹುಲಿಕೆರೆ ಬೆಸಲಾ (ಸುರಂಗ) ಯಿಂದ ಕೂಡಿರುವ ಇರ್ವಿನ್ ನಾಲೆಯೊಂದಕ್ಕೇ ಸುಮಾರು ಎರಡೂಕೋಟಿ ರೂಪಾಯಿಗಳಷ್ಟು ಖರ್ಚಾಗಿ ಭಾರತದ ಅತ್ಯಂತ ಜಾಣರುಳ್ಳವಾದ ಇಂಜಿನಿಯರಿ ಕಾಮಗಾರಿಗಳಲ್ಲೊಂದೆಂಬುದಾಗಿ ಪ್ರಸಿದ್ಧವಾಗಿದೆ. ಪರಾಕುರ್ಣಸಮುದ್ರಯ ಬಳಿ ಈಚೆಗೆ ಜಲಾಶಯವೊಂದನ್ನು ನಿರ್ಮಿಸಿದೆ. ಈ ಜಲಾಶಯದ ಅಸ್ತಿಭಾರ ಶಿಲಾನ್ಯಾಸವನ್ನು ಮಹಾರಾಜರವರೇ ತಮ್ಮ ಅಮೃತ ಹಸ್ತದಿಂದ ಪೂರೈಸಿದರು. ತಮ್ಮ ಪ್ರಜೆಗಳ ಪ್ರತಿಕ್ಷಣದಲ್ಲಿ ಅವರಿಗಿದ್ದ ಆಸಕ್ತಿಗೆ ಇದೂ ಒಂದು ನಿದರ್ಶನವಾಗಿದೆ. ಇವುಗಳಲ್ಲದೆ ಸ್ವತಃ ಪರ್ವತ, ಗ್ರಾಮಾಂತರ ಪ್ರದೇಶಗಳಲ್ಲಿ ಕಾಯಿಯುವ ಸೀರಿನ ಭಾಗಗಳನ್ನೆಲ್ಲಾ ಪರಿಶೀಲಿಸಲು ಏರ್ಪಾಡಾಗಿ ಹಣವನ್ನು ಖರ್ಚುಮಾಡುತ್ತಿರುವರು. ಮುಖ್ಯವಾಗಿ ಜನರಿಂದ ಪರಿಪೂರ್ಣವನ್ನು ಬೆಳೆಗೆ ಕೊಡಬೇಕೆಂಬುದೇ ಅವರ ತತ್ವ.

**ವಿದ್ಯುಚ್ಛಕ್ತಿಯ ವಿಸ್ತಾರ.**—೧೯೦೬ರಲ್ಲಿ ಮೈಸೂರು ಸರ್ಕಾರದವರು ಕೆಆರ್ ಸಮುದ್ರದ ಬಳಿ ಕಣಿವೆಗೆ ಮಹಮ್ಮದನ ಕಾವೇರಿ ಬಲವಾಹ

ಂಡ ವಿದ್ಯುಚ್ಛಕ್ತಿಯನ್ನು ಪಡೆದು ದೇಶದ ಸಂಪತ್ತನ್ನು ಹೆಚ್ಚಿಸುವ ಏರ್ಪಾಡು ಮಾಡಿದರು. ಈಚೆಗೆ ಗೇರುಸೊಪ್ಪೆ, ಮಂಗಳೂರು ಮತ್ತು ಶರಾವತಿ ಗಳಿಂದಲೂ ವಿದ್ಯುಚ್ಛಕ್ತಿಯನ್ನು ತಯಾರಿಸುವ ಪ್ರಯತ್ನವು ನಡೆಯುತ್ತಿದೆ.



ಶ್ರೀ ಚಾಮರಾಜೇಂದ್ರ ಒಡೆಯರವರ ಶ್ವೇತಶಿಲಾ ವಿಗ್ರಹ

ಗುತಕಂಡದಲ್ಲಿ ಬಲಪಾತದಿಂದ ವಿದ್ಯುಚ್ಛಕ್ತಿಯನ್ನು ಪಡೆಯಲಕ್ಕೆ ಮೊದಲು ಮಾಡಿದ ಸಂಸ್ಥಾನವು ಮೈಸೂರೇ. ಈ ವಿದ್ಯುಚ್ಛಕ್ತಿಯನ್ನು ಕೋಲಾರದ ಚಿನ್ನದ ಗಣಿಗಳಿಗೂ, ಸಂಸ್ಥಾನದ ನಾನಾ ಕಾರ್ಖಾನೆಗಳಿಗೂ, ದೊಡ್ಡ ದೊಡ್ಡ ಪಟ್ಟಣ ಮತ್ತು ಹಳ್ಳಿಗಳಲ್ಲಿ ದೀಪಗಳನ್ನು ಉರಿಸುವುದಕ್ಕೂ.

ವ್ಯವಸಾಯಕ್ಕೂ ಉಪಯೋಗಿಸುತ್ತಿದ್ದಾರೆ. ಬೆಂಗಳೂರು, ಮೈಸೂರು ನಗರಗಳಲ್ಲದೆ, ೧೯ ಪಟ್ಟಣಗಳೂ ಮತ್ತು ಗ್ರಾಮಗಳು ವಿದ್ಯುದ್ದೀಪಗಳಿಂದ ಅಲಂಕೃತವಾಗಿವೆ. ಇದರಿಂದ ಪ್ರತಿ ವರ್ಷವೂ ಸಂಸ್ಥಾನದ ಬೊಕ್ಕಸಕ್ಕೆ ೫೦ ಲಕ್ಷ ರೂಪಾಯಿ ಸೇರುತ್ತಿದೆ. ಈ ಸೀಮೆಯಲ್ಲಿರುವಷ್ಟು ವಿದ್ಯುಚ್ಛಕ್ತಿಯ ಪ್ರಚಾರವು ಭರತಖಂಡದಲ್ಲಿ ಇನ್ನೆಲ್ಲಿಯೂ ಇಲ್ಲ. ವಿದ್ಯುಚ್ಛಕ್ತಿಯು ಇಡೀ ದೇಶವನ್ನೇ ಬೆಳಗುವಂತೆ ಮಾಡಿ ಕೈಗಾರಿಕೆಯು ಅನೇಕ ಉದ್ಯಮಗಳಿಗೆ ಅನುಕೂಲವಾಗಿದೆ.

**ವಿದ್ಯಾಪ್ರಚಾರ.**—ಶ್ರೀಮನ್ಮಹಾರಾಜರವರು ದೇಶದ ಸಂಪತ್ತಿಗೆ ವಿದ್ಯೆಯೇ ಮೂಲವೆಂದು ತಿಳಿದು, ತಮ್ಮ ಪ್ರಜೆಗಳ ಜ್ಞಾನಾರ್ಜನೆಗಾಗಿ ಸಕಲವಿಧವಾದ ಪಾಠಶಾಲೆಗಳನ್ನೂ ಸ್ಥಾಪಿಸಿದರು. ಪಾಠಶಾಲೆಗಳ ಸಂಖ್ಯೆಯನ್ನು ಬಹುವಾಗಿ ಹೆಚ್ಚಿಸಿದರು. ವಿದ್ಯಾಭ್ಯಾಸಕ್ಕೆ ಸಲಯಾದ ಅನುಕೂಲಗಳು ಪ್ರತಿಯೊಂದು ಗ್ರಾಮಕ್ಕೂ ದೊರೆಯುವಂತೆ ಮಾಡಿದರು. ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸವು ಉಚಿತವಾಗಿ ನಡೆಯುವಂತೆ ಮಾಡಲು ಅದಕ್ಕಾಗಿ ಕೊಡಬೇಕಾಗಿದ್ದ ಶುಲ್ಕವನ್ನು ತೆಗೆದುಹಾಕಿದರು. ಮಕ್ಕಳು ಹೆಚ್ಚು ಉತ್ಸಾಹದಿಂದ ವಿದ್ಯಾಭ್ಯಾಸಮಾಡಿ ಮುಂದೆ ಬರಲು ಹಲವು ಆಕರ್ಷಕ ಸಾಮಗ್ರಿಗಳನ್ನು ಕಲ್ಪಿಸಿದರು. ವ್ಯವಸಾಯವನ್ನು ಬೋಧಿಸುವ, ಕೈಗಾರಿಕಗಳನ್ನು ಕಲಿಸುವ, ವೈದ್ಯವನ್ನು ತಿಳಿಸುವ ಪಾಠಶಾಲೆಗಳು ಮುಂತಾದುವೆಲ್ಲ ಸ್ಥಾಪಿತವಾದುವು. ಸಂಸ್ಕೃತ ವಿದ್ಯಾಭ್ಯಾಸಕ್ಕಾಗಿ ಮೈಸೂರು, ಬೆಂಗಳೂರು, ಮೇಲ್ಕೋಟೆ ಮುಂತಾದ ಕಡೆಗಳಲ್ಲಿ ಸಂಸ್ಕೃತ ಕಾಲೇಜುಗಳು ನಿರ್ಮಾಣಗೊಂಡಿವೆ. ಸ್ತ್ರೀ ವಿದ್ಯಾಭ್ಯಾಸಕ್ಕೆ ಹೆಚ್ಚು ಪ್ರೋತ್ಸಾಹ ಕೊಡಲ್ಪಟ್ಟಿದೆ. ಇದಕ್ಕೆ ಮಹಾರಾಣಿಯವರ ಹೆಸರಿನಲ್ಲಿರುವ ಬೆಂಗಳೂರು ಮೈಸೂರು ಕಾಲೇಜುಗಳೇ ನಿದರ್ಶನ. ಮೈಸೂರು ತರುಣರು ದೇಶವಿಂದಾಚೆ ಹೋಗುವ ಸಂಕಷ್ಟವನ್ನು ತಪ್ಪಿಸಿ ಮೈಸೂರು ವಿಶ್ವವಿದ್ಯಾನಿಲಯವನ್ನು ೧೯೧೭ರಲ್ಲಿ ಸ್ಥಾಪಿಸಿದರು. ಇದನ್ನು ಸ್ಥಾಪಿಸುವಾಗ, "ನಮ್ಮ ರಾಜ್ಯದ ಮಂತ್ರಿಪ್ರವರ್ಯರಾದ ಶ್ರೀಯುತ ಸರ್ ವಿಶ್ವೇಶ್ವರಯ್ಯನವರಿಗೆ ನಾವೂ ನಮ್ಮ ಪ್ರಜೆಗಳೂ ಬಹಳ ಮಟ್ಟಿಗೆ ಕೃತಜ್ಞರಾಗಿರುವೆವೆಂಬುದನ್ನು ಈ ಮಹಾ ಸಭೆಯಲ್ಲಿ ತಿಳಿಸಲು ನಮ್ಮ ಮನಸ್ಸು ಹಾತೊರೆಯುತ್ತಿದೆ. ಹಿಂದೆ ನಮ್ಮೆಲ್ಲರಿಗೂ ಸ್ವಪ್ನವಾಗಿದ್ದು



ಮಾಣೇವಿಲಾಸ ಸನಿ ಧಾನದ ಜ್ಞಾ ಪಕಾರ್ಥವಾಗಿ ಕಟ್ಟಿಸಿದ ಹೆರಿಗೆ ಆಸ್ಪತ್ರೆ, ಬೆಂಗಳೂರು

ಮೈಸೂರು ವಿಶ್ವವಿದ್ಯಾನಿಲಯವು ಈ ದಿನ ನಮ್ಮೆದುರಿಗೆ ಸಾಕಾರವಾಗಿ ನಿಂತಿರುವುದಕ್ಕೆ ಸರ್ ವಿಶ್ವೇಶ್ವರಯ್ಯನವರ ವೇಲಾಭವಾನ, ಉತ್ಸಾಹ, ಪ್ರಾಮಾಣಿಕತೆಗಳೇ ಮುಖ್ಯ ಕಾರಣ. ಈ ವಿಶ್ವವಿದ್ಯಾನಿಲಯವು ಸೂರ್ತಿಯಿಂದ ಮತ್ತು ಸಂಬಂಧದಲ್ಲಿ ಎಲ್ಲರಿಗಿಂತಲೂ ಮೇಲಾಗಿ ಇವರ ಹೆಸರೇ ಅಜರಾಮರವಾಗಿ ನಿಲ್ಲುವಂತಾಗಿ ಬೆಳಗುವುದು" ಎಂದು ಅಪ್ಪಣೆ ಕೊಟ್ಟಿರುವರು. ಇವಲ್ಲದೆ ಕಾಲಕ್ಕೆ ವಿದ್ಯಾಸಲಹೆಯುಳ್ಳ ಛಾನ್ಸಲರಾಗಿಯೂ ಇದ್ದರು.

ಮೈ|| ತಾತಾಯವರ "ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್" ಎಂಬ ವಿಜ್ಞಾನ ಶಾಸ್ತ್ರಾನ್ವೇಷಣ ಶಾಲೆಯೂ, ರಜತ ಮಹೋತ್ಸವದ ಭ್ಯಾಸಕಾರ್ಥವಾಗಿ ಕಟ್ಟಿರುವ "ಟಿಕ್ನಾಲಾಜಿಕಲ್ ಇನ್‌ಸ್ಟಿಟ್ಯೂಟ್" ಎಂಬ ಕಲಾಶಾಲೆಯೂ ಬೆಂಗಳೂರಿನಲ್ಲಿ ಇರುವುವು. ಅನಾಧಾರಣ ದೇಶ ಭಕ್ತರಾದ ಜಮ್‌ಷೆಡ್ ನಸರವಾಂಜಿ ತಾತಾಯವರು "ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್" ಎಂಬುದನ್ನು ಸ್ಥಾಪಿಸುವಾಗ, ಸ್ವಸಹಾಯದೇ ಮೊದಲಾದವರಲ್ಲಿ ತಾತಾಯವರು ತೋರುವ ಅಪೂರ್ವವಾದ ಈ ಧೈರ್ಯವನ್ನು ಭಾರತದ ಏನ್ನಾವ ದೇಶದಲ್ಲಾದರೂ ಮಾತಾಡಬಹುದೆಂದು ಪತಿಹಾಕಿದರು. ಆದರೆ ಮೈ|| ತಾತಾರವರು ನಮ್ಮ ಮಹಾರಾಜರವರ ಮೇಲಿದ್ದ ಗೌರವವಿಶ್ವಾಸಗಳಿಂದಲೂ, ಮಹಾನ್ವಾಮಿಯವರು ಜೀಕಾದ ಎಲ್ಲಾ ಸೌಕರ್ಯಗಳನ್ನೊದಗಿಸಲು ಒಪ್ಪಿದುದರಿಂದಲೂ ಇದು ಬೆಂಗಳೂರಿನಲ್ಲಿಯೇ ಸ್ಥಾಪಿತವಾಯಿತು. ನಮ್ಮ ಸರ್ಕಾರದವರು ಅದಕ್ಕೆ ಜೀಕಾದ ಸ್ಥಳವನ್ನೂ ಕಟ್ಟಡಕ್ಕೆ ಹಣವನ್ನೂ ಕೊಟ್ಟುದಲ್ಲದೆ, ಸ್ರತಿ ವರ್ಷವೂ ಎಂಭತ್ತು ಸಾವಿರ ರೂಪಾಯಿ ಗ್ರಾಂಟನ್ನು ಕೊಡುತ್ತಿರುವರು. ಇಷ್ಟು ಮಾತ್ರವಲ್ಲದೆ, ವ್ಯವಸಾಯಾಭಿವೃದ್ಧಿಗಾಗಿ ಮಹಾನ್ವಾಮಿಯವರ ಸರ್ಕಾರದವರು ಬಂದು ಶಾಲೆಯನ್ನೇ ಏರ್ಪಡಿಸಿರುವರು. ಈ ಶಾಲೆಯಿಂದು ಬೆಲ್ಲದಲ್ಲಿ ಪರೀಕ್ಷಾ ಕ್ಷೇತ್ರಗಳನ್ನಿಟ್ಟು, ವ್ಯವಸಾಯದಲ್ಲಿ ತಮಗುಂಟಾದ ಅನುಭವಗಳನ್ನು ದೇಶದಲ್ಲೆಲ್ಲಾ ಹರಡುತ್ತಿರುವರು. ಇದಕ್ಕೆ ಬೆಂಗಳೂರಿನಲ್ಲಿ ಇರುವ ಪಬ್ಲಿಕ್ ವ್ಯವಸಾಯ ವಾರಶಾಲೆಯೂ ಪರೀಕ್ಷಾ ಕ್ಷೇತ್ರವೂ ವಿಶೇಷವಾಗಿವೆ. ಸಂಸ್ಥಾನದ ದೊಡ್ಡ ಅಧಿಕಾರಗಳಿಗೆ ಮೇಧಾವಿಗಳಾದ ಯೌವನಸ್ಥರನ್ನು ಆರಿಸಿಕೊಳ್ಳುವ ನಿಮಿತ್ತ ಅವಶ್ಯಕವಾದಾಗಲೆಲ್ಲಾ ಮೈಸೂರು ಎಲ್ಲಾ ಸರ್ವಿಸ್ ಪರೀಕ್ಷೆಯನ್ನು ನಡೆಯಿಸುತ್ತಾರೆ. ಭಾರತದಲ್ಲಿ ನಡೆ

ಯಲು ನಾಡ್ಗುಬ್ಲದಿರುವ ಬ್ರಾಹ್ಮಣೇತ್ತರ ಜಾತಿಗಳವರ್ಗಳಿಗೆ ಉಪಕ್ಷಿಸುವ ತರುಣ ವಿದ್ಯಾರ್ಥಿವೇತನಗಳನ್ನು ಕೊಟ್ಟು ಇಂಗ್ಲೆಂಡು, ಅಮೆರಿಕಾ, ಜಪಾನ್ ಮುಂತಾದ ದೇಶಗಳಿಗೂ ಕಳುಹಿಸುತ್ತಿರುವರು. ಕುರುಡು, ಕಿವುಡು ಮತ್ತು ಮೂಕರಿಗಾಗಿಯೇ ಬೇರೆ ಶಾಶ್ವತಶಾಲೆಗಳನ್ನು ನಡೆಸುವುದು ಸ್ವಜನಗಳ ವಿದ್ಯಾಭ್ಯಾಸಕ್ಕಾಗಿ ವರ್ಷವೊಂದಕ್ಕೆ ೭೦ ಲಕ್ಷ ರೂಪಾಯಿಗಳಷ್ಟು ಹಣವನ್ನು ಖರ್ಚುಮಾಡುತ್ತಿರುವುದು.



ಬಂಗಳೂರು ವಿಕ್ಟೋರಿಯಾ ಆಸ್ಪತ್ರೆ

**ವೈದ್ಯಸಹಾಯ.**—ಶ್ರೀಮನ್ಮಹಾರಾಜರವರು ಪ್ರಜೆಗಳಿಗೆ ರೋಗ ಬಂದಾಗ ಬಾರದಂತೆ ಅಟ್ಟಿಕೆ ತೆಗೆದುಕೊಳ್ಳಲು ಅನೇಕ ಆಸ್ಪತ್ರೆಗಳನ್ನು ಸ್ಥಾಪಿಸಿದ್ದಾರೆ. ಇವು ದೇಶದ ನಾನಾ ಭಾಗಗಳಲ್ಲಿ ಸುಮಾರು ೨೦ ಕ್ಕಿಂತ ಹೆಚ್ಚಾಗಿವೆ. ದೊಡ್ಡದೊಡ್ಡ ನಗರಗಳಲ್ಲಿ ಭಾರಿಭಾರಿ ಆಸ್ಪತ್ರೆಗಳಿವೆ. ಇವುಗಳಲ್ಲಿ ಮುಖ್ಯವಾದುವು ಬೆಂಗಳೂರಿನಲ್ಲಿರುವ ವಿಕ್ಟೋರಿಯ ಆಸ್ಪತ್ರೆ, ವಾಣಿವಿಲಾಸ ಪುರಗ ಆಸ್ಪತ್ರೆ, ಎಂಟೊ ಕಣ್ಣಾಸ್ಪತ್ರೆ, ಮಿಷನ್ ಪೇಟೆಗಳ (ಹುಚ್ಚರ) ಆಸ್ಪತ್ರೆ, ಮೈಸೂರಿನಲ್ಲಿರುವ ಕೃಷ್ಣರಾಜೇಂ ಆಸ್ಪತ್ರೆ, ಚಾಮರಾಜಂಬಾ ಪೆಟರ್ನಿಟಿ ಆಸ್ಪತ್ರೆ, ಕೃಷ್ಣರಾಜೇಂದ್ರ

ಕ್ಷಯರೋಗದ ಆಸ್ಪತ್ರೆ, ಕಿವಿಮೂಗ್ಗಳಿಯಲ್ಲಿರುವ ಮೆಗಾಸ್ಪೆ ಆಸ್ಪತ್ರೆ ಮುಂತಾದುವುಗಳು. ಕೆಲವು ಆಸ್ಪತ್ರೆಗಳಲ್ಲಿ ಕಣ್ಣು, ಗಂಟಲು, ಮೂಗು, ಕಿವಿಗಳ ರೋಗಗಳಿಗಾಗಿಯೇ ಪ್ರತ್ಯೇಕ ಶಾಖೆಗಳನ್ನೇರ್ಪಡಿಸಿರುವುವು. ಇವು ಗಳಲ್ಲದೆ, ಪ್ರತಿ ತಾಲ್ಲೂಕಿನಲ್ಲಿಯೂ ಪ್ರತಿ ಪೋಲೀಸಿಯಲ್ಲಿಯೂ ವೈದ್ಯಶಾಲೆ ಗಳಿವೆ; ರೈಲು ಲೋಕಲ್‌ಫಂಡ್ ದಿಸ್ಪೆನ್ಸರಿಗಳೂ ಆಯುರ್ವೇದಿಕ ಮತ್ತು ಯೂನಾನಿ ಆಸ್ಪತ್ರೆಗಳೂ ಇವೆ. ಸಾಂಕ್ರಾಮಿಕ ಖಾಡ್ಗಗಳು ಬಾರದಂತೆ ಇನಾಕ್ಯುಲೇಷನ್ ಮಾಡುವವರಲ್ಲದೆ, ದೇಶಸಂಚಾರಿಗಳು ಏರ್ಪಡಿಸಿರುವರು. ಆಸ್ಪತ್ರೆಗಳಿಗಾಗಿ ಪ್ರತಿವರ್ಷವೂ ಹತ್ತೊಂಬತ್ತುವರೆ ಲಕ್ಷ ರೂಪಾಯಿ ಗಳನ್ನು ವೆಚ್ಚಮಾಡುತ್ತಿದ್ದಾರೆ. ಜನರಿಗೆ ವೈದ್ಯಸಹಾಯವನ್ನೊದಗಿಸುವ ವಿಷಯದಲ್ಲಿ ಶ್ರೀಮಂತರಾದ ಪ್ರಜೆಗಳು ತಾವಾಗಿಯೇ ಮುಂದೆ ಬಂದು ವೈದ್ಯಶಾಲೆಗಳ ನಿರ್ಮಾಣಕ್ಕಾಗಿ ಸುಮಾರು ೨೫ ಲಕ್ಷ ರೂಪಾಯಿ ಗಳನ್ನು ದಾನಮಾಡಿರುತ್ತಾರೆ. ಇದಕ್ಕೆಲ್ಲ ಶ್ರೀಮನ್ಮಹಾರಾಜರವರ ಮತ್ತು ಅವರ ಮಂತ್ರಿಗಳಾದ ಸರ್ ವಿಚಾರ್‌ರವರ ಘನವಾದ ಪ್ರೋತ್ಸಾಹವೇ ಕಾರಣ.

**ಸಹಕಾರ ಸಂಘಗಳು.**—ರೈತಾಪಿ ಜನರಿಗೂ ಬಡವರಿಗೂ ಹಣ ಕಾಸುಗಳನ್ನು ಸುಲಭ ಬಡ್ಡಿಯಲ್ಲಿ ಸಾಲವಾಗಿ ಕೊಟ್ಟು ಸುಲಭವಾದ ಕಂತುಗಳಲ್ಲಿ ವಸೂಲಾಮಾಡಲು ಸಹಕಾರ ಸಂಘಗಳನ್ನೇರ್ಪಡಿಸಿದ್ದಾರೆ. ಈಗ ಈ ಸಂಸ್ಥಾನದಲ್ಲಿ ಒಂದೂ ಸಾವಿರಕ್ಕಿಂತಲೂ ಮೇಲ್ಪಟ್ಟು ಸಹಕಾರ ಸಂಘಗಳಿವೆ. ಇವುಗಳಲ್ಲಿ ವರ್ಷಕ್ಕೆ ಎರಡು ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗಿ ವ್ಯವಹಾರವು ನಡೆಯುತ್ತಿದೆ. ಮೈಸೂರು ಬ್ಯಾಂಕೆಂಬ ಖಾಸಗೀ ಬ್ಯಾಂಕೂ ಮಹಾಸ್ವಾಮಿಯವರ ಕಾಲದಲ್ಲೇ ಪ್ರಾರಂಭವಾಗಿ ಒಳ್ಳೆಯ ವಿಖ್ಯಾತಿ ಹೊಂದಿದೆ. ಇವುಗಳಲ್ಲದೆ, ಜಪಾನು ಅಮೆರಿಕಾನದ ಬ್ಯಾಂಕು ಗಳೂ "ಚೇಂಬರ್ ಆಫ್ ಕಾಮರ್ಸ್" ಎಂಬ ವರ್ತಕಸಂಘವೂ ಸಹ ಏರ್ಪಟ್ಟಿವೆ.

# ೧೦ನೆಯ ಅಧ್ಯಾಯ

## ನಗರನಿರ್ಮಾಣಕಾರ್ಯ, ಕೈಗಾರಿಕೆ ಮತ್ತು ವಾಣಿಜ್ಯ, ವ್ಯಯಾಣಾಲಬ್ಧ

ಈ ಪ್ರಭುಗಳ ಆಳಿಕೆಯಲ್ಲಿ ಮೈಸೂರು ದೇಶವು ಬಲಾತಿಶಯ ನಿರ್ಮಾಣ ಕಾರ್ಯಗಳಲ್ಲಿ ಜಗತ್ತನ್ನು ಮೆಚ್ಚಿಸಿ ಕೀರ್ತಿಪಡೆದಂತೆ ನಗರನಿರ್ಮಾಣ ಕಾರ್ಯಗಳಲ್ಲಿಯೂ ಅದ್ಭುತವಾದ ಕೀರ್ತಿಯನ್ನು ಪಡೆದಿದೆ. ಹೊತನ ನಿರ್ಮಾಣಗಳಾದ ಉಷಾನಗರಗಳಲ್ಲಿ ಸುಂದರವಾದ ಸೌಧಗಳೂ, ಸಾಲು ಮರಗಳಿಂದ ರಂಜಿಸುವ ವಿಶಾಲವಾದ ಬೀದಿಗಳೂ, ಚಿತ್ತಾಪಹರಿಸುವ ಚೌಕಗಳೂ, ಕುಡಿಯುವ ನೀರಿನ ಕೊಳಾಯಿಗಳೂ, ವಿದ್ಯುಚ್ಛಕ್ತಿಯ ದೀಪಗಳೂ ಸೇರಿ ಮೈಸೂರಿಗೆ "ಭರತಖಂಡದ ಉಷಾನಗರಗಳ ನಗರ" ಎಂಬ ಕೀರ್ತಿಯನ್ನು ಗಳಿಸಿಕೊಟ್ಟಿವೆ. ಮಹಾಸ್ವಾಮಿಯವರ ಕಾಲದಲ್ಲಿ ಕೆಲವೆಯಲ್ಲಿದ್ದ ಮನೆಗಳನ್ನೆಲ್ಲ ತೆಗೆಯಲಾಯಿತು. ಅನೇಕ ಎಕ್ಸ್‌ಟೆನ್ಷನ್‌ಗಳು ಹೊಸದಾಗಿ ನಿರ್ಮಿತವಾದುವು. ಅವುಗಳಲ್ಲಿ ಚಾಮರಾಜಪುರ, ಕೃಷ್ಣಮೂರ್ತಿಪುರ, ಚಾಮುಂಡಿ ಎಕ್ಸ್‌ಟೆನ್ಷನ್, ಈದಿಗ ಎಕ್ಸ್‌ಟೆನ್ಷನ್, ನರಸಿಂಹರಾಜ ಮೊಹಲ್ಲಾ ಎಕ್ಸ್‌ಟೆನ್ಷನ್, ವಾಣಿವಿಲಾಸ ಮೊಹಲ್ಲಾ ಎಕ್ಸ್‌ಟೆನ್ಷನ್‌ಗಳೇ ಮುಖ್ಯವಾದುವು.

ಮಹಾಸ್ವಾಮಿಯವರ ಕಾಲದಲ್ಲಿ ಕಟ್ಟಿದ ಹೊಸ ಅರಮನೆಯೂ, ಲಲಿತಮಹಲೂ, ಹಾರ್ಡಿಂಜ್ ಸರ್ಕಲಿನ ವಿದ್ಯುಚ್ಛಕ್ತಿ ಜಲಯಂತ್ರವೂ, ಟೌನ್‌ಹಾಲಿನ ಮೈದಾನದಲ್ಲಿ ರಾಜಿಸುವ ಶ್ರೀ ಚಾಮರಾಜೇಂದ್ರರ ಶ್ವೇತಶಿಲಾ ವಿಗ್ರಹವೂ, ಕೃಷ್ಣರಾಜ ಸಾಗರದಲ್ಲಿ ನಾನಾವಿಧ ಬಣ್ಣಗಳ ಕಾರಂಜಿಗಳಿಂದ ರಂಜಿಸುವ ಬೃಂದಾವನವೆಂಬ ತೋಟವೂ ರಮಣೀಯತೆಯಲ್ಲೂ ಶಿಲ್ಪಚಾತುರ್ಯದಲ್ಲೂ ಜನರನ್ನು ಬೆರಗುಮಾಡುತ್ತಿರುತ್ತವೆ. ಇಂತಹ ಉದ್ಯಾನವು ಭರತಖಂಡದಲ್ಲೆಲ್ಲೂ ಇಲ್ಲ. ಆಕಾಶದಲ್ಲಿ ಮಿರುಗುವ ತಾರೆಗಳನ್ನೂ ಉಷಾವನದಲ್ಲಿ ಸಂಜೆಯ ಮುಸುಕಿನಲ್ಲಿ ಹಾರಾಡುವ ಮಿಂಚುಹುಳುಗಳ ಸೊಗಸನ್ನೂ ಬೂದುಬಣ್ಣದ ಕಾಡುಪಾರಿವಾಳಗಳ ಕೂಜನವನ್ನೂ ಬುಲ್ಬುಲ್‌ನದಿಂದ ಹಾಡುವ ಕೋಗಿಲೆಗಳ ಕುಹೂ ಹಾಡನ್ನೂ ಕೇಳಿ ಆನಂದಪಡೆಯದವರೇ ಇಲ್ಲ. ಇವುಗಳೆಲ್ಲ ರಾತ್ರಿಕಾಲದಲ್ಲಿ ವಿದ್ಯುದ್ದೀಪಗಳಿಂದಲೇ ಬೆಳಗುತ್ತಿರುತ್ತವೆ. ಕೆಂಪುತಾವರೆಯಂತಿರುವ ಗುಲಾಬುರಂಗಿನ

ಲತಾಪುಷ್ಪಗಳನ್ನೂ ತಾರೆಯಂತೆ ಶುಭ್ರವಾದ ಜಾಜಿಯಹೂವಿನ ಪರಿಮಳ ವನ್ನೂ, ಪಚ್ಚೆ ಹಾಸಿದಂತಿರುವ ಹಸರು ಬಣ್ಣದ ಮೈದಾನವನ್ನೂ, ಸೊಂಪಾಗಿ ಬೆಳೆದ ವೃಕ್ಷರಾಜಿಗಳ ಸೊಗಸನ್ನೂ ನೋಡಿದವರು ಯಾರೂ ಸ್ಮರಿಸಿಯಿರರು. ಈಚಲ ಕೆಲವು ವರ್ಷಗಳಲ್ಲಿ ಈ ನಗರವು ಗುರುತು ಸಹ ಸಿಕ್ಕದಷ್ಟು ಬದಲಾಯಿಸಿದೆ. ಈ ನಗರವನ್ನು ಇಷ್ಟುಮಟ್ಟಿಗೆ ತರಲು



ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆ

ಮಹಾಸ್ವಾಮಿಯವರು ಪಟ್ಟಿರುವ ಶ್ರಮವು ಅಷ್ಟಿಷ್ಟಲ್ಲ. ಮೈಸೂರಿನಲ್ಲಿ ರುವ ಮೃಗಾಲಯವೂ ಬಹಳ ಹೆಸರುವಾಸಿಗೊಂಡಿದೆ.

ಇದಲ್ಲದೆ, ಕಲ್ಯಾಣಪಟ್ಟಣವೆಂಬುದಾಗಿ ಖ್ಯಾತಿಗೊಂಡು ಸಂಸ್ಥಾನದ ರುಂಪ್ಲುಪಟ್ಟಣವೆನಿಸಿದ ಬೆಂಗಳೂರು ನಗರವು ಸಹ ಅನೇಕ ಐಷಾರಾಮ ಸೌಕರ್ಯಗಳಿಂದ ಬಂದಕ್ಕೆ ಹತ್ತರಷ್ಟು ವಿಸ್ತಾರವಾಯಿತು. ಇವುಗಳಲ್ಲಿ ಗುಲೇಪುರ, ಬಸವನಗುಡಿ, ಚಾಮರಾಜಪುರ, ಏಕ್ಟೇಶ್ವರಪುರ, ಶೇಷಾದ್ರಿಪುರ, ಮಲ್ಲೇಶ್ವರ ಮೊದಲಾದುವುಗಳೇ ಮುಖ್ಯವಾದುವು. ಈ ನಗರದ ಅಭಿವೃದ್ಧಿಯು ಮುಂದಿನ ತಲೆಮಾರಿನವರಿಗೆ ಮಹಾಸ್ವಾಮಿಯವರು ಅನುಗ್ರ

ಹಿಸಿದ ಪ್ರಸಾದವೆಂದೇ ಹೇಳಬಹುದಾಗಿದೆ. ಈ ಬೆಂಗಳೂರು ಪಟ್ಟಣವು ದಕ್ಷಿಣ ದೇಶದಲ್ಲಿ ಪ್ರಸಿದ್ಧವಾದ ವಾಣಿಜ್ಯಕೇಂದ್ರವಾಗಿದೆ. ಇಲ್ಲಿಯೇ ಸಂಸ್ಥಾನದ ಮುಖ್ಯ ಕಛೇರಿಗಳೂ, ದಿವಾನರ ಆಫೀಸು, ಹೈಕೋರ್ಟು, ಅರಾತಕಛೇರಿ, ಅನೇಕ ಉತ್ತಮ ಕಾಲೇಜುಗಳೂ, ಶ್ರೀಮನ್ಮಹಾರಾಜರವರ ಸುಂದರವಾದ ಅರಮನೆಯೂ, ಲಾಲ್‌ಬಾಗ್ ಎಂಬ ಜಿಲುವಾದ ಉದ್ಯಾನವೂ, ಅನೇಕ ಕೈಗಾರಿಕೆ ಕಾರ್ಖಾನೆಗಳೂ ಕಂಗೊಳಿಸುತ್ತಿವೆ. ಬೆಂಗಳೂರು ಮತ್ತು ಮೈಸೂರಿನಲ್ಲಿ ಮಾತ್ರವಲ್ಲದೆ, ಸಂಸ್ಥಾನದ ದೂರ ದೂರವಾದ ಜಿಲ್ಲೆಗಳಲ್ಲಿಯೂ ಸಹ, ಚಿತ್ತಾಕರ್ಷಕವಾದ ಅನೇಕ ಸಾರ್ವಜನಿಕ ಕಟ್ಟಡಗಳು ನಿರ್ಮಾಣವಾದುವು. ಮಹಾಸ್ವಾಮಿಯವರ ಕಾಲದಲ್ಲಿ ಮಾಡಿದ ಅನೇಕ ಏರ್ಪಾಟುಗಳಿಂದ ಮಲೇರಿಯಾ ಜಾಡ್ಯದ ಕೊಂಪೆಯೆಂದು ಮೊದಲಾಗಿದ್ದ ಕಳಂಕವು ಮಾಯವಾಗಿ ಈಗ ಆರೋಗ್ಯದ ಬೀಡಾಗಿದೆ.

**ಕೈಗಾರಿಕೆ ಮತ್ತು ವಾಣಿಜ್ಯ.**—ಮೈಸೂರು ಸಂಸ್ಥಾನವು ಮಹಾಸ್ವಾಮಿಯವರ ಕಾಲದಲ್ಲಿ ಅಭ್ಯುದಯಾಭಿವೃದ್ಧಿಸ್ಥಿತಿಗೆ ಬಂದು ಕೈಗಾರಿಕೆಗಳ ಪಟ್ಟಣವಾಗಿ ಪರಿಣಮಿಸಿದೆ. ಇವುಗಳಲ್ಲಿ ಬದನವಾಳಿನ ಖಾದೀ ಕಾರ್ಯಾಲಯವೂ, ಚೆನ್ನಪಟ್ಟಣ, ಬೆಂಗಳೂರುಗಳಲ್ಲಿರುವ ರೇಷ್ಮೆ ಕಾರ್ಖಾನೆಗಳೂ, ಸೋಪ್ಪಿನ ಕಾರ್ಖಾನೆಗಳೂ, ಸಾಬೂನಿನ ಕಾರ್ಖಾನೆ, ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪೂ, ಏಂಗಾಣಿ ಸಾಮಾನಿನ ಕಾರ್ಖಾನೆ, ವಿದ್ಯುಚ್ಛಕ್ತಿಯ ಸಾಮಾನುಗಳ ತಯಾರಿಯ ಕಾರ್ಖಾನೆ, ಗಂಧದೆಣ್ಣೆಯ ಕಾರ್ಖಾನೆ, ಗಾಜಿನ ಕಾರ್ಖಾನೆ, ಬಿದ್ಯುತ್ತಿನ ಬ್ಯಾಟರಿಗಳ ಕಾರ್ಖಾನೆ, ರಾಸಾಯನಿಕ ವಸ್ತುಗಳ ಕಾರ್ಖಾನೆ, ಸಸ್ಯಸಂಬಂಧವಾದ ಎಣ್ಣೆಗಳ ಕಾರ್ಖಾನೆ ಮುಂತಾದುವುಗಳು ಮುಖ್ಯವಾಗಿವೆ. ಮೈಸೂರಿನಲ್ಲಿ ತಯಾರಾಗುವ ಗಂಧದೆಣ್ಣೆಯು ಜಗತ್ತಿನಲ್ಲೆಲ್ಲಾ ಅದ್ವಿತೀಯವು. ಇದನ್ನು ಪಾಶ್ಚಾತ್ಯದೇಶಗಳವರೂ ಕೂಡ ವಿಶೇಷವಾಗಿ ತರಿಸಿಕೊಳ್ಳುತ್ತಾರೆ. ಇದಕ್ಕೆ ಇಂಗ್ಲೆಂಡ್, ಅಮೇರಿಕಾ ದೇಶಗಳಲ್ಲಿ ಬಹಳ ಮಾನ್ಯತೆಯೂ ಗಿರಾಕಿಯೂ ಇದೆ. ಭದ್ರಾವತಿಯಲ್ಲಿರುವ ಕಬ್ಬಿಣದ ಕಾರ್ಖಾನೆ, ಉಕ್ಕಿನ ಕಾರ್ಖಾನೆ, ಸಿಮೆಂಟ್ ಕಾರ್ಖಾನೆ, ಕಾಗದದ ಕಾರ್ಖಾನೆ, ಕೀಲೆಸ್ಣೆಯ ಕಾರ್ಖಾನೆ, ಮುಂತಾದುವು ಭದ್ರಾವತಿಗೆ ಮೈಸೂರಿನ ವ್ಯಾಂಚೆಸ್ಟರ್

ಶ್ರೀಮನ್ಮಹಾರಾಜರವರು ಕಲ್ಲತ್ತಿಗಿರಿಯ ಮೇಲಿನಿಂದ ಡಾಕ್ಟರ್ ರಂಗಾಚಾರ್ಯರಿಗೆ ವೇದವತಿ ಮತ್ತು ಆವತಿ ನದಿಗಳು ಅಯ್ಯನಕೆರೆ ಮದಗ ಕೆರೆಗಳಲ್ಲಿ ಹುಟ್ಟಿ ಹರಿಯುತ್ತಿರುವುದನ್ನು ತೋರಿಸುತ್ತಿರುವ ದೃಶ್ಯ.

ಎಂಬ ಅಭಿದಾನವನ್ನು ಪಡೆದಿದೆ. ಇಲ್ಲಿರುವ ಕಬ್ಬಿಣದ ಕಾರ್ಖಾನೆಯು ಬ್ರಿಟಿಷ್ ಚಕ್ರಾಧಿಪತ್ಯದೊಳಗಿರುವ ಅತ್ಯಂತ ದೊಡ್ಡ ಕಾರ್ಖಾನೆಗಳಲ್ಲಿ ಎಣಿಸಲ್ಪಟ್ಟಿದೆ. ಇಲ್ಲಿ ತಯಾರಾಗುವ ಕಬ್ಬಿಣಕ್ಕೆ ವಿದೇಶಗಳಲ್ಲಿ ಬಹಳ ಗಿರಾಕಿ ಇದೆ. ಸೀರಿನ ನಲ್ಲಿಗಳನ್ನೂ ಬೀದಿಯ ದೀಪದ ಕಂಭಗಳನ್ನೂ ಮನೆಗೆ ಉಪಯೋಗಿಸುವ ಕಟಕಟೆಗಳನ್ನೂ ಇಲ್ಲಿ ಮಾಡುತ್ತಾರೆ. ಇಲ್ಲಿರುವಷ್ಟು ದೊಡ್ಡ ಉಡಾ ಡಿಸ್ಟಿಲೇಷನ್ ಯಂತ್ರವೂ, ಚಾರ್‌ಕೋಲಾ ಬ್ಲಾಸ್ಟ್ ಫರ್ನೇಸೂ ಪೂರ್ವಾರ್ಧಗೋಳದಲ್ಲೇ ಇಲ್ಲ. ಇನ್ನು ಕೆಲವು ಕಾಲದಲ್ಲಿಯೇ ಭದ್ರಾವತಿಯು ಭಾರತದಲ್ಲಿ ಅತ್ಯಂತ ದೊಡ್ಡ ಕೇಂದ್ರವಾಗುವುದರಲ್ಲಿ ಸಂದೇಹವಿಲ್ಲ. ಮುಂಬೈದಲ್ಲೊಂದು ಸಕ್ಕರೆ ಕಾರ್ಖಾನೆ ಸ್ಥಾಪಿತವಾಗಿ ದಕ್ಷಿಣದೇಶದಲ್ಲೆಲ್ಲಾ ಖ್ಯಾತಿಗೊಂಡಿದೆ. ಶಿವಮೊಗ್ಗೆಯಲ್ಲಿ ಜಿಂಕೆಕಷ್ಟಿಯು ತಯಾರಾಗುವುದು. ಇವುಗಳಲ್ಲದೆ ಇನ್ನೂ ಅನೇಕ ಸಣ್ಣ ಪುಟ್ಟ ಕೈಗಾರಿಕೆಗಳು ಮಹಾಸಾಮ್ರಾಟಯವರ ಸರ್ಕಾರದ ಆದರಣೆ, ಪೆಂಬಲಗಳನ್ನು ಪಡೆದು ಯಶಸ್ವಿಯಾಗಿ ಕೆಲಸ ಮಾಡುತ್ತಿರುತ್ತವೆ.

ಸಂಸ್ಥಾನದಲ್ಲಿ ೫೦೩ ದೊಡ್ಡ ಕೈಗಾರಿಕೆಯ ಸಂಸ್ಥೆಗಳಿವೆ. ಇವುಗಳಲ್ಲಿ ೫೩,೫೦೦ ಮಂದಿಗೆ ಕೆಲಸವು ದೊರೆತಿದೆ. ಹದಿಮೂರು ದೊಡ್ಡ ಕೈಗಾರಿಕೆಯ ಸಂಸ್ಥೆಗಳು ಸಂಪೂರ್ಣವಾಗಿ ಸರ್ಕಾರದವರ ಅಧೀನದಲ್ಲಿಯೇ ಇವೆ. ಇವುಗಳ ಬಂಡವಾಳವು ಮೂರುಕೋಟಿ ರೂಪಾಯಿಗಳು. ಮಹಾಜನರಿಂದ ಇಲ್ಲ ಸಂಸ್ಥೆಗಳು ಪ್ರಾರಂಭವಾಗಿ ನಡೆಯುತ್ತಿವೆ. ಇವುಗಳಿಗೆ ಸರ್ಕಾರದವರು ಬಂಡವಾಳದ ಷೇರುಗಳನ್ನು ಕೊಳ್ಳುವುದರ ಮೂಲಕವೂ, ಕಟ್ಟಡಗಳನ್ನು ಕಟ್ಟಲು ಉಚಿತ ನಿವೇಶನವನ್ನು ಕೊಡುವುದರ ಮೂಲಕವೂ, ಸುಲಭ ದರದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸುವುದರ ಮೂಲಕವೂ, ಬೇಕಾದ ತಾಂತ್ರಿಕ ಸಲಹೆಗಳನ್ನು ಕೊಡುವುದರ ಮೂಲಕವೂ ಬಹಳವಾಗಿ ಉತ್ತೇಜನವನ್ನು ಕೊಡುತ್ತಿದ್ದಾರೆ. ಮೈಸೂರಿನ ವಸ್ತುಗಳಿಗೆ ವಿದೇಶಗಳಲ್ಲಿ ಗಿರಾಕಿಯನ್ನುದಗಿಸಲು ಲಂಡನ್ನಿನಲ್ಲಿ ಟ್ರೇಡ್ ಕಮಿಷನರ ಹುದ್ದೆಯನ್ನು ನೇಮಿಸಿರುವರು.

**ಪ್ರಯಾಣ ಸೌಲಭ್ಯ.**—ಮಹಾಸಾಮ್ರಾಟಯವರ ಸರ್ಕಾರದವರು ದೇಶದ ಸಂಪತ್ತನ್ನು ವೃದ್ಧಿಗೊಳಿಸುವುದಕ್ಕೂ ವ್ಯಾಪಾರ ಸೌಕರ್ಯಕ್ಕೂ ಪ್ರಜಾಸೌಲಭ್ಯಕ್ಕೂ ಅನೇಕ ಕಡೆಗಳಲ್ಲಿ ರೈಲ್ವೆ ಮಾರ್ಗಗಳನ್ನೂ ಸೇತುವೆ

ಗಳನ್ನೂ ನಿರ್ಮಿಸಿದ್ದಾರೆ. ಅಳಿದ ಮಹಾಸ್ವಾಮಿಯವರ ಕಾಲದಲ್ಲಿ ಈ ಸೀಮೆಯಲ್ಲಿ ರೈಲಾಪಾದಿಯು ಒಂದಕ್ಕು ಎರಡರಷ್ಟಾಯಿತು. ಸಂಸ್ಥಾನದಲ್ಲಿ ಸಂಚಾರ ಸೌಕರ್ಯಗಳು ವಿಶೇಷವಾಗಿ ಹೆಚ್ಚಿವೆ. ೧೯೩೮ನೆಯ ಇಸವಿ ಜನವರಿಯಲ್ಲಿ ಸರ್ಕಾರದವರು ಸದರ್ನ್ ಮರಾಟಾ ಕಂಪೆನಿಯವರು ನಡೆಸುತ್ತಿದ್ದ ಸಂಸ್ಥಾನದ ರೈಲು ಮಾರ್ಗಗಳನ್ನೆಲ್ಲಾ ತಮ್ಮ ಆಡಳಿತಕ್ಕೆ ತೆಗೆದುಕೊಂಡರು. ಈ ಸೀಮೆಯಲ್ಲಿ ಒಟ್ಟು ೭೪೮ ಮೈಲಿಗಳ ಉದ್ದ ರೈಲ್ವೆ ಮಾರ್ಗವಿದೆ. ಇದಕ್ಕಾಗಿ ೬೬೬ ಲಕ್ಷ ರೂಪಾಯಿಗಳನ್ನು ಹೆಚ್ಚವಾಟರು ತ್ತಾರೆ. ರೈಲ್ವೇ ವರ್ಕ್‌ಷಾಪೂ, ರೈಲ್ವೇ ಆಫೀಸೂ ಮೈಸೂರಿನಲ್ಲಿ ಕಟ್ಟಲ್ಪಟ್ಟುವು. ಈ ವರ್ಕ್‌ಷಾಪಿನಲ್ಲಿ ಸುಮಾರು ೧,೫೦೦ ಜನಗಳಿಗಿಂತ ಹೆಚ್ಚಾಗಿ ಕೆಲಸ ಮಾಡುತ್ತಿರುವರು. ಮುಂದೆ ಸತ್ಯಮಂಗಲದವರೆಗೂ ರೈಲ್ವೆ ಬಡಾವಣೆ ಮಾಡಬೇಕೆಂಬುದಾಗಿ ಸರ್ವೇಕೆಲಸ ನಡೆಯುತ್ತಿರುವುದು. ರೈಲ್ ಮಾರ್ಗಗಳಿಲ್ಲದೆಡೆಗಳಲ್ಲಿ ಸಂಚಾರದ ಅನುಕೂಲಕ್ಕಾಗಿ ಮೋಟಾರ್ ಬಸ್ಸುಗಳು ಏರ್ಪಟ್ಟಿರುವುವು. ಬಸ್ಸುಗಳ ಸೌಕರ್ಯಾರ್ಥವಾಗಿ ಅನೇಕ ಕಡೆ ನದಿಗಳಿಗೆ ಭಾರಭಾರಿ ಸೇತುವೆಗಳನ್ನು ಕಟ್ಟಿರುವರು. ಈ ಸೇತುವೆಗಳಲ್ಲಿ ಕೆಲವುಗಳ ಪ್ರಾರಂಭೋತ್ಸವವನ್ನು ಮಹಾಸ್ವಾಮಿಯವರೇ ನಡೆಸಿರುವರು. ಭರತಖಂಡದ ರಾಜಮಾರ್ಗಗಳ ಸಮ್ಮೇಳನವೊಂದು ೧೯೩೬ರಲ್ಲಿ ಬೆಂಗಳೂರಲ್ಲಿ ನಡೆಯಿತು. ಭಟ್ಕಳ್‌ನಲ್ಲಿ ಒಂದು ಒಂದರನ್ನು ಕಟ್ಟಿ, ಅದನ್ನು ಮೈಸೂರು ಸಂಸ್ಥಾನದ ರೇವುಪಟ್ಟಣವನ್ನಾಗಿ ಮಾಡಬೇಕೆಂಬ ಆಕಾಂಕ್ಷೆಯು ಮಹಾಸ್ವಾಮಿಯವರಲ್ಲಿ ಬಹಳವಾಗಿತ್ತು.

---

# ೧೧ನೆಯ ಅಧ್ಯಾಯ

## ಕಲಾಪ್ರೇಮ

ಮೈಸೂರಿನ ರಾಜಮನೆತನದವರು ಪರಂಪರಾಗತರಾಗಿ ಸಾಹಿತ್ಯ ಕಲಾ ಪ್ರೇಮಿಗಳು. ಆದುದರಿಂದಲೇ ಮೈಸೂರು ರಾಜಮನೆತನಕ್ಕೆ "ಸಂಗೀತಲೋಲ ಸಾಹಿತ್ಯರತ್ನಾಕರ" ಎಂಬ ಬಿರುದು ಬಂದಿರುವುದು. ಇವರಲ್ಲಿ ಒಡೆಯ ಚಾಮರಾಜ ಒಡೆಯರು, ಚಿಕ್ಕದೇವರಾಜ ಒಡೆಯರು, ಮುಮ್ಮಡಿ ಕೃಷ್ಣರಾಜ ಒಡೆಯರು ಸ್ವಯಂ ಕವಿಗಳಾಗಿದ್ದರು. ಮುಮ್ಮಡಿ

የቱ ሰፈርስ ያንተስ ክፍለ ከተማ ነው ሰፈርህ ?

ಕೃಷ್ಣರಾಜ ಒಡೆಯರವರು ರಚಿಸಿದ ಮಹಾಭಾರತ ಮುಂತಾದ ಪವಿತ್ರ ಗ್ರಂಥಗಳು ಸಾಹಿತಿಗಳಿಗೆ ಪ್ರೋತ್ಸಾಹಕೊಡುತ್ತ, ಕರ್ನಾಟಕ ಸರಸ್ವತೀ ಭಂಡಾರವನ್ನು ಅಲಂಕರಿಸಿವೆ. ಶ್ರೀ ಚಾಮರಾಜೇಂದ್ರ ಒಡೆಯರವರು ಸಾಟ್ಸಿಕಲೆಗೆ ಇತ್ತ ಪ್ರೋತ್ಸಾಹವೇ ಕರ್ನಾಟಕರಂಗಭೂಮಿಯ ನ್ನಾಶಕ್ಕೆ ಕಾರಣವಾಯಿತು. ನಾಲ್ವಡಿ ಶ್ರೀಕೃಷ್ಣಭೂಪತಿಗಳು ನಾಟಕ, ಶಾಸ್ತ್ರ, ಕಲೆಗಳನ್ನು ಪೋಷಿಸುತ್ತಿದ್ದ ಕೃಪಾಕಟಾಕ್ಷವೂ ಸತ್ಕೀರ್ತಿಯೂ ಧರಿತ್ರಿಯಲ್ಲಿ ಎಂದಕ್ಕೆಲ್ಲ ಮಾದರಿಯಾಗಿದೆ. ಪ್ರಜಾಹಿತೈಷಿಗಳಾದ, ಸಂಯಮಶೀಲರಾದ, ಆದರ್ಶ ಪ್ರಭುಗಳಾದ, ರಾಜರ್ಷಿಗಳಾದ ಮಹಾರಾಜ್ಞಿಯವರ ಧರ್ಮ ಕೀರ್ತಿಯು ಕನ್ನಡಿಗರೆಲ್ಲರ ಹೆಮ್ಮೆಗೂ ಸುಮನಸ್ಕತೆಗೂ ಆಧಾರವಾಗಿತ್ತು. ಅವರ ಪ್ರಜಾವತ್ಸಲತೆಯ ವೈಭವವನ್ನೂ ಸರ್ವಸಮದೃಷ್ಟಿಯನ್ನೂ ಸೂಚಿಸಿ, ಮಹಾತ್ಮಾ ಗಾಂಧಿ, ಲಾರ್ಡ್ ಸ್ಯಾಂಕಿ ಮುಂತಾದ ಮಹೋದಯರು ಮೈಸೂರು ರಾಜ್ಯವನ್ನು ರಾಮರಾಜ್ಯವೆಂದೂ ಆದರ್ಶ ಸಂಸ್ಥಾನವೆಂದೂ ವ್ಯಾಖ್ಯಾನಿಸಿದ್ದಾರೆ. ಅವರ ಕಲಾಭಿರುಚಿಯು ಲೋಕವಿಖ್ಯಾತವಾಗಿತ್ತು. ಮೈಸೂರಿನ ನವರಾತ್ರಿ ಉತ್ಸವವು ಸಮಗ್ರ ಭಾರತದಲ್ಲೇ ಪ್ರಖ್ಯಾತವಾಗಿದೆ. ಲಕ್ಷಾಂತರ ಜನ ಗಂಡಸರು, ಹೆಂಗಸರು, ಬಡವರು, ಭಾಗ್ಯವಂತರು, ಮೊನ್ನೆಯರು, ಚಿಕ್ಕವರು ಮೈಸೂರಿಗೆ ಬಂದು ಶ್ರೀ ಕೃಷ್ಣರಾಜರ ವೈಭವಯುತವಾದ ವಿಜಯದಶಮಿ ಉತ್ಸವವನ್ನು ನೋಡಿ ನಲಿದು ಆನಂದಿಸಿ ಉಚ್ಚಕಂಠದಲ್ಲಿ ಕೊಂಡಾಡುತ್ತಿದ್ದರು.

ಸಂಗೀತದಲ್ಲಿ ಮಹಾಸ್ವಾಮಿಯವರಿಗೆ ಪೂರ್ಣವಾಂಛೆಯಿತ್ತು. ಅವರು ಗಾನ, ವಾದ್ಯವಾದನಗಳೆರಡರಲ್ಲೂ ನಿಷ್ಣಾತರಾಗಿದ್ದರು. ನಾಗಸ್ವರ, ಕೊಳಲು, ದಿಲ್‌ರುಬಾ, ಸಿತಾರ್, ವೀಣೆ, ಏಟೀಲು, ತಬಲಾ ಮೊದಲಾದ ವಾದ್ಯಗಳನ್ನು ಸ್ವತಃ ನುದಿಸುತ್ತಿದ್ದರು ಮತ್ತು ಹಾಡುತ್ತಿದ್ದರು. ಅವರ ಪರಿಶ್ರಮ, ಪಾಂಡಿತ್ಯ, ಸೂಕ್ಷ್ಮಾಲೋಕನಗಳಿಗೆ ಎಂತಹ ವಿದ್ವಾಂಸರೂ ತಲೆದೂಗುತ್ತಿದ್ದರು. ಅವರ ಮುಂದೆ ಹಾಡಲು ವಿದ್ವಾಂಸರೂ ಅಂಜುತ್ತಿದ್ದರು. ಶ್ರೀಮನ್ಮಹಾರಾಜರು ಉತ್ತರ, ದಕ್ಷಿಣ ಎರಡು ಪದ್ಧತಿಗಳನ್ನೂ ನಿಯೋಜಿಸಿ ಮಾಡಿರುವ ವಾದ್ಯಸಂಗೀತವು (Orchestra) ಅವರ ಪಾಂಡಿತ್ಯಕ್ಕೆ ಕುರುಹಾಗಿ ಕೇಳಿದವರನ್ನು ದಿಗ್ಭ್ರಾಂತರನ್ನಾಗಿ ಮಾಡುವುದು. ಅನೇಕ ಕರ್ನಾಟಕ, ಸಂಸ್ಕೃತ ವಿದ್ವನ್ಮಣಿಗಳಿಗೆ ಹೇಗೆ ಆಶ್ರಯದಾತರಾಗಿದ್ದರೋ

ಹಾಗೆಯೇ ಸಂಗೀತ ವಿದ್ವಾಂಸರಿಗೂ ದೊಡ್ಡ ಆಶ್ರಯಸ್ಥಳವಾಗಿತ್ತು. ಇವರಲ್ಲಿ ಶೇಷಣ್ಣನವರು, ಸುಬ್ಬಣ್ಣನವರು, ಜಡಾರದ ಕೃಷ್ಣಪ್ಪನವರು, ವಾಸುದೇವಾಚಾರ್ಯರು, ಮುತ್ತಯ್ಯಭಾಗವತರು, ಏಣೆ ವೆಂಕಟಗಿರಿಯಪ್ಪನವರು, ಪಿಟೀಲ್ ಚೌಡಯ್ಯನವರು, ಪಿಟೀಲ್ ತಾಯಪ್ಪನವರು— ಇವರು ಮುಖ್ಯರು. ಇವರಲ್ಲದೆ ಭರತಖಂಡದ ನಾನಾ ಭಾಗಗಳಲ್ಲಿರುವ ಪ್ರಖ್ಯಾತ ಸಂಗೀತಗಾರರಿಗೆಲ್ಲ ತಿಂಗಳು ವೇತನವನ್ನು ಮಾಡಿಕೊಟ್ಟಿದ್ದರು. ಇವರೆಲ್ಲ ವರ್ಷಂತಿ, ನವರಾತ್ರಿಗಳಲ್ಲಿ ಮೈಸೂರಿಗೆ ಬಂದು ಹಾಡಿ ಪಾಡಿ ಮಹಾಸ್ವಾಮಿಯವರಿಂದ ಮರ್ಯಾದೆ ಹೊಂದಿ ತಮ್ಮ ತಮ್ಮ ನೆಲೆಗಳಿಗೆ ಹೋಗುತ್ತಿದ್ದರು. ಸಂಗೀತವನ್ನು ತಾವು ಕೇಳಿ ಸಂತೋಷಪಡುವುದಲ್ಲದೆ, ತಮ್ಮ ಪ್ರಜೆಗಳೆಲ್ಲ ಕೇಳಿ ಆನಂದಿಸಲೆಂದು ಧ್ವನಿವಾಹಕ ಯಂತ್ರಗಳ ಮೂಲಕ ಸರ್ವರೂ ಕೇಳುವ ವ್ಯವಸ್ಥೆ ಮಾಡಿದ್ದರು. ಅಲ್ಲದೆ ಬೆಂಗಳೂರು ಮೊದಲಾದ ಸ್ಥಳಗಳಿಗೆ ಸವಾರಿ ಚಿತ್ತಯಿಸಿದಾಗಲೆಲ್ಲ ಬ್ಯಾಂಡಿನವರನ್ನು ಸಂಗಡ ಕರೆದುಕೊಂಡು ಹೋಗಿ, ಅಲ್ಲಿನವರೆಲ್ಲ ಕೇಳಿ ಆನಂದಿಸಲೆಂದು ಕಬ್ಬನ್ ಪಾರ್ಕು, ಲಾಲ್‌ಬಾಗ್ ಮುಂತಾದ ಕಡೆಗಳಲ್ಲಿ ಗಾನ ಮಾಡಿಸುತ್ತಿದ್ದರು. ಸಂಗೀತವೆಂದರೆ ಮಹಾರಾಜರಿಗೆ ಪ್ರಾಣ.

ಪಾಶ್ಚಾತ್ಯ ಸಂಗೀತದಲ್ಲೂ ಇದೇ ನೈಪುಣ್ಯವನ್ನು ಸಂಪಾದಿಸಿದ್ದರು. ಒಂದೊಂದು ದಿನ ಇಂಗ್ಲಿಷ್ ಬ್ಯಾಂಡ್ ನ್ಯೂಲಿಗೆ ದುಮುಮಾಡಿ ಆಯಾ ವಾದ್ಯಪಾತವನ್ನು ತಾವೇ ನಡೆಸುತ್ತಿದ್ದರು. ಏಕಕಾಲದಲ್ಲಿ ಒಂದುನೂರು ಜನಗಳಿಗಿಂತ ಹೆಚ್ಚಾಗಿ ಮಾಡುವ ವಾದ್ಯರವವನ್ನು ತಾವೇ ಪರಿಗಣಿಸಿ ನಡೆಸುತ್ತಿದ್ದುದು ಸಾಮಾನ್ಯ ಕೆಲಸವಲ್ಲ. ಇದಕ್ಕಾಗಿ ೬೦೦ ರೂಪಾಯಿ ತಲಬಿನ ಮೇಲೆ ಒಬ್ಬ ಜರ್ಮನ್ ಪಂಡಿತನನ್ನು ಇಟ್ಟಿದ್ದರು. ಅವನೂ ಕೂಡ ಮಹಾರಾಜರವರ ಸಂಗೀತಾಭಿರುಚಿಯನ್ನು ನೋಡಿ ಆಶ್ಚರ್ಯಪಡುತ್ತಿದ್ದನು. ಮಹಾರಾಜರು ನೀಲಗಿರಿ, ಬೆಂಗಳೂರು, ಹಾಸನ, ಕೊಪ್ಪಗಳಗುಂದಿ ಈ ಸ್ಥಳಗಳಲ್ಲಿ ಎಲ್ಲಿಯೇ ಇರಲಿ, ಮೈಸೂರು ನಿಷತ್ ಬಾಗಿನಲ್ಲಿ ಪ್ರತಿ ಬುಧವಾರವೂ ನಡೆಯುವ ವಾದ್ಯನಿನಾದವು ಧ್ವನಿವಾಹಕ ಯಂತ್ರಗಳ ಮೂಲಕ ಕೇಳುವಂತೆ ಏರ್ಪಡಿಸಿದ್ದರು.

ಮಹಾಸ್ವಾಮಿಯವರು ಚಿತ್ರಕಲೆಗೆ ನೀಡಿದ್ದ ಪ್ರೋತ್ಸಾಹವು ಅಗಾಧವಾದುದು. ಇದಕ್ಕಾಗಿ ಮೈಸೂರಿನ ಜಗನ್ಮೋಹನ ಬಂಗಲೆಯಲ್ಲಿ

ಚಿತ್ರಶಾಲೆಯನ್ನೇರ್ಪಡಿಸಿ ಅತ್ಯುತ್ತಮರಾದ ಚಿತ್ರಕಲಾ ಕೋವಿದರಿಂದ ಬರೆಯಿಸಿ ಬಿಟ್ಟ ಅನೇಕ ಚಿತ್ರಗಳನ್ನು ಸಂಗ್ರಹಿಸಿ ಇಟ್ಟಿರುವುದು ಹಿಂದೂ ರಾಷ್ಟ್ರದಲ್ಲೆಲ್ಲಾ ಹೆಸರಾಗಿದೆ. ಅರಮನೆ ದರ್ಬಾರ್ ಹಾಲುಗಳಲ್ಲಿ ರಾಜಾ ರವಿವರ್ಮನಿಂದ ಬರೆಸಿರುವ ರಾಮಾಯಣ, ಮಹಾಭಾರತದ ದೃಶ್ಯಗಳ ಚಿತ್ರಪಟಗಳೂ, ಕಲ್ಯಾಣಮಂಟಪದ ಸುತ್ತಲೂ ಮೈಸೂರಿನ ಚಿತ್ರಕಲಾ ವಿಚಾರದರಿಂದ ಬರೆಸಿ ತೂಗಹಾಕಿರುವ ದಸರಾ ಮಹೋತ್ಸವದ ವಿವಿಧ ಚಿತ್ರಗಳೂ ನೋಟಕರ ಕಣ್ಮನಗಳನ್ನು ಆಕರ್ಷಿಸದಿರಲಾರವು. ಇಂತಹ ಪಟಗಳು ಭರತಖಂಡದ ಮತ್ತಾವ ರಾಜರ ಅರಮನೆಯಲ್ಲೂ ಇಲ್ಲ. ಇವುಗಳು ೧೫ ಅಡಿ ಅಗಲವಾಗಿಯೂ ೮ ಅಡಿ ಉದ್ದರವಾಗಿಯೂ ಇರುವುವು. ಮಹಾರಾಜರವರ ಶಯನಾಗಾರದಲ್ಲಿ ವೆಂಕಟಪ್ಪನವರು ರಚಿಸಿರುವ ಒಂದು ದೇವನ ಮೃಣ್ಮಯಮೂರ್ತಿಯೂ ಅಂಬಾವಿಲಾಸದಲ್ಲಿರುವ ಶಿಲ್ಪಕೃತಿಗಳೂ ಸೇವಕಾಹಾಲಿನ ಹತ್ತಿರ ಇರುವ ಶ್ರೀ ಚಾಮರಾಜೇಂದ್ರ ಒಡೆಯರ ಶ್ವೇತಶಿಲಾ ಮೂರ್ತಿಯೂ ಮಹಾರಾಜರವರಲ್ಲಿದ್ದ ಕಲಾಸ್ಫೂರ್ತಿಯನ್ನು ಸೂಚಿಸುತ್ತವೆ. ಇವುಗಳಲ್ಲಿ ಕೆಲವನ್ನು ರಚಿಸಿದವರು ಮೈಸೂರಿನ ಶಿಲ್ಪಿಗಳೇ. ಇವರಿಗೆಲ್ಲಾ ಶ್ರೀಮನ್ಮಹಾರಾಜರವರು ಹೆಚ್ಚು ಉತ್ತೇಜನ ಕೊಡುತ್ತಿದ್ದರು.

ವಾಸ್ತುಶಿಲ್ಪದಲ್ಲಿಯೂ ಉದ್ಯಾನರಚನೆಯಲ್ಲಿಯೂ ಮಹಾರಾಜರಿಗಿದ್ದ ಪರಿಶ್ರಮವು ಅಸಾಧಾರಣವಾದದ್ದು. ಮೈಸೂರಿನಲ್ಲಿರುವ ಕರ್ಜನ್ ಪಾರ್ಕ್, ನಿಷತ್‌ಬಾಗ್, ನರಸಿಂಹರಾಜ ಬೂಲಿವಾರ್ಡ್ ಮುಂತಾದುವುಗಳೇ ದೃಷ್ಟಾಂತವಾಗಿವೆ. ಚಾಮುಂಡಿ ಬೆಟ್ಟಕ್ಕೆ ಹಾದಿಸಿರುವ ಮೋಟಾರ್ ರಸ್ತೆಯೂ ಬೆಟ್ಟದಮೇಲೆ ಕಟ್ಟಿರುವ ರಾಜೇಂದ್ರವಿಲಾಸ ಸೌಧವೂ ಸೋಜಿಗಕ್ಕುಪಾಗಿವೆ. ರಾಜಕಾರ್ಯವನ್ನು ಜೀಸರಸಿಸಿದಾಗ ಏಕಾಂತಜೀವನದ ಅಪೇಕ್ಷೆಯಾದಾಗ—ತಾಯಿ ಚಾಮುಂಡಿಯ ದರ್ಶನಕ್ಕಾಗಿ ವಾರಕ್ಕೆ ಒಂದೆರಡು ದಿನ ರಾಜೇಂದ್ರವಿಲಾಸಕ್ಕೆ ಬಂದು ವಸತಿ ಮಾಡಿಕೊಂಡಿರುತ್ತಿದ್ದರು. ಬೆಟ್ಟದಮೇಲೆ ಹಾಕಿರುವ ಏದ್ದುದ್ದೀಪಗಳು ರಾತ್ರಿಯಲ್ಲಿ ಬೆಳಗುತ್ತ ಅವರ ವಾಸಸ್ಥಿನ ವೈಶಾಲಭಾವನ್ನು ಲೋಕಕ್ಕೇ ಸೂಚಿಸುತ್ತಿರುವುವು. ಇದನ್ನು ಮೈಸೂರಿಗೆ ಬಂದ ಪ್ರತಿಯೊಬ್ಬ ವಾಶ್ಚಾತ್ಯನೂ ಮನಮೆಚ್ಚಿ ಹೊಗಳಿರುವನು. ಬೆಂಗಳೂರಿನಲ್ಲಿರುವ ಟಿಕ್ಕ

ಲಾಜಿಕಲ್ ಇನ್ಸ್ಟಿಟ್ಯೂಟಿನಲ್ಲಿಯೂ ಮತ್ತು ಸೈಸೂರಿನಲ್ಲಿರುವ ಚಾಮ
ರಾಜೇಂದ್ರ ಟೆಕ್ನಿಕಲ್ ಕಲಾಶಾಲೆಯಲ್ಲಿಯೂ ತಯಾರಾಗುವ ಗೃಹೋಪ
ಕರಣದ ಸಾಮಾನು, ಕೃಷ್ಣರಾಜೇಂದ್ರ ಮಿಲ್ಲಿನಲ್ಲಿ ತಯಾರಾಗುವ ವೇರ್ಸ್
ಬಸೀಸುಗಳು, ಜೆನ್ನ ಪಟ್ಟಣದಲ್ಲಿ ನಡೆಯುವ ಒಕ್ಕಲಿನ ಪ್ರದರ್ಶನಗಳಲ್ಲಿ
ಸೊರಬ ಸಾಗರಗಳಲ್ಲಿ ಗುಡಿಗಾರರು ಗಂಧದ ಮರದಲ್ಲಿ ಕೆತ್ತುವ ಕೆತ್ತನೆ
ಕೆಲಸಗಳು ಮುಂತಾದುವುಗಳನ್ನು ನೋಡಿದ ಬಳಿಕ ಯಾರಿಗಾದರೂ ಸಂತೋಷ
ಪಡುವುದರಲ್ಲಿ ಸಂದೇಹವಿಲ್ಲ. ಇವುಗಳಿಗೆಲ್ಲ ಮಹಾರಾಜರವರ ಸಹಕಾರ
ವಿದೆಯೆಂದು ಹೆಚ್ಚು ಉತ್ತೇಜನ ಕೊಡುತ್ತಿದ್ದರು.

---

## ೧೨ನೆಯ ಅಧ್ಯಾಯ

### ಮಹಾರಾಜರವರ ಕಾಲದಲ್ಲಿದ್ದ ಮಂತ್ರಿಗಳು

ಶ್ರೀಮನ್ಮಹಾರಾಜರವರು ಸಿಂಹಾಸನಾರೋಹಣ ಮಾಡಿದಾಗ ಸರ್ ಕೆ. ಶೇಷಾದ್ರಿ ಅಯ್ಯರ್‌ರವರು ದಿವಾನರಾಗಿದ್ದರು. ಇವರು ತಮ್ಮ ೧೮ ವರ್ಷದ ಆಡಳಿತದಲ್ಲಿ ರಾಜಾದಾಯವನ್ನು ನಾನಾಮುಖವಾಗಿ ಹೆಚ್ಚಿಸಿ ರಾಜ್ಯವನ್ನು ಮುಂದಕ್ಕೆ ತಂದು ರಾಜ್ಯಧುರಂಧರ ಎನಿಸಿ ಕೊಂಡರು. ಇವರೇ ತಿರುನಸಮುದ್ರದ ಏದ್ಯುಚ್ಛಕ್ತಿ ಸ್ಥಾಪನೆಗೆ ಮೂಲ ಕಾರಣರು. ಇವರ ಕಾಲದಲ್ಲೇ ಕೋಲಾರದ ಚಿನ್ನದ ಗಣಿಯಿಂದ ಚಿನ್ನ ತೆಗೆಯುವ ಏರ್ಪಾಡಾದುದು. ಇವರು ೧೯೦೯ರಲ್ಲಿ ನಿವೃತ್ತರಾಗಲು ಅವರ ಸ್ಥಾನಕ್ಕೆ ಸರ್ ಪಿ. ಎಸ್. ಕೃಷ್ಣಸ್ವಾಮಿಯವರು ಒಂದು ೧೯೧೮ರ ವರೆಗೆ ದಿವಾನರಾಗಿದ್ದರು. ಇವರ ಕಾಲದಲ್ಲಿ ಗ್ರಾಮಾಭಿವೃದ್ಧಿ, ವಿದ್ಯಾ ಭ್ಯಾಸ, ನೀರಾವರಿ ಕಾಮಗಾರಿಗಳು ಮುಂದೆ ಬಂದುವು. ಅವರ ನಂತರ ಎ. ಪಿ. ಪಾಧಿಯವರಾಯರು ದಿವಾನಪದವಿಯನ್ನಲಂಕರಿಸಿದರು. ಇವರ ಕಾಲದಲ್ಲಿ ನ್ಯಾಯವಿಧಾಯಕ ಸಭೆಯು ಏರ್ಪಾಡಾಯಿತು. ಶ್ರೀಮನ್ಮಹಾರಾಜರವರು ತಮ್ಮ ಗಮನವನ್ನು ಆರ್ಥಿಕ ಅಭಿವೃದ್ಧಿಯ ಕಡೆಗೆತ್ತಿ ಆರ್ಥಿಕ ಸಮ್ಮೇಳನವನ್ನು ಆರಂಭಿಸಿದರು. ಇವರ ಕಾಲದಲ್ಲಿಯೇ ಶ್ರೀಮನ್ಮಹಾರಾಜರವರಿಗೆ ಚಕ್ರವರ್ತಿಯವರು ಜಿ.ಸಿ.ಐ.ಎ. ಎಂಬ ಪ್ರಶಸ್ತಿಯನ್ನು ದಯಪಾಲಿಸಿದರು. ಪಾಧಿಯವರಾಯರ ಅನಂತರ ೧೯೧೯ರಲ್ಲಿ ಸ್ವಲ್ಪಕಾಲ

ಶ್ರೀಮನ್ಮಹಾರಾಜರವರ ಕಾಲದಲ್ಲಿ ಆಸ್ಥಾನವನ್ನಲಂಕರಿಸಿದ್ದ ಮಂತ್ರಿಗಳು

ಶ್ರೀಮಾನ್ ಟಿ. ಆನಂದರಾಯರು ಕೆಲವು ವರ್ಷ ಸಚಿವರಾಗಿದ್ದರು. ಇವರ ಕಾಲದಲ್ಲಿ ಬೆಂಗಳೂರಿಂದ ಚಾಮರಾಜಪೇಟೆಗೆ ಹೊಸದಾಗಿ ರೈಲು ಮಾರ್ಗವನ್ನು ಏರ್ಪಡಿಸಲಾಯಿತು. ಈ ಸಮಯಕ್ಕೆ ಬೆಂಗಳೂರು ದಂಡಿನ ಪರ್ವಾಣಾಯಿದ್ದಲ್ಲಿ ಉಳಿದ ಹಣವು ಪ್ರತಿವರ್ಷವೂ ಇಂಡಿಯಾ ಸರ್ಕಾರಕ್ಕೇ ಸೇರುತ್ತಿತ್ತು. ಇದ್ದಲ್ಲಿಂದ ಮುಂದಕ್ಕೆ ಈ ಹಣವು ಮೈಸೂರು ಸಂಸ್ಥಾನಕ್ಕೆ ಸೇರತಕ್ಕದ್ದೆಂದು ಶಾಶ್ವತವಾಯಿತು. ಕೃಷ್ಣರಾಜಸಾಗರದ ಶಂಕುಸ್ಥಾಪನೆಗೆ ಇವರ ಕಾಲದಲ್ಲೇ ವ್ಯಯತ್ನ. ಸಂಪತ್ತಾಗಲಿ, ನಾಮಧೇಯವಾಗಲಿ, ಪರೋಪಕಾರಕ್ಕಲ್ಲದೆ ಕೇವಲ ನಾಶಕ್ಕಲ್ಲವೆಂಬುದು ಇವರ ಸಿದ್ಧಾಂತ.

ಬೇಕಾಗಿರಲ್ಲಿ ಚೀಫ್ ಇಂಜನೀಯರಾಗಿದ್ದ ಸರ್ ಏಶ್ವೇಶ್ವರಯ್ಯನವರು ದಿವಾನರಾದರು. ಇವರ ಕಾಲದಲ್ಲಿ ಸಂಸ್ಥಾನವು ಸರ್ವತೋಮುಖವಾಗಿ ಅಭಿವೃದ್ಧಿಗೆ ಬಂದಿತು. ವ್ಯಾಪ್ತವಾದ ಕೃಷ್ಣರಾಜಸಾಗರವು ನಿರ್ಮಾಣವಾಯಿತು. ಅನೇಕ ಕೈಗಾರಿಕೆಗಳು ದೇಶದಲ್ಲಿ ಹರಡಿದುವು. ಸಾಬೂನಿನ ಕಾರ್ಖಾನೆ, ಕಬ್ಬಿಣದ ಕಾರ್ಖಾನೆ, ಗಂಧದೆಣ್ಣೆಯ ಕಾರ್ಖಾನೆ, ರೇಷ್ಮೆ ಕಾರ್ಖಾನೆ ಮುಂತಾದುವುಗಳೆಲ್ಲ ಹುಟ್ಟಿದುವು. ಗ್ರಾಮ ಪುನರುಜ್ಜೀವನ ಕಾರ್ಯವು ಮುಂದುವರಿಯಿತು. ಮೈಸೂರು ಬ್ಯಾಂಕು, ಕರ್ನಾಟಕ ವಿದ್ಯಾನಿಲಯ, ಚೇಂಬರ್ ಆಫ್ ಕಾಮರ್ಸ್ ಎಂಬ ಸಂಸ್ಥೆಗಳು ಸ್ಥಾಪಿತವಾದುವು. ಈ ಮಹಾಸುಭಾವರು ಅನೇಕ ಸಂದರ್ಭದಲ್ಲಿ ಸರ್ಕಾರದಿಂದ ತಮಗೆ ಬರುತ್ತಿದ್ದ ಒಹುಮಾನಸಂಬಳವನ್ನೆಲ್ಲಾ ಸರ್ಕಾರಕ್ಕೆ ಸಮರ್ಪಿಸಿಬಿಟ್ಟಿದ್ದಾರೆ. ಈಗಲೂ ದೀನರ ಸೇವೆಗೆ ತಮ್ಮ ಪ್ರಸನ್ನಮನಸ್ಸನ್ನೇ ಅರ್ಪಿಸುವರು.

ಸರ್ ಏಶ್ವೇಶ್ವರಯ್ಯನವರು ದಿವಾನ್ ಪದವಿಯಿಂದ ನಿವೃತ್ತರಾಗಲು, ಸರ್ದಾರ್ ಕಾಂತರಾಜ ಅರಸಿನವರು ದಿವಾನರಾದರು. ಇವರು ಗ್ರಾಮ ಪಂಚಾಯಿತಿ, ಸಹಕಾರ ಸಂಘ ಮುಂತಾದುವುಗಳನ್ನು ಅಭಿವೃದ್ಧಿಗೆ ತಂದರು. ಇವರ ಕಾಲದಲ್ಲಿ ಮಾಧ್ಯಮಿಕ ಶಾಲೆಗಳಲ್ಲಿ ವಿಜ್ಞಾನ ಪಾಠಮಾಡುತ್ತಿದ್ದ ಪಲ್ಲಟವನ್ನು ತೆಗೆದುಹಾಕಿದರು. ವಿದ್ಯಾರ್ಥಿವೇತನಗಳು ಹೆಚ್ಚಾದುವು. ಪ್ರಾಥಮಿಕ ಪ್ರಗತಿವಾರ್ಗದಲ್ಲಿ ಹಸುಗಳನ್ನು ನಾಕುವುದು, ಜೇನು ಸೊಣಗಳನ್ನು ನಾಕುವುದು ಬಂದು ಮುಖ್ಯವಾದ ಕಸುಬೆಂದು ಇವರ ಅಭಿವ್ಯಾಯವಿತ್ತು. ಒಕ್ಕಲು ಮಕ್ಕಳನ್ನು ತಿಂದು

ಹಾಲು ಕೊಟ್ಟರೆ, ಜೋನು ಹೂನಿನಿಂದ ಸುಧೂವಸ್ನು ಕೊಡುತ್ತದೆ. ಹೂ ಹಾಲು ಹುಲ್ಲಿನ ಹಾಲಿಗಿಂತ ಚೆಚ್ಚು ಕ್ರಾಂತಿಕಾರಿ ಎಂದು ಭಾವಿಸಿದ್ದರು. ಶ್ರೀಮತರು ಒಕ್ಕೇ ಹಸುಗಳನ್ನು ಸಾಕುವಂತೆಯೂ, ಮಲೆನಾಡಿನವರು ಜೆರ್ಸಿ ಸೀಮೆಗಳನ್ನು ಸಾಕುವಂತೆಯೂ ಪ್ರೋತ್ಸಾಹಿಸಿದರು. ರಾಜಧಾನಿಯ ಬಡವರ ಮಕ್ಕಳಿಗೆ ಒಕ್ಕೇ ಹಾಲನ್ನು ಒದಗಿಸುವುದಕ್ಕೂ ಸ್ಥಾಪನೆ ಮಾಡಿಸುವುದಕ್ಕೂ "ಗುಣ್ಣಾಂಬಾ ಮೆಟರ್ನಿಟಿ" ಎಂಬ ಸಂಸ್ಥೆಯನ್ನು ಏರ್ಪಡಿಸಿದರು. ಇದರಿಂದ ನೂರಾರು ಮಕ್ಕಳು ಒಕ್ಕೇ ಹಾಲನ್ನು ಕುಡಿದು ಬೆಳೆಯಲು ದಾರಿಯಾಯಿತು.

ಬಳಿಕ ಸರ್ ಅಲ್ಬರ್ಟ್ ಜನರ್ಜಿಯವರು ೧೯೨೬ರಲ್ಲಿ ದಿವಾನರಾಗಿ ನೇಮಕವಾದರು. ಈ ಕಾಲದಲ್ಲಿಯೇ ಶ್ರೀಮನ್ಮಹಾರಾಜರವರು ವಿಶ್ವವಿದ್ಯಾನಿಲಯದ ಸೈನ್ಸ್-ಫ್ಯಾಕಲ್ಟಿಯಾಗಿದ್ದ ಡಾಕ್ಟರ್ ಪ್ರಜೇಂದ್ರನಾಥಲೀಲ ಅಧ್ಯಕ್ಷತೆಯಲ್ಲಿ ರಾಜಕೀಯ ಸುಧಾರಣಾ ಸಮಿತಿಯೊಂದನ್ನು ಏರ್ಪಡಿಸಿದರು. ೧೯೨೬ರಲ್ಲಿ ಶ್ರೀಮನ್ಮಹಾರಾಜರವರು ತಮ್ಮ ಪ್ರೈವೇಟ್ ಸೆಕ್ರೆಟರಿಯವರಾಗಿದ್ದ ಸರ್ ಮಿರ್ಜಾ ಸಾಹೇಬರಿಗೆ ದಿವಾನಗಿರಿಯನ್ನು ಕರುಣಿಸಿದರು. ಇವರು ತಾವು ಸಹಕರಿಸಿ ಒಂದಷ್ಟೇಲೆ ಭದ್ರಾವತಿಯಲ್ಲಿ ಉಕ್ಕು ಕಬ್ಬಿಣ ಕಾರ್ಖಾನೆಯನ್ನು ಆದರ ಸಂಗಡ ಕಾಗದದ ಕಾರ್ಖಾನೆ, ಸಿಮೆಂಟ್ ಕಾರ್ಖಾನೆ, ಕೀಲೆಣ್ಣೆಯ ಕಾರ್ಖಾನೆ, ಮುಂತಾದುವುಗಳನ್ನು, ಒದಗಿಸಿಕೊಟ್ಟರು. ಬೆಂಗಳೂರಿನ ರೇಷ್ಮೆ ಕಾರ್ಖಾನೆ ಪಿಂಗಾಣಿ ಸಾಮಾನಿನ ಕಾರ್ಖಾನೆ, ಗಾಜಿನ ಕಾರ್ಖಾನೆ ಮುಂತಾದವನ್ನು, ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆಯನ್ನು, ಗೇರುಸೊಪ್ಪೆ ಮತ್ತು ಪಿಂಚಾಣದಿಗಳ ಹೊಸ ವಿದ್ಯುಚ್ಛಕ್ತಿಯ ಏರ್ಪಾಡನ್ನು, ಅನೇಕ ಭಾರಿ ನೀರಾವರಿ ಕಾಮಗಾರಿಗಳನ್ನು, ಸೇತುವೆಗಳನ್ನು ಮಾಡಿಸಿದರು. ಅವರ ಕಾರ್ಯದಕ್ಷತೆ, ರಾಜಭಕ್ತಿ, ಪ್ರಜಾವಾತ್ಸಲ್ಯ, ದೇಶಾಭಿಮಾನಗಳಿಗೆ ಮಹಾಸ್ವಾಮಿಯವರು ಮೆಚ್ಚಿ ಇವರ ದಿವಾನಗಿರಿಯ ಅವಧಿಯನ್ನು ೧೯೩೫ನೆಯ ಜನವರಿಯಿಂದ ಐದು ವರ್ಷಕಾಲ ಮೆಚ್ಚಿಸಿದರು. ಇವರ ಜನಸಂಗ್ರಹಶಕ್ತಿಯು ಅಸಾಧಾರಣವಾದದ್ದು. ಇವರ ಪ್ರೋತ್ಸಾಹದಿಂದ ಸ್ವದೇಶಿಗರು ತಾವಾಗಿ ಮುಂದೆ ಬಂದು ಅನೇಕ ಧರ್ಮಕೆಲಸಗಳನ್ನು ಮಾಡಿರುತ್ತಾರೆ ಇವರು ಶ್ರೀಮನ್ಮಹಾರಾಜರವರ ಅಭೀಷ್ಟಕ್ಕೆ ಅನುಗು

ಹಾಗು ಈ ಸಂಸ್ಥಾನದಲ್ಲಿ ಪ್ರಗತಿಪರವಾದ ಹಲವು ಏರ್ಪಾಡುಗಳನ್ನು ಹೊಂದಿ ಯಾವರೀತಿ ನಡೆಯಿಸಿಕೊಂಡು ಬರುತ್ತಿದ್ದಾರೆಂಬುದೂ, ಈ ಸಂಸ್ಥಾನದ ಧವಳಕೀರ್ತಿಯು ಹೇಗೆ ಬೆಸ್ತರಿಸಿರುತ್ತೆಂಬುದೂ ಪ್ರತಿಯೊಬ್ಬರಿಗೂ ತಿಳಿದ ಅಂಶವಾಗಿದೆ.

---

# ೧೩ನೆಯ ಅಧ್ಯಾಯ

## ರಜತಮಹೋತ್ಸವ

ಶ್ರೀಮನ್ಮಹಾರಾಜರವರು ಅದರ್ಶಕೀರ್ತಿಯನ್ನು ಪಡೆದು, ಮೈಸೂರನ್ನು ಉತ್ತಮ ಸಂಸ್ಥಾನವನ್ನಾಗಿ ಮಾಡಿ, ಅದರ ಕೀರ್ತಿಯನ್ನು ದಿಗಂತಗಳಿಗೆಲ್ಲ ಹಬ್ಬಿಸಿ ಪ್ರಜೆಗಳನ್ನು ಪುತ್ರವ್ಯಾಪ್ತಿಯಿಂದ ಕಾಪಾಡುತ್ತಿರುವಲ್ಲಿ, ಸುಜ್ಞರಾದ ಪ್ರಜೆಗಳು ತಮ್ಮ ಸ್ವಧರ್ಮಿಣಿ ಇಪ್ಪತ್ತೈದು ವರ್ಷಗಳ ಧರ್ಮರಾಜ್ಯಭಾರದಿಂದ ತಮಗುಂಟಾದ ಆನಂದವನ್ನು ವ್ಯಕ್ತಪಡಿಸುವುದಕ್ಕಾಗಿ, ೧೯೨೭ನೆಯ ಇಸವಿ ಏಪ್ರಿಲ್ ೧೯ನೆಯ ತಾರೀಖಿನ ದಿನ ಸಂಭ್ರಮ ರಜತಮಹೋತ್ಸವವನ್ನು ನಡೆಸಲು ಕೈಗೊಳ್ಳಬೇಕಾದ ಕಾರ್ಯಕಲಾಪಗಳನ್ನು ನಿರ್ಣಯಿಸಲು ಮಹಾಸಭೆಯೊಂದು ಸೇರಿತು. ಅದಕ್ಕೆ ಸರ್ ಎಂ. ವಿಶ್ವೇಶ್ವರಯ್ಯನವರು, ಸರ್ ಪುಟ್ಟಣ್ಣಚೆಟ್ಟರು ಮುಂತಾದವರೆಲ್ಲರೂ ಬಂದಿದ್ದರು. ಆ ಸಭೆಯಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸಿದ್ದ ಸರ್ ಮಿರ್ಜಾರವರು ಮಾಡಿದ ಭಾಷಣ—

ಸಹಿಳೆಯರೇ ಮತ್ತು ಮಹನೀಯರೇ,

"ಬಂದು ಈ ಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸಿ ಇಲ್ಲಿನ ಕಾರ್ಯಕಲಾಪಗಳನ್ನು ಜರುಗಿಸಲು ನಾನು ಆಹ್ವಾನಿಸಲ್ಪಟ್ಟಿದ್ದೇನೆ. ನಾನು ಈ ದಿವಸ ನಿರೀಕ್ಷಿಸಬೇಕಾಗಿರುವ ಕಾರ್ಯದಷ್ಟು ಅದೃಷ್ಟವಾದುದು ನನಗೆ ಮತ್ತಾವುದೂ ಇಲ್ಲ. ನಾನು ಸಭಾಧ್ಯಕ್ಷತೆಯನ್ನು ವಹಿಸಬೇಕೆಂದು ಕೇಳಿ, ನನಗೆ ಈ ಗೌರವವನ್ನು ತೋರಿಸಿರುವುದಕ್ಕಾಗಿ ನಾನು ತಮ್ಮೆಲ್ಲರಿಗೂ ಹೆಚ್ಚು ಕೃತಜ್ಞನಾಗಿರುವೆನೆಂಬುದನ್ನು ಹೇಳಲಿಕ್ಕೆಬೇಕಲ್ಲ.

"ನಮ್ಮ ನ್ಯಾಳುವ ಮಹಾರಾಜ್ಞಿಯವರಾದ ಶ್ರೀಮನ್ಮಹಾರಾಜರವರು ಸಿಂಹಾಸನಾರೋಹಣವಾಗಿ ಇಪ್ಪತ್ತೈದು ವರುಷಗಳು ಪೂರ್ತಿಯಾಗುವುದಕ್ಕಾಗಿ 'ಸಿಲ್ವರ್ ಜ್ಯೂಬಿಲಿ' ಮಹೋತ್ಸವವನ್ನು ಇನ್ನು ಕೆಲವು ತಿಂಗಳುಗಳ ತರುವಾಯ ನೆರವೇರಿಸಬೇಕಾಗುತ್ತದೆ. ಅತ್ಯಾನಂದಕರವಾದ ಈ ಮಹೋತ್ಸವವನ್ನು ನೆರವೇರಿಸಲು ತಕ್ಕ ಏರ್ಪಾಡುಗಳನ್ನು ಮಾಡುವ ಉದ್ದೇಶದಿಂದ ನಾವು ಇಲ್ಲಿ ಸಭೆ ಸೇರಿದ್ದೇವೆ.

"ಇಷ್ಟೊಂದು ಭಾರಿ ಸಭೆಯು ಸೇರಿರುವುದನ್ನೂ, ನಾನಾ ವರ್ಗಗಳ ಪ್ರತಿನಿಧಿಗಳು ಇಲ್ಲಿ ನೆರೆದಿರುವುದನ್ನೂ ನೋಡಿದರೆ, ಈ ಶುಭಸಮಯವು ನಮ್ಮೆಲ್ಲರಿಗೂ ಎಷ್ಟು ಆದರಣೀಯವಾಗಿರುವುದೆಂಬುದು ವ್ಯಕ್ತವಾಗುತ್ತದೆ. ಅಲ್ಲದೆ ಆದರ ಮಹತ್ವಕ್ಕೂ, ಈ ಸಂಸ್ಥಾನದ ಮತ್ತು ಇಲ್ಲಿನ ಪ್ರಜೆಗಳ ಪರಂಪರಾಗತವಾದ ಪ್ರಖ್ಯಾತಿಗೂ ಅನುರೂಪವೆನಿಸುವಷ್ಟು ಏಳ್ಬೀಳ್ಗಳಿಂದ ಅದನ್ನು ನೆರವೇರಿಸಲು, ನಮಗೆ ಎಷ್ಟು ಕುತೂಹಲವಿರುವುದೆಂಬುದೂ ಸಹ ಇದರಿಂದ ಸೂಚಿತವಾಗುತ್ತದೆ.

"ಸಂಸ್ಥಾನದ ಸಮಸ್ತ ಪ್ರಜೆಗಳೂ ಏಕಮತ್ಯದಿಂದ ಒಟ್ಟುಗೂಡಿ ಈ ಉತ್ಸವವನ್ನು ನೆರವೇರಿಸಲು ಉತ್ಸುಕರಾಗಿದ್ದಾರೆಂಬುದನ್ನು ವ್ಯಕ್ತಪಡಿಸುವುದಕ್ಕಾಗಿ ಮಾತ್ರವೇ, ಈ ಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸಲು ನನಗೆ ಆಹ್ವಾನವು ಕೊಡಲ್ಪಟ್ಟಿತೆಂದು ನಾನು ಖಚಿತವಾಗಿ ನಂಬುತ್ತೇನೆ. ನಾವು ನೆರವೇರಿಸಬೇಕಾಗಿರುವ ಮಹೋತ್ಸವವು ನಾರ್ವತ್ರಿಕವಾಗಿ ಆದರಣೀಯವಾದುದು. ಆದಕಾರಣ, ಈ ಮಹಾಸಭೆಯಲ್ಲಿ ಸರ್ಕಾರ ಉದ್ಯೋಗಸ್ಥರೆಂಬ ಅಥವಾ ಬಾಸಗಿ ದೊಡ್ಡ ಮನುಷ್ಯರೆಂಬ ಭೇದಕ್ಕೆ ಅವಕಾಶವೇ ಇಲ್ಲ; ಕಾರ್ಯಕ್ರಮವನ್ನು ಅಕ್ಷೇಪಿಸುವವರಾರೂ ಇಲ್ಲ, ಅದರ ಪಕ್ಷವನ್ನು ಹಿಡಿದು ಅತ್ಯಧಿಕವಾಗಿ ವಾದಿಸುವ ಆವಶ್ಯಕತೆಯೂ ಇಲ್ಲ; ಆದಕಾರಣ, ಹಾಗೆ ವಾದಿಸುವವರಾರೂ ಇಲ್ಲ. ಪ್ರಜಾ ಸಮುದಾಯದಲ್ಲಿ ಸಮಸ್ತ ವರ್ಗದವರ ಪ್ರತಿನಿಧಿಗಳಿಂದಲೂ ಕೂಡಿ, ಕೇವಲ ಸ್ವತಂತ್ರ ಸಂಸ್ಥೆಯಾಗಿರುವ ಒಂದು ಸಮಿತಿಯ ಕೋರಿಕೆಯ ಮೇರೆಗೆ ನಾವು ಇಲ್ಲಿ ಸಭೆ ಸೇರಿದ್ದೇವೆ. ಈ ಮಹಾಸಭೆಯಲ್ಲಿ ಮುಂಡಿಸಿರುವವರನ್ನು ನೋಡಿ, ಅವರ ಮನೋಧರ್ಮವನ್ನು ಗ್ರಹಿಸಿದರೆ, ನಮ್ಮ ಸಂಸ್ಥಾನದ ಅಖಿಲ ಪ್ರಜೆಗಳನ್ನೂ ಏಕೀಭಾವದಿಂದ ಒಟ್ಟುಗೂಡಿಸುವ ಅತ್ಯದ್ಭುತವಾದ

ತೆ ಸಿನೀ ಶೇಷವು ಶ್ರೀಮನ್ಮಹಾರಾಜರವರಲ್ಲಿ ನೆಲೆಗೊಂಡಿರುವುದೆಂಬುದು ಒಪ್ಪತಕ್ಕ ಮಾತು ಗೋಚರಿಸುತ್ತದೆ.

"ಈಗ್ಗೆ ಸುಮಾರಾಲ್ಕು ಶತಮಾನಗಳ ಹಿಂದೆ ಅಪೂರ್ವವಾದ ಕಾವ್ಯ ಗಳನ್ನೂ, ನಾಟಕಗಳನ್ನೂ ಬರೆದು, ಅಜರಾಮರವಾದ ಯಶಃಕಾಯ ವಿಂದ ರಾಜಿಸುತ್ತಿರುವ ಕಾಳಿದಾಸ ಮಹಾಕವಿಯು, ತನ್ನ ರಘುವಂಶ ಕಾವ್ಯದಲ್ಲಿ ರಘುಕುಲದ ಅರಸರ ಚರಿತ್ರೆಯನ್ನು ಮನೋಜ್ಞವಾಗಿ ವರ್ಣಿ ಸಿದ್ದಾನೆ. ರಾಜಧರ್ಮವನ್ನು ಪರಿಪಾಲಿಸುವುದರಲ್ಲಿ, ವೇದೋಪದಿಷ್ಟವಾದ ಆಶ್ರಮಗಳಿಗೆ ಸಲ್ಲಿಸಬೇಕಾದ ಕರ್ತವ್ಯ ನಿಯಮಗಳನ್ನೂ ಸಹ, ಬಹುಮಟ್ಟಿಗೆ ಅಪಲಂಬಿಸಿ ಅನುಷ್ಠಾನಕ್ಕೆ ತಂದುಕೊಂಡಿದ್ದ ರಾಜಶ್ರೇಷ್ಠರೂ ಆದ್ದರಿಂದಲೆಂಬುದನ್ನು ಅನೇಕ ಕೋಣೆಗಳಿ ನಿದ್ದಾನೆ. ರಘುಕುಲದ ಅರಸರ ಪರಿಶುದ್ಧ ಜೀವನ; ಫಲೋದಯದವರೆಗೂ ಪ್ರಯತ್ನಮಾಡುತ್ತಿದ್ದ ಅವರ ಅಧ್ಯವಸಾಯ; ಅವರ ಭಕ್ತಿಶ್ರದ್ಧೆಗಳು, ಕರುಣೆ ದಾರ್ಢ್ಯ: ಅಪರಾಧಕ್ಕೆ ತಕ್ಕ ದಂಡನೆಯನ್ನು ವಿಧಿಸುವುದರಲ್ಲಿ ಅವರು ತೋರಿಸುತ್ತಿದ್ದ ವಿವೇಚನೆ, ಅವರ ಆತ್ಮಸಂಯಮನ; ಇವುಗಳ ನ್ನೆಲ್ಲಾ ಕಾಳಿದಾಸ ಕವಿಯು ತನ್ನ ಗ್ರಂಥದಲ್ಲಿ ತಿಳಿಸಿದ್ದಾನೆ. ಅಲ್ಲದೆ, ರಘುಕುಲದ ಅರಸರು ಬಾಲ್ಯದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದುದನ್ನೂ, ವಿವಾಹವಾದಲ್ಲಿ ಗೃಹಸ್ಥಧರ್ಮವನ್ನು ಪರಿಪಾಲಿಸುತ್ತಿದ್ದುದನ್ನೂ, ವಾರ್ಧಕ್ಯ ದಲ್ಲಿ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿ, ಧ್ಯಾನಪರಾಯಣರಾಗಿ ಕಾಲವನ್ನು ಕಳೆಯುತ್ತಿದ್ದುದನ್ನೂ ಬಹಳ ಸುಂದರವಾಗಿ ಬಣ್ಣಿಸಿದ್ದಾನೆ.

"ಸಮಸ್ತವನ್ನು ಆಳುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜ ರವರಲ್ಲಿ, ಅದೇ ವಿಧವಾದ ಸದ್ಗುಣಗಳು ನೆಲೆಸಿವೆಯೆಂದೂ, ಅವೆಲ್ಲಕ್ಕಿಂತ ಮಹಾಸ್ವಾಮಿಯವರು ಆದರ್ಶಭೂತರಾಗಿ ರಾಜಿಸುತ್ತಿದ್ದಾರೆಂದೂ, ನಾನು ವೃಥಮಾಗಿ ನಂಬಿದ್ದೇನೆ. ರಘುಕುಲದ ಅರಸರಲ್ಲಿದ್ದ ಸದ್ಗುಣಗಳಿಂದ ಜೂಲಿ ಮಹಿಮಾನ್ವಿತರಾಗಿರುವ ರಾಜವರೇಣ್ಯರನ್ನು, ನಮ್ಮ ವೇಶದಲ್ಲಿಯೇ, ನಮ್ಮ ಕಾಲದಲ್ಲಿಯೇ, ಕಾಣುವ ಸುಯೋಗವನ್ನು ನಾವು ಪಡೆದಿದ್ದೇವೆ. ನಾನು ಹೀಗೆ ಹೇಳಿರುವುದು ಮಿತಿಮೀರಿದ ಅಭಿಮಾನದಿಂದ ಹುಟ್ಟಿದ ಉತ್ಪ್ರೇಕ್ಷೆಯೆಂದಾಗಲಿ, ಅಥವಾ ಕೇವಲ ಔಪಚಾರಿಕವಾದ ಸ್ತುತಿವಚನ ವೆಂದಾಗಲಿ, ಯಾರೂ ತಿಳಿಯುವುದಿಲ್ಲವೆಂದು ನಂಬಿದ್ದೇನೆ. ಇಷ್ಟರಮೇಲೂ ಈ ವಿಷಯದ ಆಕ್ಷೇಪಣೆಯು ನನ್ನ ಮೇಲೆ ಬಂದಲ್ಲಿ, ನನ್ನ ಪ್ರತ್ಯುತ್ತರವು

ಈ ರೀತಿಯಾಗಿರುವುದು ; ಬಾಲ್ಯದಲ್ಲಿ ನಾನು ಪ್ರಭುಗಳ ಸಹಪಾಠಿಯಾಗಿದ್ದೆನು; ಆ ಬಳಿಕ ಸಂಸ್ಥಾನದ ಸೇವೆಯಲ್ಲಿ ಅವರೊಡನೆ ಕೆಲಸಮಾಡುತ್ತಾ ಅವರನ್ನು ಓಲೈಸುವ ಭಾಗ್ಯವು ನನಗೆ ದೊರಕಿತು. ರಾಜನೀತಿಜ್ಞರ ಬಾಹ್ಯಲಕ್ಷಣವೆನಿಸಿದ ಗಂಭೀರವಾದ ಮತ್ತು ಪ್ರಶಾಂತವಾದ ಮುಖಭಾವ, ದೊಡನೆ ವಿವೇಕವೂ, ದೃಢಮನಸ್ಕತೆಯೂ, ಪ್ರಭುಗಳಲ್ಲಿ ನೆಲೆಸಿರುವುದನ್ನು ನಾನು ಚಿರಕಾಲದಿಂದಲೂ ನೋಡುತ್ತಲೇ ಇದ್ದೇನೆ. ಆದಕಾರಣ, ಅವರಿಗೆ ನಮಸ್ಕಾರ ಮಾಡುವಾಗ ನನ್ನ ಮನಸ್ಸಿನಲ್ಲಿರುವ ಗೌರವವು ಪ್ರತಿಸಂಪ್ರತಿಯಲ್ಲಿಯೂ ಹೆಚ್ಚುತ್ತಲೇ ಇದೆ. ಕರುಣಾಪೂರ್ಣ ಹೃದಯಂಗಮವಾದ ನಮ್ಮ ಪ್ರಭುಗಳಲ್ಲಿ ನೆಲೆಸಿರುವ ಉದಾತ್ತವಾದ ಧ್ಯೇಯಗಳೂ, ದಯಾಭರಿತವಾದ ಸಹಾನುಭೂತಿಯೂ, ನನಗೆ ಹೆಚ್ಚು ಹೆಚ್ಚಾಗಿ ಮಂದಟ್ಟಾಗುತ್ತಾ ಬಂದ ಹಾಗೆಲ್ಲಾ, ಅವರಲ್ಲಿ ನನಗಿರುವ ಪ್ರೀತಿವಿಶ್ವಾಸಗಳೂ ತೀವ್ರವಾಗಿ ಅಭಿವೃದ್ಧಿಯಾಗುತ್ತಲೇ ಇವೆ. ಸತ್ಪುರುಷರೆಂದು ಪ್ರಖ್ಯಾತಿಯನ್ನು ಪಡೆದವರಲ್ಲಿ ಎಂಥವರಲ್ಲಿಯೂ ಸಹ ಅವರ ಉಪ್ಪು ಸೇವಕನಿಗೂ ಆರಾಧನಾರ್ಹವಾಗಿ ತೋರುವ ಘನತೆಯು ಇರುವುದಿಲ್ಲವೆಂಬುದಾಗಿ ಕಾರ್ಲೈಲ್ ಎಂಬ ಪಾಶ್ಚಾತ್ಯ ಪಂಡಿತನೂ ಬರೆದಿದ್ದಾನೆ. ಅವನು ಈಗ ಜೀವಿಸಿದ್ದು, ನಮ್ಮ ಪ್ರಭುಗಳಾದ ಶ್ರೀ ಕೃಷ್ಣರಾಜ ಒಡೆಯರ ಸದ್ಗುಣಾವಳಿಗಳನ್ನೂ, ನಾತ್ಸಕೃತ್ಯಗಳನ್ನೂ, ನೋಡುವ ಸುಯೋಗವು ಅವನಿಗೆ ದೊರಕಿದ್ದರೆ ಅವನು ಹಾಗೆ ಬರೆಯುತ್ತಲೇ ಇರಲಿಲ್ಲ. . . .

"ಶ್ರೀಮನ್ಮಹಾರಾಜರವರು ಕೇವಲ ಚಿಕ್ಕ ವಯಸ್ಸಿನಲ್ಲಿಯೇ ರಾಜ್ಯಸೂತ್ರವನ್ನು ಸ್ವೀಕರಿಸಿ, ಮಹಾರಾಜ ಪದವಿಯನ್ನಲಂಕರಿಸಿದರು. ಆದಕಾರಣ ಅವರು ಈಗಾಗಲೇ ಇಪ್ಪತ್ತೈದು ವರ್ಷಕಾಲ ನಮ್ಮ ದೇಶದಲ್ಲಿ ಪ್ರಭುತ್ವಸಾಗಿಸಿದುದಕ್ಕಾಗಿ, ಅವರು ಇನ್ನೂ ಕೇವಲ ಪೂರ್ವವಯಸ್ಸಿನಲ್ಲಿರುವಾಗಲೇ, ನಮ್ಮ ಜನಂದಾತಿಶಯಗಳನ್ನು ಕೃತಪಡಿಸಿ, ಶ್ರೇಯಃಪ್ರಾರ್ಥನೆ ಮಾಡುವ ಸುಸಮಯವು ನಮ್ಮ ಪುಣ್ಯವಿಶೇಷದಿಂದ ನಮಗೆ ಲಭಿಸಿರುತ್ತದೆ. ಆದಕಾರಣ ವರ್ಧಿಷ್ಣುವಿನೆಯಲ್ಲಿರುವ ಈ ಸಂಸ್ಥಾನದ ಪುರೋಭಿವೃದ್ಧಿಗೆ ಪರಾಗದರ್ಶಗಳಾಗಿದ್ದುಕೊಂಡು ಮಹಾಸ್ವಾಮಿಯವರು ಚಿರಕಾಲ ಪ್ರಭುತ್ವ ನಡಸುವಂತೆ ಭಗವಂತನು ಅನುಗ್ರಹಿಸುವನೆಂದು ನಾವು ನಂಬಿಕೊಂಡಿರಬೇಕಾಗಿದೆ. ಮಹಾಸ್ವಾಮಿಯವರೇ ಚಿರಜೀವನದ ಕೇಂದ್ರ

ಸ್ಥಾಪಕರೂ ಆದರು. ಮಹಾಸಾಭೆಯೆಂಬುದೇ ಜನಜೀವನದ ಮೂಲತಾಣ
ವೂ ಆದರು. ಮಹಾಸಾಭೆಯೆಂಬುದೇ ಜನಜೀವನದ ಸಚ್ಚೇರಕರೂ ಆಗಿದ್ದ



ರಜತಮಹೋತ್ಸವದ ಗಡಿಯಾರ

ಸ್ಥಿ ಅವರು ಧರ್ಮಸಿತರಾದ ರಾಜಪತ್ನಿಯಾಗಿಯೂ, ರಾಜರುಗಳ್ಳಿ
ಜನರು ಸದ್ಗುಣಭರಿತರಾದ ಪುರುಷಶ್ರೇಷ್ಠರಾಗಿಯೂ ಇದ್ದಾರೆ. ಮಹಾ
ಸ್ವಾಮಿಯವರಲ್ಲಿ ಸಮಗಿರುವ ಪ್ರೀತಿಗೂ, ಅವರ ರಾಜಪದವಿಯಲ್ಲಿ
ಸಮಗಿರುವ ಭಕ್ತಿಗೂ ಅನುಗುಣವಾದ ಏಕ್ಯಭಾವನೆಯಿಂದ ಅವರ ಆಜ್ಞೆಯ
ನ್ವಯ ಮೈಸೂರಿನಲ್ಲಿ ಮಹೋತ್ಸವವನ್ನು ಸರಪೇರಿಸಲು ತಕ್ಕ ಕಾರ್ಯ

ಕ್ಷಮಾಪಣೆಯನ್ನು ಸೂಚಿಸುವುದಕ್ಕಾಗಿಯೂ ಎಂದಿನಂತೆ ಸಮ್ಮೇಳನಕ್ಕೆ ಶುಭಕಾಮನೆಗಳನ್ನು ಅರ್ಪಿಸಲು ಅಲ್ಲಿಂದ ಕಾಗದಗಳು ಬಂದಿದ್ದವು. ಬೇಕಾದ ಈ ಸಮಯದಲ್ಲಿ ಸಮಾಜದ ಸಹಾಯವನ್ನು ಬೇಡಿದ್ದರು.

ಒಳಗೆ ಬಹಿರಂಗ ಸಭೆಯಲ್ಲಿ ಕಾರ್ಯಾರಂಭವಾಗಿ ಸ್ವಾಗತಸಮಿತಿಯ ಅಧ್ಯಕ್ಷರಾದ ಶ್ರೀಯುತ ಕೆ. ಪಿ. ಪುಟ್ಟಣ್ಣ ಶೆಟ್ಟಿಯವರು ಸಂಸ್ಥಾನದ ಪರವಾಗಿ ಸ್ವಾಗತವನ್ನು ಕೋರಿದರು. ಈ ಮಹತ್ಕಾರ್ಯದಲ್ಲಿ ಸಹಾಯ ಮಾಡಿದ ಮಹನೀಯರಿಗೆ ಕೃತಜ್ಞತೆಯನ್ನು ಅರ್ಪಿಸಿದರು. ಸಂಸ್ಥಾನದ ಮಹಾಜನರು ಈ ಬಿಡಾರದ ಸುತ್ತಾ ಶುಚ್ಛತೆಯಿಂದಿರಲು ಮೊದಲಾದ ಸೂಚನೆಗಳನ್ನು ಕೊಟ್ಟರು. ಬಳಿಕ ಪ್ರತಿನಿಧಿಗಳನ್ನು ಸ್ವಾಗತಿಸಲು ಅಭ್ಯರ್ಥಕರೆಲ್ಲರಿಗಾಗಿ ಕೆಲವು ಬಿಲ್ಲೆಗಳನ್ನು ಕೊಡಲಾಯಿತು. ಈ ಹಣದಿಂದ ಸಮಾಜಸ್ಥಾಪಿಯವರ ಸಾಧನಾಪೇಕ್ಷೆಯಲ್ಲಿ ಒಂದು ಸ್ವತ್ತಿನ ಲಕ್ಷ್ಮಣಾಲಯವನ್ನು ನಿರ್ಮಿಸಲಾಯಿತು. ಈ ಕಟ್ಟಡದ ಅಸ್ತಿವಾರ ತಿಲಿಯುವ ಸ್ಮರಣಾರ್ಥ ಸಮಾರಂಭವನ್ನು ಸಮಾಜಾಧ್ಯಕ್ಷರು ತಮ್ಮ ಅಮೃತ ಹಸ್ತಗಳಿಂದ ನೆರವೇರಿಸಿದರು. ಈಗ ಈ ಕಟ್ಟಡ ಕಟ್ಟಿಯಾಗಿದೆ. ಇದೇ ಪೀಠಕ್ಕೆ ಬಾಗಿಲಾಗಿ ಬಳಕೆಯಲ್ಲಿದೆ.

ಈ ಮಹೋತ್ಸವದ ಕಾರಣದಲ್ಲಿ, ಸ್ವಜಿಲ್ಲೆಯ ಬಿಡಿಸಿಲ್ಲದ ಬಿಡಿಸಿಲ್ಲದ ಸಮಾಜಕ್ಕೆ ಮಾರ್ಗದರ್ಶಿಯಾಗಿರುವ ಈ ಕಾಲದ ಮಾಲೆಯ ಭಾಷ್ಯವನ್ನು ಅವರೇ ಕೊಡಿಸಿದರು:—

"ಸ್ನೇಹಿತರೆಲ್ಲರಿಗೂ ನಮಸ್ಕಾರ. ನಿಮ್ಮಲ್ಲಿಗೆ ಸಮ್ಮೇಳನಕ್ಕೆಂದು ಬಂದಿರುವ ಸ್ವಾಮಿಗಳವರನ್ನು ಸ್ವಾಗತಿಸಲಿಕ್ಕೆ ಈ ಅಧಿಸಂದರ್ಭವನ್ನು ಸಮರ್ಥಿಸಿಕೊಳ್ಳಲು ನಿಮ್ಮ ಅಧಿಕಾರಿಯಾದ ನಾನು ನಿಂತಿದ್ದೇನೆ. ಬಹುವರ್ಷಗಳ ಹಿಂದೆಯೇ ಧರ್ಮಪ್ರಚಾರಕ್ಕಾಗಿ ಸಮಾಜ ಏರ್ಪಡಿಸಬೇಕೆಂಬ ಸಂತೋಷಕರ ಮನಸ್ಸು ಉಂಟಾಗಿತ್ತು.

"ಧರ್ಮದಂತೆಯೂ ಪ್ರಸಂಗದ ವೇಳೆಗೆ ಸಾಧನ ಸಿದ್ಧವಾಗದ ಪಾಪಭೀತಿಗಾಗಿಯೂ ಆಗಾಗ ಮುಂದೂಡಿಕೊಂಡು ಬರಬೇಕಾಯಿತು. ಬಹುವರ್ಷಗಳಿಂದ ಸಮಾಜದ ಸಾಧನಾಪೇಕ್ಷೆಯಲ್ಲಿ ಒಂದು ಸ್ವತ್ತಿನ ಲಕ್ಷ್ಮಣಾಲಯವನ್ನು ನಿರ್ಮಿಸಲಾಯಿತು. ಈ ಕಟ್ಟಡದ ಅಸ್ತಿವಾರ ತಿಲಿಯುವ ಸ್ಮರಣಾರ್ಥ ಸಮಾರಂಭವನ್ನು ಸಮಾಜಾಧ್ಯಕ್ಷರು ತಮ್ಮ ಅಮೃತ ಹಸ್ತಗಳಿಂದ ನೆರವೇರಿಸಿದರು. ಈಗ ಈ ಕಟ್ಟಡ ಕಟ್ಟಿಯಾಗಿದೆ. ಇದೇ ಪೀಠಕ್ಕೆ ಬಾಗಿಲಾಗಿ ಬಳಕೆಯಲ್ಲಿದೆ.

ಈ ಮಹೋತ್ಸವದ ಕಾರಣದಲ್ಲಿ, ಸ್ವಜಿಲ್ಲೆಯ ಬಿಡಿಸಿಲ್ಲದ ಬಿಡಿಸಿಲ್ಲದ ಸಮಾಜಕ್ಕೆ ಮಾರ್ಗದರ್ಶಿಯಾಗಿರುವ ಈ ಕಾಲದ ಮಾಲೆಯ ಭಾಷ್ಯವನ್ನು ಅವರೇ ಕೊಡಿಸಿದರು:—

"ಸ್ನೇಹಿತರೆಲ್ಲರಿಗೂ ನಮಸ್ಕಾರ. ನಿಮ್ಮಲ್ಲಿಗೆ ಸಮ್ಮೇಳನಕ್ಕೆಂದು ಬಂದಿರುವ ಸ್ವಾಮಿಗಳವರನ್ನು ಸ್ವಾಗತಿಸಲಿಕ್ಕೆ ಈ ಅಧಿಸಂದರ್ಭವನ್ನು ಸಮರ್ಥಿಸಿಕೊಳ್ಳಲು ನಿಮ್ಮ ಅಧಿಕಾರಿಯಾದ ನಾನು ನಿಂತಿದ್ದೇನೆ. ಬಹುವರ್ಷಗಳ ಹಿಂದೆಯೇ ಧರ್ಮಪ್ರಚಾರಕ್ಕಾಗಿ ಸಮಾಜ ಏರ್ಪಡಿಸಬೇಕೆಂಬ ಸಂತೋಷಕರ ಮನಸ್ಸು ಉಂಟಾಗಿತ್ತು.

"ಧರ್ಮದಂತೆಯೂ ಪ್ರಸಂಗದ ವೇಳೆಗೆ ಸಾಧನ ಸಿದ್ಧವಾಗದ ಪಾಪಭೀತಿಗಾಗಿಯೂ ಆಗಾಗ ಮುಂದೂಡಿಕೊಂಡು ಬರಬೇಕಾಯಿತು. ಬಹುವರ್ಷಗಳಿಂದ ಸಮಾಜದ ಸಾಧನಾಪೇಕ್ಷೆಯಲ್ಲಿ ಒಂದು ಸ್ವತ್ತಿನ ಲಕ್ಷ್ಮಣಾಲಯವನ್ನು ನಿರ್ಮಿಸಲಾಯಿತು. ಈ ಕಟ್ಟಡದ ಅಸ್ತಿವಾರ ತಿಲಿಯುವ ಸ್ಮರಣಾರ್ಥ ಸಮಾರಂಭವನ್ನು ಸಮಾಜಾಧ್ಯಕ್ಷರು ತಮ್ಮ ಅಮೃತ ಹಸ್ತಗಳಿಂದ ನೆರವೇರಿಸಿದರು. ಈಗ ಈ ಕಟ್ಟಡ ಕಟ್ಟಿಯಾಗಿದೆ. ಇದೇ ಪೀಠಕ್ಕೆ ಬಾಗಿಲಾಗಿ ಬಳಕೆಯಲ್ಲಿದೆ.



ಸಿಲ್ವರ್ ಜ್ಯೂಬಿಲೀ ಮಹೋತ್ಸವದ ಜ್ಞಾಪಕಾರ್ಥವಾಗಿ ಕಟ್ಟಿದ ಟೆಕ್ನಲಾಜಿಕಲ್ ಇನ್‌ಸ್ಟಿಟ್ಯೂಟ್, ಬೆಂಗಳೂರು

ಕಾರ್ಯಾಸಕ್ತರೂ ಆದ ಪ್ರಜೆಗಳನ್ನೂ ದಯಪಾಲಿಸಿರುವನು. ಮೈಸೂರು ಸಂಸ್ಥಾನಕ್ಕೆ ಮಾದರಿ ಸಂಸ್ಥಾನವೆಂದು ಬಂದಿರುವ ಖ್ಯಾತಿಗೂ, ನಾರ್ವ ಭೌಮ ಸರ್ಕಾರವು ಈಗತಾನೇ ತೋರಿಸಿರುವ ಘನವಾದ ಪುರಸ್ಕಾರಕ್ಕೂ, ನಿಮ್ಮಗಳ ಪ್ರೀತಿಪೂರ್ವಕವಾದ ಸಹಕಾರವೇ ಮುಖ್ಯಕಾರಣವಾಗಿರುವುದು. ಇದೇರೀತಿಯಲ್ಲಿ ಮುಂದೆಯೂ ನಾವೆಲ್ಲರೂ ಕಲೆತು, ಸಹೋದರ ಭಾವದಿಂದ ಕಾರ್ಯಗಳನ್ನು ನಡೆಯಿಸಿ, ಕೃಷಿ, ಕೈಗಾರಿಕೆ, ವಾಣಿಜ್ಯಗಳಿಗೆ ಹೆಚ್ಚು ಸೌಕರ್ಯವನ್ನು ಕೊಡುತ್ತ, ನೂತನಕಾಲದಲ್ಲಿ ಉತ್ತಮಸ್ಥಿತಿಗೆ ಬಂದಿರುವ ದೇಶಗಳ ಸಮಕ್ಕೆ ಮೈಸೂರು ದೇಶವನ್ನು ತರಲು, ನಮ್ಮ ಶಕ್ತಿ ಸಾಹಸಗಳನ್ನೆಲ್ಲಾ ಉಪಯೋಗಿಸಬೇಕಾಗಿರುವುದು.

"ಈ ಮಹತ್ಕಾರ್ಯದಲ್ಲಿ ಎಲ್ಲಾ ಪಂಗಡದವರೂ ನಮ್ಮ ಪ್ರಜೆಗಳೇ. ಒಂದು ದೇಶದಲ್ಲಿ ಜನಿಸಿದವರೇ, ಎಂಬುದನ್ನು ನೆನಪಿನಲ್ಲಿಟ್ಟು, ಸಹಾಯಕರಾಗಬೇಕೆಂಬುದು ನಮ್ಮ ಅಭಿಲಾಷೆಯಾಗಿರುತ್ತದೆ. ಮುಂದೆ ವೃದ್ಧಿಗೆ ಬರುವವರಾಗಿರುವ ಯುವಕ ಸಮುದಾಯದವರೂ, ಸಹೋದರ ಭಾವವನ್ನೂ, ಪ್ರಜಾಧರ್ಮವನ್ನೂ, ತಮ್ಮ ದೃಷ್ಟಿಯಲ್ಲಿಟ್ಟುಕೊಂಡು, ನಮ್ಮ ಪ್ರೀತಿಗೆ ವಿಷಯವಾದ ಮಾತೃಭೂಮಿಯ ಶ್ರೇಯಸ್ಸಾಧನೆಗಾಗಿ ಯತ್ನಿಸಬೇಕೆಂದು ಬಯಸುತ್ತೇವೆ. ತಮ್ಮ ಸಂಕಟಗಳನ್ನು ಕಂಠೋಕ್ತವಾಗಿ ಹೇಳಿಕೊಳ್ಳಲಾರದ ಪ್ರಾಣಿಗಳ ವಿಷಯದಲ್ಲಿ ಕನಿಕರವನ್ನು ತೋರಿಸಬೇಕೆಂದು ಈ ಸಂದರ್ಭದಲ್ಲಿ ಸೂಚಿಸಲಿಚ್ಛಿಸುತ್ತೇವೆ.

"ಪ್ರಜೆಗಳ ಸೌಖ್ಯವೇ ನಮ್ಮ ಸೌಖ್ಯವೆಂದು ನಾವು ಸದಾ ಭಾವಿಸಿಕೊಂಡಿರುತ್ತೇವೆ. ಅಂತಹ ಸೌಖ್ಯಸಾಧನೆಗೆ ಆವಶ್ಯಕವಾದ ವಿವೇಕ, ಸ್ಥಿರಸಂಕಲ್ಪ, ಸಹಾಯಸಂಪತ್ತು, ಇವುಗಳನ್ನು ನಮಗೆ ಅನುಗ್ರಹಿಸಲೆಂದು ಕರುಣಾಮಯನಾದ ಭಗವಂತನನ್ನು ನಿರಂತರವೂ ಪ್ರಾರ್ಥಿಸುತ್ತಿರುವೆವು" ಎಂದು ಅಪ್ಪಣೆಕೊಡಿಸಿ ಜೂಬಿಲಿ ಗಡಿಯಾರವನ್ನು ತೆರೆದರು.

ಇದೇ ಸಮಯದಲ್ಲಿ ಶ್ರೀಮನ್ಮಹಾರಾಜರವರು ಮೈಸೂರು ಆರಮನೆಯಿಂದ ೧೯೨೬ನೆಯ ಆಗಷ್ಟು ೮ನೆಯ ತಾರೀಖಿನ ದಿನ ಸಂಸ್ಥಾನದ ಪ್ರಜೆಗಳಿಗೆ ಕೊಟ್ಟಿರುವ ಸಂದೇಶವೇ ಮಹಾಸ್ವಾಮಿಯವರಲ್ಲಿ ತುಂಬಿರುವ ಸುಗುಣಗಳನ್ನು ವ್ಯಕ್ತಗೊಳಿಸುತ್ತದೆ. ಈ ಮುಂದೆ ಬರುವ ಸಂದೇಶವು ಮಹಾಸ್ವಾಮಿಯವರ ಸ್ವಂತ ಒರವಣಿಗೆಯೂ ಕಾಪಿಯಾಗಿದೆ.

The Palace
Mysore

8th August 1927.

On this day, when I complete the twenty-fifth year of my reign, I send my loving greetings to each one of my dear people, with a heart full of solicitude for their happiness: with unceasing effort I shall, while life lasts, endeavour to promote their welfare and prosperity, and I pray that God may give me light and strength to achieve this, the supreme object of my life and rule

Krishnaraja Wadiyar

ನಮ್ಮ ರಾಜ್ಯಭಾರವು ಪ್ರಾರಂಭವಾಗಿ ಇಪ್ಪತ್ತೈದು ವರ್ಷಗಳು ಪೂರ್ಣವಾದುದರಿಂದ ನಾವು ನಮ್ಮ ಪ್ರಜೆಗಳಿಗೆ ಪ್ರೀತಿಪೂರ್ವಕವಾದ ಶುಭಾಶಯಗಳನ್ನು ತಿಳಿಸುವುದಲ್ಲದೆ ಅವರ ಸುಖಾಭಿವೃದ್ಧಿಯ ವಿಷಯದಲ್ಲಿ ಪ್ರತಿಯೊಬ್ಬರೂ ನಮ್ಮಲ್ಲಿ ಯಾವಾಗಲೂ ಇರುವಂತೆ ಅವರಿಗಾಗಿ ಹೃದಯದಲ್ಲಿ ಹಾರೈಸುತ್ತಿರುವುದಾಗಿಯೂ ತಿಳಿಸುತ್ತೇವೆ. ನಮ್ಮ ಜೀವಿತಾವಧಿಯಲ್ಲಿ ಅವಿಚ್ಛಿನ್ನವಾದ ಪ್ರಯತ್ನದಿಂದ ಅವರ ಕ್ಷೇಮಾಭಿವೃದ್ಧಿಗಳನ್ನು ಸಾಧಿಸಲು ಪ್ರಯತ್ನಿಸುವುದಾಗಿಯೂ ಇದೇ ನಮ್ಮ ಜೀವನದ ಮತ್ತು ಆಳ್ವಿಕೆಯ ಪರಮೋದ್ದೇಶವಾಗಿರುವುದರಿಂದ ಇದನ್ನು ಸಾಧಿಸಲು ನಮಗೆ ಬೆಳಕನ್ನೂ ಶಕ್ತಿಯನ್ನೂ ಕೊಡಬೇಕೆಂದು ಪ್ರಾರ್ಥಿಸುತ್ತೇವೆ.

ಶ್ರೀ ಕೃಷ್ಣ.

آج جو میں اپنے سلطنت کا بچیسواں سال پورا کرتا ہوں اپنے تمام عزیز رعایا کو اپنے دل سے جو انکی خوشحالی کے لئے ہمہ تن فکر ہے نہایت سلام کہتا ہوں اپنی زندگی بھر جب تک کہ زندگی باقی ہے انکی بھلائی اور کامیابی کے لئے کوشش کرونگا میں دعا کرتا ہوں کہ خداوند مجھکو روشنی اور قوت عطا فرمائے کہ میں اپنے سلطنت اور زندگی کے اس مقصد عالی کو انجام دوں۔

کرشنا راج وڈیار

ಈ ಏಕೀಕರಣೋತ್ಸವ ಕಾಲದಲ್ಲಿ ಶ್ರೀಮನ್ಮಹಾರಾಜವರು ಮೊದಲನೆಗೆ ಬಿಡುಗಡೆಯನ್ನು ಮೈಸೂರು ಮತ್ತು ಬೆಂಗಳೂರು ಪಟ್ಟಣಗಳಲ್ಲಿ ಬಹು ಸಂಭ್ರಮದಿಂದ ನಡೆಯಿಸಿತು. ಬಹುಸಂಖ್ಯಾತರು ಬಂದು ಸೇರಿ ಆನಂದ ಪಟ್ಟರು. (ಇಂಥ ಮಹೋತ್ಸವವನ್ನು ನಡೆದುದು ಮೈಸೂರು ಚರಿತ್ರೆಯಲ್ಲಿ ಇದೇ ಮೊದಲಬಾರಿಯು ಸಲಹಾಗಿದೆ.)

**'ಕನ್ನಡ ನುಡಿ'** ಎಂಬ ವಾರಪತ್ರಿಕೆಯು ಈ ರೀತಿಯಾಗಿ ಪ್ರಭುಗಳ ಗುಣಗಾನ ಮಾಡಿರುವುದು.

ಪುರುಷೋತ್ತಮನೆನೆ ನರರೊಳ್ |
ಸುರರೊಳ್ ತಾನ್ ದೇವದೇವನೆನೆ ಬೆಳಗುವನಾ ||
ಪರಮಾತ್ಮನ್ ವ್ಯೋಮಾತ್ಮನ್ |
ಕರುಣಿಕೆ ಶ್ರೀ ಕೃಷ್ಣನೃಪತಿಗೆಲ್ಲಾ ಒಳ್ಪಂ ||೧||

ಜಲನಿಧಿಗಳೊಳ್ ಕಳಶಜಲಧಿ ರಾಜಿಸುವಂತೆ |
ಕುಲದ ಶೈಲಂಗಳೊಳ್ ಕನಕಗಿರಿ ಪೆರೆವಂತೆ |
ಲಲಿತನರಸಿಗಳೊಳಗೆ ಮಾನನನರೋವರಂ ಪೊಳೆವಂತೆ ಮೇದಿನಿಯೊಳು ||
ಫಲಿತದ್ರುಮಂಗಳಿಂ ಬೆಳಗಳಿಂ ಕೊಳಗಳಿಂ |
ನಲಿ ವಿರಾಜಿಸುತಿರ್ಪ ಕರ್ನಾಟ ಜನಪದಂ |
ಜ್ವಲಿಸುವ್ಯೆವತ್ತಾರು ದೇಶಂಗಳೊಳ್ ಸಕಲಸಂಪತ್ತಿನಿಂ ಮೆರೆವುದು ||೨||

ಆ ದೇಶದರಸುಗಳ ಸಂತತಿಗೆ ಶೇಖರಂ |
ಶ್ರೀ ದೇವಚೇತನಯ ಭಕ್ತರತ್ನಾಕರಂ |
ಭೂದೇವಿಯೊಲ್ಪೆಯಿಂ ಸಕಲಸಂಪತ್ಕರಂ ಶ್ರೀಕರಂ ಕೀರ್ತಿಕರನು ||
ಆದರದಿ ನಿಜಕುಲದ ಜನಕೆ ಬೋಧಾಕರಂ |
ಯಾದವಾನ್ವಯವೆಂಬ ಜಲಧಿಗೆ ಸುಧಾಕರಂ |
ಶ್ರೀಪ ಸದೃಶನು ಕೃಷ್ಣರಾಜ ರಾಜರ್ಷಿತಾನ್ ಸೊಗಸಿಂದ ರಾಜಿಸುವನು ||೩||

ಚದುರಂ ಚಾಗಿಯಲಂವುಗಾರನೆರೆಯಂ ಸಂಗೀತಸಾಹಿತ್ಯ ಕೋ |
ವಿದನುತ್ತಾಹಿ ವಿವೇಕಶಾಲಿ ನಯಶೀಲಂ ಸೇಮುಗಾರಂ ಕಲಾ ||
ವಿದನೊಳ್ತಾತುಗನೋಜಗಾರನುಚಿತಜ್ಞಂ ಭಾವುಕಂ ಧಾರಿಣೀ |
ಹೃದಯಗ್ರಾಹಿ ದಯಾಪಯೋಧಿ ಸಿರಿಕೃಷ್ಣೇಂದ್ರಂ ಮಹೀಚಂದ್ರಮಂ ||೪||

ಶ್ರೀಪತಿಯ ಸೇವೆಯೆಂದೇ |
ಈ ಪರಿಯೊಳ್ ಕ್ಷಾತ್ರಧರ್ಮವೆಸಗುತೆ ಶಾಸ್ತ್ರಾ ||
ಲಾಪಂಗಳ ತತ್ತಾರ್ಥ ನಿ |
ರೂಪಣದಿಂ ಪೊಳ್ತುಗಳೆವನಾತ್ಮವಿಹಾರಂ ||೫||

ಎಳಿಗೆಯ ವಡೆಗೆ ತಾಯ್ನುಡಿ |
ಬಾಳುಗೆ ಕನ್ನಡದ ನಾಡು ಹಿರಿತನದಿಂದಂ ||
ತಾಳುಗೆ ಜನರಾನಂದಮ |
ನಾಳುಗೆ ಚಿರಕಾಲಮೆಸೆದು ನಮ್ಮಾ ಕೃಷ್ಣಂ ||೬||

---

# ೧೪ನೆಯ ಅಧ್ಯಾಯ

## ಮಹಾಯಾತ್ರೆಗಳು

**ಅಮರನಾಥ ಯಾತ್ರೆ.**—೧೯೧೮ರಲ್ಲಿ ಶ್ರೀಮನ್ಮಹಾರಾಜರವರು ಕಾಶ್ಮೀರ ಮಹಾರಾಜರವರಿಂದ ಆಹ್ವಾತರಾಗಿ ತಮ್ಮ ಪರಿವಾರದೊಡನೆ ಆ ವರ್ಷದ ಒಲ್ಬೆ ತಿಂಗಳಲ್ಲಿ ಕಾಶ್ಮೀರಕ್ಕೆ ದಯಮಾಡಿಸಿದರು. ಹೋಗುತ್ತಾ ದಾರಿಯಲ್ಲಿ ಸಿಕ್ಕಿದ ಜಾರ್ಜಿಯಾ, ಗ್ವಾಲಿಯರ್, ಆಗ್ರಾ, ದೆಹಲಿ, ಅಮೃತಸರ, ಲಾಹೋರ್ ಮುಂತಾದ ಪಟ್ಟಣಗಳನ್ನು ನೋಡಿಕೊಂಡು, ರಾವಲ್ಪಿಂಡಿಯಲ್ಲಿ ಇದುರುಗೊಂಡ ಕಾಶ್ಮೀರ ಮಹಾರಾಜರವರ ಕಡೆಯ ಅಧಿಕಾರಿಗಳೊಡನೆ ಮುಂದಕ್ಕೆ ೧೧೨ ಮೈಲಿ ಮೋಟಾರಿನಲ್ಲಿ ಪ್ರಯಾಣ ಬೆಳೆಸಿ ಹೋಗುತ್ತಾ, ಸುಂದರವಾದ ಕಾಡುಮೇಡುಗಳ, ಬೆಟ್ಟಗುಡ್ಡಗಳ, ನೀಲಾಂಬರದ ದಿವ್ಯಸೌಂದರ್ಯದ, ಒಗೆಬಗೆ ಬಣ್ಣದ ಹಕ್ಕಿಪಕ್ಷಿಗಳನ್ನು ನೋಡುತ್ತಾ ಕಾಶ್ಮೀರ ರಾಜಧಾನಿಯಾದ ಶ್ರೀನಗರವನ್ನು ತಲಪಿದರು. ಇಲ್ಲಿ ಆ ಮಹಾರಾಜರವರ ಛೋಟಿ ಮುರುಛೋಟಿಗಳಾದ ಬಳಿಕ, ರಾಜ ದಲಜೀತ್ ಸಿಂಗರೊಡನೆ ಅಲ್ಲಿನ ಬಲೆಕ್ಟ್ರಿಕ್ ಜನರೇಟಿಂಗ್ ಕಾರ್ಖಾನೆಯನ್ನೂ, ರೇಷ್ಮೇ ಕಾರ್ಖಾನೆಯನ್ನೂ, ಕೈಗಾರಿಕ ಶಾಲೆಯನ್ನೂ, ರತ್ನಗಂಬಳಿ ಕಾರ್ಖಾನೆಯನ್ನೂ, ಮ್ಯೂಜಿಯಂ ಬಂಗಲೆ ಮುಂತಾದುವುಗಳನ್ನೂ ವರಾಂಬರಿಸಿದರು. ರೇಷ್ಮೇ ಕೈಗಾರಿಕೆಯನ್ನು ಕಲಿಯಲು ಪ್ಯೆಸೂರಿಂದ ಬಂದಿರುವ ಅಧಿಕಾರಿಗಳನ್ನೂ ಮಾತಾಡಿಸಿದರು. ಸ್ಟೀಮರ್ ಲಾಂಚಿನಲ್ಲಿ ಕುಳಿತು ಜೀಲಂ ನದಿಯಲ್ಲಿ ಹೊರಟು ಸುಂದರವಾದ ಪಟ್ಟಣವನ್ನೂ ಉದ್ಯಾನವನಾಲೆಗಳನ್ನೂ ನೋಡಿಕೊಂಡು ಬಂದರು. ಇಲ್ಲಿ ಕೆಲವು ಜನರಿಗೆ ದೋಣಿಗಳ ಮೇಲೆಯೇ ಕಟ್ಟಿ ಅಲ್ಲೇ ವಾಸಮಾಡುತ್ತಾರೆ.

ಆಗಸ್ಟ್ ೧೫ನೇ ತಾರೀಖು ಶ್ರೀನಗರವನ್ನು ಬಿಟ್ಟು ಹೊರಟು ಚಂದ್ರಾವರ ಎಂಬಲ್ಲಿರುವ ರಾಮಕೃಷ್ಣ ಮಿಷನ್ನಿಗೆ ಯೋಗ ಅಲ್ಲಿನ ಸಂನ್ಯಾಸಿಗಳನ್ನೂ ನೋಡಿಕೊಂಡು ಬಂದರು. ಅಮರನಾಥದಲ್ಲಿ ಮಾಡಬೇಕಾದ ತೀರ್ಥಶ್ರಾದ್ಧಾದಿಗಳಿಗೂ ದಾನಧರ್ಮಗಳಿಗೂ ವಿಶೇಷ ವೈಭವದಿಂದ ಆಗಬೇಕೆಂದು ಹೇಳಬೇಕಾದಿಲ್ಲ. ಕಾಶ್ಮೀರದಿಂದ ಬಂದ ಬಳಿಕ ಅರಮನೆ ಅಧಿಕಾರಿಗಳಿಗೆಲ್ಲ ಅಮರನಾಥದ ಪ್ರಸಾದವನ್ನು ದಯಪಾಲಿಸಿದರು.

**ಬದರೀನಾಥ ಯಾತ್ರೆ.**—ಶ್ರೀಮನ್ಮಹಾರಾಜರವರು ಬದರೀನಾಥ ಯಾತ್ರೆಗಾಗಿ ೧೯೫೫ನೆಯ ಇಸವಿ ಮಾರ್ಚಿ ೨೯ರಲ್ಲಿ ಬೆಂಗಳೂರಿಂದ ಹೊರಟು, ಮದ್ರಾಸ್, ಜಟಾರ್ಸಿ, ಲಕ್ನೌ, ಬೆಲ್ಕಲಿ, ಕಾತ್‌ಗೋಡಂ ಮೂಲಕ ಸೈನಿಟಾಲನ್ನು ಏಪ್ರಿಲ್ ೪ನೆಯ ತಾರೀಖು ತಲಪಿದರು. ಅಲ್ಲಿ ಕೆಲವು ದಿವಸವಿದ್ದು ಅಲ್ಲಿಂದ ಪರಿವಾರ ಸಹಿತ ಪಾದಚಾರಿಗಳಾಗಿಯೇ ಹೊರಟು, ದಾರಿಯಲ್ಲಿ ಸಿಕ್ಕಿದ ಬೆಟ್ಟಗುಡ್ಡಗಳನ್ನು ಹತ್ತಿ ಇಳಿದು ಅದರಿಂದುಂಟಾದ ಆಯಾಸವನ್ನು ಪರಿಗಣಿಸದೆ, ದಿನಕ್ಕೆ ೧೨-೧೫ ಮೈಲಿಯಂತೆ ಪ್ರಯಾಣಮಾಡಿ ೧೫೦ ಮೈಲಿ ದೂರದಲ್ಲಿರುವ ಬದರೀನಾಥವನ್ನು ಹದಿಮೂರು ದಿನಗಳಲ್ಲಿ ತಲಪಿದರು. ಅಲ್ಲಿ ಮಹಾಸ್ವಾಮಿಯವರು ತಪ್ತಕುಂಡದಲ್ಲಿ ಸ್ನಾನಮಾಡಿ, ಬ್ರಹ್ಮಕಪಾಲದಲ್ಲಿ ಪಿತೃಗಳಿಗೆ ತೀರ್ಥಶ್ರಾದ್ಧಾದಿಗಳನ್ನೂ ಪಿಂಡಪ್ರದಾನವನ್ನೂ ಮಾಡಿದರು. ಸಂಜರಾತ್ರಿಗಳನ್ನೂ ಕಳೆದು, ಮಾರನೆಯ ದಿವಸ ಪುನಃ ತಪ್ತಕುಂಡದಲ್ಲಿ ಸ್ನಾನಮಾಡಿ, ನಾರಾಯಣಸ್ವಾಮಿಗೆ ಮಹಾಭಿಷೇಕ, ತುಲಸೀ ಸಹಸ್ರ ನಾಮ, ಮಹಾಮಂಗಳಾರತಿ ಮೊದಲಾದುವ್ರಗಳನ್ನೆಲ್ಲ ನಡೆಸಿದರು. ಗೋದಾನ, ಭೂದಾನ, ಗಜದಾನ, ದೀಪದಾನಾದಿಗಳೆಲ್ಲ ಆಚರಿಸಲ್ಪಟ್ಟುವು. ಎರಡು ಸಾವಿರ ಬ್ರಾಹ್ಮಣರಿಗೆ ಸಂತರ್ಪಣೆ ನಡೆಯಿತು. ಮಹಾಭೂರಿಯನ್ನೂ, ಬೈರಾಗಿಗಳಿಗೆ ಕಂಬಳಿಗಳನ್ನೂ ಕೊಟ್ಟರು. ಮೈಸೂರಿಗೆ ವಾಪಸು ಚಿತ್ರೀಸಿದ ಮೇಲೆ ತಮ್ಮ ಪರಿವಾರದ ಅನೇಕರಿಗೆ ಪ್ರಸಾದವನ್ನೂ ಹಂಚಿದ್ದಲ್ಲದೆ, ಪರಕಾಲ ಮಠಕ್ಕೆ ಚಿತ್ರಪಿಸಿ ಶ್ರೀ ವಾಗೀಶ ಬ್ರಹ್ಮತಂತ್ರ ಸ್ವಾಮಿಗಳಿಗೂ ಒಪ್ಪಿಸಿದರು.

**ಕೇದಾರನಾಥ ಯಾತ್ರೆ.**—೧೯೫೫ನೆಯ ಜುಲೈ ಮಾಸದಲ್ಲಿ ಶ್ರೀಮನ್ಮಹಾರಾಜರವರು ಆಲ್ಮೋರಾದಿಂದ ಹೊರಟು ದಾರಿಯಲ್ಲಿ ಗೌರೀಕುಂಡದಲ್ಲಿ ಅಶೀರಸ್ಕಗಣಪತಿ ದರ್ಶನವನ್ನು ಮಾಡಿಕೊಂಡು ಆಗಸ್ಟು ೮ನೆಯ ಶುಕ್ರವಾರ ೯ ಗಂಟೆಗೆ ಕೇದಾರನಾಥವನ್ನು ತಲಪಿದರು. ಅಲ್ಲಿ ಮಂದಾಕಿನಿಯಲ್ಲಿ ಸ್ನಾನಮಾಡಿ ಪಿತೃ ತರ್ಪಣಾದಿಗಳನ್ನೂ ನೆರವೇರಿಸಿ ಗೋದಾನ ಭೂದಾನಗಳನ್ನೂ ಮಾಡಿದರು. ಸೋಮವಾರ ಕೇದಾರೇಶ್ವರನಿಗೆ ರುದ್ರಾಭಿಷೇಕವನ್ನೂ ಮಾಡಿಸಿ, ಸಹಸ್ರ ಬಿಲ್ವಾರ್ಚನೆ, ಮಹಾನೈವೇದ್ಯ ಮುಂತಾದುವ್ರಗಳನ್ನೆಲ್ಲ ನೆರವೇರಿಸಿದರು. ಅನಂತರ ಮಹಾ

ನ್ಯಾಯಬಯಸಲೇ ದೇವನ್ಯಾಸಕ್ಕೆ ದಯಮಾಡಿ ಮಹಾಮಾತೃಶ್ರೀಯವರ ಶ್ರೇಯಸ್ಸಿಗಾಗಿ ತಮ್ಮ ಹಸ್ತದಿಂದ ಸಹಸ್ರ ಬಿಲ್ವದಳಗಳಿಂದಲೂ ಸ್ವಳ್ಪ ಕನಿಲಗಳಿಂದಲೂ ರೂಪಾಯಿಗಳಿಂದಲೂ ಪೂಜೆಮಾಡಿ ಗೋದಾನ ಭೂದಾನಗಳನ್ನೂ ಬ್ರಾಹ್ಮಣ ಸಂತರ್ಪಣಾದಿಗಳನ್ನೂ ಜರುಗಿಸಿ ಮಹಾ ಮಾತೃಶ್ರೀಯವಲ್ಲಿದ್ದ ಭಕ್ತಿಯನ್ನು ತೋರಿಸಿದರು. ಈ ಸಂದರ್ಭಗಳಲ್ಲಿ ಪಂಡಿತವರ್ಯಂ ಕಾರ್ಕಳಾನಹಳ್ಳಿ ನಾರಾಯಣಶಾಸ್ತ್ರಿಗಳು ಸಕಲ ಕ್ಷೇತ್ರ ಕರ್ಮಗಳನ್ನೂ ಮಾಡಿಸಿದರು. ಈ ರೀತಿಯಾಗಿ ಶ್ರೀಮನ್ಮಹಾರಾಜರವರು ಬ್ಯಾಲಾಮುಖಿ, ರಾಮೇಶ್ವರ, ಮಧುರೆ, ಕುಂಭಕೋಣ, ತಲಕಾವೇರಿ ಮುಂತಾದ ಪುಣ್ಯಕ್ಷೇತ್ರ ಯಾತ್ರೆಗಳನ್ನೂ ಮಾಡಿದುದಲ್ಲದೆ ತಮ್ಮ ಪರಿವಾರದವರಿಂದಲೂ ಮಾಡಿಸಿದರು.

**ಕೈಲಾಸಪರ್ವತ ಯಾತ್ರೆ.**—ಶ್ರೀಮನ್ಮಹಾರಾಜರವರು ಕೈಲಾಸ ಪರ್ವತದಲ್ಲಿರುವ ಮಾನಸಸರಸ್ಸಿಗೆ ಹೋಗುತ್ತಾರೆಂದು ಮಹಾಮಾತೃಶ್ರೀಯವರಿಗೆ ಗೊತ್ತಾಗಲು ಅವರು ಮಹಾರಾಣಿಯವರೊಡನೆ ಅಲ್ಲಿ ಒಬ್ಬ ಎಜಮಾನ್ಯರಿಗೆಂದೂ, ಅಲ್ಲಿಗೆ ಹೋದವರು ಪುನರಪಿ ಬರುವುದಿಲ್ಲವೆಂದೂ, ಅಲ್ಲಿನ ಜನಗಳು ಮಹಾ ಕ್ರೂರರೆಂದೂ ತಾವು ಕೇಳಿರುವಂತೆ ಹೇಳಿದರು. ಮಹಾರಾಣಿಯವರು ತಾಯಿಯವರನ್ನು ಕುರಿತು—"ಅಮ್ಮಯ್ಯಾ, ಇಡೀ ಭರತಖಂಡದಲ್ಲಿರುವ ಪುಣ್ಯಕ್ಷೇತ್ರಗಳಿಗೆಲ್ಲ ಹೋಗಿ ತಮ್ಮ ಆಶೀರ್ವಾದ ಬಲದಿಂದ ಸಕಲ ಯಾತ್ರೆಗಳನ್ನೂ ಪೂರೈಸಿಕೊಂಡು ಒಂದುದಾಯಿತು. ಇನ್ನು ಕೈಲಾಸಪರ್ವತ ಯಾತ್ರೆಯೊಂದು ಉಳಿದಿದೆ. ಅಲ್ಲಿನ ಎಜಮಾನ್ಯರಿಗೆ ನಾನು ಭಯಪಡುವುದಿಲ್ಲ. ಹೋಗಬೇಕೆಂಬ ಸಂಕಲ್ಪವಾಯಿತು ಸಕಲವೂ ಸಿದ್ಧವಾಗಿದೆ. ಕಷ್ಟ ಸುಖಗಳೆಲ್ಲ ದೇವರ ಚಿತ್ತದಂತೆ. ಎಲ್ಲರನ್ನೂ ಕಾಪಾಡುವ ತಕ್ಕವನು ಪರಮೇಶ್ವರನು. ದಯವಿಟ್ಟು ಆಶೀರ್ವಾದವನ್ನು ಅಪ್ಪಣೆಕೊಡಿಸಿ ಕಳುಹಿಸಿಕೊಡಿ" ಎಂಬುದಾಗಿ ಕೇಳಿಕೊಂಡರು. ಮಹಾರಾಣಿಯವರ ಮನಸ್ಸನ್ನು ಚೆನ್ನಾಗಿ ಬಲ್ಲವರಾಗಿದ್ದ ಮಾತೃಶ್ರೀಯವರು ಮರುಮಾತಾಡದೆ, ಭಗವಂತನ ಸೇವೆಗಾಗಿ ಹೊರಟಿರುವ ಕುಮಾರರನ್ನು ತಡೆಯಬಾರದೆಂದು ಸಮ್ಮತಿಸಿ, "ನಿಮಗೆ ತಾಯಿ ಚಾಮುಂಡೇಶ್ವರಿಯು ಒಳ್ಳೆಯದನ್ನು ಮಾಡಲಿ, ಕೈಲಾಸೇಶ್ವರನು ನಿಮಗೆ ಮಾರ್ಗದಲ್ಲಿ ಮಂಗಳವನ್ನುಂಟುಮಾಡಿ ನಿಮ್ಮ ಉದ್ದೇಶವನ್ನು ಈಡೇರಿಸಲಿ, ಹೋಗಿ ಬನ್ನಿ" ಎಂದು ಆಶೀರ್ವದಿಸಿ ಕಳುಹಿಸಿದರು.

ಮಹಾಸ್ವಾಮಿಯವರು ೧೯೫೧ನೆಯ ಜೂಕ ೧೪ನೆಯ ತಾರೀಖಿನ ದಿನ ಕೈಲಾಸಪರ್ವತದ ಯಾತ್ರೆಗಾಗಿ ಹೊರಟರು. ಅವರ ಸಂಗಡ ಆರು



ಕೈಲಾಸಪರ್ವತದ ದೃಶ್ಯ

ಜನ ನರದಾರರು, ಐವರು ಅಧಿಕಾರಿಗಳು, ಇಬ್ಬರು ಡಾಕ್ಟರರು, ಮುವ್ವತ್ತು ಜನ ಸೇವಕರು ಇದ್ದರು. ಇವರಲ್ಲದೆ ಇಂಡಿಯಾ ಸರ್ಕಾರದವರು ದಯವಿಟ್ಟು ಕಳುಹಿಸಿಕೊಟ್ಟ ಸಂಯುಕ್ತಸಂಸ್ಥಾನದ ತಹಶೀಲ್‌ದಾರನೂ

ಅರುವಿನ ಘೂರ್ಕಾ ಸಿಪಾಯಿಗಳೂ ಸಂಗಡ ಇದ್ದರು. ಮಹಾಸ್ವಾಮಿಯವರು ಈ ಪರಿವಾರದೊಂದಿಗೆ ಆಲ್ಮೊರಾದಿಂದ ಹೊರಟರು.

ಕೈಲಾಸಪರ್ವತವು ವೇದಗಳ ಕಾಲದಿಂದಲೂ ಹಿಂದೂಗಳಿಗೂ ಬೌದ್ಧರಿಗೂ ಅಧ್ಯಾತ್ಮಜ್ಞಾನದ ಉಗಮಸ್ಥಾನ. ಪವಿತ್ರವಾಹಿನಿ ಗಂಗೆಯ ತೌರೂರು. ಆರ್ಯಋಷಿಗಳ ತಪೋನಿಲಯ. ಅಧ್ಯಾತ್ಮಜ್ಞಾನಮಾರ್ಗದಲ್ಲಿ ಮುಂದುವರಿದಿರುವ ಭಾರತೀಯರಿಗೆ ಕೈಲಾಸಪರ್ವತವು ಒಂದು ಜೀವಿತ ಪವಿತ್ರಸ್ಥಲ; ಅನಂತಶಾಂತಿಯ, ಅಮರಾನಂದದ, ಏಕಮೇವಾದ್ವೈರಾಗ್ಯದ ಪೂರ್ಣ ಸಂಕೇತಸ್ಥಳವಾಗಿದೆ. ಆದುದರಿಂದಲೇ ಮಾನಸ ಸರೋವರ ಸ್ನಾನವೂ, ಕೈಲಾಸಪರ್ವತ ದರ್ಶನವೂ ಪಾಪನಾಶಕ್ಕೆ ಜನ್ಮಸಾಫಲ್ಯಕ್ಕೆ ಕಾರಣವಾಗುವೆಯೆಂದು ಪುರಾಣಗಳು ಘೋಷಿಸುತ್ತಿವೆ. ಸಾಸಿರಾರು ವರ್ಷಗಳಿಂದಲೂ ಜನರು ಆ ಸ್ಥಳಗಳಿಗೆ ಬಹಳ ಪ್ರಯಾಸಪಟ್ಟುಕೊಂಡು ಹೋಗಿ ಬರುತ್ತಿದ್ದರೂ ಸರಿಯಾದ ಮಾರ್ಗವು ಇಂದಾದ್ದೀ ಎನ್ನುವುದನ್ನು ಯಾರೂ ಒರೆದಿಟ್ಟಿಲ್ಲ.

ಹಿಮಾವೃತವಾಗಿ ಶೋಭಿಸುತ್ತಿರುವ ಗಗನವ್ಯಾಪಿಗಳೆನಿಸಿದ ಪರ್ವತ ಶಿಖರಗಳಿಂದಲೂ, ಸೂರ್ಯಕಿರಣಗಳಿಂದ ದೇದೀಪ್ಯಮಾನವಾಗಿ ತೊಳಗುವ ಕಂದರ ಪ್ರದೇಶಗಳಿಂದಲೂ, ಮಹೋನ್ನತವಾಗಿ ಬೆಳೆದು ಮನೋಹರತೆ ಪೆತ್ತು ರಾರಾಜಿಸುತ್ತಿರುವ ದೇವದಾರು ವೃಕ್ಷಗಳಿಂದಲೂ, ಧವಳವರ್ಣದ ಕಾಂತಿಯಿಂದ ಕೂಡಿ ದೀಪ್ತಿಗೊಳಿಸುತ್ತಿರುವ ನಿರ್ಮಲ ಪಾರಿತರಂಗಗಳಿಂದಲೂ ಶೋಭಿಸುತ್ತ, ಪ್ರಕೃತಿ ದೇವಿಯ ಸೌಂದರ್ಯ ಸಾಧನಗಳ ತೌರೂರೆನಿಸಿರುವ ಅರಣ್ಯಗಳ ಮಧ್ಯದಲ್ಲಿ ಸಾವಿರಾರು ಅಡಿಗಳನ್ನು ಹತ್ತುತ್ತಲೂ ಇಳಿಯುತ್ತಲೂ ಹೋಗುತ್ತಾ ಕನೇರಿಜೀನ, ಗನಾಯಿ, ಜೀನಾಗಾ ಮೂಲಕ ಧಾಲಾ ಎಂಬ ಸ್ಥಳವನ್ನು ಸೇರಿದರು. ಇಲ್ಲಿ ಹಿಮಾವೃತವಾದ ನಂದಾದೇವಿ, ಪಂಚಾಚೂಲಾ, ಪಿಂಡಾರಿ ಎಂಬ ಶಿಖರಗಳು ಕಾಣಿಸಿಕೊಂಡವು. ಇಲ್ಲಿ ಉಷ್ಣವು ಹೆಚ್ಚಾಗಿದ್ದುದರಿಂದ ಪ್ರಯಾಣವೆಲ್ಲ ಬೆಳಿಗಿನ ಜಾವದಲ್ಲೇ ಮಾಡಬೇಕಾಗಿದ್ದಿತು. ಜುಲೈ ೩ರಲ್ಲಿ ಮಳೆಯಲ್ಲಯೇ ಅಸ್ಕೋಟ್ ಎಂಬಲ್ಲಿಗೆ ತಲಪಿದರು.

ಇದು ಸಮುದ್ರಮಟ್ಟದಿಂದ ೯,೦೦೦ ಅಡಿಗಳ ಎತ್ತರದಲ್ಲಿದೆ. ಇಲ್ಲಿ ನೇಪಾಳ ರಾಜಮನೆತನದವರು ಕಟ್ಟಿದ ಹಳೆಯ ರಾಜಗೃಹವೊಂದಿದೆ.

ಬುಲ್ಕೈ ಊರಲ್ಲಿ ಆಸ್ಕೋಟನ್ನು ಬಿಟ್ಟು ಮುಂದೆ ಹೊರಟರು. ದಾರಿಯು ಕಡಿದಾಗಿಯೂ ಜಾಲಕೆಯುಳ್ಳದ್ದಾಗಿಯೂ ಇದ್ದಿತು. ದಾರಿಯಲ್ಲಿ ಗೌರಿ ಗಂಗಾ ನದಿಯ ಮೇಲೆ ಕಟ್ಟಿದ ಕಬ್ಬಿಣದ ತೂಗು ಸೇತುವೆಯ ಮೂಲಕ ಒಂದೆರಡು ಮೈಲಿ ಹೋಗುವಲ್ಲಿ ಕಾಳೀನದಿ ಸಿಕ್ಕಿತು. ಕಾಳೀನದಿಯನ್ನೇ ಅನುಸರಿಸಿ ಹೋಗಿ ಮುಂದೆ ಬಲಾವ್ ಕೋಟೆಯನ್ನು ಸೇರಿದರು. ಅಲ್ಲಿ ಬಿಸಲಿನ ತಾಪವು ಸಹಿಸಲಸದಳವಾಗಿತ್ತು. ಅಲ್ಲಿಂದ ಥಾರ್ಚೂಳ ಎಂಬಲ್ಲಿಗೆ ಹೊರಟರು. ಥಾರ್ಚೂಳ ಎಂಬುದು ಭೂತಾನಿನಲ್ಲಿ ವ್ಯಾಪಾರ ಸ್ಥಳ. ಅಲ್ಲಿ ಔಷಧಗಳಿಗೆ ಅಭಾವ. ಸರ್ಕಾರದವರು ಅಲ್ಲಿ ಯಾವ ಔಷಧಾಲಯವನ್ನೂ ಏರ್ಪಡಿಸಿಲ್ಲ. ಸುತ್ತಮುತ್ತಲ ಹಳ್ಳಿಯವರೆಲ್ಲ ಔಷಧೋಪಚಾರಗಳನ್ನು ಬಯಸಿ ತ್ರೀವಮನ್ಮಹಾರಾಜರವರ ಕ್ಯಾಂಪಿಗೆ ಬಂದರು. ಮಹಾಸ್ವಾಮಿಯವರ ಕರುಣಾಕಟಾಕ್ಷದಿಂದ ಸಂಗಡಿದ್ದ ಡಾಕ್ಟರುಗಳು ಆ ಹಳ್ಳಿಯವರೆಲ್ಲ ಔಷಧೋಪಚಾರವನ್ನು ನಡೆಸಿದರು. ಅವರು ತಂದಿದ್ದ ಔಷಧವು ತೀರಿಹೋಗಿ ಪುನಃ ಎರಡಾವೃತ್ತಿ ಆಲ್ಮೋರಾದಿಂದ ತರಿಸಿಕೊಂಡರು.

ಇಲ್ಲಿ ಎಲ್ಲರೂ ವಾಹನಗಳನ್ನು ಬದಲಾಯಿಸಿ ಮುಂದೆ ಹೊರಟರು. ಇಲ್ಲಿಯ ದಾರಿಯು ಬಲು ಕಡಿದು ಮತ್ತು ಜಾರಿಕೆಯುಳ್ಳದ್ದು. ಇದರಿಂದ, ಸಾಮಾನುಗಳನ್ನು ಹಟ್ಟುಗಳ ಮೇಲಿಂದ ತೆಗೆದು, ಕೂಲಿ ಆಳುಗಳ ಮೇಲೆ ಹೊರಿಸಿಕೊಂಡು ಹೋಗಬೇಕಾಯಿತು. ಖೇಲ ಎಂಬಲ್ಲಿಂದ ಟಿಬೆಟ್ ಪ್ರಾಂತಕ್ಕೆ ಬರುವವರೆಗೂ ಗುಡಾರಗಳನ್ನು ಹೊಡೆಯುವುದಕ್ಕೆ ಸಹ ಸ್ಥಳ ಸಿಕ್ಕಲಿಲ್ಲ. ಪೈರುಪಚ್ಚೆಗಳಿದ್ದ ಸಾಗು ಭೂಮಿಯಲ್ಲಿ ರೈತರಿಗೆ ಸಷ್ಟಕಟ್ಟಿ ಕೊಟ್ಟು ಗುಡಾರಗಳನ್ನು ಹಾಕಿ ಬೀಡು ಬಿಡಬೇಕಾಯಿತು. ಇಲ್ಲಿಂದಾಚೆಗೆ ಪರ್ವತಾರೋಹಣ, ಹೆಜ್ಜೆಯ ಮೇಲೆ ಹೆಜ್ಜೆಯಿಟ್ಟು ಪ್ರಯಾಣ. ತಟ್ಟುಗಳಾಗಲಿ ಹೇಸರ ಕತ್ತೆಗಳಾಗಲಿ ಅಲ್ಲಿನ ಹುಸಿಮಣ್ಣಿಗೂ ಕುಸಿದು ಬೀಳುವ ಸೆಲಕ್ಕೂ ಸರಿಬೀಳವು. ಹಾದಿ ಹೆಚ್ಚು ಅಪಾಯವುಳ್ಳದ್ದಾಗಿದ್ದುದರಿಂದ, ವಾಹನಗಳ ಮೇಲೆ ಕೂಡಲು ಆಗದೆ ನಡೆದೇ ಹೋಗಬೇಕಾಯಿತು. ಬುಡ ಭದ್ರವಿಲ್ಲದ ಒಂಡೆಗಳ ಮೇಲೆ ಜಾಗರೂಕತೆಯಿಂದ ನಡೆಯುತ್ತ ಥಿಥಿಲವೆಂಬ ಸ್ಥಳವನ್ನು ತಲಪಿದರು.

ಥಿಥಿಲ ಎಂಬಲ್ಲಿಗೆ ಬರಲಾಗಿ ಪುಣ್ಯಭೂಮಿಯಲ್ಲಿ ಕಾಲಿಟ್ಟಂತಾಯಿತು. ಇದು ಭೂತಾನಿಗೆ ಸೇರಿದೆ. ಗಾಲ್ಗರ್‌ದಿಂದ ಮಾಲಿಪಾವರೆಗೆ ಅತಿಕಷ್ಟ.

ಅನೇಕ ಸ್ಥಳಗಳಲ್ಲಿ ಮಕ್ಕಳಂತೆ ಅಂಬೆಗಾಲಿಡುತ್ತಾ ಹೋಗಬೇಕಾಯಿತು. ದಾರಿ ಎರಡಡಿಗಿಂತಲೂ ಹೆಚ್ಚಿಗೆ ಅಗಲವಾಗಿರಲಿಲ್ಲ. ಹಿಂದಲ ದಿನ ಮಳೆಯಾಗಿದ್ದುದರಿಂದ ಚಾರಿಕೆ ಬಹಳ. ಅಪ್ಪಿ ತಪ್ಪಿ ಕಾಲು ಜಾರಿದಲ್ಲಿ ಪಾತಾಳವೇ ಗತಿ. ಈ ಸ್ಥಳದಲ್ಲಿ ಗುಡಾರಗಳನ್ನು ನೆಡಲು ಗೂಟಗಳನ್ನು ಹೊಡೆಯಲು ಸಹ ಆಗುತ್ತಿರಲಿಲ್ಲ. ಗುಡಾರಗಳ ಹಗ್ಗಗಳನ್ನು ಸುತ್ತು ಮುತ್ತಲಿರುವ ಬಂಡೆಗಳಿಗೇ ಬಿಗಿಯಬೇಕಾಗಿತ್ತು.

ಜುಲೈ ೧೨ಕ್ಕೆ ಗಾರ್ಫ್‌ಯಾಂಗ್ ಎಂಬ ಹಳ್ಳಿಯನ್ನು ತಲಪಿದರು. ಇದು ಸಮುದ್ರ ಮಟ್ಟಕ್ಕೆ ೧೧ ಸಾವಿರ ಅಡಿಗಳ ಎತ್ತರದಲ್ಲಿದೆ. ಇಲ್ಲಿ ಚಳಿ ಸಾಮಾನ್ಯ. ಸುಮಾರು ೧೫೦ ಮನೆಗಳಿರಬಹುದು. ಇಲ್ಲಿನ ಜನರು ಭೂತ ಪ್ರೇತ ಪಿಶಾಚಗಳಲ್ಲಿ ಬಹಳ ನಂಬಿಕೆಯುಳ್ಳವರು. ಅವುಗಳನ್ನು ತಡೆಯಲು ಊರ ಮುಂದೆ ಹೆಬ್ಬಾಗಿಲಲ್ಲಿ ಮೂರು ದೊಡ್ಡ ಬಂಡೆಗಳನ್ನು ಹೂಳಿದ್ದಾರೆ. ಬ್ರಿಟಿಷರ ಕೊನೆ ಹಳ್ಳಿಯಾದ ಇಲ್ಲಿ ಒಂದು ಶಾಲೆಯೂ ಆಂಚೆ ಮನೆಯೂ ಇರುವುವು. ಶ್ರೀಮನ್ಮಹಾರಾಜರವರು ಶಾಲಾ ಬಾಲಕರಿಗೆಲ್ಲ ತಿಂಡಿ ಕೊಡಿಸಿದರು.

೧೩ನೆಯ ತಾರೀಖು ಲಘುಲೇಖ ಕಣಿವೆಯನ್ನು ದಾಟಿದರು. ಇದು ಹಿಂದೂಸ್ಥಾನದ ಉತ್ತರ ಮೇರೆ. ೧೬,೭೫೦ ಅಡಿಗಳ ಎತ್ತರದಲ್ಲಿದೆ. ಇಲ್ಲಿ ಕ್ರೂರವಾದ ಹಿಮದ ಮೇಲೆಯೇ ನಡೆಯಬೇಕಾಗಿತ್ತು. ಕಾಲುಗಳು ಹಿಮದಲ್ಲಿ ಹೂತುಹೋಗುತ್ತಿದ್ದುವು. ಸಾಮಾನುಗಳನ್ನು ಹೊರುತ್ತಿದ್ದ ಹೇಸರ ಕತ್ತೆಗಳಲ್ಲಿ ಕೆಲವು ಜಾರಿ ಕೆಳಗೆ ಉರುಳಿದುವು. ಆದರೆ ಅಪಾಯ ಮೇನೂ ಆಗಲಿಲ್ಲ. ಕ್ಯಾಂಪಿನ ಜನಗಳಲ್ಲಿ ಒಬ್ಬಬ್ಬರು ಉಸಿರು ಸಿಕ್ಕಿಕೊಂಡು ಮೂರ್ಛೆ ಹೋದರು. ಇವರನ್ನು ಮುಂದಿನ ಮಜಲಿಗೆ ಕರೆದುಕೊಂಡು ಹೋಗುವುದು ಅಪಾಯಕರವಾಗಿ ಕಂಡುಬಂದುದರಿಂದ ಥಾರ್ಜುಲಾದಲ್ಲಿರುವ ರಾಮಕೃಷ್ಣಾಶ್ರಮದ ವೈದ್ಯಶಾಲೆಗೆ ಕಳುಹಿಸಲಾಯಿತು. ಇಲ್ಲಿನ ಚಳಿ ಸಹಿಸಲಾಗದು. ಒಂದೂ ಕಡೆ ಬಗ್ಗುವು ಹಿಡಿಸುವ ಪರ್ವತ ಪಙ್ಕ್ತಿ. ಇನ್ನೊಂದು ಕಡೆ ಮೊಟಕು ಮೊಟಕಾದ ಗುಡ್ಡಗಳು. ಮಧ್ಯೆ ಜಪ್ಪಟೆಯಾದ ಸಮಭೂಮಿ. ಇಪ್ಪತ್ತೊಂದು ದಿನಗಳಿಂದ ಏರಿಳಿತಗಳನ್ನೇ ನೋಡುತ್ತಿದ್ದ ಜನರಿಗೆ ಸಮಭೂಮಿ ಕಂಡು ಬಹಳ ಆನಂದವಾಯಿತು. ಹೀಗೆ ಮನೋಹರವೂ ಧವಳಕಾಂತಿ ಮಯವೂ ಆದ ಹಿಮಾಚ್ಛಾದಿತ

ಸರ್ಕಾರದ ಏಜೆಂಟರುಗಳನ್ನು ನೋಡುತ್ತಿದ್ದಲೆಯೆ ತಾವೀಗ ಧಾಕ್ಕಾಕೋಟೆಯನ್ನು ಸೇರಿದರು. ಧಾಕ್ಕಾಕೋಟೆಯು ಕನಕಾಲ ಬಂಗಾಳದಲ್ಲಿ ದಡದ ಮೇಲೆ ಕಟ್ಟಿದೆಯಷ್ಟೆ. ನದಿಯ ಎಡದಡದ ವಿಸ್ತಾರವಾದ ಮಟ್ಟಿಭೂಮಿಯಲ್ಲಿ ಮಹಾನವ್ಯಾಬಿಯವರ ಬದಾರದ ತೋರಿಕೆಗಳು ಹೊಡೆಯಲ್ಲಟ್ಟಿವೆ. ಇದರ ಮಂದೆಯೇ ಒಂದು ಬಣ್ಣಿಯ ಮೇಲೆ ಜಂಗಾವಾಕ್ ಎಂಬ ಟಿಬೆಟ್ಟಿನ ಪೆಲ್ಲಾಧಿಕಾರಿಯ ವಾಸಸ್ಥಳ. ಇದು ಗುಡುಗದಂತೆ ಕಾಣುತ್ತಿದ್ದಿತು. ಇದಕ್ಕೆ ಸೇರಿದಂತೆಯೇ ಒಂದು ಬೌದ್ಧ ಮಂತಪವಿರುವುದು. ಇಲ್ಲಿ ಸುಮಾರು ೨೫೦ ಮಂದಿ ಸಂನ್ಯಾಸಿಗಳಿರುವರು.

ಜಂಗಾವಾನ್ ಎಂಬ ಟಿಬೆಟ್ಟಿನ ರಾಯಭಾರಿಗೆ ಪೈಸೂರಿನ ಒಂದು ಗುಂಪು ಆಯುಧವಾಣಿಗಳಾಗಿ, ಯುದ್ಧಸನ್ನದ್ಧರಾಗಿ ಬರುತ್ತಿದ್ದಾರೆಂದು ಯಾರೋ ಹೇಳಿದರಂತೆ! ಈ ರಾಯಭಾರಿಯು ಗಾಬರಿಗೊಂಡವನಾಗಿ ಊರಿನ ಮುಖ್ಯಸ್ಥರನ್ನು ಕರೆದುಕೊಂಡು ಗರ್ಭಯಾತ್ರಿಗೆ ಬಂದು ಮಹಾಸನ್ಯಾಮಿಯವರಿಗೆ ಸ್ವಾಗತವನ್ನು ಬಯಸಿದನು. ಬಂದು ಧರಿಸಿದ್ದ ಬಟ್ಟೆಗಳು ಹೆಂದಿಯವಾಗಿಯೂ ಕಪ್ಪುಬಿಳಿಸಂಯಿಂದ ಕೂಡಿದುದಾಗಿಯೂ ಇದ್ದುವು. ರಾಜಸನ್ನಿಧಿಯಲ್ಲಿ ಅವರ ಪದ್ಧತಿಯನ್ನನುಸರಿಸಿ ಮರ್ಯಾದೆ ಮಾಡಲು ತಮ್ಮ ನಾಲಗೆಗಳನ್ನು ಚಾಚಿದರು. ಕ್ಯಾಂಪನಲ್ಲಿ ನೀರು ಕಾಯಿಸುವ ಮೂರು ಪಟಿಯ ಹಂಡೆಗಳಿದ್ದುವು. ಅವುಗಳನ್ನು ನೋಡಿ ಬಿಷಕ್ ಗಳು ಬಂದು ಒಹಾವಾಗಿ ಹೆದರಿದರು. ಅವರ ಸಂಕಟವನ್ನು ನೋಡಲಾರದೆ ಅವುಗಳನ್ನು ಉಪಯೋಗಿಸಿ ತೋರಿಸಲಾಯಿತು.

ಸುಧ್ಯಾಹ್ನ ಮಹಾಸನ್ಯಾಮಿಯವರು ಬೌದ್ಧ ಮಂದಿರವನ್ನು ಜಂಗಾವಾಕ್ ಅಧಿಕಾರಿಯು ಮನೆಯನ್ನೂ ನೋಡುವುದಕ್ಕೆ ಹೋಗಿದ್ದರು. ಆ ದಿನ ನಾಯಂಕಾಲ ಯಾತ್ರಾರ್ಥಿಗಳಾದ ಸಂಯುಕ್ತ ಸಂಸ್ಥಾನದ ಸಂಘಾಯೋನ ಊರಿನ ಪ್ರಧಾನ ಮಹಾರಾಣಿಯವರೂ, ಕುಮಾರ ಖಡ್ಗಶಿಂಗ್ ವಾಲಾರವರೂ ಒಂದು ಮಹಾಸನ್ಯಾಸಿಯವರ ಫೋಟಿವಾಟುಕೊಂಡು ಹೋದರು.

ಮರುದಿನ ಪ್ರೀಮನ್ಮಹಾರಾಜರವರು ಜಂಗಾವಾಕ್ ರಾಯಭಾರಿಗೆ ಗ್ರಾಮಫೋನ್ ಮೊದಲಾದ ಅನೇಕ ಬಹುಮಾನಗಳನ್ನು ಕೊಟ್ಟರು. ಅವುಗಳಲ್ಲಿ ಒಲಿಕ್ಟ್ರಿಕ್ ಬ್ಯಾಟರಿಯು ರೀತಿಯೊಂದು. ಇದು ಈತನ

ಮುಟ್ಟಿಕೆಗೆ ಬಹಳ ಪಾತ್ರವಾಗಿತ್ತು. ಧಾಕ್ಲಾ ಕೋಟೆಯಲ್ಲಿದ್ದ ಎರಡು ದಿನಗಳೂ, ಈ ಬ್ಯಾಟರಿ ದೀಪವನ್ನು ಸರಿಮಾಡಿಕೊಡುವುದೇ ಕ್ಯಾಂಪಿನ ಕೆಲಸವಾಗಿತ್ತು. ರಾತ್ರಿ ಹಗಲೂ ಈ ಸರದಾರನು ಆ ದೀಪದೊಡನೆ ಆಡುತ್ತಿದ್ದನು. ಕೊನೆಗೆ ಸರಿಮಾಡಲಾರದೆ ಮಹಾರಾಷ್ಟ್ರಿಯರು ಬೇರೊಂದು ದೀಪವನ್ನು ಕೊಟ್ಟರು.

ಇಲ್ಲಿಯ ಜನರು ವೈಚಿತ್ರ್ಯಕಾಯರು. ಸ್ತ್ರೀಪುರುಷರೆಲ್ಲ ಒಂದೇ ತರದ ಉಡುಪನ್ನು ಧರಿಸುತ್ತಿರುವುದರಿಂದಲೂ ಗಂಡಸರಿಗೆ ಮುಂದೆ ಹೇಳಿದ ಕೂದಲು ಬೆನ್ನಿಗೆ ಕಟ್ಟಿಸಿಯಾಗಿದ್ದುದರಿಂದಲೂ ಗಂಡು ಹೆಣ್ಣು ಎಂದು ಗೊತ್ತುಮಾಡುವುದು ಕಷ್ಟವಾಗಿತ್ತು. ಎಷ್ಟರಲ್ಲಿ ಎಷ್ಟಾದ ವಿಧಿಯು ಬಹಳ ವಿಚಿತ್ರ. ಬಹು ಪತಿವ್ರತ್ಯ ಪಾಡಿಕೆಯಲ್ಲಿದೆ. ಇವರೆಲ್ಲ ಮಾಂಸಾಹಾರಿಗಳು. ಮಾಂಸವನ್ನು ಹಸಿಯಾಗಿಯೂ ಬೆಂಕಿಯಲ್ಲಿ ಸುಟ್ಟೂ ತಿನ್ನುತ್ತಾರೆ. ಮಾದಕ ವಾಸನೆಯನ್ನು ಸೇವಿಸುತ್ತಾರೆ. ಬಂದೆಡೆಯಲ್ಲಿ ನೆಲೆಯಾಗಿ ವಾಸ ಮಾಡುವುದಿಲ್ಲ. ಹಸುರು ನೆಲ ಕಂಡಕಡೆ ಇವರ ರಾಜ್ಯ. ಕುರಿ ಮೇಯಿಸುವುದೇ ಇವರ ಮುಖ್ಯ ಕಸಬು. ಇನ್ನು ಮುಂದೆ ದರೋಡೆಗಳ ಕಾಟವೆಂದು ತಿಳಿಯಬೇಡವೆಂದು, ಮುಂದಿನ ನ್ಯಾಯಾಧಿಪನನ್ನು ಬಹಳ ಜಾಗರೂಕತೆ ಯಿಂದ ನೇಮಿಸೋಣವಾಯಿತು.

ಒಬ್ಬೆ ಟಿಸೆಯು ತಾರೀಕು ಗುಲಾ ಕಣಿಪೆಯನ್ನು ವಾಟಿದರು ಮಹಾರಾಷ್ಟ್ರಿಯರು ಸಂಚಿತಿಸಬೇಕೆಂದು ಸಂಕಲ್ಪ ಮಾಡಿದ್ದ ಕೈಲಾಸ ಪರ್ವತವು ಸುಸಾಂಗಿತು. ಆ ಪರ್ವತವು ಸ್ಮರಣಮಾತ್ರದಿಂದ ಕಮೂ ಕ್ಷ್ಯವ ಮಾಡಿ ಮೋಕ್ಷಕೊಡುವ ಪುಣ್ಯಸ್ಥಳ. ಎಲ್ಲರ ಮನಸ್ಸಿನಲ್ಲಿಯೂ ಒಂದು ವಿಧವಾದ ಭಕ್ತಿ ವೈರಾಗ್ಯಗಳನ್ನು ಪ್ರೇರಿಸುತ್ತಿತ್ತು. ಪ್ರತಿಯೊಬ್ಬರ ಚಿತ್ತದಲ್ಲಿಯೂ ಆಧ್ಯಾತ್ಮಿಕ ವಿಷಯಗಳು ಮನನವಾಗುತ್ತಿದ್ದುವು. ಇನ್ನು ಮುಂದೆ ಹೋಗುವಲ್ಲಿ, ಕೈಲಾಸಪರ್ವತದ ದರ್ಶನವಾಯಿತು. ಮಾನಸ ಸರೋವರ ಮತ್ತು ರಾಕಸತಾಲ ಎಂಬುವುಗಳು ಕೈಲಾಸ ಪರ್ವತದ ಅಡಿಯ ಬಾಜು ಇರುವ ಎರಡು ಸರೋವರಗಳು. ಮಾನಸ ಸರೋವರದ ಸುತ್ತಳತೆ ಬಹಳ ಹೆಚ್ಚಲು. ಇದು ಕೈಲಾಸ ತಪ್ಪಲಕ್ಕೆ ಒಳಭಾಗದಲ್ಲಿದೆ. ಎಡಭಾಗದಲ್ಲಿ ರಾಕಸ ತಾಲ. ಇಲ್ಲಿಯ ವಾಯು ಅತಿ ಸೂಕ್ಷ್ಮವಾಗಿರುವುದರಿಂದ, ಅತಿಮೂಲದಲ್ಲಿರುವ ಪದಾರ್ಥಗಳೂ ಕೂಡ ಹತ್ತಿರುವಂತೆ ಕಂಡು

ಬರುತ್ತವೆ. ಗುಲಾಬಿ ಕಣಿವೆಯಿಂದ ಮಾನಸ ಸರೋವರವು ಒಂದೆರಡು ಫರ್ಲಾಂಗ್ ದೂರದಲ್ಲಿರುವಂತೆ ಕಾಣುತ್ತಿದ್ದರೂ ಸರೋವರಕ್ಕೆ ಹೋಗಲು ಆರು ಮೈಲಿ ಹಿಡಿಯಿತು. ಸರೋವರದ ದಂಡೆಯಿಂದ ಹನ್ನೆರಡು ಗಜಗಳ ದೂರದಲ್ಲಿ ಶ್ರೀಮನ್ಮಹಾರಾಜರವರು ಪಾಳಯವನ್ನು ಬಿಟ್ಟರು. ಆ ಸ್ಥಳವು ಅತಿ ರಮಣೀಯವಾಗಿಯೂ ಸರೋವರದ ನೀರು ಶುಭ್ರವಾಗಿಯೂ ಇದ್ದಿತು. ಹೋದದಿನ, ಮಹಾಸ್ವಾಮಿಯವರು ತಮ್ಮ ಪರಿವಾರದವರನ್ನೆಲ್ಲ ಕರೆಸಿ ಇಲ್ಲಿಗೆ ನೀವೆಲ್ಲ ಬಂದುದು ಸಂತೋಷವೋ ಜುಗುಪ್ಸೆಯೋ ಎಂಬುದಾಗಿ ಪ್ರಶ್ನೆ ಮಾಡಿದರು.

ಇಲ್ಲಿ ಶ್ರೀಮನ್ಮಹಾರಾಜರವರು ಸ್ನಾನಮಾಡಿದ್ದು ಸಾಧಾರಣವಾಗಲ್ಲ. "ಈಗ ನನಗೆ ಲಭ್ಯವಾಗಿರುವ ಪವಿತ್ರತಮವಾದ ಈ ಮಾನಸ ಸರೋವರ ಸ್ನಾನದ ಫಲವು ನನ್ನ ಅತ್ಯಂತ ಪ್ರೀತಿಪಾತ್ರರಾದ ರಾಷ್ಟ್ರದ ಸಮಸ್ತ ಜನಗಳನ್ನೂ ಹೊಂದಲಿ" ಎಂದು ಸಂಕಲ್ಪಿಸಿ ತಮ್ಮ ಸಂಸ್ಥಾನದ ಪ್ರತಿಯೊಬ್ಬ ಪ್ರಜೆಗೂ ಮಂಗಳವಾಗಲೆಂದೂ, ಬ್ರಹ್ಮಮಾನಸ ಸರೋವರದಲ್ಲಿ ಸ್ನಾನಮಾಡಿದ ಪುಣ್ಯಭಾಗವು ಸಮಸ್ತರಿಗೂ ದೊರೆಯಲೆಂದೂ ಕುಲದೇವತೆಯ ಪಾದಾರವಿಂದವನ್ನು ಧ್ಯಾನಿಸಿ, ಮಾತೃಶ್ರೀ ವಾಣೀವಿಲಾಸ ದಸರ ಪಾದಕಮಲಗಳನ್ನು ನೆನೆದು, ನಿಷ್ಕಲ್ಮಷವಾದ ಮನಸ್ಸಿನಿಂದ ಸ್ನಾನ ಮಾಡಿ ತರ್ಪಣಾಚರಣೆಯನ್ನು ಮಾಡಿದರು. ಪ್ರಕೃತಿ ನಿಯಮಗಳಿಗೆ ಸರಿಯಾಗಿ ಯಾರು ನಡೆಯುವರೋ ಅವರೇ ತತ್ತ್ವವನ್ನರಿತ ಮಾನ್ಯರು; ಅವರೇ ಜ್ಞಾನವಂತರಾದ ಮಾನವರು; ಅವರೇ ದಯಾರಸಯುಕ್ತರಾದ ಮಹಾತ್ಮರು. ಅಂಥವರ ಜೀವಮಾನವೇ ಸಾರ್ಥಕವಾದುದು!

ಬಳಿಕ ಶ್ರೀಮನ್ಮಹಾರಾಜರವರು ಮುಂದಕ್ಕೆ ಪ್ರಯಾಣ ಮಾಡಿದರು. ಬಹುದೂರದವರೆಗೆ ದಾರಿಯೆಲ್ಲಾ ಮರಳಿನಿಂದ ಆಚ್ಛಾದಿತವಾಗಿದ್ದಿತು. ಮರೆಯಾಗಿದ್ದ ಶ್ರೀ ಕೈಲಾಸ ಪರ್ವತವು ಪುನಃ ಕಾಣಿಸಿಕೊಂಡಿತು. ಶ್ರೀ ಕೈಲಾಸ ಪರ್ವತವು ೨೧,೨೩೦ ಅಡಿಗಳ ಎತ್ತರದಲ್ಲಿದೆ. ಕೈಲಾಸದ ಮೇಲ್ಭಾಗವೆಲ್ಲವೂ ಹಿಮದಿಂದ ಆವೃತವಾಗಿದ್ದಿತು. ಇದು ಆಕಾರದಲ್ಲಿ ದೇವಾಲಯದ ಭುವನೇಶ್ವರಿಯಂತೆ ಕಾಣಿಸುತ್ತದೆ. ಮರುದಿನ ಎಲ್ಲರೂ ಮಾನಸ ಸರೋವರದಲ್ಲಿ ಸ್ನಾನಮಾಡಿ, ಭೋಜನಾದಿಗಳನ್ನು ತೀರಿಸಿಕೊಂಡು ದಾಚಿನನ್ ಎಂಬ ಸ್ಥಳವನ್ನು ಬಿಟ್ಟು ಕೈಲಾಸ ಪರ್ವತದ



ಮಹಾರಾಣಿಯವರು ಮಾನಸ ಸರೋವರದಲ್ಲಿ ಅಸ್ಥಿಕವನ್ನಾಚರಿಸುತ್ತಿರುವದು

ಪ್ರದಕ್ಷಿಣೆಗೆ ಪ್ರಾರಂಭಿಸಿದರು. ಆದರೆ ಚಳಿಯೂ ಕೊರೆತವೂ ಹೇಳತೀರದು. ಕೈಲಾಸ ಪರ್ವತವನ್ನು ಪ್ರದಕ್ಷಿಣೆಮಾಡಲು ಮೂರು ದಿವಸ ಹಿಡಿಯಿತು.

ದಾರಿಯಲ್ಲಿ ಜೋಳ್ಕ ಎಂಬ ಕಣಿವೆಯಲ್ಲಿ ಗೌರೀ ಕುಂಡವೆಂಬ ಸರೋವರವು ಸಿಕ್ಕಿತು. ಇದು ಬಹಳ ಎತ್ತರದಲ್ಲಿರುವುದರಿಂದ, ಇಲ್ಲಿಯು ಸ್ವಲ್ಪ ಯಾವಾಗಲೂ ಹಿಮ್ಮು ಗಟ್ಟಿರುತ್ತದೆ. ಇಲ್ಲಿ ಯಾತ್ರಿಕರು ಯಾರೂ ಸ್ನಾನ ಮಾಡುವುದಿಲ್ಲ. ಕಲ್ಲಿನಿಂದಾಗಲಿ ದೊಣ್ಣೆಯಿಂದಾಗಲಿ ಹೊಡೆದು ತಲೆಯ ಮೇಲೆ ಪ್ರೋಕ್ಷಿಸಿಕೊಳ್ಳುತ್ತಾರೆ. ಈ ಯಾತ್ರೆಯು ಇಲ್ಲಿಗೆ ಪೂರೈಸಿದುದರಿಂದ, ಜಡಾರದ ಜನರೆಲ್ಲರೂ ಪರಮ ಸಂತೋಷಭರಿತರಾದರು.

ಹಿಂದಿರುಗಲು ಶ್ರೀಮನ್ಮಹಾರಾಜರವರು ಗುಲಾರ್ ಕಣಿವೆಯನ್ನು ಬಿಟ್ಟು ಬೇರೊಂದು ದಾರಿಯನ್ನು ಕಂಡುಹಿಡಿದರು. ಥಾಕ್ಲಾಕೋಟೆಯಿಂದ ೯ ಮೈಲಿ ದೂರವಿರುವ ಕೋಜ್ಹೇರನಾಥದಲ್ಲಿ ಒಂದು ಬೌದ್ಧರ ಆಶ್ರಮವಿದೆ. ಇಲ್ಲಿ ಹಿಂದೂ ಸಂಪ್ರದಾಯ ಪ್ರಕಾರ ತ್ರಿಮೂರ್ತಿಗಳ ಪೂಜೆ ನಡೆಯುತ್ತದೆ. ಟಿಬೆಟ್ಟಿನಲ್ಲಿ ಈ ಒಂದು ಸ್ಥಳದಲ್ಲಿ ಮಾತ್ರ ತ್ರಿಮೂರ್ತಿಗಳಿಗೆ ಪೂಜೆ. ಇಲ್ಲಿನ ವಿಗ್ರಹಗಳು ೯ ಅಡಿ ಎತ್ತರವಾಗಿ ಅಂದವಾಗಿವೆ. ಈ ಆಶ್ರಮದಲ್ಲಿ ಒಂದು ಗ್ರಂಥ ಭಂಡಾರವಿದೆ. ಲಾಮಾಂಶ ಸಂಭೂತರಾದ ಇಬ್ಬರು ಬ್ರಹ್ಮಚಾರಿಗಳಿರುವರು. ಅವರನ್ನು ನೋಡಿಕೊಂಡು ಅವರಿಗೆ ಕಾಣಿಕೆಯನ್ನು ಒಪ್ಪಿಸಿ ಯಾತ್ರಿಕರೆಲ್ಲರೂ ಬಾಗೇಶ್ವರಕ್ಕೆ ಬಂದರು. ಅಲ್ಲಿನ ಜನರು ಮಹಾಸ್ವಾಮಿಯವರಿಗೆ ಸ್ವಾಗತವನ್ನು ಬಯಸಿ ಅಭಿನಂದನಪತ್ರಿಕೆಯನ್ನು ಅರ್ಪಿಸಿದರು. ಅದರಲ್ಲಿ ಒಂದು ಪಾಠಶಾಲೆಯನ್ನು ಕಟ್ಟಿಸಿಕೊಡಬೇಕೆಂದು ವಾಗ್ದಾನಿಸಲ್ಪಟ್ಟಿತ್ತು. ಮಹಾಸ್ವಾಮಿಯವರು ಆಲ್ಮೊರಾದಿಂದ ಹೊರಟಲಾಗಾಯಿತು, ಎಲ್ಲೆಲ್ಲಿ ಕ್ಯಾಂಪು ಮಾಡುತಿದ್ದರೋ ಅಲ್ಲೆಲ್ಲಾ ಪಟ್ವಾರ್ದಿ (ಪಟೇಲರು) ಗಳು, ಶ್ಯಾನುಭೋಗರು, ತಹಶೀಲ್‌ದಾರರು, ಪೊಲೀಸ್ ಅಧಿಕಾರಿಗಳು, ಪೋಸ್ಟ್‌ಮಾಸ್ಟರುಗಳು ಮುಂತಾದವರೆಲ್ಲ ಮಹಾಸ್ವಾಮಿಯವರ ದರ್ಶನಕ್ಕೆ ಬರುತ್ತಿದ್ದರು. ಅವರಿಗೆಲ್ಲ ಮಹಾಸ್ವಾಮಿಯವರು ಯೋಗ್ಯತಾನುಸಾರ ಶಾಲು, ಪೇಟ, ಬೆಳ್ಳಿ ಚೌಕಟ್ಟುಹಾಕಿದ ತಮ್ಮ ಫೋಟೊ ಮುಂತಾದ ಬಹುಮಾನಗಳನ್ನು ಕೊಡುತ್ತಿದ್ದರು.

ಇದಲ್ಲದೆ ಶ್ರೀಮನ್ಮಹಾರಾಜರವರು ಆಲ್ಮೊರಾಕ್ಕೆ ಬಂದ ಬಳಿಕ, ತಮ್ಮ ಸಂಗಡ ಸಹಕರಿಸಿದ ಸೇವಕಾಳಿಗೂ, ಕುದುರೆಯಾಳುಗಳಿಗೂ ಉದಾರವಾಗಿ ವಾರಿತೋಷಕಗಳನ್ನು ಕೊಟ್ಟರು. ಸಂಗಡ ಹೋಗಿದ್ದವರಿಗೆಲ್ಲ ಭಾರಿ ಭಾರಿ ಬಹುಮಾನಗಳು ದೊರೆತವು. ೭೭ನೆಯ ಆಗಸ್ಟು ಆಲ್ಮೊರಾದಿಂದ

ಕೈಲಸಪ್ಪಲ್ಲಿ ಹೊರಟು ಹರಿದ್ವಾರವನ್ನು ಸೇರಿ ತೀರ್ಥ ಶ್ರಾದ್ಧಾದಿಗಳನ್ನು ಮಾಡಿ ಅಲ್ಲಿಂದ ಬೊಂಬಾಯಿಗೆ ಬಂದರು. ಬೊಂಬಾಯಿಯಲ್ಲಿ ಕೆಲವು ದಿವಸವು ವಿಶ್ರಾಂತಿಯನ್ನು ಪಡೆದಮೇಲ್ಲಿ ಕೈಲಾಸಯಾತ್ರೆಯಿಂದ ಚೇತರಿಕೊಂಡ ನಂತರ ಮೈಸೂರಿಗೆ ಹೊರಟರು.

ಈ ರೀತಿಯಾಗಿ ಶ್ರೀಮನ್ಮಹಾರಾಜರವರು ಮಹಾಕಷ್ಟಸಾಧ್ಯವಾದ ಕೈಲಾಸಪರ್ವತದ ಮಹಾಯಾತ್ರೆಯನ್ನು ಸರವೇರಿಸಿಕೊಂಡು ಸೆಪ್ಟಂಬರ್ ೩೦ನೆಯ ತಾರೀಖು ಸುಖವಾಗಿ ಹಿಂದಿರುಗಿ ಬಂದು, ಬೆಂಗಳೂರಲ್ಲಿ ಮಹಾಪೂತ್ಯಶ್ರೀಯವರ ದರ್ಶನಸಂದರ್ಶನವನ್ನು ಮಾಡಿದರು.

---

# ೧೫ನೆಯ ಅಧ್ಯಾಯ

## ಮಾತೃವಿಯೋಗ, ಯೂರೋಪಿನ ಸ್ಪಾಸ

೧೯೦೯ನೆಯ ಇಸವಿ ಮಾರ್ಚಿ ತಿಂಗಳಲ್ಲಿ ಶ್ರೀಮನ್ಮಹಾರಾಜರವರು ಬೆಂಗಳೂರಿನಲ್ಲಿ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರ ಟವರ್‌ಹಾಲಿನ ಶಂಕುಸ್ಥಾಪನೆಯನ್ನೂ, ರಜತಮಹೋತ್ಸವದ ಸ್ಮಾರಕ ಮಂದಿರವಾದ ವೃತ್ತಿಶಿಕ್ಷಣ ಶಾಲೆಯ ಶಂಕುಸ್ಥಾಪನೆಯನ್ನೂ, ತಿಪ್ಪಗೊಂಡನಹಳ್ಳಿ ಜಲಾಶಯದ ಶಂಕುಸ್ಥಾಪನೆಯನ್ನೂ ಮಾಡಿದರು. ಈ ಜಲಾಶಯಕ್ಕೆ ಚಾಮರಾಜ ಸಾಗರವೆಂದು ಹೆಸರಿಟ್ಟಿರುವರು. ಇದರಿಂದ ಬೆಂಗಳೂರು ಪಟ್ಟಣಕ್ಕೆ ಕೊಡಲಿಯುವ ನೀರು ಬಿದಗುತ್ತಿದೆ.

ಅಳಿದ ಮಹಾಸ್ವಾಮಿಯವರಾದ ಶ್ರೀ ಚಾಮರಾಜೇಂದ್ರ ಒಡೆಯರವರು ಅತ್ಯಲ್ಪ ವಯಸ್ಸಿನಲ್ಲಿ ಕಾಲವಾದರು. ಅವರು ಕಾಲವಾದಾಗ, ನಮ್ಮ ನಲ್ಮೆಯ ಶ್ರೀ ಕೃಷ್ಣರಾಜರಿಗೆ ಇನ್ನೂ ಹತ್ತು ವರ್ಷ ವಯಸ್ಸು. ಮಹಾರಾಣಿಶ್ರೀ ಕೆಂಪನಂಜಮ್ಮಣ್ಣಿ, ಸಿ.ಐ. ಯವರು ಮುಂದೆ ಬಂದು, ತಮ್ಮ ಭರ್ತೃವಿನ ಸ್ಥಾನದಲ್ಲಿ ನಿಂತು, ದುಃಖಾರ್ತರಾದ ಪ್ರಜೆಗಳನ್ನು ಪುತ್ರವಾತ್ಸಲ್ಯದಿಂದ ಕಾಪಾಡಿ ರಾಜ್ಯವನ್ನು ಬಹು ಯಶಸ್ವಿಯಾಗಿ ಆಳಿ ಕೀರ್ತಿಗೊಂಡರು. ಈ ವಿಷಯವನ್ನು ಹಿಂದೆಯೇ ತಿಳಿಸಲ್ಪಟ್ಟಿದೆ. ನೀರನಾರಾಯಣರು ಕಷ್ಟಕಾಲದಲ್ಲಿ ಕಣ್ಣೀರಿಡುವುದಿಲ್ಲವೆಂಬುದಕ್ಕೆ ಇದೇ

ಬರೋಡ ಮಹಾರಾಣಿಯವರು, ಮೈಸೂರು ಮಹಾರಾಣಿಯವರು, ಇವರುಗಳ ಕುಟುಂಬವರ್ಗದವರು

ಸಿದರ್ಶನ. ಇವರ ಜೀವಿತಕಾಲದಲ್ಲಿ ಕಾವೇರಿ ಏದ್ಯುಚ್ಛಕ್ತಿಯ ಏಸಾರ್ಡೂ, ಮಾರೀಕಣಿವೆಯ ಜಲಪಾತ, ಮೈಸೂರಿನ ಹೊಸ ಆರಮನೆಯ ನಿರ್ಮಾಣವೂ, ಬೆಂಗಳೂರು ಏಕ್ಟ್ರೀರಿಯಾ ವಿದ್ಯುಚ್ಛಕ್ತಿಯ ಶಂಕುಸ್ಥಾಪನೆಯೂ, ಬೆಂಗಳೂರಿಗೆ ಕುಡಿಯುವ ನೀರಿನ ಏರ್ಪಾಟೂ, ಮಹಾರಾಣಿ ಕಾಲೇಜೂ ಮುಂತಾದ ಭಾರಭಾರಿ ಉದ್ಯಮಗಳೆಲ್ಲ ನಡೆದುವು. ಇವರು ತಮ್ಮ ಕ್ಷೇಕಳಗಿನ ಅಧಿಕಾರಿಗಳೊಡನೆ ಸಮಾಲೋಚನೆಯನ್ನು ನಡೆಯಿಸಿ ಸಲಹೆ ಕೊಡುವುದರಲ್ಲಾಗಲಿ, ದೇಶಾಭ್ಯುದಯ ಕಾರ್ಯಗಳನ್ನು ನಿರವೇರಿಸುವುದರಲ್ಲಾಗಲಿ ಅಸ್ವತೀಯರಾಗಿದ್ದರು. ಇವರಿಗೆ ಸ್ವಜನರಲ್ಲಿ ದಾಕ್ಷಿಣ್ಯ, ಪರಜನರಲ್ಲಿ ದಯೆ, ದೊಡ್ಡವರಲ್ಲಿ ಭಕ್ತಿ, ಗೋವ್ರಗಳಲ್ಲಿ ಪ್ರೀತಿ ಇವು ತುಂಬಿದ್ದುವು. ತ್ಯಾಗ, ಧೀರೋಗ, ನ್ಯಾಯಬುದ್ಧಿ, ನಿರ್ಭೀತ್ಸರ್ಯಗಳು ಇವರ ಹುಟ್ಟುಗುಣಗಳಾಗಿದ್ದುವು. ಇವರ ಕಾಲದಲ್ಲಿ ಇಲಾಖೆಗಳಲ್ಲೆಲ್ಲ ಹೊಸಹೊಸ ಕಾರ್ಯನಿಯಮಗಳು ಆಚರಣೆಗೆ ಬಂದುವು. ಇವೆಲ್ಲಕ್ಕಿಂತ ತಲೆ ಮಿಗಿಲಾಗಿ ಮುಂದೆ ರಾಜಸೂತ್ರವನ್ನು ಕ್ಷೇಕೊಳ್ಳುವ ತಮ್ಮ ಕುಮಾರರಿಗೆ ವಿದ್ಯಾಬುದ್ಧಿಗಳನ್ನು ಕಲಿಸಲೋಸುಗ ಸಕಲ ಸೌಕರ್ಯಗಳನ್ನೂ ಕಲ್ಪಿಸಿದರು. ಇವರು ಮಾಡಿದ ಪ್ರಜಾರಂಜಕ ಕಾರ್ಯಗಳಿಗಾಗಿಯೂ ಸದಾ ಪ್ರಭಾರಕಾಲಕ್ಕಾಗಿಯೂ ಸಾರ್ವಭೌಮ ಸರ್ಕಾರದವರು ಯಾವಜ್ಜೀವವೂ ಇವರಿಗೆ ೧೧ ತೋಪುಗಳ ಮರ್ಯಾದೆಯನ್ನು ಕಲಿಸಿದರು. ಇವರು ಮಹಾರಾಣಾಮಿಯವರಿಗೆ ತಾಯಿಯವಾಗಿದ್ದುದು ಮಾತ್ರವಲ್ಲ, ಒಳ್ಳೆಯ ಮಂತ್ರಿಯಾಗಿದ್ದುಕೊಂಡು ಜನರ ಶೀಲಸ್ವಭಾವವನ್ನೂ, ತಾರತಮ್ಯವನ್ನು ತಿಳಿವ ಸೂಕ್ಷ್ಮಗುಣವನ್ನೂ, ದಯಾರ್ದ್ರಹೃದಯತ್ವ, ಔದಾರ್ಯ, ಶಾಂತಸ್ವಭಾವ, ಗಾಂಭೀರ್ಯ, ಪ್ರಜಾಭಿಮಾನ ಮುಂತಾದ ಸದ್ಗುಣಗಳನ್ನೂ ಅವರಿಗೆ ಆಗಾಗ್ಗೆ ಬೋಧಿಸುತ್ತ ಅಭ್ಯಾಸದಲ್ಲು ತಂದರು. ಇವರ ಕಾಲದಲ್ಲಿ ಆರಮನೆಯೆಂದರೆ ಶಿಶುಗಳಿಗೆ ಪಾಲು, ಬಾಣಂತಿಯರಿಗೆ ಕಸೂರಿಮಾತ್ರೆ, ಅನಾಥರಿಗೆ ಅನ್ನ, ರೋಗಿಗಳಿಗೆ ಔಷಧ, ಅಗ್ನಿಹೋತ್ರಗಳಿಗೆ ಸತ್ಕಾರ, ವಿದ್ವಾಂಸರಿಗೆ ಆಶ್ರಯ—ಇಷ್ಟೂ ನಡೆಯುತ್ತಿದ್ದ ರಾಷ್ಟ್ರಸಂಸ್ಥೆಯಾಗಿತ್ತು.

ರಾಜ್ಯಾಭಿಷೇಕವಾದ ಮೇಲೆ ಅನೇಕ ವರ್ಷಗಳವರೆಗೆ ಮಹಾರಾಣಾಮಿಯವರು ಅಫೀಸಿನಲ್ಲಿ ಸಂಬಂಧಿಸಿದವರಿಗೆ ಮಾಡಿದ ಕೆಲಸಗಳ ಕಟ್ಟುಗಳನ್ನು

ತಿಂಗಳಾಂತ್ಯ ತಾವೂ ಬಂದುಸಾರಿ ನೋಡಿ ತಮ್ಮ ಸಲಹೆಗಳನ್ನು ಕೊಡು ತ್ತಿದ್ದರು. ಈ ರಾಜ್ಯಾಂಗರಚನೆಯ ಸರ್ವಾಧಿಕಾರವು ದಾಸಯ್ಯಂದ ನಾಗಿದ್ದನ್ನು ನಾಸೆಂದು ಕಾಣುವೆನೋ ಎಂಬಿದು ಮಹಾರಾಣಿಯವರ ನಿರಂತರವಾದ ಮನಸ್ತಾಪಕ್ಕೆಯಾಗಿತ್ತು. ಶ್ರೀಮನ್ಮಹಾರಾಜರವರು ಇಂತಹ ತಾಯಿಯವರ ಅಖಲನೆಯಾಲನೆ ಒಪ್ಪೇಕಗಳಿಂದ ಸಮ್ಯಗ್ಜ್ಞಾನಿಗಳಾಗಿ ಮೂರ್ತಿಯಾದರು. ಸಮರಾತ್ರಿ ಮುಂತಾದ ಉತ್ಸವ ದಿವಸಗಳಲ್ಲಿ ಪ್ರತಿಸಿತ್ಯವೂ ಸಾಯಂಕೃತ್ಯಗಳನ್ನೆಲ್ಲ ತೀರಿಸಿಕೊಂಡು ತಮ್ಮ ಅಲಂಕಾರ ಕೋಣೆಯಲ್ಲಿ ಸಿಂಹಾಸನಾರೋಹಣಕ್ಕೆ ಅಲಂಕೃತರಾದ ಒಕೆಕ, ಮಾತೃಶ್ರೀಯವರ ಸನ್ನಿಧಾನಕ್ಕೆ ಬಂದು, ಮಾತೃ ದೇವತೆಗೆ ಸಮಸ್ಕಾರಮಾಡಿ ಮಂಗಳಾಶೀರ್ವಾದ ಪಡೆದು ಸಿಂಹಾಸನದ ಒಕೆಗೆ ಚಿತ್ತೈಸಿಸುತ್ತಿದ್ದರು. ತಾಯಿಯೇ ಪ್ರತ್ಯಕ್ಷದೇವರೆಂಬ ಹಿರಿಯರ ವಾಕ್ಯವನ್ನು ಮಹಾರಾಜ್ಞಿಯವರು ಕಾರ್ಯದಲ್ಲಿ ತೋರಿಸುತ್ತಿದ್ದರು. ಕರುಣಾಶೀಲರಾದ ಮಹಾರಾಜ್ಞಿಯವರು ತಮ್ಮ ೬೦ನೆಯ ವಯಸ್ಸಿನಲ್ಲಿ —೧೯೩೬ರಲ್ಲಿ ಕಾಲವಾದರು. ಇವರು ಖಾಯಿಲೆಯಾಗಿದ್ದಾಗ ಮಹಾ ರಾಜ್ಞಿಯವರು ಮಾತೃಸೇವೆಯನ್ನು ಬಹುವಾಗಿ ಮಾಡಿದರು.

ಮಾತೃಶ್ರೀಯವರು ಸಿಧನರಾದಮೇಲೆ ಶ್ರೀಮನ್ಮಹಾರಾಜರವರಲ್ಲಿ ವೈರಾಗ್ಯವು ತಲೆದೋರಿ ಜೀವನದಲ್ಲಿಯ ಸವಿಯು ಹಾರಿತು. ಸೂತ್ರ, ಭಾಷ್ಯ, ಗೀತೆ ಮೊದಲಾದ ವೇದಾಂತ ಗ್ರಂಥಗಳನ್ನು ಹೆಚ್ಚಾಗಿ ಓದ ಲಾರಂಭಿಸಿದರು. ಈ ಜಗತ್ತು, ಈ ರಾಜ್ಯ, ಈ ಕೋಶ, ಈ ಭೋಗ ವಸ್ತುಗಳೆಲ್ಲ ಬರಿಯ ಕನಸೆಂದು ತಿಳಿದರು. ರಾತ್ರಿ ಊಟವನ್ನು ಬಿಟ್ಟರು. ಸಂಸಾರ ವಿರಕ್ತಿಯು ದಿನೇದಿನೇ ಹೆಚ್ಚುತ್ತಾ ಬಂದಿತು. ಒಬ್ಬರೇ ಇರು ವಾಗ, ತಮ್ಮ ಚಿತ್ತವನ್ನು ಯಾವುದೋ ವಸ್ತುವಿನಲ್ಲಿಟ್ಟು ಧ್ಯಾನಾಸಕ್ತ ರಾಗಿ ಕುಳಿತುಕೊಳ್ಳುತ್ತಿದ್ದರು. ಹೀಗಿರುವಲ್ಲಿ, ೧೯೩೬ನೆಯ ಇಸವಿ ಜೂಲೈ ತಿಂಗಳಲ್ಲಿ ಶ್ರೀಮನ್ಮಹಾರಾಜರವರು ಮೈಸೂರಿನಲ್ಲಿ ಮಾತೃಶ್ರೀಯವರ ಎಡೆಕಟ್ಟಳೆ (ಶ್ರಾದ್ಧ)ಯನ್ನು ತೀರಿಸಿಕೊಂಡು ಬೆಂಗಳೂರಿಗೆ ದಯಮಾಡಿಸಿ ದರು. ಅಲ್ಲಿ ೧೦-೪ ದಿನಗಳನ್ನು ಕಳೆದ ಒಕೆಕ, ಒಂದುದಿನ ಪ್ರಾತಃಕಾಲ ಐದೂವರೆ ಗಂಟೆಯ ಸಮಯದಲ್ಲಿ ಇದ್ದಕ್ಕಿದ್ದ ಹಾಗೆ ಅಸ್ವಸ್ಥರಾಗಿ ಸ್ವಲ್ಪ ಕಾಲ ಅಚೇತನರಾದರು. ಹತ್ತಿರಿದ್ದ ಪರಿವಾರದ ಜನರಿಗೆಲ್ಲ ಒಹಳ ಗಾಬರಿ ಯಾಯಿತು. ಆಗ ಪ್ರಜೆಗಳೆಲ್ಲ ಒಹು ಭೀತರಾಗಿ ಪ್ರತಿಸ್ಪರ್ಧೆಯೂ ಹೊರಡು



ಶ್ರೀಮನ್ಮಹಾರಾಜರವರು ಸಿಂಹಾಸನವನ್ನು ಅಲಂಕರಿಸಿರುವುದು

ತ್ತಿದ್ದ ಸರದಿಗಳನ್ನು ಬದುರುಸೋಡುತ್ತಿದ್ದರು. ಕೂಡಲೇ ಮೂರು ನಾಲ್ಕು ವಾರಗಳಲ್ಲಿ ಗುಣವಂಬಿಣವಾಗಲು, ಪ್ರಭುಗಳು ರಾಜಧಾನಿಗೆ ದಯಪಾಡಿಸಿದರು. ಇಲ್ಲಿಂದ ಮುಂದೆ ಮಹಾಸ್ವಾಮಿಯವರ ಆರೋಗ್ಯವು ಬಂದು ವಿಧಕ್ಕೆ ತಿರುಗಿತು. ಯೂರೋಪಿಗೆ ಹೋಗಿ ಪ್ರಸಿದ್ಧ ವೈದ್ಯರಿಗೆ ದೇಹ ಸ್ಥಿತಿಯನ್ನು ತೋರಿಸಬೇಕೆಂಬ ಬಯಕೆಯೂ ಉಂಟಾಯಿತು.

**ಯೂರೋಪಿನ ಪ್ರವಾಸ.**—ಶ್ರೀಮನ್ಮಹಾರಾಜರವರು ಯೂರೋಪಿಗೆ ಹೊರಡುವರೆಂಬ ವಾರ್ತೆಯು ಗಿರಣಿಸಯ ಜೂಕ್ ತಿಂಗಳಲ್ಲಿ ವರ್ತಮಾನ ಪತ್ರಿಕೆಗಳ ಮೂಲಕ ಸಂಸ್ಥಾನದಲ್ಲಿಲ್ಲಾ ಹರಡಿ ಪ್ರಜೆಗಳಲ್ಲಿ ಒಂದು ಬಗೆಯ ಆಶ್ಚರ್ಯವೂ ಆನಂದವೂ ಉಂಟಾಯಿತು. ಇದುವರೆಗೆ ಮೈಸೂರು ಅರಸರಲ್ಲಿ ಯಾರೂ ಇಂತಹ ಪ್ರಯಾಣವನ್ನು ಕೈಕೊಂಡಿರಲಿಲ್ಲ. ಆಚಾರನಿಷ್ಠರು ಎಂದೂ ಇಲ್ಲದ ಈ ಪ್ರಯಾಣವನ್ನು ನಿಶ್ಚಯಿಸಿದುದು ಸಹಜವಾಗಿಯೂ ಆಶ್ಚರ್ಯಕ್ಕೆ ಕಾರಣವಾಯಿತು. ಶ್ರೀಮನ್ಮಹಾರಾಜರವರು ವರ್ಧಂತೀ ಮಹೋತ್ಸವವನ್ನು ತೀರಿಸಿಕೊಂಡು ಜೂಕ್ ತಿಂಗಳ ತಾರೀಖು ಅನುಚರರು, ದಿವಾನರು, ಇನ್ನು ಕೆಲವು ಆಫೀಸರುಗಳು ಇವರೊಡನೆ ಮೈಸೂರಿಂದ ಹೊರಟು ಬೊಂಬಾಯಿಯನ್ನು ತಲಪಿದರು. ಮೈಸೂರು ಅಸೋಸಿಯೇಷನ್ನಿನ ಅಧ್ಯಕ್ಷರಾದ ದಿವಾನ್ ಬಹದ್ದೂರ್ ರಾಮಸ್ವಾಮಿಯವರೂ, ಶ್ರೀಯುತ ಜಮ್ನಾದಾಸ್ ದ್ವಾರಕದಾಸರೂ ಮಹಾಸ್ವಾಮಿಯವರನ್ನು ಸಂದರ್ಶಿಸಿ ಹಾರ ತುರಾಯಿಗಳನ್ನರ್ಪಿಸಿ ಸುಖಪ್ರಯಾಣವನ್ನು ಕೋರಿ ತಮ್ಮ ರಾಜಭಕ್ತಿಯನ್ನು ಪ್ರದರ್ಶಿಸಿದರು. ಸವಾರಿಯು ಯೂರೋಪಿಗೆ 'ರಾಣಾ ಪುರಾ' ಎಂಬ ಹಡಗಿನಲ್ಲಿ ಪ್ರಯಾಣ ಬೆಳೆಸಿದರು. ಶ್ರೀಮನ್ಮಹಾರಾಜರವರು ಕೇವಲ ಆಚಾರಶೀಲರಾದ್ದರಿಂದ, ಹಡಗಿನಲ್ಲಿ ಅವರ ಊಟ ಉಪಚಾರಗಳಿಗೆ ಪ್ರತ್ಯೇಕವಾದ ಅಡಿಗೆ ಮನೆಯೂ ಸ್ನಾನಪಾನಗಳಿಗೆ ಗಂಗಾಜಲದ ಏರ್ಪಾಡೂ ಮಾಡಲ್ಪಟ್ಟಿತು. ಅವರ ಸಮುಖದಲ್ಲಿ ಧರ್ಮಶಾಸ್ತ್ರವನ್ನೂ, ತತ್ವಶಾಸ್ತ್ರವನ್ನೂ, ಗೀತೆ ಮುಂತಾದ ಪವಿತ್ರ ಗ್ರಂಥಗಳನ್ನೂ ಓದುತ್ತಿರುವುದಕ್ಕೆ ಶ್ರೀ ಪಿ. ಸುಬ್ರಮಣ್ಯ ಐಯರ್‌ರವರು, ಋತ್ವಿಕ್ ರಾಮಾಶಾಸ್ತ್ರಿಗಳು ಇದ್ದರು.

ಈ ರೀತಿಯಲ್ಲಿ ಶ್ರೀಮನ್ಮಹಾರಾಜರವರು ಮುಂಬೈ ನಗರವನ್ನು ಬಿಟ್ಟು ಆಳ ಅಂತ್ಯವನ್ನರಿಯದ ಮಹಾಸಾಗರದಲ್ಲಿ ಪ್ರಶಾಂತವಾದ ಹುಣ್ಣಿಮೆಯ

ಬೇಡಿಂಗಳಲ್ಲಿ ಏರ್ಪಡಿ, ಕೆಂಪುಸಮುದ್ರ, ಸೂಯೆಸ್ ಕಾಲುವೆಗಳನ್ನು ದಾಟಿ, ಪೋರ್ಟ್‌ಸೈಡ್‌ನ ಮೂಲಕ ಜುಲೈ ೧೧ನೆಯ ತಾರೀಖು ಪ್ಯಾರಿಸ್ಸಿಗೆ ಹೋದರು. ಹೋಗುವಾಗ ಸೂಯೆಸ್ ಕಾಲುವೆಯನ್ನು ನಿರ್ಮಿಸಿದ ಫ್ರೆಂಚ್ ಪಾಸ್ಟೂರ್‌ಲೆಸ್ಸೆಪ್ಸ್‌ನ ಜನ್ಮಕಥೆಯನ್ನು ಕೇಳಿ ಬಹಳ ಸಂತೋಷ ಪಟ್ಟರು. ಪ್ಯಾರಿಸ್ಸನ್ನು ಸೇರಿದರು. ಆ ಸೇರಿದ ದಿನ ಫ್ರೆಂಚ್ ರಿಪಬ್ಲಿಕ್ಕನ್ನು ಸಾರಿದ ರಾಷ್ಟ್ರೀಯ ಉತ್ಸವ. ಇದು ಪ್ಯಾರಿಸ್ಸಿಗೆ ಅತಿಶಯವಾದ ಹಬ್ಬ. ಇದನ್ನು ಅಲ್ಲಿನ ಜನರು ಮಹಾವೈಭವದಿಂದ ಸಡಿಸುತ್ತಾರೆ. ಮಹಾಸ್ವಾಮಿಯವರೂ ಆ ಉತ್ಸವದಲ್ಲಿ ಭಾಗಿಗಳಾಗಿದ್ದರು. ಪ್ಯಾರಿಸ್ಸಿನಲ್ಲಿ ನಾಲ್ಕು ದಿವಸಗಳಿದ್ದು, ಭೂಲೋಕದ ಸ್ವರ್ಗವೆಂದು ಖ್ಯಾತಿಗೊಂಡ ಆ ಪಟ್ಟಣದ ಸೌಂದರ್ಯಪೂರ್ಣವಾದ ಕಟ್ಟಡಗಳನ್ನೂ ಅಲ್ಲಿನ ಜನರ ನಾಗರಿಕತೆಯನ್ನೂ ಕಂಡು ಆನಂದಿಸಿ, ನೆಪೋಲಿಯನ್ ಮುಂತಾದ ಖ್ಯಾತಪುರುಷರ ಸ್ಮಾರಕಗಳನ್ನೂ ಇನ್ನೂ ಪ್ರೇಕ್ಷಣೀಯವಾದ ದೃಶ್ಯಗಳನ್ನೂ ನೋಡಿ ಕೊಂಡು, ೧೬ನೆಯ ತಾರೀಖು ಪ್ಯಾರಿಸ್ಸನ್ನು ಬಿಟ್ಟು ಲಂಡನ್ ಪಟ್ಟಣದ ವಿಕ್ಟೋರಿಯಾ ಸ್ಟೇಷನ್ನಿನಲ್ಲಿ ಇಳಿದರು. ಮಹಾಸ್ವಾಮಿಯವರನ್ನು ಸ್ವಾಗತಿಸುವುದಕ್ಕಾಗಿ ಸರ್ ಪ್ಯೆಡ್ರಿಕ್ ಸೈಕ್ಸ್‌ರವರು, ಸರ್ ಹಾಕೋರ್ಟ್ ಬಟ್ಲರ್‌ರವರು, ಸರ್ ಸ್ಟುಯರ್ಟ್ ಫ್ರೇಜರ್‌ರವರು, ಮಾಜಿ ರೆಸಿಡೆಂಟರಾಗಿದ್ದ ಸರ್ ಹ್ಯೂಡ್ಯಾಲಿಯವರು, ಇಂಡಿಯಾ ಆಫೀಸಿನ ಪ್ರತಿನಿಧಿಗಳಾದ ಕರ್ನಲ್ ಸೀಲ್‌ರವರು, ಇನ್ನೂ ಇತರ ಅನೇಕ ಭಾರತೀಯ ದೊಡ್ಡ ಮನುಷ್ಯರು, ಮೈಸೂರಿನ ಟ್ರೇಡ್ ಕಮಿಷನರವರೂ ಆಗಮಿಸಿದ್ದರು. ಶ್ರೀಮನ್ಮಹಾರಾಜರವರು ಅವರುಗಳೊಡನೆ ಸಂಭಾಷಣೆಮಾಡಿ ಜೀಪ್ಸ್‌ನಿಂದು ಲಂಡನ್ನಿನಲ್ಲಿ ಪ್ರಖ್ಯಾತವಾದ ಡಾರ್ಚೆಸ್ಟರ್ ಹೊಟೆಲಿನಲ್ಲಿ ಇಳಿದರು.

ಲಂಡನ್ನಿನಲ್ಲಿ ಹಲವರು ಆಪ್ತಮಿತ್ರರಾದರು ಬಂದು ಮಹಾಸ್ವಾಮಿಯವರನ್ನು ಭೇಟಿ ಮಾಡಿದರು. ಇವರುಗಳಲ್ಲಿ ಮಾಜಿ ಮಂತ್ರಿಗಳಾದ ಬಿ|| ರ್ಯಾಂಸೆ ಮ್ಯಾಕ್ಡೊನಾಲ್ಡ್‌ರವರೂ, ಲಾರ್ಡ್ ಮತ್ತು ಲೇಡಿ ಪೆಟ್ಲಂಗಾರ್ಡ್‌ರವರೂ, ಲಾರ್ಡ್ ಹಾರ್ಡಿಂಗ್‌ರವರೂ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಾದ ಮಾರ್ಕ್ವಿಸ್ ಜೆಟ್ಲ್ಯಾಂಡ್‌ರವರೂ, ಸೈಕೌಂಟ್ ಹ್ಯಾಲಿಫಾಕ್ಸ್‌ರೂ, ಬಿ|| ಪೆಥ್ವಿಕ್ ಲಾರೆನ್ಸ್‌ರವರೂ, ಜೊಂಬಾಯಿ ಮತ್ತು

ಸಮಾಜಮಂದಿರದಲ್ಲಿ ಜರುಗಿದ ಪ್ರಥಮ ಪುಣ್ಯತಿಥಿ ಕಾರ್ಯಕ್ರಮದಲ್ಲಿ ಸೇರಿದ್ದ ಜನಸ್ತೋಮ

ಮದ್ರಾಸಿನ ಮಾಜಿ ಗವರ್ನರುಗಳೂ ಮುಖ್ಯರಾಗಿದ್ದರು. ಜುಲೈ ೨೭ನೆಯ ತಾರೀಖು ಶ್ರೀಮನ್ಮಹಾರಾಜರವರು ಚಕ್ರವರ್ತಿಯವರಾದ ಲನೇ ಎಡ್ವರ್ಡ್‌ರವರನ್ನೂ ೨೭ನೆಯ ತಾರೀಖು ಮೇರಿ ರಾಣಿಯವರನ್ನೂ ಭೇಟಿ ಮಾಡಿದರು. ಲಂಡನ್ನಿಗೆ ಹೋದಾರಭ್ಯ ಅಲ್ಲಿನ ಸರ್ವಮಾನ್ಯ ಪತ್ರಿಕೆಗಳು ಮಹಾರಾಜರ ವಿಷಯವಾಗಿ ಫೋಟೋ ಸಹಿತ ಅವರ ಪ್ರಜಾಭಿಮಾನವನ್ನೂ ಧರ್ಮರಾಜ್ಯಭಾರವನ್ನೂ ಅವರ ಆಚಾರ ವಿಚಾರ ನ್ಯಾಯ ನಿಷ್ಠೆಗಳನ್ನೂ ಕುರಿತು ಬಹಳವಾಗಿ ಹೊಗಳಿ ಪ್ರಕಟಿಸುತ್ತಿದ್ದುವು. ಶ್ರೀಮನ್ಮಹಾರಾಜರವರ ವಿಷಯವಾದ ಸುದ್ದಿಗಳನ್ನೂ ಕಥೆಗಳನ್ನೂ ಓದಿದ ಲಂಡನ್ ಪ್ರಜೆಗಳು ಮಹಾಸ್ವಾಮಿಯವರ ದರ್ಶನವನ್ನು ಬಯಸಿ ಡಾರ್ಚೆಸ್ಟರ್ ಭವನಕ್ಕೆ ಬಹಳವಾಗಿ ಬಂದುಬಂದು ಹೋಗುತ್ತಿದ್ದರು. ಇವರಲ್ಲಿ ಧನಾಪೇಕ್ಷಿಗಳೇ ಹೆಚ್ಚು. ಶ್ರೀಮನ್ಮಹಾರಾಜರವರು ದೇಹಿ ಎಂದವರಿಗೆ ನಾಸ್ತಿ ಎಂದು ಹೇಳುತ್ತಿರಲಿಲ್ಲ. ಅವರವರ ಸಂಸ್ಥೆ, ಸಮಾಜಗಳಿಗನುಸಾರವಾಗಿ ಧನವನ್ನು ಕೊಡುತ್ತಿದ್ದರು.

ಆಗಸ್ಟ್ ೬ನೆಯ ತಾರೀಖು ಶ್ರೀಮನ್ಮಹಾರಾಜರವರು ತಾವು ಇಳಿದಿದ್ದ ಡಾರ್ಚೆಸ್ಟರ್ ಭವನದಲ್ಲಿ ಒಂದು ಸತ್ಕಾರ ಕೂಟವನ್ನೇರ್ಪಡಿಸಿದರು. ಅದಕ್ಕೆ ಅನೇಕ ಬ್ರಿಟಿಷ್ ಅಧಿಕಾರಿಗಳೂ ಸ್ನೇಹಿತರುಗಳೂ ಆಗಮಿಸಿ ಮಹಾಸ್ವಾಮಿಯವರ ಆತಿಥ್ಯವನ್ನು ಸ್ವೀಕರಿಸಿ ಮಹಾಸ್ವಾಮಿಯವರಿಗೆ ಆಯುರಾರೋಗ್ಯವನ್ನು ಕೋರಿದರು. ಆ ಕೂಟದಲ್ಲಿ ಭವನ ಸಮುದ್ರದ ವಿದ್ಯುಚ್ಛಕ್ತಿಯ ಕೆಲಸಗಳನ್ನೂ, ದಸರಾ ದರ್ಬಾರು ಮೆರವಣಿಗೆಗಳ ಉತ್ಸವಗಳನ್ನೂ ತೋರಿಸುವ ಎರಡು ಫಿಲಂಗಳು ಪ್ರದರ್ಶಿಸಲ್ಪಟ್ಟುವು. ಆಗ ಮೆ|| ಟೈಲರ್‌ರವರು ಮೈಸೂರಿನ ಅಳಿಕೆಯನ್ನು ಕುರಿತು ಬಹಳವಾಗಿ ಪ್ರಶಂಸಿಸಿದರು.

ಇಷ್ಟರಲ್ಲಿ ಉಪಾಕರ್ಮವು ಸನ್ನಿಹಿತವಾಯಿತು. ಇದಕ್ಕಾಗಿ ಥೇಮ್ಸ್ ನದೀತೀರದಲ್ಲಿ "ಮೇಡನ್‌ಹೆಡ್" ಎಂಬಲ್ಲಿ ಎರಡು ಕಾಟೇಜುಗಳನ್ನು ಬಾಡಿಗೆಗೆ ತೆಗೆದುಕೊಂಡರು. ಅಲ್ಲಿ ಶ್ರೀಮನ್ಮಹಾರಾಜರವರೂ ಅವರ ಪರಿವಾರದವರೂ ಮೂರು ದಿವಸವೆಲ್ಲ ಉಪಾಕರ್ಮವನ್ನು ನಾಂಗವಾಗಿ ಸರಪೇರಿಸಿದರು. ಮಹಾಸ್ವಾಮಿಯವರು ಆಚರಿಸಿದ ಉಪಾಕರ್ಮ ವಿಧಿಯನ್ನು ಕುರಿತು ಲಂಡನ್ನಿನ 'ಡೈಲಿ ಟೆಲಿಗ್ರಾಫ್,' 'ಸ್ಟಾಂಡರ್ಡ್ ಕ್ರಾನಿಕಲ್,'

'ಸ್ಕಾಟ್ಸ್‌ಮನ್' ಎಂಬ ಪತ್ರಿಕೆಗಳು ಬಹಳವಾಗಿ ಕೊಂಡಾಡಿರುವುವು. ಬಳಿಕ ಒಂದು ಸೆಷಲ್ ರೈಲನ್ನು ಮಾಡಿಕೊಂಡು ಸ್ಕಾಟ್‌ಲೆಂಡಿಗೆ ಹೊರಟರು. ಈ ರೈಲಿಗೆ "ಮೈಸೂರು ಸ್ಪೆಷಲ್" ಎಂದು ಹೆಸರು. ಈ ರೈಲಿನಲ್ಲಿ ಮಹಾರಾಜರವರ ಮಕ್ಕಳು ಅವರ ಪರಿವಾರದವರ ಹೊರ ಉಪಚಾರಕ್ಕೂ ಒಳ್ಳಾಂತಿಗೂ ಬೇಕಾದ ಸೌಕರ್ಯಗಳೂ ಒದಗಿಸಲ್ಪಟ್ಟಿದ್ದುವು.

ಆಗಸ್ಟ್ ೨೮ನೆಯ ತಾರೀಖಿನ ದಿನ ಮಹಾಸ್ವಾಮಿಯವರು ಲಂಡನ್ನಿನಿಂದ ಟೋಕ್ಕಿಗೆ ಹೋಗಿ ಇಳಿದು ಕಾರಿನಲ್ಲಿ ಊರನ್ನೆಲ್ಲಾ ಸುತ್ತಿ, ಅಲ್ಲಿನ ಕೆಲವು ಗ್ರಾಮಗಳಿಗೂ ಪಶುಪ್ರದರ್ಶನಾಲಯಕ್ಕೂ, ವಿಜ್ಞಾನ ಶಾಸ್ತ್ರಾಲಯಕ್ಕೂ ಹೋಗಿದ್ದರು. ಅದೇ ರೈಲಿನಲ್ಲಿ ಕಿಸಾಏಕ್‌ಗೆ ಪ್ರಯಾಣ ಮಾಡಿ, ಅಲ್ಲಿಂದ ಹರಾಮೆಂಟೊ ವಾಟರಿಗೆ ಮೋಟಾರಿನಲ್ಲಿ ಹೋಗಿ, ಅಲ್ಲಿನ ಪ್ರದರ್ಶನಾಲಯವನ್ನೂ ಪರಾಂಬರಿಸಿದರು. ಆ ಪ್ರದರ್ಶನಾಲಯದ ಕ್ಯೂರೇಟರು ನಿಲಯಂ ಹಾರ್ಸೆಯವರು ಪ್ರಸಿದ್ಧವಾದ ಸ್ಕಾಟಿಷ್ ರಾಕ್ ಬ್ಯಾಂಡನ್ನು ಬಾರಿಸಿದರು. ಮಹಾಸ್ವಾಮಿಯವರು ಕೇಳಿ ಆನಂದಪಟ್ಟು, ಅಲ್ಲಿಗೆ ವಿಶೇಷಾರ್ಥವಾಗಿ ಬಂದಿದ್ದ ಅನೇಕರುಗಳಿಗೆ ಮಾತನಾಡಿ, ಕಿಸಾಏಕ್‌ನಿಂದ ಓಬಾನ್‌ಗೆ ರೈಲಿನಲ್ಲಿ ಪ್ರಯಾಣ ಮಾಡಿದರು. ಓಬಾನ್ ಎಂಬುದು ಸುಂದರ ಪ್ರದೇಶ. ಅಲ್ಲಿನ ಅಕ್ಕಪಕ್ಕದ ಬೆಟ್ಟಗಳಲ್ಲಿ ತಾವೇ ಮೋಟಾರ್ ನಡೆಯಿಸಿಕೊಂಡು ಹೋಗಿದ್ದರು. ಓಬಾನ್‌ನಿಂದ ಸ್ಕಾಟ್‌ಲೆಂಡಿನ ಅಬರ್‌ಫೀಲ್ಡ್ ಎಂಬಲ್ಲಿಗೆ ಪ್ರಯಾಣಮಾಡಿ ಕೆಲವು ದಿವಸ ತಂಗಿದ್ದರು. ಸ್ಕಾಟ್ಲೆಂಡಿನ ಪ್ರವಾಸವು ಮಹಾಸ್ವಾಮಿಯವರಿಗೆ ಬಹಳ ಹಿತವಾಗಿದ್ದುದಲ್ಲದೆ ಆನಂದವನ್ನುಂಟುಮಾಡಿತು. ಅವರ ಆರೋಗ್ಯವೂ ಬಹಳ ಮಟ್ಟಿಗೆ ಉತ್ತಮವಾಯಿತು.

ಶ್ರೀಮನ್ಮಹಾರಾಜರವರು ಸ್ಕಾಟ್ಲೆಂಡಿನ ಪ್ರವಾಸವನ್ನು ಮುಗಿಸಿಕೊಂಡು ಆಗಸ್ಟ್ ೧೬ನೆಕ್ಕೆ ಮತ್ತೆ ಲಂಡನ್ನಿಗೆ ಬಂದರು. ಅವರನ್ನು ಬ್ರಿಟಿಷ್ ನೌಕಾ ಇಲಾಖೆಯವರು ತಮ್ಮ ದಳಗಳನ್ನು ಪರಿಶೀಲನೆಮಾಡಲು ಆಹ್ವಾನಿಸಿದ್ದರು. ಅವರ ಆಹ್ವಾನವನ್ನು ಗೌರವಿಸಿದರು. ಅಲ್ಲಿನ ಅಧಿಕಾರಿಯು ಮಹಾಸ್ವಾಮಿಯವರನ್ನು ಸುಪೆರ್ಬ್‌ನಲ್ಲಿ ಕುಳ್ಳಿರಿಸಿಕೊಂಡು ಬಹಳ ಹೊತ್ತು ತಿರುಗಾಡಿಸಿದನು. ಆಧುನಿಕ ವಿಜ್ಞಾನಶಾಸ್ತ್ರದ ಶಕ್ತಿಗಳನ್ನು ಕಂಡು ಮಹಾಸ್ವಾಮಿಯವರು ಬಹಳವಾಗಿ ಆನಂದಪಟ್ಟರು.

ಇಂಗ್ಲೆಂಡಿನಲ್ಲಿ ಉವಾಕಮ್ಮದ ಅನಂತರ ಶ್ರೀಮನ್ಮಹಾರಾಜರವರೂ ಶ್ರೀ ಯುವರಾಜರವರೂ
ಮಾಡುತ್ತಿರುವ ಗುರುವಂದನಾ ವಾರ್ಷಿಕೆ

ಈ ಮಧ್ಯೆ ಆಗಸ್ಟ್ ೧೯ರಲ್ಲಿ ವಿಮಾನದಲ್ಲಿ ಕುಳಿತು ಜರ್ಮನ್ ರಾಜಧಾನಿಯಾದ ಬರ್ಲಿನ್ನಿಗೆ ಪಯಣಮಾಡಿಸಿದರು. ಅವರಿಗಾಗಿ ಒಂದು ಸ್ಪೆಷಲ್ ವಿಮಾನವನ್ನು ಖಾಡಿಗೆಗೆ ತೆಗೆದುಕೊಳ್ಳಲಾಯಿತು. ಮಹಾಸ್ವಾಮಿಯವರು ವಿಮಾನದಲ್ಲಿ ಪ್ರಯಾಣಮಾಡಿದ್ದು ಇದೇ ಮೊದಲಸಲ. ಸಂಗಡ ಸರ್ ಮಿರ್ಜಾರವರೂ ಹತ್ತು ಜನ ಆಫೀಸರುಗಳೂ ಮಾತ್ರ ಹೋಗಿದ್ದರು. ಉಳಿದವರೆಲ್ಲ ರೈಲ್ ಮೂಲಕ ಹೋದರು. ವಾಯು ಮಾರ್ಗದ ಪ್ರಯಾಣವನ್ನು ಮಾಡಿಕೊಂಡು ಬರ್ಲಿನ್ ನಗರದಲ್ಲಿರುವ ಟೆಂಪಲ್‌ಹೋಫ್ ಏರೋಡ್ರೋಮಿನಲ್ಲಿ ಸಾಯಂಕಾಲ ಇಳಿದಾಗ, ಶ್ರೀಮನ್ಮಹಾರಾಜರವರನ್ನು ಸ್ವಾಗತಿಸಲು ಜರ್ಮನ್ ಸರ್ಕಾರದ ಅಧಿಕಾರಿಗಳೂ, ಬ್ರಿಟಿಷ್ ರಾಯಭಾರಿಗಳೂ ಬಂದಿದ್ದರು. ಮಹಾಸ್ವಾಮಿಯವರು ಬರ್ಲಿನ್ನಿನಲ್ಲೆಲ್ಲಾ ಅತಿ ದೊಡ್ಡದಾದ ಏಡ್ಲಾನ್ ಹೋಟೆಲಿನಲ್ಲಿ ಇಳಿದುಕೊಂಡರು. ಹೋಟೆಲಿನ ಕಾರ್ಯಕರ್ತನು (Manager) ಅತಿ ಕಷ್ಟದಿಂದ ಎರಡು ರೂಮುಗಳನ್ನು ಖಾಲಿಮಾಡಿಕೊಟ್ಟನು. ಅವಿಗೆಗೆ ನಾಲ್ಕನೆ ಅಂತಸ್ತಿನಲ್ಲಿ ಜಿಸಲುಮುಚ್ಚಿನ ಮೇಲೆ ಸ್ಥಳ ಮಾಡಿಕೊಟ್ಟನು. ಮಹಾಸ್ವಾಮಿಯವರು ಬರ್ಲಿನ್ನಿಗೆ ಹೋದಾಗ, ಅಲ್ಲಿ ಒಲಿಂಪಿಯಾ ಉತ್ಸವಕಾಲ, ಅಸಂಖ್ಯೇಯವಾದ ಜನಸಂದಣಿ. ಎಲ್ಲಿಯೂ ಸ್ಥಳವಿಲ್ಲ. ಈ ಉತ್ಸವಕ್ಕೆ ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಜಪಾನ್, ಅಮೇರಿಕಾ ಈ ಐದು ರಾಷ್ಟ್ರಗಳ ಜನರು ಸೇರುತ್ತಾರೆ. ಇಲ್ಲಿರುವ ಒಲಿಂಪಿಯಾ ಥಿಯೇಟರಿನಲ್ಲಿ ೨ ಲಕ್ಷ ಜನರು ಏಕಕಾಲದಲ್ಲಿ ಕುಳಿತು ನೋಡಲು ಏರ್ಪಾಟು ಮಾಡಿದ್ದರು. ಇಲ್ಲಿಯಷ್ಟು ದೊಡ್ಡ ಥಿಯೇಟರು ಭೂಲೋಕದಲ್ಲಿ ಇನ್ನೆಲ್ಲೂ ಇಲ್ಲ. ಜಗತ್ತಿನಲ್ಲಿ ಯಾವಯಾವ ಇಂಗ್ಲಿಷ್ ಆಟಪಾಟಗಳುಂಟೊ ಅವನ್ನೆಲ್ಲ ಇಲ್ಲಿ ನಡೆಸುವರು.

ಮಾರನೆಯ ದಿನ ಶ್ರೀಮನ್ಮಹಾರಾಜರವರು ಜರ್ಮನಿಯ ಕೆಲವು ಗ್ರಾಮಗಳಿಗೂ, ಅನೇಕ ಕೈಗಾರಿಕೆ ಕಾರ್ಖಾನೆಗಳಿಗೂ ಹೋಗಿದ್ದರು. ಅಲ್ಲಿ ಮಹಾಸ್ವಾಮಿಯವರು ವಿದ್ಯುಚ್ಛಕ್ತಿಯನ್ನು ಯಾವಯಾವ ನೂತನ ಉದ್ಯಮಗಳಿಗೆ ಉಪಯೋಗಿಸಿದ್ದಾರೆಂಬುದನ್ನೂ ಅಲ್ಲಿನ ಇತರ ಮೈಜ್ಞಾನಿಕ ವ್ಯವಸ್ಥೆಗಳನ್ನೂ ಪರಿಶೀಲಿಸಿ ಬಹಳ ಸಂತೋಷಪಟ್ಟರು. ಇಲ್ಲಿ ಶ್ರೀಮನ್ಮಹಾರಾಜರವರು ಜಿಪ್ಸಿ ಸಂಗೀತವನ್ನು ಕೇಳಿ ವಿಶೇಷವಾಗಿ ಆನಂದಿಸಿದರು.

ಅಲ್ಲಿನ ಪ್ರಾಣಿ ಪ್ರದರ್ಶನಾಲಯಕ್ಕೂ ಹೋಗಿದ್ದರು. ಬರ್ಲಿನ್ನಿನ ವೃತ್ತ ಪತ್ರಿಕೆಗಳೆಲ್ಲ ಶ್ರೀಮನ್ಮಹಾರಾಜರವರನ್ನು ವಿಶೇಷವಾಗಿ ಸ್ವಾಗತಿಸಿ ಅವರ ಪ್ರವಾಸದ ವಿವರಗಳನ್ನೂ ಅವರ ಸಂಸ್ಥಾನದ ಆದರ್ಶ ಕಾರುಬಾರು ಗಳನ್ನೂ ಬಣ್ಣಿಸಿ ಫೋಟೊಗಳೂಡನೆ ಪ್ರಕಟಿಸಿದ್ದುವು. ಮುಂದಕ್ಕೆ ಹೊರಡುವಾಗ, ಏಡ್ಲಾಕ್ ಹೊಟೆಲಿನ ಕಾರ್ಯಕರ್ತನು ಮಹಾಸ್ವಾಮಿಯವರನ್ನು ಬಹಳ ಮರ್ಯಾದೆಯಿಂದ ಕಂಡು ಇದುವರೆಗೆ ಇಂಡಿಯಾ ದೇಶದ ಅನೇಕರಾಜರೆಲ್ಲ ಬಂದು ಈ ಹೊಟೆಲಿನಲ್ಲಿ ಇಳಿದುಕೊಂಡಿದ್ದರು. ಎಲ್ಲರೂ ಸಮ್ಮಿಲ್ಲಿ ಸೇರಿ ಸಮ್ಮಗುಂಪಿನಲ್ಲಿ ಊಟಉಪಚಾರಗಳನ್ನು ಮಾಡಿಕೊಂಡಿದ್ದರೇ ಹೊರತು, ತಮ್ಮತಮ್ಮ ಮತಾಚಾರಕ್ಕೂ ಆಚಾರವ್ಯವಹಾರಕ್ಕೂ ಧರ್ಮಕ್ಕೂ ಕಟ್ಟುಬಿದ್ದು ಪ್ರತ್ಯೇಕವಾಗಿ ಯಾರೂ ಹೀಗೆ ಇರಲಿಲ್ಲವೆಂದೂ ತಾವು ಮಹಾಪುರುಷರೆಂದೂ ಹೊಗಳಿದನು.

ಶ್ರೀಮನ್ಮಹಾರಾಜರವರು ಬರ್ಲಿನ್ನಿನಲ್ಲಿ ನಾಲ್ಕೈದು ದಿನಗಳಿದ್ದು, ಬುಡಾಪೆಸ್ಟಿಗೆ ಪ್ರಯಾಣ ಮಾಡಿದರು. ಬುಡಾಪೆಸ್ಟ್ ಎಂಬುದು ಬಹು ಸುಂದರವಾದ ಪಟ್ಟಣ. ಅಲ್ಲಿನ ಜನರು ಮಹಾಸ್ವಾಮಿಯವರನ್ನು ಒಳ್ಳೆ ಆದರದಿಂದ ಸ್ವಾಗತಿಸಿದರು. ಮಹಾರಾಜರಿಗಾಗಿ ಬುಡಾಪೆಸ್ಟಿನಲ್ಲಿ ಅತ್ಯಂತ ವೈಭವಯುತವಾದ ಒಂದು ಹೊಟೇಲು ಗೊತ್ತುಮಾಡಲ್ಪಟ್ಟಿತ್ತು. ಬುಡಾಪೆಸ್ಟಿನ ಜನರೆಲ್ಲರೂ ಶ್ರೀಮನ್ಮಹಾರಾಜರವರನ್ನು ನೋಡಲು ಬಹು ಉತ್ಸುಕತೆಯಿಂದ ಬರುತ್ತಿದ್ದರು. ಅವರಿಗೆಲ್ಲ ಮಹಾರಾಜರು ಭೇಟಿಕೊಡುತ್ತಿದ್ದರು. ಊರಿನ ಜಲುಮೆಕೆಯನ್ನು ನೋಡಿ ಬಹಳ ಸಂತೋಷಪಟ್ಟರು. ಇಲ್ಲಿ ಮಹಾರಾಜರವರು ಅನೇಕ ಸಂಗೀತ ಕಛೇರಿಗಳನ್ನು ಮಾಡಿಸಿ ಬಹಳ ಆನಂದವನ್ನನುಭವಿಸಿದರು.

ಶ್ರೀಮನ್ಮಹಾರಾಜರವರು ಬುಡಾಪೆಸ್ಟಿನಿಂದ ವಿಯನ್ನಾಪುರಿಗೆ ಪ್ರಯಾಣ ಮಾಡಿದರು. ವಿಯನ್ನಾದಲ್ಲಿ ಒಂದು ವಾರವಿದ್ದು, ಅಲ್ಲಿನ ಪ್ರಸಿದ್ಧ ವೈದ್ಯರಿಗೆ ತಮ್ಮ ದೇಹಸ್ಥಿತಿಯನ್ನು ತೋರಿಸಿದರು. ಇಲ್ಲಿಗೆ ಮಹಾಸ್ವಾಮಿಯವರ ಸ್ವದೇಶದ ಒಯಣಕೆಯು ಈಡೇರಿತು. ವೈದ್ಯರು ಪ್ರಭುಗಳನ್ನು ಚೆನ್ನಾಗಿ ಪರೀಕ್ಷಿಸಿ ಕಳವಳಪಡಲು ಏನೂ ಕಾರಣವಿಲ್ಲವೆಂದೂ ಸಂಪೂರ್ಣ ಆರೋಗ್ಯದಿಂದಿರುವರೆಂದೂ ಹೇಳಿದರು. ಬಳಿಕ ಕಾಲಕ್ಕೆ ಬರ್ಗಾನ್ನು ನೋಡಿಕೊಂಡು,



ರಾಜಸಭಾಭೂಷಣ ಟಿ. ತಂಬೂಚೆಟ್ಟಿ, ಬಿ.ಎ., ಓ.ಬಿ.ಇ., ಕೆ.ಎಸ್.ಜಿ , ಅವರು

ಸ್ವಿಟ್ಜರ್‌ಲೆಂಡ್ ದೇಶಕ್ಕೆ ಸಂಬಂಧಪಟ್ಟ ಲೂಸರ್ನ್ ನಗರದಲ್ಲಿ ಪ್ರವಾಸ ಮಾಡಿ, ಸೆಪ್ಟಂಬರ್ ೫ಕ್ಕೆ ಜೂರಿಚ್ಚಿಗೆ ಪ್ರಯಾಣ ಬೆಳೆಸಿದರು. ಜೂರಿಚ್ಚಿನಲ್ಲಿಯೂ ಲೂಸರ್ನ್ ನಗರದಲ್ಲಿಯೂ ಆಲ್ಪ್ಸ್ ಪರ್ವತಪ್ರದೇಶಗಳಲ್ಲಿಯೂ ಪ್ರೇಕ್ಷಣೀಯ ಸ್ಥಳಗಳಿಗೆಲ್ಲ ಹೋಗಿದ್ದು, ಅಲ್ಲಿಂದ ಇಟಲಿಯಲ್ಲಿರುವ ಮಿಲಾನ್‌ನಿಂದ ನೀಸ್ ಪಟ್ಟಣಕ್ಕೆ ಒಂದು, ಅಲ್ಲಿನ ಸೆಂಟ್ ಕಾರ್ಥಾಸೆ ಗಳನ್ನೂ ಅತ್ಯುನ್ನತವಾದ ರೋಮನ್ ಕ್ಯಾಥಲಿಕ್ ಚರ್ಚನ್ನೂ ಇತರ ಕಲಾಪೂರ್ಣವಾದ ಕಟ್ಟಡಗಳನ್ನೂ ನೋಡಿದರು.

ಸೆಪ್ಟಂಬರ್ ೧೯ಕ್ಕೆ ಮಾರ್ಸೇಲ್ಸ್‌ನಿಂದ ಇಂಡಿಯಾಫೊಮುಖವಾಗಿ ಪ್ರಯಾಣಮಾಡಲು ಗೊತ್ತಾಗಿ, ಶ್ರೀಮದ್ಭುವರಾಜರು ಮುಂತಾದವರನ್ನು ಸ್ಟ್ರಾತ್‌ಮೋರ್ ಹಡಗಿನಲ್ಲಿ ಕೂರಿಸಿಕೊಂಡು ಬೊಂಬಾಯಿಗೆ ಒಂದರು. ಬೊಂಬಾಯಿನಲ್ಲಿ ಶ್ರೀಮನ್ಮಹಾರಾಜರವರನ್ನು ಸ್ವಾಗತಿಸಲು ಫ್ರಿಕ್ಸ್ ಒಯಚಾಮರಾಜ ಒಡೆಯರೂ, ಸರ್ ವಿಶ್ವೇಶ್ವರಯ್ಯನವರೂ, ಎಸ್. ಜಿ. ರಾಜಗೋಪಾಲಾಚಾರಿಯವರೂ, ಮೈಸೂರು ಅಸೋಸಿಯೇಷನ್ ಅಧ್ಯಕ್ಷರಾದ ರಾಮಸ್ವಾಮಿಯವರೇ ಮುಂತಾದವರೆಲ್ಲರೂ ಒಂದಿದ್ದರು. ಶ್ರೀಮನ್ಮಹಾರಾಜರವರು ತಮ್ಮ ಪ್ರವಾಸದಲ್ಲಿ ಸಹಕರಿಸಿದ ಸರ್ವರಿಗೂ ಕೃತಜ್ಞತೆಯನ್ನು ಪ್ರದರ್ಶಿಸಿ, ಅಕ್ಟೋಬರ್ ೨ನೆಯ ತಾರೀಖು ಬೆಂಗಳೂರಿಗೆ ಆಗಮಿಸಿದರು. ಈ ಪ್ರವಾಸದಲ್ಲಿ ದಿವಾನ್‌ರವರು ಸದಾ ಮಹಾಸ್ವಾಮಿ ಯವರ ಸಂಗಡಲೇ ಇರುತ್ತಿದ್ದರು. ಆಗ ಅರಮನೆ ಆಡಳಿತಗಳನ್ನೆಲ್ಲ ಬಹಳ ದಕ್ಷತೆಯಿಂದ ಹುಜೂರು ಸೆಕ್ರೆಟರಿಯವರಾದ ರಾಜಸಭಾಭೂಷಣ ತಂಬೂ ಸೆಟ್ಟಿಯವರು ನೋಡಿಕೊಳ್ಳುತ್ತಿದ್ದರು.

ಇದುವರೆಗೆ ಹಿಂದೂಸ್ಥಾನದ ಅನೇಕ ರಾಜರುಗಳು ಯೂರೋಪಿಗೆ ಹೋಗಿದ್ದರೂ ಯಾರಿಗೂ ಇಷ್ಟು ಮರ್ಯಾದೆ ದೊರೆತಿರಲಿಲ್ಲ. ನಮ್ಮ ಪ್ರಭುಗಳು ಹಿಂದೂ ಧರ್ಮಾಚರಣೆಯಲ್ಲಿ ಎಷ್ಟು ಆದರವುಳ್ಳವರೋ ಅಷ್ಟೂ ವಿಶಾಲಹೃದಯರೆಂಬುದನ್ನು ವ್ಯವಹಾರಗಳಲ್ಲಿ ತೋರಿಸಿ ಲೋಕಕ್ಕೇ ಆದರ್ಶಪ್ರಾಯರಾದರು. ಮೈಸೂರಿನ ಪ್ರಜೆಗಳು ತಮ್ಮ ಪ್ರಭುಗಳು ಇತೋ ಪ್ಯತಿಶಯವಾದ ಆರೋಗ್ಯಭಾಗ್ಯದಿಂದ ಪಿಂತಿರುಗಿದ್ದಕ್ಕಾಗಿ ಬಹಳ ಆನಂದವನ್ನು ಹೊಂದಿದರು.

# ೧೬ನೆಯ ಅಧ್ಯಾಯ

## ಭ್ರಾತೃಸಂಯೋಗ

ಸುಖರಾಜ ಶ್ರೀಚಾಮರಾಜೇಂದ್ರ ಒಡೆಯರಿಗೆ ಏಳು ಮಂದಿ ಮಕ್ಕಳು. ಅವರಲ್ಲಿ ರಾಜ ಒಡೆಯರು, ದೇವರಾಜ ಒಡೆಯರು ಎಂಬವರು ಕೇವಲ ಶಿಶುಗಳಾಗಿದ್ದಾಗಲೇ ಕಾಲೋಚಿತಯಾತ್ರೆ ಮಾಡಿದರು. ಉಳಿದವರಲ್ಲಿ ಒಬ್ಬಲಕ್ಷ್ಮಮ್ಮಣ್ಣಿಯವರೇ ಹಿರಿಯರು. ಎರಡನೆಯವರೇ ಕೃಷ್ಣಾಜಮ್ಮಣ್ಣಿಯವರು, ಮೂರನೆಯವರು ನಮ್ಮ ನಲ್ಮೆಯ ಮಹಾರಾಣಿಯವರು. ನಾಲ್ಕನೆಯವರು ಜಲುವಾಜಮ್ಮಣ್ಣಿಯವರು. ಐದನೆಯವರೇ ಶ್ರೀ ಕಂಠೀರವ ನರಸಿಂಹರಾಜ ಒಡೆಯರವರು. ಇವರು ೧೮೮೮ನೆಯ ಇಸವಿಯಲ್ಲಿ ಜನಿಸಿದರು. ಇವರೇ ನಮ್ಮ ಯುವರಾಜರು. ಇವರೂ ಶ್ರೀಮನ್ಮಹಾರಾಜರವರ ಸಂಗಡಲೇ ವಿದ್ಯಾಭ್ಯಾಸ ಮಾಡುತ್ತಿದ್ದರು. ಶ್ರೀ ಓ. ರಾಘವೇಂದ್ರರಾಯರು, ಮಿ|| ಎಸ್. ಎಂ. ಫ್ರೇಜರ್‌ರವರು ಇವರಿಗೂ ಬೋಧಕರಾಗಿದ್ದರು. ಅಣ್ಣತಮ್ಮಂದಿರಿಗೆ ಒಹಳ ಅಭಿಮಾನ ವಿದ್ದಿತು. ಯುವರಾಜರು ಲಕ್ಷ್ಮಣನಂತೆ ಶ್ರೀಮನ್ಮಹಾರಾಜರವರು ಮೋದ ಕಡೆಯೆಲ್ಲೆಲ್ಲ ಸಂಗಡಲೇ ಊರ್ಮಾ, ಕಾಶ್ಮೀರ, ಜಪಾನು ಮುಂತಾದ ದೇಶಗಳಿಗೆಲ್ಲಾ ಹೋಗಿದ್ದರು. ಕೆಲವು ದಿವಸ ಅಜ್ಮೀರಿನಲ್ಲಿ ಸ್ಥಾಪಿತವಾಗಿದ್ದ ರಾಜಕುಮಾರಾ ಕಾಲೇಜಿನಲ್ಲಿ ಸಹ ವ್ಯಾಸಂಗ ಮಾಡುತ್ತಿದ್ದರು. ಸಹಪಾಠೀತಜ್ಜನದಿಂದ ಬದುಕುವುದೇ ಕಷ್ಟವೆಂದು ಸರ್ವಸಾನ ಒಂದುದರಿಂದ, ಶ್ರೀಮನ್ಮಹಾರಾಜರವರು, ಮಹಾ ಮಾತೃ ಶ್ರೀಯವರು, ರಾಣಿವಾಸದವರು, ಅಧಿಕಾರಿಗಳು ಎಲ್ಲರೂ ದರ್ಬಾರ್ ಸಜಾಸಾ ಗಾಡ್ಸರ್ ಸ್ಪೈತ್‌ರವರೊಡನೆ ಸ್ಪೆಷಲ್ ರೈಲಾ ಮೂಲಕ ಹಗಲೂ ರಾತ್ರಿ ಪ್ರಯಾಣ ಮಾಡಿ ಅಜ್ಮೀರಿಗೆ ಹೋಗಿ ಕೆಲವು ಕಾಲ ಒದ್ದು ಗುಣವಾಗಿ ಮೈಸೂರಿಗೆ ಕರೆದುಕೊಂಡು ಬಂದರು. ಆನಂತರ ಶ್ರೀ ಯುವರಾಜರವರ ವಿದ್ಯಾಭ್ಯಾಸವು ಮಹಾರಾಜರವರ ಸಂಗಡಲೇ ನಡೆಯಿತು.

ಒಳಿಕ ಶ್ರೀ ಯುವರಾಜರಿಗೆ ಹದಿನಾಲ್ಕು ವರ್ಷಗಳು ತುಂಬಲು, ಇವರಿಗೆ ಪಟ್ಟಾಭಿಷೇಕಮಾಡಬೇಕೆಂಬ ಆಕಾಂಕ್ಷೆ ಮಹಾ ಮಾತೃಶ್ರೀಯವರಿಗೆ ಉಂಟಾ

ಮಹಾಮಾತ್ಯ ಶ್ರೀಯವರು, ಶ್ರೀಮಸ್ಮದಾರಾಜರವರು ಮತ್ತು ಶ್ರೀ ಯುವರಾಜರವರು

ಯಿತು. ಎಲ್ಲೆಲ್ಲೂ ಉತ್ತರ ದೇಶದಲ್ಲೆಲ್ಲ ಕನ್ಯೆಯನ್ನು ಹುಡುಕಿಸಿದರು. ಯಾವುದೂ ಸರಿಬೀಳದೆ ಕೊನೆಗೆ ೧೯೧೦ನೆಯ ಮಾರ್ಚಿಯಲ್ಲಿ ದಳವಾಯಿ ದೇವರಾಜೇ ಅರಸಿನವರ ಕುಮಾರ್ತಿ ಕೆಂಪು ಜಲುವಾಜಮ್ಮಣ್ಣಿಯವರನ್ನು ತಂದು ಶ್ರೀಮನ್ಮಹಾರಾಜರವರೇ ಮುಂದಾಗಿ ನಿಂತು ಬಹು ವೈಭವದಿಂದ ವಿವಾಹಮಾಡಿದರು. ೧೯೧೧ರಲ್ಲಿ ಶ್ರೀ ಯುವರಾಜರವರು ಮೊದಲನೆಯ ಸಾರಿ ಇಂಗ್ಲೆಂಡಿನ ಪ್ರವಾಸ ಮಾಡಿದರು. ಆಗ ಸಂಗಡ ಶ್ರೀ ಸಿ. ಆರ್. ರೆಡ್ಡಿಯವರು, ಶ್ರೀ ಪಿ. ರಾಘವೇಂದ್ರರಾಯರು, ಡಾಕ್ಟರ್ ಉಸ್ಮಾನ್ ರವರು ಮತ್ತು ಸರ್ದಾರ್ ಬಾಳರಾಜೇ ಅರಸಿನವರು ಮುಂತಾದವರು ಗಳನ್ನೆಲ್ಲ ಸಂಗಡ ಹೋಗುವಂತೆ ಶ್ರೀಮನ್ಮಹಾರಾಜರವರು ಏರ್ಪಡಿಸಿದ್ದರು. ಅಲ್ಲಿ ಶ್ರೀ ಯುವರಾಜರು ಅನೇಕ ಸಂಸ್ಥೆಗಳಿಗೆಲ್ಲ ಭೇಟಿಕೊಟ್ಟು, ಆ ದೇಶದ ನಾನಾ ಉದ್ಯಮಗಳನ್ನು ಪರಿಶೀಲಿಸಿ ತಮ್ಮ ಜ್ಞಾನಭಂಡಾರವನ್ನು ಅಭಿವೃದ್ಧಿಪಡಿಸಿಕೊಂಡು ಬಂದರು. ಯೂರೋಪಿನ ಪ್ರವಾಸ ಮುಗಿದು ಮೈಸೂರಿಗೆ ಬಂದನಂತರ ಶ್ರೀಮನ್ಮಹಾರಾಜರವರು ಅವರಿಗೆ ತಮ್ಮ ಮಂತ್ರಾಲೋಚನಾ ಸಭೆಯಲ್ಲಿ ವಿಶೇಷ ಸದಸ್ಯರಾಗಿದ್ದುಕೊಂಡು ರಾಜ್ಯಾಡಳಿತದಲ್ಲಿ ನೆರವಾಗುವಂತೆ ಕೌನ್ಸಿಲರ್ ಕೆಲಸವನ್ನು ದಯಪಾಲಿಸಿದರು. ಈ ಅವಧಿಯಲ್ಲಿ ಶ್ರೀ ಯುವರಾಜರು ಮಿಲಿಟರಿ ಇಲಾಖೆಯ ಸರ್ವಾಧಿಕಾರಿಗಳಾಗಿಯೂ ಕೆಲಸಮಾಡಿದರು. ಇವರ ಬುದ್ಧಿ ಚಾತುರ್ಯವನ್ನೂ ದೇಶಾಭಿಮಾನವನ್ನೂ ನೋಡಿ ಸಾರ್ವಭೌಮ ಸರ್ಕಾರದವರು ೧೯೧೩ರಲ್ಲಿ ಇವರಿಗೆ ಜಿ.ಸಿ.ಐ.ಇ. ಎಂಬ ಪ್ರಶಸ್ತಿಯನ್ನೂ, ೧೯೧೫ರಲ್ಲಿ "ಹೀಸ್ ಹೈನೆಸ್" ಎಂಬ ಪ್ರಶಸ್ತಿಯನ್ನೂ ದಯಪಾಲಿಸಿದರು.

ಹೀಗಿರುವಲ್ಲಿ, ಶ್ರೀಮನ್ಮಹಾರಾಣಿ ವಾಣೀವಿಲಾಸದವರಿಗೆ ಮಹಾರಾಜರು, ಯುವರಾಜರು ಎಂದರೆ ಎರಡು ಕಣ್ಣು, ಒಬ್ಬರಿಗೂ ಸಂತಾನವಾಗಲಿಲ್ಲ. ಇದರಿಂದ ಮಹಾಮಾತೃಶ್ರೀಯವರು ಚಿಂತಾಕುಲರಾದರು. ರಾಜರಾಗಲಿ ಸಾಮಾನ್ಯರಾಗಲಿ ವ್ಯಸನವು ಯಾರಿಗೂ ತಪ್ಪಿದ್ದಲ್ಲ; ಮಹಾಮಾತೃಶ್ರೀಯವರು ಅನೇಕ ಸೇವೆ ಸತ್ಕಾರಗಳನ್ನು ಮಾಡಿದರು. ಶ್ರೀ ಚಾಮುಂಡೇಶ್ವರಿಗೆ ಹರಕೆ ಹೊತ್ತರು. ಶ್ರೀಕಂಠೇಶ್ವರನ ಸೇವೆ ಮಾಡಿದರು. ಯದುವಂಶಲತೆಯು ಪುಷ್ಪಿತಫಲಿಸಿತು. ೧೯೧೮ರಲ್ಲಿ ಶ್ರೀ ಜಯಚಾಮರಾಜ ಒಡೆಯರು ಜನ್ಮತಾಳಿದರು. ಬಳಿಕ ವಿಜಯ, ಸುಜಯ,

ಶ್ರೀಜಯಮ್ಮಣಿಯವರಾದ ಮೂವರು ಕನ್ಯೆಯರು ಹುಟ್ಟಿದರು. ಹೆಮ್ಮಕ್ಕಳನ್ನು ನೋಡಿ ಆನಂದಿಸುವ ಮಹಾಭಾಗ್ಯವು ಮಹಾಮಾತೃ ಶ್ರೀಯವರಿಗೆ ಲಭಿಸಿತು.

ಈ ರೀತಿಯಾಗಿ ಯದುವಂಶವು ಬೆಳೆಯುತ್ತಿರುವಾಗ, ಶ್ರೀ ಯುವ ರಾಜರು ಅನೇಕ ಸಾರಿ ಯೂರೋಪಿಗೆ ಪ್ರವಾಸ ಹೋಗಿದ್ದರು. ದೇಶಸಂಚಾರದಲ್ಲಿ ಇವರಿಗೆ ಬಹಳ ಆಸಕ್ತಿಯಿದ್ದಿತು. ದೇಶ ಸಂಚಾರ ಸಂಬಂಧ ಜ್ಞಾನಾರ್ಜನೆಗೆ ಒಂದು ಮುಖ್ಯ ಮಾರ್ಗವೆಂಬುದಾಗಿ ತಿಳಿದಿದ್ದರು. ಪ್ರಪಂಚದಲ್ಲಿ ಮುಂದುವರಿದಿರುವ ದೇಶವಿದೇಶಗಳ ಆಗು ಹೋಗುಗಳನ್ನು ಅವರು ಚೆನ್ನಾಗಿ ಬಲ್ಲವರಾಗಿದ್ದರು. ಜಗತ್ಪೂಜ್ಯರಾದ ಮಹಾತ್ಮಾ ಗಾಂಧಿಯವರಲ್ಲಿ ಇವರಿಗಿದ್ದ ಪ್ರೀತಿಯು ಅಗಾಧವಾದುದು. ಇವರು ಪಾಶ್ಚಾತ್ಯ ದೇಶಗಳಿಂದ ಹಿಂದಿರುಗಿ ಬರುವಾಗ, ಮಹಾತ್ಮಾಜಿಯವರಿಗೆ ಉತ್ತಮವಾದ ಆಡಿನ ಹಾಲನ್ನು ಒದಗಿಸುವ ಸಲುವಾಗಿ ಕೆಲವು ಉತ್ತಮ ಜಾತಿಯ ಆಡುಗಳನ್ನು ಕಳುಹಿಸಿಕೊಟ್ಟರು.

೧೯೩೮ರಲ್ಲಿ ಶ್ರೀಮನ್ಮಹಾರಾಜರವರು ಯೂರೋಪಿಗೆ ಹೋಗಿದ್ದಾಗ, ಆಗಲೂ ಸಂಗಡ ಹೋಗಿ ಅಣ್ಣನವರಿಗೆ ಅಲ್ಲಿನ ಅನೇಕ ಪ್ರಮುಖರ ಪರಿಚಯವನ್ನು ಮಾಡಿಕೊಟ್ಟರು. ಸಂಸ್ಥಾನದಲ್ಲಿದ್ದಾಗ, ಅವರು ಭಾಗವಹಿಸದ ಲೋಕವೃತ್ತವೇ ಇಲ್ಲ. ಮೈಸೂರು ಸಾಮ್ರಾಜ್ಯವೇ ನರಸಿಂಹರಾಜ ಒಡೆಯರ ಸಂಸಾರ. ಅವರದು ಯಾವಾಗಲು ಒಳ್ಳೆಯ ಸಂತೋಷ ಪ್ರಕೃತಿ; ಬಹಳ ಸರಳ ಸ್ವಭಾವದವರು. ಅವರ ಜೀವಿತವು ಅಮೋಘವಾದ ಸೇವಾತತ್ಪರತೆ, ದೂರದೃಷ್ಟಿ, ಉದಾರ ಭಾವಗಳಿಂದ ಕಂಗೊಳಿಸುತ್ತಿತ್ತು. ಸಹಕಾರಸಂಘ, ಕರ್ನಾಟಕಸಂಘ, ರೆಡ್‌ಕ್ರಾಸ್ ಸಂಸ್ಥೆ, ಪ್ರಾಣಿದಯಾ ಸಂಘ ಮುಂತಾದುವುಗಳನ್ನೆಲ್ಲ ಅಭಿವೃದ್ಧಿಗೆ ತಂದರು. ರಾಜವಂಶದಲ್ಲಿ ಹುಟ್ಟಿ ಪ್ರಜೆಗಳ ಅಂತರಂಗವನ್ನರಿತು ನಡೆಯುವ ಮಾನ್ಯರು ಅತಿವಿರಳ. ಇವರು ರಾಜಕಾರ್ಯ ಪಟುಗಳೂ, ಕಲಾಭಿಮಾನಿಗಳೂ, ಸಾಹಿತ್ಯ ಪ್ರೇಮಿಗಳೂ, ನ್ಯಾಯತಂತ್ರಜ್ಞರೂ ಆಗಿದ್ದರು. ಅವರ ಕೀರ್ತಿ ಘನವಿಶಾಲವಾದುದು. ಯಾವ ಕಾರ್ಯದಲ್ಲಿಯೂ ಅವರು ಮುಂದು. ಅವರ ವ್ಯಕ್ತಿತ್ವವೇ ಒಂದು ಪ್ರತ್ಯೇಕ ಸ್ವರೂಪ. ಧೀಮಂತ ಹೃದಯ! ಶ್ರೀಮಂತ ರೂಪು! ಮಹಾಂತ ಔದಾರ್ಯ! ಇವರು ಮೈಸೂರಿನ ಚೀಫ್

ಶ್ರೀ ಕಂಠೀರವ ನರಸಿಂಹರಾಜ ಒಡೆಯರವರ ಅಭ್ಯುದಯ

ಸ್ಕಾಟರಾಗಿ ವಿಶೇಷ ಆಸಕ್ತಿಯಿಂದ ಕೆಲಸಮಾಡುತ್ತಿದ್ದರು. ಆದುದರಿಂದಲೇ ಸಂಸ್ಥಾನದಲ್ಲಿ ಸ್ಕಾಟ್ ಜನವಳಿಯು ಹೆಚ್ಚು ಮುಂದರಿಯುವುದಕ್ಕೆ ಕಾರಣವಾಯಿತು. ಇವರಿಗಿದ್ದ ಮೇಧಾಶಕ್ತಿ, ದೇಶವಾತ್ಸಲ್ಯ ಭ್ರಾತೃಪ್ರೇಮ ಮುಂತಾದುವು ಅಸದೃಶವಾದುವು. ನಿಮ್ನ ವರ್ಗದವರ ಏಳಿಗೆಯಲ್ಲಿ ಬಹಳ ಆಸಕ್ತಿಯನ್ನು ವಹಿಸಿ ಅವರ ಒದುಕು ಉತ್ತಮ ಗೊಳ್ಳುವಂತೆ ಪ್ರೋತ್ಸಾಹ ಕೊಡುತ್ತಿದ್ದರು. ಆದುದರಿಂದಲೇ ಬೆಂಗಳೂರು ಮತ್ತು ಕೋಲಾರಗಳಲ್ಲಿರುವ ಆದಿಕರ್ನಾಟಕ ಹಾಸ್ಟಲುಗಳೆಲ್ಲ ಇವರ ಹೆಸರಿನಲ್ಲೇ ಕಂಗೊಳಿಸುತ್ತಿವೆ.

ಇವರು ಮೈಸೂರು ಯೂನಿವರ್ಸಿಟಿಯ ಪ್ರೊ-ಛಾನ್ಸೆಲರಾಗಿಯೂ ಕನ್ನಡ ಪರಿಷತ್ತಿನ ಅಧ್ಯಕ್ಷರಾಗಿಯೂ ಇದ್ದರು. ೧೯೩೯ನೆಯ ಇಸವಿಯಲ್ಲಿ ಸಂಸಾರ ಸಮೇತರಾಗಿ ಪಾಶ್ಚಾತ್ಯ ದೇಶಗಳಿಗೆ ತೆರಳಿದ್ದರು. ಅವರು ಹಡಗು ಹತ್ತುವುದಕ್ಕೆ ಕೆಲವು ದಿವಸ ಮುಂಚೆ ಮುಂಬಯಿಯ 'ಆಲ್ ಇಂಡಿಯಾ ರೇಡಿಯೋ' ವಿನಲ್ಲಿ ಒಂದು ಭಾಷಣವನ್ನು ಮಾಡಿದರು. ಸರ್ವಧರ್ಮ ಸಮಸ್ಯೆಯವನ್ನು ಕುರಿತು ಬೋಧಿಸಿದರು. ಇಂದಿನ ಭಾರತೀಯ ಪರಿಸ್ಥಿತಿಯನ್ನು ಸುಮುಖವಾಗಿ ಮಾಡುವುದು ಸರ್ವಧರ್ಮ ಸಮಸ್ಯೆಯ ಸಿದ್ಧಾಂತವೆಂದೇ ಹೇಳಿದರು. ಆ ಸಂದರ್ಭದಲ್ಲಿ ತಮ್ಮ ಪ್ರೀತಿಯ ಮೈಸೂರನ್ನೂ ತಿರುಪತಿಸಮಾನರಾದ ತಮ್ಮ ಅಣ್ಣಂದಿರನ್ನೂ ಕುರಿತು ದಿವ್ಯವಾದ ಕೆಲವು ಮಾತುಗಳನ್ನು ಆಡಿದರು. ಕಂಠವು ಬಿಗಿದು ಬಂದಿತು, ಧ್ವನಿ ಭಾರವಾಯಿತು. ಮುಂದೆ ಅವರ ಬಾಯಿಂದ ಮಾತುಗಳು ಹೊರಡದೆ, ಕಣ್ಣೀರು ಧಾರಾಕಾರವಾಗಿ ಹರಿಯಿತು. ದೂರದಲ್ಲಿ ಭಾಷಣಗಳನ್ನು ಕೇಳುತ್ತಿದ್ದವರಿಗೆ ಕೂಡ ಮಹಾಸ್ವಾಮಿಯವರು ಎಷ್ಟು ಭಾವೋದ್ರೇಕಗೊಂಡಿದ್ದರೆಂಬುದು ಭಾಸವಾನವಾಯಿತು. ಆಗ ಜೇಬಿನಿಂದ ಕರವಸ್ತ್ರವನ್ನು ತೆಗೆದು ಕಣ್ಣನ್ನು ಒರಸಿಕೊಂಡರಂತೆ! ಶ್ರೀ ಯುವರಾಜರು ಇಟಲಿಗೆ ಭೇಟಿ ಕೊಟ್ಟಾಗ, ಮುಸಲಿನಿ, ಪೋಪ್ ಮುಂತಾದವರೆಲ್ಲ ಅವರನ್ನು ಸ್ವಾಗತಿಸಿ ವಿಶೇಷ ಮರ್ಯಾದೆ ಮಾಡಿದರು. ಯೂರೋಪಿನಲ್ಲಿ ಪುನಃ ಯುದ್ಧವು ಪ್ರಾರಂಭವಾಯಿತು. ಯುವರಾಜರು ತಮ್ಮ ಕುಟುಂಬ ವರ್ಗದವರನ್ನೆಲ್ಲ ಮೈಸೂರಿಗೆ ಕಳುಹಿಸಿ ತಾವು ಮಾತ್ರ ದೇಹಾರೋಗ್ಯಕ್ಕಾಗಿ ಇನ್ನು ಕೆಲವು ಕಾಲ ಯುರೋಪಿನಲ್ಲಿಯೇ ಇದ್ದರು. ಕಳೆದ ಜನವರಿ

೨೬ನೆಯ ತಾರೀಖು ಬೊಂಬಾಯಿಗೆ ಬಂದು, ತಮ್ಮ 'ಅಂಕರೇಜ್' ಭವನದಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ವ್ಯಾಧಿಯು ಇದ್ದಕ್ಕಿದ್ದ ಹಾಗೆ ಪ್ರಬಲಿಸಿ ೧೯೨೦ನೆಯ ಇಸವಿ ಮಾರ್ಚಿ ೧೫ನೆಯ ತಾರೀಖು ರಾತ್ರಿ ಎರಡೂವರೆ ಗಂಟೆಯಲ್ಲಿ ವಿಧಿವಶರಾದರು. ಆಗ ಅವರಿಗೆ ೫೯ ವರ್ಷ ವಯಸ್ಸು. ಸರ್ವರಂತಿ ಮುತ್ತು ವಿಜಯದಶಮಿ ಉತ್ಸವಗಳಲ್ಲಿ ಶ್ರೀಮನ್ಮಹಾರಾಜರವರ ಜೊತೆಯಲ್ಲಿ ಕಾಣಿಸಿಕೊಂಡು, ಪ್ರಜೆಗಳ ಕಣ್ಣಿಗೆ ಹಬ್ಬವನ್ನುಂಟುಮಾಡುತ್ತಿದ್ದ ಮಹಾವ್ಯಕ್ತಿಯು ಇಂದು ಕಣ್ಮರೆಯಾಯಿತು. ಬಹಳ ಕಾಲದಿಂದ ನಡೆದು ಬಂದ ಭವ್ಯವಾದ ಈ ಚಿತ್ರವನ್ನು ಯಾರೂ ಮರೆಯುವಂತಿಲ್ಲ.

ಈ ಕರ್ಕಶವಾದ ವರ್ತಮಾನವು ಶ್ರೀಮನ್ಮಹಾರಾಜರಿಗೆ ತಿಳಿದೊಡನೆಯೇ ಅವರು ದುಃಖಭಾಜನರಾದರು. ತಂದೆ, ತಾಯಿ, ಸಹೋದರಿಯರೆಲ್ಲ ಹೋಗಿ ಏಕಮಾತ್ರ ತಮ್ಮಂದಿರನ್ನು ನೋಡಿಕೊಂಡು ಆ ಎಲ್ಲಾ ದುಃಖಗಳನ್ನೂ ಮರೆತಿದ್ದರು. ಆದರೆ ಕ್ರೂರ ವಿಧಿಯು ಅದನ್ನೂ ಸಹಿಸಲಿಲ್ಲ. ಪ್ರಭುಗಳು ಒಬ್ಬೊಂಟಿಗರಾದರು. ಸದೇಸದೇ ತಮ್ಮಂದಿರನ್ನು ನೆನೆದುಕೊಳ್ಳುವರು. ಊಟಮಾಡುವಾಗ, ಆಟವಾಡುವಾಗ, ಸೋಟಸೋಡುವಾಗ, ಮುಂತಾದ ಲೋಚನೆ ಗೈಯುವಾಗ ಯಾವಾಗಲೂ ತಮ್ಮಂದಿರ ನೆನಪೇ. ತಂದೆ, ತಾಯಿ, ಸಹೋದರಿಯರುಗಳ ನಿಧನದಿಂದ ಒಳಗೇ ಹೊಗೆಯಾಡುತ್ತಿದ್ದ ದುಃಖಾಗ್ನಿಯು ಭ್ರಾತೃ ವಿಯೋಗದಿಂದ ಕರಾಳವಾದ ಕಾವುಗಿಚ್ಚಾಗಿ ಪರಿಣಮಿಸಿತು. ಅಣ್ಣತಮ್ಮಂದಿರಿಗೆ ಒಂದು ಜೀವ, ಎರಡು ದೇಹ ಎಂಬು ವಷ್ಟರ ಮಟ್ಟಿಗಿದ್ದ ಪ್ರೇಮವು ಭ್ರಾತೃ ನಿಧನದಿಂದ ದುರಂತವಾಯಿತು. ತಮಗೂ ಅವರಂತೆಯೇ ಅಲ್ಪಾಯುಷ್ಯವೆಂಬ ಭಾವನೆಯು ಮನದಲ್ಲಿ ಮನೆಮಾಡಿತು. ಇದಕ್ಕೆ ಸರಿಯಾಗಿ ಶರೀರವು ದಿನೇ ದಿನೇ ಗಳಿತವಾಗ ಲಾರಂಭಿಸಿತು. ಈ ಸಂದರ್ಭದಲ್ಲಿ ಪ್ರಭುಗಳ ಮನಸ್ಸಿಗೆ ಏನೋ ಹೊಳೆದು, ತಮ್ಮ ಆಪ್ತೇಷ್ಟರಲ್ಲಿ ಒಬ್ಬರೊಡನೆ ನಾವೂ ಇನ್ನು ಸ್ವಲ್ಪ ದಿವಸದಲ್ಲಿ ಯುವರಾಜರ ಸನ್ನಿಧಾನಕ್ಕೆ ಹೋಗುತ್ತೇವೆ ಎಂದು ಹೇಳಿದರು. ಮುಂದಿನ ಪರಿಣಾಮವು ಹೊಡಲೇ ತನ್ನ ಛಾಯೆಯನ್ನು ತೋರಿಸಿತು.



ಶ್ರೀಮದ್ಭುವರಾಜರವರು ಕುಟುಂಬದೊಡನೆ ಯೂರೋಪಿಗೆ ದಯಮಾಡಿದಾಗ ಪೋಪರೊಡನೆ ಭೇಟಿ

# ೧೭ನೆಯ ಅಧ್ಯಾಯ

## ಗೋಮಟೇಶ್ವರಸ್ವಾಮಿಯ ಮಸ್ತಕಾಭಿಷೇಕ, ಕನ್ನಡ ಸಾಹಿತ್ಯ ಪರಿಷತ್ತಿನ ಬೆಳ್ಳಿಯ ಹಬ್ಬ, ನಿರ್ಮಾಣ

ಶ್ರೀಮನ್ಮಹಾರಾಜರವರು ೧೯೪೦ನೆಯ ಇಸವಿ ಮಾರ್ಚಿ ತಿಂಗಳಲ್ಲಿ ಶ್ರವಣಬೆಳಗೊಳದಲ್ಲಿ ನಡೆದ ಶ್ರೀ ಗೋಮಟೇಶ್ವರಸ್ವಾಮಿಯ ಮಸ್ತಕಾಭಿಷೇಕ ಮಹೋತ್ಸವಕ್ಕೆ ಶ್ರೀ ಜಯಚಾಮರಾಜರೊಡನೆ ದಯಮಾಡಿಸಿದರು. ಗೋಮಟೇಶ್ವರ ಮೂರ್ತಿಯೆಂದರೆ ಸೌಂದರ್ಯದ ರಾಸಿ, ಭವ್ಯತೆಯ ನಿವಾಸ. ಇದನ್ನು ನೋಡಲಿಕ್ಕೆ ಈಗಲೂ ಚೀನ, ತಿಬೇಟುಗಳಿಂದ ಜನರು ಬರುವರು. ಹಿಂದೂಸ್ಥಾನದಲ್ಲಿಯ ಜೈನರ ಎಲ್ಲಾ ಕ್ಷೇತ್ರಗಳಲ್ಲಿ ಅತ್ಯಂತ ಶ್ರೇಷ್ಠವಾಗಿ ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳಲ್ಲಿ ಒಂದಾಗಿದೆ. ಶ್ರೀಮನ್ಮಹಾರಾಜರವರು ಅಲ್ಲಿಗೆ ಆಗಮಿಸಿದ್ದ ದಾನವೀರ ಸರ್ ಹುಕುಂ ಚಂದ್, ಅಚ್ಮೀರಿನ ರಾಯಬಹದ್ದೂರ್ ಸೇಟ್ ಭಾಗಚಂದ್‌ಸೋನಿ ಮುಂತಾದವರಿಗೆಲ್ಲ ದರ್ಶನಕೊಟ್ಟು, ಅಖಿಲಭಾರತ ದಿಗಂಬರ ಜೈನ ಸಮ್ಮೇಳನವನ್ನು ಪೂರಯಿಸಿಕೊಂಡು ೩೦-೬-೪೦ಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಬೆಳ್ಳಿಯ ಹಬ್ಬದ ಸಮಾರಂಭೋತ್ಸವಕ್ಕೆ ಬೆಂಗಳೂರಿಗೆ ದಯ ಮಾಡಿಸಿದರು. ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದ ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯನವರು ಮಹಾಸ್ವಾಮಿಯವರನ್ನೂ ಶ್ರೀ ಜಯ ಚಾಮರಾಜ ಒಡೆಯರವರನ್ನೂ ಸ್ವಾಗತಿಸಿ ಪುಷ್ಪಹಾರಗಳನ್ನೂ ಸಮರ್ಪಿಸಿ ಒರವಾಡಿಕೊಂಡರು. ಮಹಾಸ್ವಾಮಿಯವರಿಗೆ ಕನ್ನಡವೆಂದರೆ ವಾಣಿ. ಕನ್ನಡ ಸಾಹಿತ್ಯ ಪರಿಷತ್ತು ಬೆಳೆದು ಬಾಳುವುದು ಮಹಾಸ್ವಾಮಿಯವರ ಕೃಪಾತಿಶಯದಿಂದ. ಮಹಾಸ್ವಾಮಿಯವರು ತಮ್ಮ ಪ್ರಜೆಗಳ ಸಂಘದ ಮುಂದೆ ನಿಂತದ್ದು ಇದೇ ಕೊನೆ. ಆಗ ಅವರಿಗೆ ಆರೋಗ್ಯವಿಲ್ಲ, ಶಕ್ತಿಯಿಲ್ಲ, ಆದರೂ ಕನ್ನಡ ದೇವಿಯ ಪೂಜೆಗೆ ಕರೆಯು ಬಂದಾಗ ಬೆಲ್ಲೆನಿಸಲಿಲ್ಲ. ಈ ತೇಜಸ್ವಿವೃಶ್ರನು ಕನ್ನಡಮ್ಮನ ಪೂಜೆಗೆ ಹೋಗಿ ಭಕ್ತಿಕಾಣಿಕೆಯನ್ನು ಸಮರ್ಪಿಸಿ ಬಂದದ್ದೇ ಕೊನೆಯಾಯಿತು. ಮಹಾಸ್ವಾಮಿಯವರು ರಾಜಕೀಯ ಕಾಗದ ಹೊರತು ಉಳಿದ ಕಾಗದಪತ್ರಗಳಿಗೆಲ್ಲ ಕನ್ನಡದಲ್ಲಿಯೇ ಉತ್ತರ ಬರೆಯುತ್ತಿದ್ದರು. ಶ್ರೀಮನ್ಮಹಾರಾಜರವರ ಜೀವಿತಕಾಲದಲ್ಲಿಯೇ

ಕರ್ನಾಟಕವು ಏಕಾಧಿಪತ್ಯವಾಗುವುದೆಂಬ ಹಿರಿಯ ಕನಸು ಅನೇಕರಿಗಿದ್ದಿತು. ಅದರೆ ಕ್ರೂರಕಾಲನು ಇದನ್ನು ನೆರವೇರಿಸಲಿಲ್ಲ.

ಮೈಸೂರು ರಾಜಮನೆತನದಲ್ಲಿ ಅನೇಕ ಪ್ರಸಂಗಗಳು ನಡೆದುವು. ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರು ೧೮೮೯ನೆಯ ಇಸವಿಯಲ್ಲಿ



೧೯೧೫ರಲ್ಲಿ ಲಾರ್ಡ್ ಹಾರ್ಡಿಂಗ್‌ರವರ ಆಗಮನ

ಸಿಂಹಾಸನವನ್ನಲಂಕರಿಸಿದಾಗ, ಅವರಿಗೆ ಕೇವಲ ನಾಲ್ಕು ವರ್ಷ ವಯಸ್ಸು. ಅವರು ರಾಜ್ಯಾಡಳಿತವನ್ನು ದಕ್ಷತೆಯಿಂದ ನಿರ್ವಹಿಸಿ ದಾನಶೌಂಡರೆಂದು ಕೀರ್ತಿವಹಿಸಿ ೧೯೬೫ನೆಯ ಇಸವಿಯಲ್ಲಿ ದಿವಂಗತರಾದರು. ಶ್ರೀ ಚಾಮರಾಜೇಂದ್ರ ಒಡೆಯರವರು ಸ್ವೀಕೃತರಾದಾಗ, ಇನ್ನೂ ಏರದು ವರ್ಷದ ಹಾಲುಹಸುಳೆ. ಅವರ ಆಳಿಕೆಯಲ್ಲಿ ಮೈಸೂರಿನ ಹಲವು ಕಾರ್ಯಗಳು ಸುವ್ಯವಸ್ಥಿತವಾದ ರೀತಿಯಲ್ಲಿ ಆರಂಭಿಸಲ್ಪಟ್ಟು ಸುಂದಿನ ಪಾದುಸಂಸ್ಥಾನದ ರಾಜ್ಯಾಭಿವೃದ್ಧಿಗೆ ತಳಹದಿಯಾದುವು. ೧೯೮೪ನೆಯ ಇಸವಿ ಸಿಪೆಂಬರ್ ತಿಂಗಳಲ್ಲಿ ಅವರನ್ನೂ ನಾವು ಕಳೆದುಕೊಂಡೆವು.

ಕೀರ್ತಿಶೇಷರಾದ ನಾಲ್ವಡಿ ಕೃಷ್ಣರಾಜೇಂದ್ರರಿಗೂ ಅದೇ ಸನ್ನಿವೇಶ ಒದಗಿತು. ೧೯೧೮ನೆಯ ಇಸವಿಯಲ್ಲಿ ಸಿಂಹಾಸನಾರೋಹಣ ಮಾಡಿದಾಗ ಇವರಿಗೆ ಹತ್ತು ವರ್ಷ ವಯಸ್ಸು. ಕುದುರೆಯನ್ನೇರುವುದಕ್ಕೂ ಮುಂಚೆಯೇ ಗದ್ದುಗೆಯನ್ನೇರಿದರು. ಬಾಲ್ಯವನ್ನು ಕಳೆಯುವುದಕ್ಕೆ ಮೊದಲೇ ರಾಜ್ಯ ರಥಕ್ಕೆ ರಾಜ್ಯಭಾರ ನಿರ್ವಹಣದ ಸೊಗವು ಸಿದ್ಧವಾಗಿತ್ತು. ಇವರು ಆಳಿದ ಮುವತ್ತೈದು ವರ್ಷಗಳ ಅಲ್ಪಾವಧಿಯಲ್ಲಿ ಮಹತ್ವಪೂರ್ಣವಾದ ಅನೇಕ ಪ್ರಸಂಗಗಳು ನಡೆದುವು. ಇವರ ಕಾಲದಲ್ಲಿ ಲಾರ್ಡ್ ಕರ್ಜನ್, ಲಾರ್ಡ್ ಮಿಂಟೋ, ಲಾರ್ಡ್ ಹಾರ್ಡಿಂಜ್, ಲಾರ್ಡ್ ಇರ್ವಿನ್ ಮೊದಲಾದ ಮಹಾ ಪ್ರಭೃತಿಗಳು ಮೈಸೂರಿಗೆ ಬಂದು, ಮಹಾಸ್ವಾಮಿಯವರು ನಿರಂತರವಾದ ಜಾಗರೂಕತೆಯಿಂದ, ಅವಿಶ್ರಾಂತವಾದ ಉತ್ಸಾಹದಿಂದ, ಅಸಾಧಾರಣವಾದ ದೂರದೃಷ್ಟಿಯಿಂದ, ವಿವೇಕಪೂರ್ಣವಾದ ಚತುರತೆಯಿಂದ ನಡೆಯಿಸುತ್ತಿದ್ದ ರಾಷ್ಟ್ರನೌಕೆಯನ್ನು ನೋಡಿ ಮನಮೆಚ್ಚಿಕೊಂಡಾದಿರುವರು. ತಮ್ಮ ದೈವ, ತಮ್ಮ ಪ್ರಜೆ—ಈ ಇಬ್ಬರ ಸೇವೆಯೇ ತಮ್ಮ ಜೀವನಾನದ ಪರಮೋದ್ದೇಶವೆಂದು ತಿಳಿದುಕೊಂಡಿದ್ದ ರಾಜರ್ಷಿಗಳಿವರೆಂದು ಹೊಗಳಿರುವರು. ಮೈಸೂರು ನಾಡಿನ ಕೀರ್ತಿಯು ಪ್ರಪಂಚದಲ್ಲೆಲ್ಲ ಹರಡುವಂತೆ ಮಾಡಿದ ಮಹಾನುಭಾವರು. ಇವರು ಸತ್ಯವೂ ಧರ್ಮವೂ ರೂಪಗೊಂಡ ದಿವ್ಯಮೂರ್ತಿಯೆಂದರೆ ಅತಿಶಯೋಕ್ತಿಯಲ್ಲ!

ಹೀಗಿರುವಲ್ಲಿ, ಶ್ರೀಮನ್ಮಹಾರಾಜರವರು ಆರೋಗ್ಯ ನಿಮಿತ್ತವಾಗಿ ಮೈಸೂರು ಬಿಟ್ಟು, ಬೆಂಗಳೂರು ಅರಮನೆಯಲ್ಲಿ ವಿಶ್ರಾಂತಿಗೊಳ್ಳುತ್ತಿದ್ದರು. ಜುಲೈ ೨೧ನೆಯ ಭಾನುವಾರ ಹೃದಯವೇದನೆಯುಂಟಾಯಿತೆಂದೂ, ಆ ಪೂರ್ವಸಂಜೆಯ ದಿನವೆಲ್ಲ ಪ್ರಭುಗಳ ದೇಹಸ್ಥಿತಿಯ ಬಗ್ಗೆ ಕಳವಳವುಂಟಾಗಿದ್ದಿತೆಂದೂ, ಈಚಿಗೆ ಗುಣಹೊಂದುತ್ತಿದ್ದಾರೆಂದೂ ವೈದ್ಯರು ಪ್ರಕಟಿಸಿದ್ದ ವರದಿಯಿಂದ ಗೊತ್ತಾಗುತ್ತಿದ್ದಿತು. ಈಚೆಗೆ ಮಹಾಸ್ವಾಮಿಯವರ "ಅಟ್ ಹೋಂ" ಎಂಬ ಸಂತೋಷಕೂಟವು ಜುಲೈ ೨೪ನೆಯ ತಾರೀಖಿನ ದಿನ ನಡೆಯಿತು. ಅದಕ್ಕೆ ಶ್ರೀ ಜಯಚಾಮರಾಜ ಒಡೆಯರೇ ಹೋಗಿ ಸರವೇರಿಸಿಕೊಂಡು ಬರುವಂತೆ ಅಪ್ಪಣೆಯಾಯಿತು. ಆಗಸ್ಟು ೩ನೆಯ ತಾರೀಖಿನ ದಿನ ಲಾಲ್‌ಬಾಗಿನಲ್ಲಿ ಫಲಪುಷ್ಪ ಪ್ರದರ್ಶನ. ಬಿಲ್ಲೇ ಕಛೇರಿ ಭಕ್ಷ್ಯಯವರಿಗೆ ಬ್ಯಾಂಡಿನವರನ್ನು ಪ್ರದರ್ಶನಕ್ಕೆ ಕಳುಹಿಸಿಕೊಡುವಂತೆ

ಅವ್ಯಕ್ತ ಭಾವವಿದ್ದಿತು. ಇದರಿಂದೆಲ್ಲ ಪ್ರಜೆಗಳು ಮಹಾಸ್ವಾಮಿಯವರ ಆರೋಗ್ಯವು ದಿನಕ್ರಮೇಣ ಅಭಿವೃದ್ಧಿ ಹೊಂದಬಹುದೆಂದೂ ಎಂದಿನಂತೆ ತಮ್ಮಗಳ ನಡುವೆ ತಿರುಗಾಡಿ ದರ್ಶನ ಕೊಡಬಹುದೆಂದೂ ಎಲ್ಲರೂ ನಿರೀಕ್ಷಿಸುತ್ತಿದ್ದರು. ಆದರೆ ವಿಧಿವಿಲಾಸವು ಬೇರೆ ರೀತಿಯಾಗಿದ್ದಿತು. ಆ ದಿನ ರಾಯಂಕಾಲ ಮಹಾಸ್ವಾಮಿಯವರ ದೇಹಸ್ಥಿತಿಯು ಚಿಂತಾಜನಕವಾಗಿದೆಯೆಂದು ಪ್ರಧಾನ ವೈದ್ಯರು ಪ್ರಕಟಿಸಿದ ವರದಿಯನ್ನು ನೋಡಿ ಎಲ್ಲರೂ ದುಃಖಸಮಾಕುಲರಾದರು. ಅದರಲ್ಲಿ ಮುಖ್ಯವಾಗಿ ಶ್ರೀ ಜಯ ಚಾಮರಾಜ ಒಡೆಯರು ಬಹಳ ಚಿಂತಾಪೂರ್ಣರಾದರು. ಏಕೆಂದರೆ: ಏಕ್ಯಪರ್ಯಾರನ್ನು ಕಳೆದುಕೊಂಡು ಇನ್ನು ನಾಲ್ಕು ತಿಂಗಳು ಪೂರೈಸಿಲ್ಲ. ಅಷ್ಟರಲ್ಲಿ ಆಶ್ರಯದಾತರಾಗಿ ಬೆಳಕಿಗೆ ತಂದ ದೊಡ್ಡಪ್ಪಂದಿರನ್ನು ಕಳೆದುಕೊಳ್ಳುವ ಸಂಭವ. ಬಾಲ್ಯವನ್ನು ದಾಟಿ ಯೌವನದಲ್ಲಿ ಕಾಲಿಟ್ಟ ತರುಣ! ದುಃಖದ ಮೇಲೆ ದುಃಖ! ಚಿಂತೆಯ ಮೇಲೆ ಚಿಂತೆ! ಉರಿಯುವ ಬೆಂಕಿಗೆ ಎಣ್ಣೆ ಸುರಿದಂತಾಯಿತು.

ಅಗಸ್ಟ್ ೧೫ನೆಯ ಶನಿವಾರ ರಾತ್ರಿ ೯ ಗಂಟೆಯಲ್ಲಿ ಬೆಂಗಳೂರು ಅರಮನೆಯಲ್ಲಿ ಮೈಸೂರ ಮುಕುಟಮಣಿಯು ಮರಣ ದೇವತೆಯ ಕರಾಳ ಹಸ್ತಕ್ಕೆ ಗುರಿಯಾದರೆಂಬ ಕರ್ಕಶವಾದ ವರ್ತಮಾನವು ರಾಜಧಾನಿಯನ್ನು ತಲುಪಿತು. ಕೂಡಲೇ ಪ್ರಜೆಗಳಿಗೆ ಸಿಡಿಲೆರಗಿದಂತಾಯಿತು. ದುಃಖೋದ್ವೇಗ ದಿಂದ ಸ್ತಂಭಿತರಾಗಿ ರಾತ್ರಿ ಕಳೆಯುವುದನ್ನೇ ಇದಿರುನೋಡುತ್ತಿದ್ದರು.

ಇಷ್ಟರಲ್ಲಿ ಶ್ರೀಮನ್ಮಹಾರಾಜರವರ ಕಳೇಬರವನ್ನು ರಾತ್ರಿ ೨ ಗಂಟೆಗೆ ವಿಶೇಷ ವ್ಯಾಗನ್ ಕಾರಿನಲ್ಲಿಟ್ಟು ಮೈಸೂರಿಗೆ ಬಯ್ಯಬೇಕೆಂದು ಅಧಿಕಾರಿ ಗಳು ನಿರ್ಣಯಿಸಿದರು. ಗಾಡಿಯು ಮೈಸೂರನ್ನು ಕುರಿತು ಹೊರಟಿತು. ಅದರ ಸಂಗಡ ಶ್ರೀ ಜಯಚಾಮರಾಜ ಒಡೆಯರು, ರಾಣಿವಾಸದವರು, ದಿವಾನರು ಮೊದಲಾದವರ ಹಲವು ಕಾರುಗಳು ಹೊರಟುವು. ಪ್ರಭುಗಳ ಕಳೇಬರದ ಕಾರು ಮೈಸೂರಿಗೆ ಬಂದಾಗ, ಬೆಳಗಿನ ಐದೂವರೆ ಗಂಟೆ. ಅರಮನೆ ಕಲ್ಯಾಣ ಮಂಟಪದಲ್ಲಿ ಅವರು ಹಾಕಿಕೊಳ್ಳುತ್ತಿದ್ದ ಸಾಮಾನ್ಯ ಉಡುಪುಗಳಲ್ಲಿಯೇ ಅಲಂಕರಿಸಿ ಅವರ ಕಳೇಬರವನ್ನು ಜನರ ಅಂತ್ಯದರ್ಶನ ಕ್ಕಾಗಿ ಅನುಕೂಲಪಡಿಸಲಾಯಿತು. ಅನೇಕ ಪ್ರಜಾಸಮುದಾಯವೂ ರಾಜಬಂಧುಗಳೂ ಬಂದುನೋಡಿ ಗೋಳಿಡುತ್ತ ಪ್ರಭುಗಳ ಕಳೇಬರಕ್ಕೆ

ಅಸ್ಥಿಯನ್ನು ಸಭೆಯನ್ನು ನಿಂದಿಸುತ್ತಿದ್ದರು. ರಾಜರಾಗಲಿ ಸಾಮಾನ್ಯ ರಾಗಲಿ ಬಹಿಷ್ಕಾರವು ಯಾರಿಗೂ ತಪ್ಪಿದ್ದಲ್ಲ. ಇಂದು ಸುಖಸಂತೋಷ ದಲ್ಲಿ ತೇಲಾಡುತ್ತಿರುವವರು ನಾಳೆ ಕರಾಳ ದುಃಖದ ಕಗ್ಗತ್ತಲೆಯಲ್ಲಿ ಗೋಳಾಡುತ್ತಿರುವರು. ಜಗದೀಶ! ನಿನ್ನ ಮಹಿಮೆಯೇ ಮಹಿಮೆ! ಸುಖದ ಶಿಖರಕ್ಕೆ ಏರಿಸುವವನೂ ನೀನೆ! ದುಃಖದ ರಸಾತಲಕ್ಕೆ ಇಳಿಸು ವವನೂ ನೀನೆ! ಚಿಲ್ಲಿ ನಡುಳುತ್ತ ತ್ರಾಹಿ ತ್ರಾಹಿ ಎಂದು ಮೊರೆಯಿಟ್ಟರೆ ಮುತ್ತೈತ್ತಿ ಸುಲಕುವವನೂ ನೀನೆ! ನಿನ್ನ ಲೀಲೆಯು ಅತಿ ವಿಚಿತ್ರ!

ಇಂದು ಆ ರಸಿಕ, ಆ ತ್ಯಾಗಿ, ಆ ಅಧ್ಯಾತ್ಮಜೀವಿ, ನಮ್ಮಿಂದ ದೂರ ವಾಗಿ ಪರಮಶಾಂತಿಯ ಪರ್ಯಂಕದಲ್ಲಿ ಪವಡಿಸಿದ್ದಾರೆ. ಇಡೀ ದೇಶವೇ ದುಃಖದ ಚಿತ್ಕಾರಕಾಗರದಲ್ಲಿ ಧುಮ್ಮಿಕ್ಕಿದೆ. ತಾಯಿ ಚಾಮುಂಡಿ ಬಂದು ತನ್ನ ಅನಂತ ಗರ್ಭದಿಂದೊಗೆದ ಪುಣ್ಯಶಿಶು ಮತ್ತೆ ಸ್ವಸ್ಥಾನವನ್ನು ಸೇರಿಸಿಯೆಂದು ಸಮಾಧಾನವನ್ನು ಸೂಚಿಸುತ್ತಿದ್ದಾಳೆ. ಅಹುದು! ಪುಣ್ಯಪುರುಷನ ಸಾವನ್ನು ಅಪಸಿಗೆ ಸಾವೇ? ಅಲ್ಲ ಜಾಗೃತಿ!! ಆದರೆ ನಮಗೇ—ನಮ್ಮ ಜೀವನ, ಸುಖದುಃಖಗಳೊಂದಿಗೆ ತನ್ನ ಬಾಳನ್ನು ಹಾಸುಹೊಕ್ಕು ಸವಾಡಿದ ಪ್ರಭು, ಗುರು, ಗೆಳೆಯ—ಇಂದು ನಮ್ಮನ್ನಗಲಿ ಹೋಗಿದ್ದಾರೆ. ಆದರೆ ಅವರ ಆತ್ಮ ನಮ್ಮನ್ನು ಸದಾ ಅದೇ ಪ್ರೇಮ, ಅದೇ ಆಕರ್ಷಣೆಗಳಿಂದ ಬಳಸಿಕ್ಕಿದೆ ಸೋಡುತ್ತಿದೆ.

ಅವಸಾನದಿಂದ ಮಹಾರಾಜರವರ ಕಳೇಬರದ ಮೆರವಣಿಗೆಯು ಶ್ರೀಶಾಸನಸಭೆಗಾಗಿ ೪ ಗಂಟೆ ೧೦ ನಿಮಿಷಕ್ಕೆ ಮಧುವನಕ್ಕೆ ಹೊರಟಿತು. ಶವದ ಮುಂದೆ ಶ್ರೀ ಬಯಚಾಮರಾಜ ಒಡೆಯರು ಅಗ್ನಿಯನ್ನು ಹಿಡಿದು ಕೊಂಡು ಹೊರಟರು. ಶವದ ಸಂಗಡ ರೆಸಿಡೆಂಟರು, ದಿವಾನರು, ಹುಜೂರು ಸೆಕ್ರೆಟರಿಯವರೇ ಮೊದಲಾದ ಸಂಸ್ಥಾನದ ಸಕಲಾಧಿಕಾರಿಗಳೂ ರಾಜ ಬಂಧುಗಳೂ ಸಾಗುತಿದ್ದರು. ಶವವನ್ನು ಕೊಂಡೊಯ್ಯುತ್ತಿರುವಾಗ, ಜನರು ರಸ್ತೆಯ ಇಕ್ಕಡೆಯಲ್ಲಿಯೂ ನಿಂತು, "ಪ್ರಭುವೇ! ನಮ್ಮನ್ನಗಲಿ ಹೋದೆಯಾ?" ಎಂದು ಕಣ್ಣೀರ ಕೋಡಿಹರಿಸಿದರು. ಒಬ್ಬ ಮನುಷ್ಯನಿಗಾಗಿ ಸಾವಿರಾರು ಜನರು ಗೋಳಿಡುವುದೇತಕ್ಕೆ? ಚಕ್ಕನೆ ಮಾಯುವ ಬುಡಕಾರಕ್ಕಾಗಿಯೇ ಅಲ್ಲವೆ? ಶ್ರೀಮನ್ಮಹಾರಾಜ ರನ್ನು ನಮ್ಮನ್ನಗಲಿದರು. ಇನ್ನು ಆ ಧರ್ಮಪ್ರಭುಗಳನ್ನು ಕಾಣುವು

ಮಹಾಸ್ವಾಮಿಯವರ ಶ್ಮಶಾನಯಾತ್ರೆ

ದೆಲ್ಲಿ? ಅಂಬಾಲೆಯಲ್ಲಿ ಕುಳಿತು ವಿಜಯಯಾತ್ರೆ ಮೊಗುತ್ತಿದ್ದಾಗ, ಪ್ರೀ ಕೃಷ್ಣರಾಜೇಂದ್ರ ಒಡೆಯರ-ಕಿ-ಜೈ ಎಂಬುದಾಗಿ ಹರ್ಷಧ್ವನಿ ಗೈಯ್ದುವುದೆಲ್ಲಿ? ಆ ಮುಗುಳ್ನಗೆ, ಆ ಸ್ವಪ್ನಸ್ಥಿತಿ, ಆ ನಾಥುಸ್ಥಾನ ಮುಂತಾದುವನ್ನು ಕಣ್ಣಿಂದು ನೋಡುವುದಾದರೂ ಹೇಗೆ? ಅಯ್ಯೋ ಕೂರದವಿಧಿಯೇ! ರಸ್ತೆಗಳಲ್ಲಿ ಸಿಂಹಾಸನಾರೋಹಣಮಾಡುತ್ತಿದ್ದಾಗ್ಗೆ, ಅರಮನೆಯು ಮುಂದೆ ಸಿಂತು ಪ್ರಭುದರ್ಶನಮಾಡುತ್ತಿದ್ದ ನಮಗೆ ಇಂದು ಅವರ ಶವಾನ ಯಾತ್ರೆಯ ಅತಿ ದುಃಖಕರವಾದ ದೃಶ್ಯವನ್ನು ನೋಡುವಂತೆ ಮಾಡಿದೆಯಾ?

ಬರಂಡಿಲು ಹೊಡೆದಂತೆ ಭೂಮಿ |
ಧ್ವರನ ಕೃಷ್ಣನ್ನವಾಲಮರ್ಯನ |
ಮರಣವಾರ್ತಾ ಶೂಲವೆಲ್ಲರ ಕೊಡಕೆಗಳನಿರಿದು ||
ಕೊರಗಿಸಿತು ಮರುಗಿಸಿತು ಕಂಬನಿ |
ಯೊರತೆಯೆಲಿ ನನೆಯಿಸಿತು ಮರವೆಯೊ |
ಟೂರಗಿಸಿತು ಬಾಯ್ಬಿಡಿಸಿತಳಲಿಸಿತಳಿಸಿತನಿಬರನು ||೧||

ಕ್ಕೀಳಿಸಿತು ಬಾಣವನು ಕವಿಯೊಳು |
ಕ್ಕೀಲಿಸುವಪೊಲು ನಿಮಿಸ ನಿಮಿಷ |
ಕ್ಕೂಳುತಿರ್ಪ ರತಿಫಿಗಳ ಭೀಕರವಿ ಭಾಂಕಾರ ||
ಕ್ಕೀಳಜೊದನೊಳಗೊಳಗೆ ಕುದಿಗೊಂ |
ಡೀಳುವಳ್ಳಿಯು ಒಜ್ಜೆಯುಬ್ಬಿನ |
ಗೋಳು ವಸರಿಂ ಲೀನಿ ತುರುಗಿತು ನಕಲ ದಿಕ್ಕಟವ ||೨||

ಅದುವೇ ಮ್ಲೇ ನ್ಯವತಿಗೆಕಪಾ |
ಕೋದುವೇ ನಮ್ಮ ದೆಯೊಳಲಗನು |
ನೀದುವೇ ಕರ್ಣಾಲಿಗಳನಕಟಕಟ ಕವಿಯೊಳಗೆ ||
ಕಾದ ನೀರವ ನುರಿದುವೇ ಮೇ |
ಣೂದಿದುವೆ ಕೊನೆಗಾಣದುರಿವ ವಿ |
ಷಾದ ವಹ್ನಿ ಜ್ವಾಲೆಗಳ ನೆಲೆಗೊಳಿನಿ ಹೃದಯದಲಿ ||೩||

ನಗೆಮೊಗದ ನವಿನುಡಿಯ ಮೆಲ್ಲಿನ |
ಬಗೆಯ ಹಿಸುಣರ ನುಡಿಯ ಕೇಳದ |
ನುಗುಣದೊಲವಿಂ ನಂಟರಿಷ್ಟರನಾಶ್ರಿತರ್ಕಳನು ||

ಸೊಗಪೊಲಿಸುವ ಸಜ್ಜನರ್ಕಳ |
ಬಗೆಯರಿದು ಮನ್ನಿಸುವ ಮುಂಗಿಗೆ |
ನೊಗಸೊವಿಪ ಸ್ಪತಿ ಕಣ್ಮರೆಯಾದನಕಟಕಟಾ || ೪ ||

ಎಂದು ಗೋಳಾಡುತ್ತಿದ್ದರು.

S.G.N.

ಮಹಾರಾಜರ ಕಳೇಬರವ ಮೆರವಣಿಗೆಯು ೧೦–೧೦ ಕ್ಕೆ ಮಧುವನ ಬಿಟ್ಟು ಸೇರಿತು. ಆಂಗ್ಲೇಯಾಧಿಕಾರಿಗಳೂ ದಿವಾನರೂ ಪ್ರಥಮ ಮತ್ತು ದ್ವಿತೀಯ ಸಚಿವರೂ ಚೀಫ್ ಜಡ್ಜಿಯವರೂ ಹುಜೂರು ಸೆಕ್ರೆಟರಿಯವರೂ ಮೊದಲಾದವರೆಲ್ಲ ಬಂದು ಪ್ರಭುಗಳ ಮೃತದೇಹಕ್ಕೆ ಅಡ್ಡಬಿದ್ದು ಅವರ ಗುಣಕಥನಮಾಡುತ್ತ ಶೋಕಿಸಿದರು.

ಮಧುವನದಿ ಮಲಗಿತೇ ಮೈಸೂರ ಮುತ್ತು
ಮಧುಸೂದನನ ದಯೆಗೆ ತನ್ನಾತ್ಮ ತೆತ್ತು
ಹಾ ಶೋಕವಿದು ಕುದಿದು ಕನಲುವುದು ಜೀವ
ಹಾ ಸನ್ಮ ದೌರ್ಭಾಗ್ಯಕೇನೆಂಬೆ ಸಾವ! || ೧ ||

ಸಮಸವ್ಯತರು ಸಂಧಿಸಲು ಬಾಳಿ
ಸರಸ ಮೂವತ್ತೆಂಟು ನಡೆತರಲು ಆಳಿ
ಗುಣಶೀಲ ತೇಜಸ್ಸು ಸೇವೆ ಸತ್ಕಾರ
ಸಮಸೆಸಿ ನಾರಿತ್ಯೆ ಲೋಕವಿಸ್ತಾರ || ೨ ||

ಅರಸುತನಕಿದು ರತ್ನ ಶ್ರೀಕೃಷ್ಣರತ್ನ
ಪ್ರಜೆಗಳಿಗೆ ಪೂಜ್ಯವಿದು ವರ ಶಾಂತಿರತ್ನ
ಧರಯೊಸ ಯೋಲಗಿಪ ನಿಜ ವಿರೋರತ್ನ
ಸೆಲಸಲಿದು ಶಾಂತಯಲಿ ಜನಹೃದಯರತ್ನ ! || ೩ ||

D.R.R.

ಶ್ರೀಮನ್ಮಹಾರಾಜರವರ ಮರಣದಿಂದ ಮೈಸೂರು ಸಂಸ್ಥಾನಕ್ಕೆ ಅಪಾರ್ತವಲ್ಲ, ಇಡೀ ಜಗತ್ತಿಗೆ ಒಂದು ದೊಡ್ಡ ನಷ್ಟ. ಸಾಹಿತ್ಯದೇವಿ, ಸಂಗೀತದೇವಿ, ಕಲಾದೇವಿಯರೆಲ್ಲರೂ ಕನ್ನಡ ತಾಯನ್ನು ತಬ್ಬಿಕೊಂಡು ಇನ್ನು ಮುಂದೆ ತಮಗಾಶ್ರಯವೆಲ್ಲಿ ? ತಮ್ಮನ್ನು ಆದರಿಸುವರು ಯಾರು ? ಎಂದು ಕಣ್ಣೀರಿಡುತ್ತಿರುವರು. ಶ್ರೀಮನ್ಮಹಾರಾಜರ ಆತ್ಮ ವಿಕಾಸಗೊಂಡದ್ದು, ಮನಸ್ಸು ನಿರ್ಮಲವಾದದ್ದು, ಜೀವನ ನಿಷ್ಕಳಂಕವಾದದ್ದು.

ಮಹಾಸ್ವಾಮಿಯವರು ಯಾವ ಗುರುಗಳಾಗಿ ಜೀವನ ಯಾತ್ರೆಯನ್ನು ಸಾಗಿಸುತ್ತಿದ್ದರೋ ಅದನ್ನು ಜಗತ್ತಿಗೆ ಪರಿಪಾಲಿಸುತ್ತಿದ್ದರು. ವೇದಾಂತರಹಸ್ಯವನ್ನರಿತ ಜ್ಞಾನೋದಯಸಂಪನ್ನರು. ಗುರುಹಿರಿಯರಲ್ಲಿ ವಿಶೇಷ ಪ್ರೀತ್ಯಾದರಗಳನ್ನು ಇಟ್ಟಿದ್ದ ಮಹಿಮಾನ್ವಿತರು. ರಾಜಾಧಿಕಾರವನ್ನು ನಿರ್ವಹಿಸುವುದರಲ್ಲಿ ನಿಷ್ಣಾತವಾದ ಮನೋಧರ್ಮವು ಅವರ ಜೀವನವಾನದ ಹೆಗ್ಗುರುತಾಗಿತ್ತು. ಸಕಲಾಧಿಕಾರವು ಒಬ್ಬರಲ್ಲಿ ಕೇಂದ್ರೀಕೃತವಾದಾಗ ಅಧಿಕಾರ ಲೋಲರಾಗಿ ಜನರು ಮಾರ್ಗ ತಪ್ಪುವರು. ಮನುಷ್ಯಸ್ವಭಾವಜನ್ಯವಾದ ಗುಣಗಳು ಅಧಿಕಾರ ಮೋಹದಿಂದ ಗಾಳಿಗೆ ಸಿಕ್ಕಿದ ಸೊಡರಿನಂತೆ ಆರಿ ಹೋಗುವುವು. ಆದರೆ ಮಹಾಪ್ರಭುಗಳು ತಮಗೆ ದೊರೆತ ಅಧಿಕಾರವನ್ನು ಪ್ರಜೋಪಯೋಗಕಾರ್ಯಗಳಿಗೆ ವಿನಿಯೋಗಿಸುತ್ತಿದ್ದರು. ಶರನ್ನವರಾತ್ರಿಯಲ್ಲಿ ಸಿಂಹಾಸನಾರೋಹಣ ಮಾಡುತ್ತಿದ್ದಾಗ ಪೀಳ್ಗಡೆ, ಪಕ್ಕದಲ್ಲಿ ಅತ್ಯಂತ ಪ್ರಕಾಶಮಾನವಾದ ನಾಲಿಗಾರು ದೀವಗಳನ್ನು ಹಚ್ಚುತ್ತಿದ್ದರು. ಅವುಗಳ ಮುಂದೆ ಕುಳಿತುಕೊಳ್ಳುವುದು ಬಹಳ ಕಷ್ಟ. ಇಷ್ಟಾದರೂ ಮಹಾಸ್ವಾಮಿಯವರು ತಮ್ಮ ದರ್ಶನಕ್ಕಾಗಿ ಬಹುದೂರದಿಂದ ಬಂದಿರುವ ಪ್ರಜೆಗಳ ಹಿತಕ್ಕಾಗಿ ಕುಳಿತುಕೊಳ್ಳುತ್ತಿದ್ದರು.

ಮೈಸೂರು ಪ್ರಜಾಪತ್ಸಲರಾದ ಅರಸರನ್ನು, ಭಾರತವು ರಾಜರ್ಷಿ ಸಮಾನರಾದ ಆದರ್ಶ ನರೇಂದ್ರರನ್ನು, ಜಗತ್ತು ಮುಕ್ತಕಂಠದಿಂದ ಹೊಗಳಿದ್ದಾರೆ. ಬರೋಡ, ತಿರುವಾಂಕೂರು, ಗ್ವಾಲಿಯರ್, ಕಪುರ್ಥಲಾ, ಕಾಶ್ಮೀರ, ಭೂಪಾಲ ಮುಂತಾದ ಸಂಸ್ಥಾನಗಳೆಲ್ಲವೂ ಮಹಾಸ್ವಾಮಿಯವರ ಗೌರವ ಸೂಚನಾರ್ಥವಾಗಿ ಸಾರ್ವಜನಿಕ ಸಂಸ್ಥೆಗಳನ್ನೆಲ್ಲ ಮುಚ್ಚಿ ಅವುಗಳ ಮೇಲೆಲ್ಲಾ ಶೋಕಧ್ವಜವು ಹಾರಾಡುವಂತೆ ಮಾಡಿದರು. ಮೈಸೂರಾಯರವರು ಈ ಕಠೋರವಾದ ವರ್ತಮಾನದಿಂದ ಮನಸೊಂದವರಾಗಿ ತಮ್ಮ ಅನುತಾಪೋಕ್ತಿಯನ್ನು ತಂತಿಯ ಮೂಲಕ ಶ್ರುತಪಡಿಸಿದರು.

ಬಳಿಕ ೪ ನೆಯ ತಾರೀಖು ಜೆಕ್ಕೆ ದಿವಾನರವರು ಪ್ರಜೆಗಳಿಗೆ ಎಕಾಸ್ಟ್ರಾ ಆರ್ಡಿನರಿ ಗೆಜೆಟ್ ಮೂಲಕ ಈ ರೀತಿ ತಿಳಿಯಪಡಿಸಿದರು.

"ಶ್ರೀಮಂತ ಸಂಸ್ಥಾನದ ಪ್ರಜೆಗಳಿಗೆ, ನಮ್ಮ ಪ್ರೀತಿಪಾತ್ರರಾದ ಸ್ವಜನಗಳಾದ ಶ್ರೀಮನ್ಮಹಾರಾಜರವರು ಶ್ರೀ ಕೃಷ್ಣರಾಜ ಒಡೆಯರ ಬಹದೂರ್‌ರವರು ಬೆಂಗಳೂರು ಅರಮನೆಯಲ್ಲಿ ಸ್ವಲ್ಪ ಕಾಲದಿಂದ ರೋಗಗ್ರಸ್ತರಾಗಿದ್ದು (ಗತಳಿ ಸಂಯ ಜಸವಿ ಅಗಸ್ಟ್ ೩ ನೆಯ ತಾರೀಖು ಬುಧವಾರ ರಾತ್ರಿ ೯ ಗಂಟೆಗೆ ಕಾಲವಶರಾದರೆಂದು ತಿಳಿಸುವುದು ಅತ್ಯಂತ ಖೇದಕರವಾದ ನಮ್ಮ ಕರ್ತವ್ಯವಾಗಿದೆ.) ಅವರ ಆತ್ಮಕ್ಕೆ ಶಾಂತಿ ದೊರಕಲಿ." ಈ ಹೃದಯವಿದ್ರಾವಕ ಹೆಬ್ಬಿದೊಡನೆಯೇ ರಾಜಧಾನಿಯಲ್ಲೂ ಸಂಸ್ಥಾನದ ಅಭ್ಯಂತರದಲ್ಲೂ ಗೌರವಾರ್ಥವಾಗಿ ವರ್ತಕರು ತಮ್ಮ ತಮ್ಮ ಅಂಗಡಿಗಳನ್ನು ಮುಚ್ಚಿಬಿಟ್ಟರು; ನಾಟಕ, ಸಿನಿಮ ಮುಂತಾದ ಏರ್ಪಾಡುಗಳನ್ನೆಲ್ಲ ನಿಲ್ಲಿಸಿದರು; ಸಂಸ್ಥಾನದ ಪ್ರತಿಯೊಬ್ಬರೂ ಶೋಕಗ್ರಸ್ತರಾದರು.

ಏಕಕಾಲಕ್ಕೆ ಮೃತ ಸಂಸ್ಕಾರವೆಲ್ಲ ಕ್ರಮವಾಗಿ ನಡೆದು, ೧೨–೧೫ಕ್ಕೆ ಬೀಗೆ ಅಗ್ನಿ ಸಂಸ್ಕಾರವಾಯಿತು. ದುಃಖ ಸೂಚಕವಾದ ತೋಪುಗಳು ಹಾರಲು ಪ್ರಾರಂಭವಾದುವು. ಸೈನಿಕರು ಮೂರು ಸಲ ತಮ್ಮ ಒಂದೂಕುಗಳಿಂದ ಶೋಕದ ಸುರುಟಿ ಮಾಡಿದರು. ಬ್ಯಾಂಡಿನವರು ಶೋಕ ಸಂಗೀತವನ್ನು ಬಾರಿಸಿದರು. ಅಗ್ನಿಯು ಮಹಾಪ್ರಭುಗಳ ಕಳೇಬರವನ್ನು ಆವರಿಸಿತು. ಧರ್ಮಪ್ರಭುವಿನ ಪಾರ್ಥಿವಪೂರ್ಣವಾದ ಆಕೃತಿಯು ಇಲ್ಲಿಗೆ ಮರೆಯಾಯಿತು.

ಬಗನ್ಪ ೧೫ನೆಯ ತಾರೀಖು ಸೋಮವಾರ ಮಹಾಸಾಧ್ವಿಯವರ ಸಂಪಯಾನ ವಿಧಿಯೂ ಹಾಲುತುಪ್ಪದ ಶಾಸ್ತ್ರವೂ ನಡೆಯಿತು. ಆ ದಿನದಿಂದ ಭೂತತ್ಕೈಂಕರ್ಯಗಳಾಗಿ ಅರಮನೆಯ ಧರ್ಮದಲ್ಲಿಯೂ, ಶ್ರೀ ವರಕಾಲ ಮಂಟಪದಲ್ಲಿಯೂ ಸಂತರ್ಪಣೆಗೆ ಆರಂಭವಾಯಿತು. ಹತ್ತು, ಹನ್ನೊಂದು, ಹನ್ನೆರಡನೆಯ ದಿನಗಳ ಕಟ್ಟಳೆಯು ವಿಧಿವತ್ತಾಗಿ ನಡೆಯಿತು. ೧೩ನೆಯ ತಾರೀಖಿನ ದಿನ ಎಲ್ಲಾ ದೇವಸ್ಥಾನಗಳಲ್ಲಿಯೂ, ಮಸೀದಿಗಳಲ್ಲಿಯೂ, ಚರ್ಚುಗಳಲ್ಲಿಯೂ ಮೃತರ ಆತ್ಮಕ್ಕೆ ಶಾಂತಿಯುಂಟಾಗಲೆಂದು ಪ್ರಾರ್ಥನೆ ನಡೆಯಿತು. ೧೪ನೆಯ ತಾರೀಖಿನ ದಿನ ಶುಭಸ್ವೀಕಾರವು ಅರಮನೆ ಕಲ್ಯಾಣಮಂಟಪದಲ್ಲಿ ಜರುಗಿತು. ಶ್ರೀ ಜಯಚಾಮರಾಜ ಒಡೆಯರವರು ಮಂಗಳ ಸ್ನಾನಾನಂತರ ಛತ್ರಾವಸನವನ್ನಲಂಕರಿಸಿದರು. ಶ್ರೀ ವರಕಾಲ

ಮಠ, ಶೃಂಗೇರಿ ಮಠ, ಉತ್ತರಾದಿ ಮಠ, ಕೂಡ್ಲೀ ಮಠಗಳ ಕಡೆಯಿಂದ ಆಶೀರ್ವಾದ ಪೂರ್ವಕವಾಗಿ ಪಿಲ್ಲತ್ತುಗಳನ್ನೂ, ಫಲಮಂತ್ರಾಕ್ಷತೆಗಳನ್ನೂ ಒಪ್ಪಿಸಿದರು. ಕೆಲವರು ಪ್ರಮುಖರಾದ ಅರಸುಮನೆತನದವರೂ ಪಿಲ್ಲತ್ತುಗಳನ್ನು ಒಪ್ಪಿಸಿದರು. ಆ ದಿವಸ ಕೋಟೆಯಲ್ಲಿ ಮಹಾಭೂರಿ ಕೂಡಲ್ಪಟ್ಟಿತು. ಗಣಪತಿಯ ತಾಳೀಪಿನ ಬೆಳಿಗ್ಗೆ ಕಜ್ಜಿನ ಬಲ್ಲಿ ಉತ್ಸವ, ಶ್ರೀ ಪರಕಾಲಸ್ವಾಮಿಗಳ ಚರಣಸೇವೆಗಳು ನಡೆದುವು.

---

# ಏಳನೆಯ ಅಧ್ಯಾಯ

## ಗುಣಕಥನ

ಮನುಷ್ಯನಿಗೆ ಹೊರಗಿನ ಜೀವನ ಮನೆಯೊಳಗಿಲ್ಲ, ಮನೆಯೊಳಗಿನ ಜೀವನ ಹೊರಗಡೆಯಿಲ್ಲ. ಅಂತರಂಗ ಬಹಿರಂಗ ಜೀವನಗಳೆರಡರಲ್ಲೂ ಪ್ರೇಮ, ಅಭಿಮಾನ, ಕರುಣ ಇವುಗಳನ್ನು ಏಕಪ್ರಕಾರವಾಗಿ ಪ್ರದರ್ಶಿಸುವ ವ್ಯಕ್ತಿಗಳು ತೀರ ವಿರಳ. ಸಾಮಾನ್ಯವಾಗಿ ಜನರು ಜೇಕಾದ್ದನ್ನು ಬಾಯಲ್ಲಿ ನುಡಿಯುತ್ತಾರೆ. ಆದರೆ ನಡೆಯಲ್ಲಿ ತೋರಿಸುವುದಿಲ್ಲ. ಶ್ರೀ ಕೃಷ್ಣರಾಜರವರಲ್ಲಿ ನುಡಿಗಿಂತ ನಡೆಯೇ ಚೆನ್ನಾಗಿತ್ತೆಂದರೆ ಅತಿಶಯೋಕ್ತಿಯಲ್ಲ. ಇಂತಹ ವ್ಯಕ್ತಿಗಳು ತೀರ ಅಪರೂಪ. ಅವರ ವ್ಯಕ್ತಿತ್ವವು ತುಂಬ ಅರಳಿದ ತಾವರೆಯಂತೆ ಚಂದವನ್ನೂ ಗಂಧವನ್ನೂ ಬೀರುತಲಿದ್ದಿತು. ಅವರ ಸಾರ್ವಜನಿಕ ಜೀವನದಲ್ಲಿ ತೋರುತ್ತಿದ್ದ ಪ್ರೇಮ, ಆದರ, ಸಹಿಷ್ಣುತೆ, ಕಾರ್ಯದಕ್ಷತೆ, ನ್ಯಾಯನಿಷ್ಠೆ, ಇವು ಅವರ ಅಂತರಂಗ ಜೀವನದಲ್ಲೂ ಪ್ರಸರಿಸಿದ್ದುವು. ಅವರ ಜೀವಿತದಲ್ಲಿ ಕಂಡುಬಂದ ಘನತೆಯ ಪ್ರಸಂಗಗಳೆಲ್ಲ ಕೆಲವನ್ನು ಈ ಕೆಳಗೆ ನಿರೂಪಿಸಿದೆ.

ಹಿಂದೆ ದಬ್ಬಾರ್ ಫಕ್ಷ್ಣಿಯವರಾಗಿದ್ದ ಅಂಬಲ್ ನರಸಿಂಹೈಯ್ಯಂಗಾರ್ಯರು ವ್ಯವಹಾರ್ಥದಿಂದ ಬಹಳ ಖಾಯಿಲೆಯಾಗಿದ್ದರು. ಒಂದು ದಿನ ಮಹಾಸ್ವಾಮಿಯವರು ಅವರನ್ನು ನೋಡುವುದಕ್ಕೆ ತೋದರು. ಆಗ ಅವರು ಹಾಸಿಗೆಯಲ್ಲಿ ನುಲಗಿದ್ದರು. ಸವಾರಿ ಬಂದೊಡನೆಯೇ ಮೇಲಕ್ಕೆ ಏಳಲು ಹೋದರು, ಮಹಾರಾಜರು ಅವರನ್ನು ಏಳಗೊಡಿಸದೆ ತಾವು ಸಂಗಡ ತಂದಿದ್ದ ಸೇಬು, ಅಂಬೂರ, ದ್ರಾಕ್ಷಿ, ಕಿತ್ತಲೆ ಹಣ್ಣುಗಳ ಬಂದು

ದೊಡ್ಡ ಗಂಟನ್ನು ಕಾರಿನಿಂದ ತಾವೇ ಹೊತ್ತುಕೊಂಡು ಬಂದು ಅವುಗಳನ್ನು ಅಲ್ಲಿದ್ದ ಮೇಜಿನ ಮೇಲೆ ಜೋಡಿಸಿ, ತಮ್ಮ ಜೇಬಿನಿಂದ ಚಾಕನ್ನು ತೆಗೆದು ಒಂದು ಸೇಬಿನ ಹಣ್ಣನ್ನು ಒರೆದು ಸಣ್ಣನಾಗಿ ಹೆಚ್ಚಿ ನರಸಿಂಹಯ್ಯಂಗಾರ್ಯರ ಬಾಯಿಗೆ ಕೊಟ್ಟು ತಿನ್ನಿಸಿದರು. ಇದೆಂತಹ ಪ್ರೀತಿ!

ಮಹಾಸ್ವಾಮಿಯವರ ಸನಿಹದಲ್ಲಿರುವ ಒಬ್ಬ ವೃದ್ಧ ಸೇವಕನು ಒಂದು ದಿನ ಯಾವುದೋ ಒಂದು ವಿಷಯವನ್ನು ಮಹಾಸ್ವಾಮಿಯವರಿಗೆ ಅರಿಕೆ ಮಾಡಿಬಿಟ್ಟು ಹೋಗಬೇಕೆಂದು ರಾತ್ರಿ ೮ ಗಂಟೆಯವರೆಗೆ ಅರಮನೆಯಲ್ಲೇ ಇದ್ದುಬಿಟ್ಟನು. ಮಹಾಸ್ವಾಮಿಯವರು ಸಂಗೀತ ತೀರಿಸಿಕೊಂಡು ಬರುತ್ತ, ಅತನನ್ನು ನೋಡಿ—"ಏನಯ್ಯಾ, ೮ ಗಂಟೆ ಆದರೂ ಇನ್ನೂ ಮನೆಗೆ ಹೋಗದೆ ಇದ್ದೀಯಾ?" ಎಂಬುದಾಗಿ ಅಪ್ಪಣೆ ಕೊಟ್ಟರು. ಅತನು, "ಮಹಾಸ್ವಾಮಿ" . . . ಈ ವಿಷಯವನ್ನು ಅರಿಕೆ ಮಾಡಿಬಿಟ್ಟು ಹೋಗೋಣ ಎಂಬುದಾಗಿ ನಿಂತುಕೊಂಡೆ ಎಂದನು. ಅದಕ್ಕೆ ಮಹಾರಾಜರು "ಅದಕ್ಕೇನು ಅವಸರವಾಗಿತ್ತು? ನಾಳೆ ತಿಳಿಸಬಹುದಾಗಿತ್ತಲ್ಲಾ! ಮೊದಲು ಮನೆಗೆ ಹೋಗು" ಎಂದು ಕಳುಹಿಸಿದರು.

ಕಾಕನಕೋಟೆಯಲ್ಲಿ ಕಡ್ಡಾ ಕ್ಯಾಂಪಿಗೆ ಹೋಗಿದ್ದ ಡಾಕ್ಟರು ಮತ್ತು ಫೋಟೋಗ್ರಾಫರು ಇಬ್ಬರೂ ಮಾತಾಡುತ್ತ ಒಂದೆರಡು ಮೈಲಿ ತಿರುಗಾಡಲು ಹೋದರು. ಆಗ ಸಾಯಂಕಾಲ ಆರುವರೆ ಗಂಟೆ ಸಮಯ. ಒಮ್ಮೆಲಿಂದ ಮಹಾಸ್ವಾಮಿಯವರ ಕಾರ್ ಬಂದಿತು. ಇವರನ್ನು ನೋಡಿದ ಕೂಡಲೇ ಕಾರನ್ನು ನಿಲ್ಲಿಸಿ, ಹುಲಿಗಿಲ ಬಂದೀತು, ಇಷ್ಟು ಹೊತ್ತಿನಲ್ಲಿ ತಿರುಗಾಡಲು ಏನೇನು ಪೈಸೂರೆ? ಕುಳಿತುಕೊಳ್ಳಿ ಎಂದು ಕಾರಿನಲ್ಲಿ ಕೂರಿಸಿಕೊಂಡು ಕ್ಯಾಂಪಿಗೆ ತಂದುಬಿಟ್ಟರು. ಇದೆಂತಹ ಪ್ರೀತಿ!

ಒಂದು ದಿನ ರಾತ್ರಿ ಒಂಭತ್ತೂವರೆ ಗಂಟೆಯಲ್ಲಿ ಶ್ರೀಮನ್ಮಹಾರಾಜರವರು ನೀಲಗಿರಿಯಲ್ಲಿ ಯಾರಿಗೂ ಗೊತ್ತಾಗದಂತೆ ತಮ್ಮ ಕ್ಯಾಂಪನ್ನು ನೋಡಿಕೊಂಡು ಒರುತ್ತಿರುನಲ್ಲಿ, ಯಾರೋ ಒಬ್ಬರು ಬಹಳವಾಗಿ ಕೆಮ್ಮುತ್ತಿರುವುದನ್ನು ಕೇಳಿ ಸ್ವಲ್ಪ ಹೊತ್ತು ಅಲ್ಲೇ ನಿಂತುಕೊಂಡರು. ಒಳಗಿನಿಂದ ಯಾರೋ ಒಬ್ಬರು ಹೊರಗೆ ಬಂದರು. ಅವರನ್ನು ನೋಡಿ "ಯಾರಯ್ಯಾ ಕೆಮ್ಮುವವರು" ಎಂದು ಕೇಳಿದರು. ಅವರು "ಮಹಾಸ್ವಾಮಿ, ಪೆಟೆರ್‌ಸನ್ ಡಾಕ್ಟರು" ಎಂದು ಹೇಳಿದರು. ಅದಕ್ಕೆ ಮಹಾಸ್ವಾಮಿಯವರು

"ಅವರಿಗೆ ಹೇಳು, ಇನ್ನೊಂದೆರಡು ಸಿಗರೇಟ್ ಸೇದಿದರೆ ಕೆಮ್ಮು ಹೋಗುತ್ತದೆ ಎಂದು ಹೇಳು" ಎಂಬುದಾಗಿ ಅಪ್ಪಣೆಕೊಡಿಸಿ ಮುಂದೆ ದಯಮಾಡಿಸಿದರು. ಇದನ್ನು ಡಾಕ್ಟರು ಕೇಳಿದ ಕೂಡಲೇ ಅವರ ಸ್ಟೈಯೆಲ್ಲಾ ಬೆವರಿತು. ಅವರು ಸಿಗರೇಟ್ ಸೇದುವುದನ್ನೇ ಬಿಟ್ಟರು. ಇದಲ್ಲವೆ ಹಿತೋಪದೇಶದ ಫಲ!

ಈಗ್ಗೆ ಒಂದೆರಡು ವರ್ಷಗಳ ಕೆಳಗೆ ಒಂದುದಿನ ಶ್ರೀಮನ್ಮಹಾರಾಜರವರು ಬೆಳಗಿನ ಫಲಾಹಾರವನ್ನು ಒಪ್ಪಿಸಿಕೊಳ್ಳದೆ ಮರೆತು, ಅಲಂಕಾರ ಮಾಡಿ ಕೊಂಡು ಕೆಳಗೆ ನಿಂತಿದ್ದ ಕಾರಿಗೆ ಬಂದು ಕುಳಿತುಕೊಂಡರು. ಕಾರಿನಲ್ಲಿ ಕುಳಿತ ತರುವಾಯ ಫಲಾಹಾರದ ಜ್ಞಾಪಕ ಬಂತು. ಮೇಲಕ್ಕೆ ಒಂದು ಫಲಾಹಾರ ಜೋಡಿಸಿದ್ದ ಸ್ಥಳಕ್ಕೆ ಹೋದರು. ಅಷ್ಟರಲ್ಲಿ ಒಬ್ಬ ಊಳಿಗ ದವನು ಮಹಾಸ್ವಾಮಿಯವರಿಗೆ ಬಂದಿದ್ದ ಫಲಾಹಾರದ ತಟ್ಟೆಯಲ್ಲಿದ್ದ ಟೀ ಪಾತ್ರೆಯನ್ನು ಎತ್ತಿಕೊಂಡು ಟೀ ಕುಡಿಯುತ್ತಿದ್ದನು. ಪ್ರಭುಗಳು ನೋಡಿದರು. ಕೋಪಮಾಡಲಿಲ್ಲ; ಊಳಿಗದವನು ಭಯದಿಂದ "ಮಹಾ ಸ್ವಾಮಿ! ಸ್ವಾಮಿಯವರು ಫಲಾಹಾರ ಒಪ್ಪಿಸಿಕೊಳ್ಳದೆ ಹಾಗೆಯೇ ದಯಮಾಡಿದ್ದರಿಂದ, ಇನ್ನು ಒಪ್ಪಿಸಿಕೊಳ್ಳುವುದಿಲ್ಲ, ಬಿಡದಿಯವರು ಬಂದು ತೆಗೆದುಕೊಂಡು ಹೋಗುತ್ತಾರೆಂದು ನಾನು ಟೀ ಕುಡಿಯುತ್ತಿದ್ದೆ" ಎಂದು ಹೇಳಿದನು. ಅದಕ್ಕೆ ಮಹಾಸ್ವಾಮಿಯವರು ಸ್ವಲ್ಪವೂ ಚಿತ್ತವಿಕಾರ ಗೊಳ್ಳದೆ ಬಿಡದಿಯಿಂದ ಬೇರೆ ಫಲಾಹಾರ ಸಾಮಗ್ರಿಯನ್ನು ತರಿಸಿ ಕೊಂಡರು. ಅಂದಿನಿಂದ ತಮಗೆ ಫಲಾಹಾರ ಬರುವಾಗ ಅದರ ಸಂಗಡ ಅರು ಜನಕ್ಕೆ ಆಗುವಷ್ಟು ಸಾಮಗ್ರಿ ಬರುವಂತೆ ಆಜ್ಞೆಮಾಡಿದರು.

ಮಹಾಸ್ವಾಮಿಯವರ ವೇಲೋ ಕುದುರೆ ಪಂದ್ಯದಲ್ಲಿ ಗೆದ್ದಿದ್ದ ಒಂದು ಭಾರಿ ಕಪ್ಪು ರಾಗಮಾಲು ಕೊಠಡಿಯಲ್ಲಿ ಇಡಲ್ಪಟ್ಟಿತ್ತು. ಅಲ್ಲಿದ್ದ ಒಬ್ಬ ಸೇವಕನು ಎಡವಿಬಿದ್ದು ಅದನ್ನು ಉರುಳಿಸಿಬಿಟ್ಟನು. ಮಹಾ ಸ್ವಾಮಿಯವರು ಅವನಿಗೆ ಯಾವ ಶಿಕ್ಷೆಯನ್ನಾದರೂ ವಿಧಿಸಬಹುದಾಗಿತ್ತು. ಪ್ರಭುವು ಸ್ವಲ್ಪವೂ ಕೋಪಮಾಡಲಿಲ್ಲ. "ಏನಯ್ಯಾ! ಕಾಲಿಗೆ ಎಷ್ಟು ನೋವಾಯಿತೋ! ಮೊಣಗಾಲಲ್ಲವೇ ಬರಬೇಕಾದ್ದು?" ಎಂದು ಅವನನ್ನು ಸಂತೈಸಿದರೇ ಹೊರತು, ಅಂತಹ ಅಮೂಲ್ಯವಾದ ವಸ್ತುವನ್ನು ಹಾಳು ಮಾಡಿದ ಯೋಚನೆ ಅವರಿಗೆ ಸ್ವಲ್ಪವಾದರೂ ಇರಲಿಲ್ಲ. ಇದನ್ನು

ನೋಡಿದರೆ ತಕ್ಕ್ಷಣಾಚಾರ್ಯನಾದ ಸ್ಫೂರ್ತನನ್ನು ತಾನು ಎಷ್ಟೋ ಶ್ರಮ ಪಟ್ಟು ಬರೆದಿದ್ದ ಕವಿತೆಯನ್ನು ಅವನ ನಾಯಿಯು ದೀಪವುರಳಿಸಿ ಸುಟ್ಟ ವಿಷಯವನ್ನು ಬಾಣನಿಕ್ಕೆ ಒರುತ್ತಿದೆ. ಇದೀಗ ಸಹನೆ!

ಈಗ್ಗೆ ಸುಮಾರು ೨೦ ವರ್ಷಗಳ ಕೆಳಗೆ ನಗರ್ಲೆ ಪ್ರಾಂತ್ಯದ ಒಬ್ಬಾ ಸೂಳ್ಳಿ ಲಂಗಾಯಿತನು ಒಬ್ಬ ಮುಸಲ್ಮಾನನನ್ನು ಚಿದ್ದಿನಿಂದ ದಾರಿಯಲ್ಲಿ ಅಟ್ಟಗಟ್ಟಿ ಹೊಡೆದುಹಾಕಿ, ಅವನಲ್ಲಿದ್ದ ಹಣವನ್ನು ಅಪಹರಿಸಿದನು. ಇದು ಕೋರ್ಟಿಗೆ ಹೋಗಿ ಅವನನ್ನು ಗಲ್ಲುಗೇರಿಸುವಂತೆ ಚೀಫ್ ಕೋರ್ಟಿನಲ್ಲಿ ಜಜ್ಜಿಯಾಯಿತು. ಆಗ ಆತನ ಹೆಂಡತಿ ಚಾಮುಂಡಿ ಬೆಟ್ಟದಲ್ಲಿ ಮಹಾಸ್ವಾಮಿಯವರನ್ನು ಕಂಡು, "ಮಹಾಸ್ವಾಮಿ! ನನ್ನ ಗಂಡ ಮಾಡಿದುದು ತಪ್ಪು, ನನ್ನ ಓಲೆಭಾಗ್ಯವನ್ನು ಕಾಪಾಡಿಕೊಡಬೇಕು" ಎಂದು ಬೇಡಿಕೊಂಡಳು. ಅದಕ್ಕೆ ಮಹಾಸ್ವಾಮಿಯವರು "ನೀನೇನೂ ನಿನ್ನ ಓಲೆಭಾಗ್ಯವನ್ನು ಕೇಳಿಕೊಳ್ಳುತ್ತೀ ಸರಿ! ಆ ಬಡ ಬೂಬಿಯ ಓಲೆಭಾಗ್ಯವನ್ನು ಕೊಡುವವರು ಯಾರು? ನಿನ್ನಂತೆಯೇ ಅಲ್ಲವೆ? ಈ ವಿಷಯದಲ್ಲಿ ನ್ಯಾಯಬಿಟ್ಟು ನಾವೇನೂ ಮಾಡುವುದಕ್ಕಾಗುವುದಿಲ್ಲ" ಎಂದು ಅಪ್ಪಣೆ ಕೊಟ್ಟು ಕಳುಹಿಸಿ, ಗಲ್ಲಿಗೇರಿಸುವುದನ್ನು ತಪ್ಪಿಸಿ ಜನ್ಮಾವಧಿ ಕಾರಾಗೃಹವಾಸ ವಿಧಿಸಿದರು. ಇದೆಂತಹ ನ್ಯಾಯನಿಷ್ಠೆ!

ಮಹಾಸ್ವಾಮಿಯವರು ವಿನೋದದಲ್ಲೂ ಬಹಳ ನಿಷ್ಣಾತರಾಗಿದ್ದರು. ಎಲ್ಲಾದರೂ ಪಿಕಾರು ಪಕ್ಕೆರೆಗಳಿಗೆ ಹೋದರೆ, ಸಂಗಡ ಅನೇಕ ವಿಧವಾದ ಭಕ್ಷ್ಯಭೋಜ್ಯಗಳೂ ಹಣ್ಣುಹಂಪಲುಗಳೂ ತಂಪಾಗುವ ಪಾನೀಯಗಳೂ ತಿಂಡಿ ಕಾರಿನಲ್ಲಿ ಹೋಗುತ್ತಿದ್ದುವು. ಇದನ್ನು ಎಲ್ಲರೂ ಬಂದು ದೊಡ್ಡ ಹಬ್ಬಕ್ಕಿಂತಲೂ ಅತಿಶಯವಾಗಿ ಭಾವಿಸುತ್ತಿದ್ದರು. ಒಂದು ದಿವಸ ಮಹಾಸ್ವಾಮಿಯವರು ಹುಲಿ ಪಿಕಾರಿಗೆ ಹೋಗಿದ್ದಾರೆ. ತಿಂಡಿಯ ಕಾರು ಹೊತ್ತಿಗೆ ಸರಿಯಾಗಿ ಬಾರದಂತೆ ಒಳಗೇ ಏರ್ಪಾಡು ಮಾಡಿ ಎಲ್ಲೋ ನಿಲ್ಲಿಸಿದ್ದಾರೆ. ತಮ್ಮೊಡನೆ ಇರುವ ಅಂಗರಕ್ಷಕರೇ ಮೊದಲಾದ ಪರಿವಾರವೆಲ್ಲ ಒಕ್ಕಲಾಗಿ ಹಸಿದಿದ್ದಾರೆ ಆಗ ಹತ್ತಿರಿದ್ದ ಅಡಿಗೆಮನೆ ದಫೇದಾರನನ್ನು ಕರೆದು, "ಏನಯ್ಯಾ! ತಿಂಡಿಯ ಕಾರು ಯಾಕೂ ಇನ್ನೂ ಒರಲ್ಲ. ಹೊಟ್ಟೆ ತುಂಬ ಹಸಿಯುತ್ತಿದೆ. ನೀನಾದರೂ ಹೋಗಿ ಎಲ್ಲಾದರೂ ರೊಟ್ಟಿಮಾಡಿ ತೆಗೆದುಕೊಂಡು ಬಾ" ಎಂಬುದಾಗಿ ಹೇಳಿ ಕಳುಹಿಸಿದರು.

ಮೊದಲೇ ಎಲ್ಲಾ ಏರ್ಪಾಡಾಗಿದ್ದಂತೆ ದಫೇದಾರನು ಅಲ್ಲಿಂದ ಹೊರಟು ರಾಗಿಯ ರೊಟ್ಟಿಗಳನ್ನೂ ಅರಪೆಣಸಿನ ಕಾರವನ್ನೂ ತೆಗೆದುಕೊಂಡು ಬಂದು ಕೊಟ್ಟನು. ಮಹಾರಾಜರು ತಮ್ಮೊಡನಿದ್ದ ಅಂಗರಕ್ಷಕರುಗಳಿಗೆಲ್ಲಾ ಅದನ್ನು ಕೊಡಿಸಿ ತಾವೂ ತಿಂದರು. ಅಂಗರಕ್ಷಕರು ಎಂದೂ ರಾಗಿ ರೊಟ್ಟಿಯನ್ನು ತಿಂದವರಲ್ಲ, ಅರಪೆಣಸಿನಕಾರದ ರುಚಿಯನ್ನು ಕಂಡವರಲ್ಲ. ಅವರು ರಾಗಿರೊಟ್ಟಿಯನ್ನು ತಿನ್ನಲಾರದೆ ಪಟ್ಟ ಶ್ರಮವನ್ನು ನೋಡಿ ಮಹಾರಾಜರು, "ನೀವೆಲ್ಲ ಶ್ರೀಮಂತರು; ನಿಮಗೆ ರಾಗಿ ರೊಟ್ಟಿ ತಿಂದು ಅಭ್ಯಾಸವಿಲ್ಲ. ನಾವು ಅದನ್ನೇ ತಿನ್ನುತ್ತೇವೆ" ಎಂದು ಹೇಳಿ ರಾಗಿ ರೊಟ್ಟಿಯನ್ನು ತಿಂದರು. ಒಂದೆರಡು ತಾಸಾದ ಮೇಲೆ ತಿಂಡಿಯ ಕಾರು ಬಂದಿತು. ಎಲ್ಲರೂ ತಿಂಡಿ ತಿಂದು ತೃಪ್ತರಾದರು. ಇದೆಂತಹ ವಿನೋದ!

೧೯೩೯ರಲ್ಲಿ ಮಹಾಸ್ವಾಮಿಯವರು ಹಾಸನದ ಮೊಕ್ಕಾಮಿನಲ್ಲಿದ್ದಾಗ ಒಂದು ಸಂತೆಯ ದಿನ ತಮ್ಮ ಪರಿವಾರದ ಜನರಿಗೆಲ್ಲ ಒಂದೊಂದು ರೂಪಾಯಿ ಕೊಟ್ಟು, ಸಂತೆಗೆ ಹೋಗಿ "ನಿಮಗೆ ಏನು ಬೇಕೋ ಅದನ್ನು ತೆಗೆದುಕೊಂಡು ಬನ್ನಿ" ಎಂದು ಹೇಳಿ ಕಳುಹಿಸಿದರು. ಅವರಲ್ಲಿ ಕೆಲವರು ಬಟ್ಟೆಗಳನ್ನೂ ಕೆಲವರು ತೊಟ್ಟುಕೊಳ್ಳಲು ಬಸೀಸುಗಳನ್ನೂ ಇನ್ನು ಕೆಲವರು ತಮಗೆ ಬೇಕಾದ ಇತರ ಹಲವು ಸಾಮಾನುಗಳನ್ನೂ ತಂದರು. ಇವುಗಳನ್ನೆಲ್ಲ ಒಂದು ಕೋಣೆಯಲ್ಲಿ ಸಾಲಾಗಿ ಇಡಿಸಿ ಮಹಾಸ್ವಾಮಿಯವರು ಅವುಗಳನ್ನೆಲ್ಲ ಒಂದು ಕಡೆಯಿಂದ ಪರಿಶೀಲಿಸುತ್ತ ಬರುವಲ್ಲಿ, ಒಬ್ಬ ತರುಣನು ಸಂಸಾರಕ್ಕೆ ಬೇಕಾದ ಸಾಮಾನುಗಳು ಎಂದರೆ—ಕಪ್ಪು, ಸಾಸರು, ಸ್ಪೂನು, ಸೌಟು ಮುಂತಾದ ಸಾಮಾನುಗಳನ್ನು ತಂದಿದ್ದನು. ಇಷ್ಟು ಸ್ವಲ್ಪ ದುಡ್ಡಿನಲ್ಲಿ ಇಷ್ಟೊಂದು ಸಾಮಾನುಗಳನ್ನು ತಂದ ಅವನ ಜಾಣ್ಮೆಯನ್ನು ನೋಡಿ ಮಹಾಸ್ವಾಮಿಯವರು ಅವನಿಗೆ ಹತ್ತು ರೂಪಾಯಿ ಇನಾಮನ್ನು ದಯಪಾಲಿಸಿದರು.

ಕೊನೆಯಸಾರಿ ಬೆಂಗಳೂರಿಗೆ ಹೊರಡುವುದಕ್ಕೆ ಒಂದು ತಿಂಗಳ ಕೆಳಗೆ ಶ್ರೀಮನ್ಮಹಾರಾಜರವರು ಜೀಪ್ಕಾರಿನಲ್ಲಿ ಬರುತ್ತಿರುವಾಗ, ಉತ್ತನಹಳ್ಳಿ ಹತ್ತಿರ ರಸ್ತೆಯಲ್ಲಿ ಹೋಗುತ್ತಿದ್ದ ಒಬ್ಬ ಗಾಡಿಯವನ ಎತ್ತು ಬೆದರಿ ಬಡ್ಡುಬಿಟ್ಟಿತು. ಎತ್ತಿನ ಕಾಲಿಗೆ ಸ್ವಲ್ಪ ನೋವಾಯಿತು,

ಒತ್ತು ಮೇಲಕ್ಕೆ ಏಳಲಿಲ್ಲ. ಮಹಾರಾಜರವರು ಗಾಡಿಯವನಿಗೆ ಹೆದರ ಬೇಡವೆಂದು ಸಮಾಧಾನ ಹೇಳಿ ತಕ್ಷಣವೇ ತಬೇಲಿಗೆ ಬಂದು ಅಲ್ಲಿನ ದೊಡ್ಡ ಲಾರಿಯನ್ನೂ ಜನಗಳನ್ನೂ ಕಳುಹಿಸಿ, ಒತ್ತನ್ನು ಲಾರಿಯ ಮೇಲೆ ತಬೇಲಿಗೆ ತರಿಸಿ ಸರಿಯಾದ ಚಿಕಿತ್ಸೆಯ ಮೂಲಕ ಗುಣವಡಿಸುವಂತೆ ಮಾಡಿಸಿದರು. ಆ ದಿನವೇ ಗಾಡಿಯವನಿಗೆ ಒಂದುನೂರು ರೂಪಾಯಿ ಬಹುಮಾನವನ್ನೂ ಅವನ ಎತ್ತು ಗುಣವಾದ ಬಳಿಕ ಅದನ್ನೂ ಕೊಟ್ಟು ಕಳುಹಿಸಿದರು. ಇದೆಂತಹ ಔದಾರ್ಯ!

ಶ್ರೀಮನ್ಮಹಾರಾಜರವರಿಗೆ ವೈದ್ಯದಲ್ಲಿ ಹೆಚ್ಚಾದ ಪರಿಶ್ರಮವಿತ್ತು. ತಮ್ಮ ಹತ್ತಿರತಕ್ಕವರು ಏನಾದರೂ ಖಾಯಿಲೆ ಬಿದ್ದರೆ ಅವರ ದೇಹ ಸ್ಥಿತಿಯನ್ನು ನೋಡಿ ತಾವೇ ಔಷಧದ ಚೀಟಿಯನ್ನು (prescription) ಬರೆದು ಅವಶ್ಯಕ್ಕೆಗೆ ಕಳುಹಿಸಿ ಔಷಧಿ ತರಿಸಿಕೊಡುತ್ತಿದ್ದರು. ಈ ಕಾರಣ ದಿಂದ ನೀಲಗಿರಿ, ಬೆಂಗಳೂರು ಮೈಸೂರು ಸ್ಥಳಗಳಿಗೆ ೩-೪ ದಿವಸ ಪ್ರವಾಸ ಹೋಗಬೇಕಾದ ಸಂದರ್ಭದಲ್ಲಿ ಒಂದೊಂದು ಸಾರಿ ಡಾಕ್ಟರನ್ನು ಸಂಗಡ ಕರೆದುಕೊಂಡು ಹೋಗುತ್ತಿರಲಿಲ್ಲ. ಒಬ್ಬ ಔಷಧಿ ತಯಾರಿಸುವವನು (compounder) ಔಷಧಿ ಪೆಟ್ಟಿಗೆಯೊಡನೆ ಒಂದರೆ ಸಾಕಾಗಿರುತ್ತಿತ್ತು. ಒಂದು ದಿನ ನೀಲಗಿರಿಗೆ ಹೋಗಿರುವಾಗ, ಪ್ರಭುಗಳಿಗೆ ಮೈ ಸ್ವಲ್ಪ ಅಲಸ್ಯವಾದಂತಾಯಿತು; ಕಾಂಪೌಂಡರಿಗೆ ಹೇಳಿಕಳುಹಿಸಿದರು. ಅವನು ಬಂದ ಕೂಡಲೆ ಇಂಥ ಔಷಧವಾಡಿ ತೆಗೆದುಕೊಂಡು ಬಾ ಎಂಬುದಾಗಿ ಅಪ್ಪಣೆ ಮಾಡಿದರು. ಅತನು ಸ್ವಲ್ಪಹೊತ್ತಿನೊಳಗಾಗಿ ಔಷಧವನ್ನು ತಯಾರುಮಾಡಿ ತಂದು ಒಪ್ಪಿಸಿದನು. ಕಾಂಪೌಂಡರು ಬರುವಾಗಲೂ ಹೋಗುವಾಗಲೂ ಪ್ರಭುಗಳು ಅತನನ್ನೇ ದೃಷ್ಟಿಸಿ ನೋಡಿದರು. ಆ ರಾತ್ರಿ ತುಂಬ ಛಳಿಯಾಗಿದ್ದುದರಿಂದ, ಕಾಂಪೌಂಡರು ಛಳಿಗೆ ತಡೆಯ ಲಾರದೆ ನಡುಗುತ್ತಿದ್ದನು. ಅವನನ್ನು ನೋಡಿ, "ಏನಯ್ಯಾ! ತುಂಬಾ ಛಳಿಯಲ್ಲವೆ? ಊಟಿಗೆ ಒರಜೇಕಾದರೆ ಉಣ್ಣೆಯ ಬಟ್ಟೆ ತರಬೇಕೆಂಬುದು ನಿನಗೆ ಗೊತ್ತಿಲ್ಲವೆ? ನಮ್ಮ ಆರೋಗ್ಯ ನೋಡಿಕೊಳ್ಳಲು ಬಂದಿರುವ ನೀನೇ ಖಾಯಿಲೆ ಬಿದ್ದರೆ!" ಎಂದು ಕಿರುನಗೆ ನಕ್ಕರು. ಮಾರನೆಯ ದಿನ ಪ್ರಾತಃ ಕಾಂಪೌಂಡರು ಬಂದು ಮಹಾಸ್ವಾಮಿಯವರನ್ನು ಕಂಡಾಗ, "ನಾವೇನೋ ಆರೋಗ್ಯವಾಗಿದ್ದೇವೆ. ಛಳಿಯಿಂದ ನಿನ್ನ ಆರೋಗ್ಯ

ಕಟ್ಟೀತು. ಈ ಸ್ಟೇಟರನ್ನು ಹಾಕಿಕೊ ಎಂದು ಒಂದು ಉಣ್ಣೆಯ ಸ್ವೆಟರನ್ನು ಕೊಟ್ಟು ಕಳುಹಿಸಿದರು. ಇದೆಂತಹ ಪಶ್ಚಾತ್ತಾಪ!

ಶ್ರೀಮನ್ಮಹಾರಾಜರವರು ವ್ಯಾಯಾಮಕ್ರೀಡೆಗಳಲ್ಲಿ ಭಾಗವಹಿಸದೇ ಇದ್ದ ದಿವಸವೇ ಇಲ್ಲ. ಟೆನ್ನಿಸ್, ಪೋಲೊ, ರಾಕೆಟ್ ಮುಂತಾದ ಕ್ರೀಡೆಗಳಲ್ಲಿ ಪಾರಂಗತರಾಗಿದ್ದರು. ಅವರು ನಡೆಯುವಾಗ, ಬೆಟ್ಟ ಪರ್ವತ ಹತ್ತುವಾಗ, ಅವರನ್ನು ಹಿಂಬಾಲಿಸುವುದು ಒಲು ಕಷ್ಟ. ೧೯೨೨ರಲ್ಲಿ ಮಾಜಿ ಬ್ರಿಟಿಷ್ ಚಕ್ರವರ್ತಿಗಳಾದ ಎಡ್ವರ್ಡ್‌ರವರು ಪ್ರಿನ್ಸ್ ಆಫ್ ವೇಲ್ಸ್‌ರಾಗಿದ್ದಾಗ ಮೈಸೂರಿಗೆ ಬಂದಿದ್ದರು. ಒಂದುದಿನ ಅವರೂ ಮಹಾರಾಜರೂ ಸ್ಕ್ವಾಷ್ ಎಂಬ ಆಟವಾಡಿದರು. ಆದರಲ್ಲಿ ಎಡ್ವರ್ಡರು ಸೋತರು. ಯಾರೇ ಆಗಲಿ ಬ್ರಿಟಿಷ್ ರಾಜಮನೆತನದವರೊಡನೆ, ಯಾವು ದಾದರೂ ಪಂದ್ಯವಾಡಿದರೆ ಅವರನ್ನು ಸೋಲಿಸಬಾರದೆಂಬುದು ಒಂದು ವ್ಯಾಚೀನ ಸಂಪ್ರದಾಯದ ಮಾತು. ಮಹಾಸ್ವಾಮಿಯವರು ಎಡ್ವರ್ಡ ರನ್ನು ಸೋಲಿಸಿದಾಗ ಎಡ್ವರ್ಡರು ತುಂಬಾ ಸಂತೋಷಗೊಂಡು ಮಹಾ ಸ್ವಾಮಿಯವರ ಆಟದ ಮೇಲ್ಮನವನ್ನು ಹೊಗಳಿದರು. ವ್ಯಾಯಾಮಕ್ರೀಡೆ ಗಳೇ ಶ್ರೀ ಕೃಷ್ಣಭೂಪತಿಗಳ ಜೀವನಾಧಾರವಾಗಿದ್ದುವೆಂದರೆ ಅತಿಶ ಯೋಕ್ತಿಯಲ್ಲ.

ಶ್ರೀಮನ್ಮಹಾರಾಜರವರು ತಮ್ಮ ಸಂಚಾರಕಾಲದಲ್ಲಿ ಬಡವರಿಗೆ ಎತ್ತು ಹೇರುಗಳನ್ನು ಕೊಡಿಸಿಕೊಡುವಂತೆ ಹೇಳಿ ಡೆಪ್ಯುಟಿ ಕಮಿಷನರಿಗೆ ಹಣ ಕೊಡುತ್ತಿದ್ದರು. ಆದರೆ ಇಂಥವರಿಂದ ಬಂದುದು ಎಂಬ ವಿಚಾರ ಮಾತ್ರ ಯಾರಿಗೂ ಗೊತ್ತಾಗಕೂಡದು ಎಂಬುದೇ ಅವರ ಆಜ್ಞೆ. ಸರ್ಕೀಟುಗಳಲ್ಲಿ ಹತ್ತಿರಿರುವ ಪ್ರೈಸಿಂಗ್ ಬಾಯ್ಸ್, ಷಾಪಿಯರ್ಸ್, ಅಡಿಗೆಯವರು ಪಗೈರೇರುಗಳಿಗೆ ಇಲಾಖೆಯಿಂದ ಕೊಡುತ್ತಿದ್ದ ಇನಾಮಲ್ಲದೆ, ತಾವು ಬೇರೆ ಕೊಡುತ್ತಿದ್ದರು. ಒಬ್ಬರಿಗೆ ಕೊಟ್ಟದ್ದು ಇನ್ನೊಬ್ಬರಿಗೆ ಗೊತ್ತಾಗು ತ್ತಿರಲಿಲ್ಲ. ಬಲಗೈಯಲ್ಲಿ ಕೊಟ್ಟದ್ದು ಎಡಗೈಗೆ ತಿಳಿಯಬಾರದೆಂಬುದು ಪ್ರಭುಗಳ ಇಷ್ಟ. ನೀಲಗಿರಿ, ಬೆಂಗಳೂರು ಮೊದಲಾದ ದೂರದೇಶಗಳಿಗೆ ಪ್ರಯಾಣ ಹೊರಟರೆ, ಮೋಟಾರ್ ನಡೆಯಿಸುವವರಿಗೆ ದಾರಿಯಲ್ಲಿ ವಿರಾಮಕೊಡಲು ಎಲ್ಲಾದರೂ ನಿರ್ಜನಪ್ರದೇಶದಲ್ಲಿ ಕಾರನ್ನು ನಿಲ್ಲಿಸ ಹೇಳಿ ತಾವು ತಿರುಗಾಡಲು ಹೋಗುತ್ತಿದ್ದರು. ಈ ವಿರಾಮಕಾಲದಲ್ಲಿ

ಮಾಣಿಯರ್‌ಗಳು ಸಿಗರೇಟು ವಗೈರೆ ಸೇದಿಕೊಂಡು ಬುಲ್ಲಾಸವಿಂದಿರುತ್ತಿದ್ದರು. ಅನಂತರ ಸ್ವಭುಗಳು ಬಂದು ಮುಂದಕ್ಕೆ ಹೊರಡುತ್ತಿದ್ದರು. ಎಂತಹ ಪರೋಪಕಾರ!

ಮಹಾಸ್ವಾಮಿಯವರ ಪ್ರಾಣಿದಯೆಯು ಅಸಾಧಾರಣವಾದದ್ದು. ನವರಾತ್ರಿಯಲ್ಲಿ ನವಾರಿ ಬನ್ನೀಮಂಟಪಕ್ಕೆ ಹೋದ ಬಳಿಕ, ಅಂಬಾರಿಯನ್ನು ಬಿಚ್ಚಿದ ಆನೆಯನ್ನು ಹಾಗೆಯೇ ಬಿಡುತ್ತಿದ್ದರು. ಮಹಾಸ್ವಾಮಿಯವರು ಅಂಬಾರಿಯ ತೂಕ, ಅದರಲ್ಲಿ ಕುಳಿತುಕೊಳ್ಳುವವರ ಭಾರ ಮುಂತಾದವುಗಳನ್ನೆಲ್ಲ ಪರಿಗಣಿಸಿ, ಬನ್ನೀಮಂಟಪಕ್ಕೆ ಹೋದಕೂಡಲೆ ಅಂಬಾರಿಯನ್ನು ಆನೆಯ ಬೆನ್ನಿನಿಂದ ಲಿಫ್ಟ್ ಮೂಲಕ ಮೇಲಕ್ಕೆತ್ತಿಸಿ ಆನೆಯನ್ನು ನಿರಾತಂಕವಾಗಿ ಬಿಡುವಂತೆಯೂ ಪುನಃ ಹೊರಡುವಾಗ ಅಂಬಾರಿಯನ್ನು ಆನೆಗೆ ಜಿಗಿಯುವಂತೆಯೂ ಮಾಡಿದರು. ಇದೆಂತಹ ಕರುಣೆ!

ಪ್ರಭುಗಳಲ್ಲಿ ಕರುಣೆಯು ಅಪಾರವಾಗಿ ತುಂಬಿತ್ತು. ಹತ್ತಿರಿರುವ ಸೇವಕರು ಕುಳಿತುಕೊಳ್ಳುವುದಕ್ಕೆ ಮೆತ್ತೆಹಾಕಿದ ಕುರ್ಚಿಗಳನ್ನೂ ಬೀಜಾರಾದಾಗ ಮಲಗಿಕೊಳ್ಳುವುದಕ್ಕೆ ಮೆತ್ತನೆಯ ಹಾಸಿಕೆ ಹೊದಿಕೆಗಳನ್ನೂ ತರಿಸಿ ಕೊಟ್ಟಿದ್ದರು. ತಮಗೆ ಫಲಾಹಾರಕ್ಕೆ ಬರುವ ತಿಂಡಿಯಲ್ಲಿ ಬೇಕಾದ್ದನ್ನು ಬೇರೆ ತಟ್ಟೆಗೆ ತೆಗೆದಿರಿಸಿಕೊಂಡು ಉಳಿದದ್ದನ್ನು ಹತ್ತಿರಿರುವ ಸೇವಕರು ಉಪಯೋಗಿಸಿಕೊಳ್ಳುವಂತೆ ಏರ್ಪಡಿಸಿದ್ದರು. ಸರ್ಕೀಟುಗಳಲ್ಲಿ ದರ್ಶನೀಯವಾದ ಸ್ಥಳಗಳನ್ನು ತಾವು ನೋಡಿದ ಬಳಿಕ, ತಮ್ಮ ಪರಿವಾರದ ಜನರೂ ನೋಡುವುದಕ್ಕೆ ಏರ್ಪಾಡು ಮಾಡುತ್ತಿದ್ದರು. ಬಂದ ಬಳಿಕ ಒಬ್ಬಿಬ್ಬರನ್ನು ಕರೆದು ಏನೇನು ನೋಡಿದಿರಿ ಎಂಬುದಾಗಿ ಕೇಳಿ ತಿಳಿದುಕೊಳ್ಳುತ್ತಿದ್ದರು. ಸೇವಕರಿಗೆ ಇಷ್ಟು ಸೌಕರ್ಯಗಳನ್ನು ಕಲ್ಪಿಸಿದ್ದರೂ ಯಾವ ಕಾಲಕ್ಕೆ ಏನೋ ಎಂಬ ಭಯದಲ್ಲಿ ಅವರನ್ನು ಇಟ್ಟಿದ್ದರು. ಈ ರೀತಿಯಲ್ಲಿ ಮಹಾಸ್ವಾಮಿಯವರ ಗುಣಕಥನವನ್ನು ಬರೆಯಲು ಹೋದರೆ ಏನು ಬರೆಯಬೇಕೊ, ಯಾವುದನ್ನು ಬರೆಯಬೇಕೊ ಎಂಬ ವಿಷಯವು ವಿಸ್ತೃತ. ಅವುಗಳನ್ನೆಲ್ಲಾ ಬರೆದರೆ ಬಂದೆರಡು ಸಂಪುಟಗಳೇ ಆಗಬಹುದು.

# ೧೯ನೆಯ ಅಧ್ಯಾಯ

## ಮಹಸೀಯರ ವಾಕ್ಯಾವಳಿ

**ಮೈಸರಾಯರವರ ಅನುತಾಪ.**—ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜ ಒಡೆಯರವರ ಮರಣವಾರ್ತೆಯು ತಿಳಿದಾಗ, ಮೈಸರಾಯರವರಾದ ಲಾರ್ಡ್ ಲಿಟಲ್‌ಟಾಗೋರವರು ಮದರಾಸ್ ಪ್ರವಾಸದಲ್ಲಿ ಬಿಡಕ ಸಂಡಲಕ್ಕೆ ಬಂದು ಬೋಡಾಪುರ ಮಹಾರಾಜರವರ ಅರಮನೆಯಲ್ಲಿ ತಂಗಿದ್ದರು. ದುಃಖವಾರ್ತೆಯನ್ನು ಕೇಳಿದ ಕೂಡಲೇ ಮೈಸರಾಯರು ತಮ್ಮ ಅನುತಾಪವನ್ನು ಶ್ರೀ ಜಯಚಾಮರಾಜ ಒಡೆಯರಿಗೂ ದಿವಾನರಿಗೂ ಕಳುಹಿಸಿದರು. ಅದೇರೀತಿಯಾಗಿ ಮದರಾಸ್ ಗವರ್ನರವರಾದ ಸರ್ ಅರ್ಥರ್ ಹೋಪ್‌ರವರೂ ಅನುತಾಪಸೂಚಕ ಸಂದೇಶಗಳನ್ನು ಕಳುಹಿಸಿದ್ದಲ್ಲದೆ, ತಮ್ಮ ನಿವಾಸವಾದ ಫರ್ನ್‌ಹಿಲ್ ಬಂಗಲೆಯ ಮೇಲೆ ಬ್ರಿಟಿಷ್ ಧ್ವಜವು ದುಃಖಸೂಚಕವಾಗಿ ಅರ್ಧಾರೋಹಣ ಮಾಡಲ್ಪಟ್ಟಿತ್ತು.

**ಲಂಡನ್ನಿನಲ್ಲಿ ಲಾರ್ಡ್ ಸ್ಯಾಮುಯೆಲ್‌ರವರ ಭಾಷಣ.**—ಆಗಿದ ಮಹಾಸ್ಥಾಪಯಿತರ ಆತ್ಮಕ್ಕೆ ಶಾಂತಿಯನ್ನೀಯುವಂತೆ ಭಗವಂತನಿಗೆ ಪ್ರಾರ್ಥನೆಯನ್ನು ಸಲ್ಲಿಸಲು ಲಂಡನ್ ನಗರದಲ್ಲಿ ಸೇರಿದ್ದ ಕ್ರೈಸ್ತ ಗೋಷ್ಠಿಯಲ್ಲಿ ಲಾರ್ಡ್ ಸ್ಯಾಮುಯೆಲ್‌ರವರು ಅವರ ವಿಷಯವಾಗಿ ಮಾತನಾಡುತ್ತ ಅವರನ್ನು ಅಲೌಕಿಕಚಕ್ರವರ್ತಿಗೆ ಹೋಲಿಸಿರುವರು. ಶ್ರೇಷ್ಠಪಕ್ಷದ ರಾಜನೀತಿಕೋವಿದರಾದ ಆ ಮಹಾಶಯರು ದಿವಾಣ್ ಸರ್ ಏಬಿಬಾರವರಿಗೆ ಬರೆದಿರುವ ಪತ್ರದಲ್ಲಿ, "ತಮ್ಮ ಪ್ರಭುವಿನಿಂದ ತಮಗೆ ದೊರೆತ ಅವಕಾಶಗಳನ್ನು ಅವರಷ್ಟು ಮಟ್ಟಿಗೆ ಏಕೀಕರಿಂದಲೇ ಆಗಲಿ ಅಥವಾ ಅವರಷ್ಟು ಮಟ್ಟಿಗೆ ಚೆನ್ನಾಗಿಯೇ ಆಗಲಿ ಉಪಯೋಗಿಸಿಕೊಂಡ ಅಥವಾ ಅವರಷ್ಟು ಮಟ್ಟಿಗೆ ಅಷ್ಟು ಅಧಿಕಸಂಖ್ಯೆಯ ಪ್ರಜಾವರ್ಗಕ್ಕೆ ಅಷ್ಟು ಮಹತ್ತ್ವವಾದ ಪ್ರಯೋಜನಗಳನ್ನುಂಟುಮಾಡಿದ ಪ್ರಭುಗಳು ನಮ್ಮ ಕಾಲದಲ್ಲಾಗಲಿ ಅಥವಾ ಇತಿಹಾಸಪ್ರಸಿದ್ಧವಾದ ಹಿಂದಿನ ಕಾಲದಲ್ಲಾಗಲಿ ತೀರ ಬಹಳ" ಎಂದು ಶ್ಲಾಘಿಸಿದ್ದಾರೆ.

**ಬ್ರಿಟಿಷ್ ರೆಸಿಡೆಂಟರಾದ ಆನರಬಲ್ ಲೆಫ್ಟೆನೆಂಟ್ ಕರ್ನಲ್ ಜೆ. ಎಚ್. ಗಾರ್ಡನ್,** ಸಿ.ಐ.ಇ., ಡಿ.ಎಸ್.ಒ., ಎಂ.ಸಿ. ರವರು ಅಗಸ್ಟ್ ೨

ನನ್ನು ತಾರೀಪಿನ ದಿನ ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ನಿನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾಡಿದ ಭಾಷಣ—

ಶ್ರೀಮನ್ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರವರ ನಿಧನದಿಂದ ಮೈಸೂರು ಸಂಸ್ಥಾನವೇ ದುಃಖಸಾಗರದಲ್ಲಿ ಮುಳುಗಿದೆ. ಮಹಾಸ್ವಾಮಿಯವರನ್ನು ನೀವೆಲ್ಲರೂ ಬಲ್ಲಿರಿ. ಈ ಮಹನೀಯರ ಜೀವನಚರಿತ್ರೆಯನ್ನು ಈ ದಿನ ನಿಮಗೆ ತಿಳಿಸಬೇಕಾದ ಅವಶ್ಯಕತೆಯೇ ಇಲ್ಲ. ಈ ಮಹನೀಯರಲ್ಲಿ ನಮಗಿರುವ ಗೌರವವನ್ನು ಸೂಚಿಸಿ, ಅವರ ನಿಧನದಿಂದ ನಮಗುಂಟಾಗಿರುವ ವ್ಯಸನವನ್ನು ಪ್ರದರ್ಶಿಸಲು ನೀವೆಲ್ಲರೂ ಈ ಅವಕಾಶವನ್ನು ಒದಗಿಸಿಕೊಂಡುದು ನನಗೆ ಸಂತೋಷವನ್ನುಂಟುಮಾಡಿದೆ. ಮಹಾಸ್ವಾಮಿಯವರ ನಿಧನದಿಂದ ಮೈಸೂರಿನ ಪ್ರಜೆಗಳು, ಪ್ರಜೆಗಳ ಹಿತವೇ ತಮ್ಮ ಹಿತವೆಂದು ಭಾವಿಸಿ ನಿರಂತರವೂ ಪ್ರಜೆಗಳ ಪುರೋಭಿವೃದ್ಧಿಗಾಗಿಯೇ ಶ್ರಮಿಸುತ್ತಿದ್ದ ಪ್ರಭುಗಳವರನ್ನು ಕಳೆದುಕೊಂಡಿರುತ್ತಾರೆ. ಈ ಮಹನೀಯರು ಹಾಕಿಕೊಟ್ಟ ಪೆಬ್ಬಾಟ್ಟೆಯು ಇನ್ನೂ ಅನೇಕ ತಲೆಮಾರುಗಳ ವರೆಗೂ, ಎಲ್ಲರಿಗೂ ಸ್ಫೂರ್ತಿದಾಯಕವಾಗಿರುತ್ತದೆಂಬುದರಲ್ಲಿ ಸಂದೇಹವಿಲ್ಲ.

ಮಹಾಸ್ವಾಮಿಯವರ ಆಳಿಕೆಯಲ್ಲಿ ಮೈಸೂರು ಸರ್ವತೋಮುಖವಾದ ಪ್ರಗತಿಯನ್ನು ಪಡೆದಿದೆ. ಯಾವ ಪ್ರಗತಿಪರ ಯೋಜನೆಯಾಗಲಿ ಅದು ಮೈಸೂರಿನಲ್ಲಿ ಮೊದಲು ಆಚರಣೆಗೆ ಬರುತ್ತಿದೆ. ವ್ಯವಸಾಯ ವಿಷಯವನ್ನು ತೆಗೆದುಕೊಳ್ಳಿರಿ! ಕೈಗಾರಿಕೆಯನ್ನು ತೆಗೆದುಕೊಳ್ಳಿರಿ! ವೈದ್ಯ ಸಹಾಯವನ್ನು ತೆಗೆದುಕೊಳ್ಳಿರಿ! ಯಾವ ಬಾಬನ್ನು ಬೇಕಾದರೂ ಗಮನಿಸಿರಿ, ಮೈಸೂರು ಅವಿಚ್ಛಿನ್ನವಾಗಿ ಮುಂದುವರಿಯುತ್ತಿದೆ. ಅಲ್ಲದೆ ರಾಜ್ಯದ ಆಡಳಿತ ವಿಷಯದಲ್ಲಿ, ಸಾಧ್ಯವಾದಷ್ಟುಮಟ್ಟಿಗೆ ಪ್ರಜೆಗಳು ಸರ್ಕಾರದವರೊಡನೆ ಸಹಕರಿಸಿ ಕೆಲಸಮಾಡುತ್ತಿದ್ದಾರೆ. ಮಹಾಸ್ವಾಮಿಯವರ ರಾಜ್ಯಭಾರವು ಎಷ್ಟು ಯಶಸ್ವಿಯಾಗಿದ್ದಿತೆಂಬುದನ್ನು ಅವರ ಪ್ರಜೆಗಳೆಲ್ಲರೂ ಅವರಲ್ಲಿಟ್ಟಿರುವ ಅಸಾಧಾರಣ ಪ್ರೀತಿವಿಶ್ವಾಸಗಳಿಂದಲೇ ತಿಳಿಯಬಹುದಾಗಿದೆ. ಮಹಾಸ್ವಾಮಿಯವರ ನಡೆನುಡಿಗಳು ಚಿತ್ತಾಕರ್ಷಕವಾದುವು. ಅವರ ಜೀವನವು ಬಹಳ ಸಾತ್ವಿಕವೂ ಸರಳವೂ ಆಗಿದ್ದು ಸರ್ವರಿಗೂ ಆದರ್ಶವಾಗಿದ್ದುವು.

ಮಹಾಸ್ವಾಮಿಯವರ ನಿಧನದಿಂದ ಭಾರತದ ನರೇಂದ್ರ ಮಂಡಲಿಗಾಗಿರುವ ನಷ್ಟವು ಅಷ್ಟಿಷ್ಟಲ್ಲ. ಚಕ್ರವರ್ತಿಗಳಿಂದ ಹಿಡಿದು, ಹಲವು ರಾಜರುಗಳೂ ಮತ್ತು ಸ್ವಲ್ಪಂತದ ಎಲ್ಲಾ ಭಾಗಗಳಿಂದ ಸಾರ್ವಜನಿಕ ಮುಖಂಡರುಗಳೂ ತಮ್ಮ ತಮ್ಮ ಅನುತಾಪವನ್ನು ಸೂಚಿಸಿರುವುದನ್ನು ನೋಡಿದರೆ ಮಹಾಸ್ವಾಮಿಯವರ ಕೀರ್ತಿಯು ಎಂತಹದೆಂಬುದು ನಮಗೆ ವ್ಯಕ್ತವಾಗುವುದು.

**ರೈಟ್ ಆನರಬಲ್ ವಿ. ಎಸ್. ಶ್ರೀನಿವಾಸಶಾಸ್ತ್ರಿಗಳು.**— ೧೯೨೦ನೆಯ ಇಸವಿ ಆಗಸ್ಟ್ ೪ನೆಯ ತಾರೀಖಿನ ಸಾಯಂಕಾಲ ಮದರಾಸಿನ ಆಕಾಶವಾಣಿಯ ಮೂಲಕ ಮಾಡಿದ ಭಾಷಣದ ಸಾರಾಂಶ:

ಶ್ರೀಮನ್ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಸ್ವಾಮಿಯವರ ನಿಧನದಿಂದ ಭಾರತೀಯ ನರೇಂದ್ರಮಂಡಲಿಗೂ ಸಮಗ್ರಭಾರತಕ್ಕೂ ಅಪರಿಹಾರ್ಯವಾದ ನಷ್ಟವುಂಟಾಗಿದೆ. ಮಹಾಸ್ವಾಮಿಯವರ ಆಕೃತಿಯು ಭವ್ಯವಾದುದು. ಸುಂದರವಾದ ಸರಿಗೆಯ ರುಮಾಲೊಂದನ್ನು ಧರಿಸಿ ಅವರು ಯಾವಾಗಲೂ ತಮ್ಮ ಆಕಾರಕ್ಕಿಂತ ಸ್ವಲ್ಪ ಎತ್ತರವಾಗಿಯೇ ಕಾಣುತ್ತಿದ್ದರು. ರುಮಾಲಿನ ಸರಿಗೆಯು ತನ್ನ ಪ್ರಾಶಸ್ತ್ಯವನ್ನು ಸ್ವಲ್ಪವೂ ಎದ್ದು ತೋರಿಸದೆ ಮುಖಕ್ಕೆ ಬಹಳ ಮುದ್ದಾಗಿ ಹೊಂದಿಕೊಂಡಿರುತ್ತಿದ್ದಿತು. ಮಹಾಸ್ವಾಮಿಯವರ ನಡೆ ನುಡಿಗಳು ಅತ್ಯಂತ ಗಾಂಭೀರ್ಯದಿಂದ ಕೂಡಿದವುಗಳಾಗಿದ್ದರೂ ಆ ನಡತೆಯಲ್ಲಿ ಸ್ವಲ್ಪವೂ ಅಟ್ಟಹಾಸವಿರಲಿಲ್ಲ. ಅವರ ನೋಟವು ಹೇಗೋ ಅವರ ಮನಸ್ಸಿನ ರೀತಿಯೂ ಹಾಗೆಯೇ. ತಾವು ಎಷ್ಟು ದೊಡ್ಡವರಾಗಿದ್ದರೂ, ಎಷ್ಟು ದೊಡ್ಡ ಪಾರ್ಶ್ವದಲ್ಲಿ ನಡೆಯುತ್ತಿದ್ದರೂ ಇತರರಿಗೆ ತಾವು ದೊಡ್ಡವರೆಂದು ತೋರಿಸಿಕೊಳ್ಳಬೇಕೆಂಬ ಚಿತ್ತವೃತ್ತಿಯ ಸುಳಿವೇ ಅವರಲ್ಲಿರಲಿಲ್ಲ. ತಮ್ಮ ಕಾಲದಲ್ಲಿ ಒಹುಭಾಗವನ್ನು ಭಗವದ್ಧ್ಯಾನದಲ್ಲಿಯೂ ಪಾರಮಾರ್ಥಿಕ ವಿಷಯಗಳ ಚಿಂತನೆಯಲ್ಲಿಯೂ ಕಳೆಯುತ್ತಿದ್ದರು. ಮಹಾ ವಿದ್ವಾಂಸರು ಮತ್ತು ಪಂಡಿತರೊಡನೆ ಉದಾತ್ತವಾದ ವಿಷಯಗಳಲ್ಲಿ ಸಂಭಾಷಿಸುವುದೆಂದರೆ ಮಹಾಸ್ವಾಮಿಯವರಿಗೆ ಇಷ್ಟ. ಸಂಗೀತಕ್ಕೆ ಮತ್ತು ಇತರ ಕಲೆಗಳಿಗೆ ಮಹಾಸ್ವಾಮಿಯವರಂತಹ ಪೋಷಕರು ಸಿಕ್ಕುವುದು ವಿರಳ. ಭಾರತದಲ್ಲಿ ಮಹಾಸ್ವಾಮಿಯವರ ಕೃಪೆಯನ್ನು ಪಡೆಯದ,

ಮಹಾಸ್ವಾಮಿಯವರ ಉತ್ಕೃಷ್ಟತೆಯನ್ನು ಪಡೆದು ಸಂತುಷ್ಟರಾಗದ, ಕಲಾ ವಿದರಾರೂ ಇಲ್ಲವೆಂದೇ ಹೇಳಬಹುದು. ಅವರ ಕಲಾಪರಿಪೂರ್ಣ ಚಿತ್ತ ವೃತ್ತಿಗೆ ಮೈಸೂರು ನಗರದಲ್ಲಿರುವ ಹಲವು ಭವ್ಯವಾದ ಕಟ್ಟಡಗಳೇ ನಾಕ್ಷಿಗಳಾಗಿವೆ. ಚಾಮುಂಡಿಬೆಟ್ಟದ ಮೇಲಿನ ವಿದ್ಯುದ್ದೀಪಮಾಲೆ, ಅಲ್ಲಿನ ಅರಮನೆಯ ಕಟ್ಟಡ, ಈ ಎರಡು ಉದಾಹರಣೆಗಳನ್ನು ಮಹಾಸ್ವಾಮಿಯವರ ಕಲೋಪಾಸನೆಗೆ ಸೂಚಿಸಿದರೇ ಸಾಕಾಗಿದೆ. ಇತರ ವಿಷಯದಲ್ಲಿ ಎಲ್ಲಿಯೂ ಇಲ್ಲದ ಸಹಾನುಭೂತಿ, ಸಹನೆ, ಇತರರ ಅಭಿಪ್ರಾಯದ ವಿಷಯದಲ್ಲಿ ಅಸದೃಶವಾದ ಸಹಿಷ್ಣುತೆ, ಎಲ್ಲಕ್ಕೂ ಮಿಗಿಲಾಗಿ, ತಮ್ಮ ಪ್ರಜೆಗಳ ಪುರೋಭಿವೃದ್ಧಿಯ ವಿಷಯದಲ್ಲಿ ಅತ್ಯಂತ ತೀವ್ರವಾದ ಆಸಕ್ತಿ— ಇವೇ ಮೊದಲಾದ ಗುಣಗಳು ಮಹಾಸ್ವಾಮಿಯವರಲ್ಲಿ ದೃಢವಾಗಿ ನೆಲಸಿದ್ದುವು. ಅಧುನಿಕ ರಾಜನೀತಿಶಾಸ್ತ್ರದ ದೃಷ್ಟಿಯಿಂದ ನೋಡಿದರೂ ಮಹಾಸ್ವಾಮಿಯವರು ಯಾವ ವಿಷಯದಲ್ಲಿಯೂ ಹಿಂದೆ ಸಿಲ್ಲುವಂತಿಲ್ಲ. ಅವರ ಪ್ರಭಾವಯುತವಾದ ರಾಜ್ಯಭಾರದಲ್ಲಿ ರಾಜಭಕ್ತಿಯುತರಾದ ಮತ್ತು ದಕ್ಷರಾದ ದಿವಾನರವರ ಸೇವೆಯು ಅವರಿಗೆ ದೊರೆತಿದ್ದಿತು. ಮಹಾ ಸ್ವಾಮಿಯವರು ತಮ್ಮ ಪ್ರಧಾನಮಂತ್ರಿಗಳಿಗೆ ಅವರವರ ಧ್ಯೇಯಗಳಿಗನು ಸಾರವಾಗಿ ಪ್ರಜೆಗಳ ಪುರೋಭಿವೃದ್ಧಿಯನ್ನೂ ಸರ್ವತೋಮುಖವಾದ ಪ್ರಗತಿಯನ್ನೂ ಸಾಧಿಸಲು ಸಂಪೂರ್ಣವಾದ ಅವಕಾಶವನ್ನು ಕೊಡುತ್ತಿದ್ದರು. ಆಡಳಿತದ ಪರಿಶುದ್ಧತೆ, ಗ್ರಾಮಪುನರುಜ್ಜೀವನ ಮತ್ತು ಕೈಗಾರಿಕೆಗಳ ಪ್ರಗತಿ, ಈ ವಿಷಯಗಳೆಲ್ಲ ಇಂದು ಭಾರತದಲ್ಲಿ ಮೈಸೂರಿಗೆ ಗೌರವ ಸ್ಥಾನವನ್ನು ಲಭಿಸಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ನಾನು ಭಾರತದಲ್ಲೆಲ್ಲ ತಕ್ಕಮಟ್ಟಿಗೆ ಸಂಚಾರಮಾಡಿದ್ದೇನೆ. ಭಾರತದ ಚರಿತ್ರೆಯನ್ನೂ ಓದಿರುತ್ತೇನೆ. ಆದುದರಿಂದ ನನ್ನ ಸ್ವಂತ ಅನುಭವದಿಂದ ಕಂಡು ಒಂದು ಅಂಶವನ್ನು ತಿಳಿಸುವುದಾದರೆ, ಮೈಸೂರಿನಲ್ಲಿ ರಾಜರ ನಿರಂಕುಶ ಪ್ರಭುತ್ವವಿಲ್ಲವೆಂಬ ಸುಳಿವೂ ಕೂಡ ಕಂಡುಬರುವುದಿಲ್ಲ. ಆಡಳಿತವೆಲ್ಲವೂ ನ್ಯಾಯ ಮತ್ತು ಶಿಸ್ತಿಗೊಳಪಟ್ಟಿದೆ. . . .

ಮೈಸೂರಿನ ರಾಜಕೀಯ ಶಿಸ್ತಿನಲ್ಲಿ ಯಾವ ಲೋಪದೋಷವೂ ಇಲ್ಲವೆಂದೂ ಅಲ್ಲಿಯ ರಾಜ್ಯಾಂಗ ವ್ಯವಸ್ಥೆಯಲ್ಲಿ ಯಾವ ಬದಲಾವಣೆಗೂ ಅವಶ್ಯಕತೆಯೇ ಇಲ್ಲವೆಂದೂ ನಾನು ಸೂಚಿಸುತ್ತಿಲ್ಲ. ಯಾವ ನ್ಯೂನಾತಿ

ರಿಕ್ತವೂ ಇಲ್ಲದಿರುವಂಥ ಆದರ್ಶರಾಜ್ಯಭಾರವು ಪೃಥ್ವಿಯಲ್ಲಿ ಎಲ್ಲಿಯೂ ಇಲ್ಲ. ಆದರೆ ಸಂಸ್ಥಾನದ ವಿಸ್ತೀರ್ಣ, ಜನಸಂಖ್ಯೆ, ಪೂರ್ವದ ಚರಿತ್ರೆ, ಇತರ ಸನ್ನಿವೇಶಗಳು—ಇವುಗಳನ್ನೆಲ್ಲ ದೃಷ್ಟಿಯಲ್ಲಿಟ್ಟು ಪರ್ಯಾಲೋಚಿಸುವುದಾದರೆ, ವ್ಯಕ್ತಿಸ್ವಾತಂತ್ರ್ಯದ ವಿಷಯದಲ್ಲಿಯೂ, ಪ್ರಜೆಗಳಿಗಿರುವ ರಾಜಕೀಯ ಹಕ್ಕುಬಾಧ್ಯತೆಗಳ ವಿಷಯದಲ್ಲಿಯೂ, ಮೈಸೂರಿನಷ್ಟು ಮುಂದುವರಿದಿರುವ ಸಂಸ್ಥಾನವು ಭಾರತದಲ್ಲಿ ಇನ್ನಾವುದೂ ಇಲ್ಲವೆಂದು ಧಾರಾಳವಾಗಿ ಹೇಳಬಹುದು. ಸಾಮಾನ್ಯ ಪ್ರಜೆಗಳ ಸ್ವಾತಂತ್ರ್ಯಕ್ಕೆ ಧಕ್ಕೆ ತರುವಂತಹ ಅಜ್ಞೆಗಳನ್ನು ಮೈಸೂರು ಅಡಳಿತದಲ್ಲಿ ಕಾಣುವುದು ವಿರಳ. ಈ ಪರಿಸ್ಥಿತಿಗೆ ಮಹಾಸ್ವಾಮಿಯವರ ಏಕೋಕಯುಕ್ತವಾದ ರಾಜ್ಯಭಾರವೇ ಕಾರಣವಾಗಿದೆ.

**ಸರ್ ಎಂ. ವಿಶ್ವೇಶ್ವರಯ್ಯನವರು.**—೧೯೪೦ನೆಯ ಇಸವಿ ಆಗಸ್ಟು ೧೬ನೆಯ ತಾರೀಖಿನ ದಿನ ಮುಂಬಯಿಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾಡಿದ ಭಾಷಣ :—

"ಜಗತ್ತಿಗೆ ದುಃಖಮಯವಾಗಿರುವ ಈ ಕಾಲದಲ್ಲಿ ಅತ್ಯಂತ ದುಃಖಕಾರಿಯಾದ ಒಂದು ಸಂಘಟನೆಯು ನಮ್ಮನ್ನು ಈ ದಿನ ಇಲ್ಲಿಗೆ ಒರತಮಾಡಿದೆ. ಮೈಸೂರು ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜ ಒಡೆಯರವರ ನಿಧನದಿಂದ ಈ ನಗರನಿವಾಸಿಗಳಿಗೂ ಈ ಪ್ರಾಂತದ ಪ್ರಜೆಗಳಿಗೂ ಏಕೆ? ಇಡೀ ಭಾರತದ ಪ್ರಜೆಗಳಿಗೂ ಎಂತಹ ಅಪಾರವಾದ ನಷ್ಟವುಂಟಾಗಿದೆ ಎಂಬುದನ್ನು ಸೂಚಿಸಲು ನಾವು ಇಲ್ಲಿ ಸೇರಿರುತ್ತೇವೆ. ಮಹಾಸ್ವಾಮಿಯವರಿಗೆ ಇನ್ನೂ ೫೬ ವರ್ಷಗಳು ಮಾತ್ರ ತಲೆದಿದ್ದುವು; ೩೮ ವರ್ಷಗಳ ಕಾಲ ರಾಜ್ಯಭಾರ ಮಾಡಿದರು.

ಮಹಾಸ್ವಾಮಿಯವರು ಸ್ಫುರದ್ರೂಪಿಗಳು; ಮಹಾ ಧರ್ಮಾತ್ಮರು: ರಾಜರಿಗೆ ತಕ್ಕ ಸಮಸ್ತ ಸದ್ಗುಣಗಳೂ ಇವರಲ್ಲಿ ನೆಲೆಸಿದ್ದುವು. ತಮ್ಮ ಆಳಿಕೆಯಲ್ಲಿ ಪ್ರಜೆಗಳ ಹಿತವೇ ತಮ್ಮ ಹಿತವೆಂದು ಭಾವಿಸಿ ಪ್ರಜೆಗಳ ಹಿತಕ್ಕಾಗಿ ತಮ್ಮ ಜೀವನವನ್ನು ಧಾರೆಯೆರೆದಿದ್ದರು. ಅಲ್ಲದೆ, ಮೈಸೂರಿನಲ್ಲಿ ಸ್ವಲ್ಪಕಾಲದಲ್ಲಿಯೇ ಹಲವು ಉಪಯುಕ್ತವಾದ ಏರ್ಪಾಡುಗಳನ್ನು ಜಾರಿಗೆ ತಂದು ಮೈಸೂರನ್ನು ಮಾದರಿ ಸಂಸ್ಥಾನವನ್ನಾಗಿ ಮಾಡಿದರು.

ಮಹಾಸ್ವಾಮಿಯವರಲ್ಲಿ ಅಪರಿಮಿತ ಪ್ರೀತಿ ವಿಶ್ವಾಸಗಳನ್ನಿಟ್ಟಿದ್ದ ಪ್ರಜೆಗಳು ಇಂದು ಕಣ್ಣೀರಿಡುತ್ತಿದ್ದಾರೆ. ಅಲ್ಲದೆ, ಮಹಾಸ್ವಾಮಿಯವರ

ನಿಧನಕ್ಕಾಗಿ ದುಃಖಿಸುವ ಬಲವು ಮಿತ್ರರೂ ಇರುತ್ತಾರೆ. ಮತ್ತು ಇಂಗ್ಲೆಂಡಿನಲ್ಲಿಯೂ ಹಲವು ಮಂದಿ ಇದಕ್ಕಾಗಿ ಬಹಳವಾಗಿ ದುಃಖ ಪಡುತ್ತಿದ್ದಾರೆ. ಮಹಾಸ್ವಾಮಿಯವರ ಕೀರ್ತಿಯು ಭರತಖಂಡದಲ್ಲಿ ಮಾತ್ರವೇ ಅಲ್ಲ, ಇಂಗ್ಲೆಂಡಿನಲ್ಲಿ ಮಾತ್ರವೇ ಅಲ್ಲ, ಪ್ರಪಂಚದ ಮೂಲೆ ಮೂಲೆಗಳಲ್ಲಿಯೂ ವ್ಯಾಪಿಸಿದ್ದಿತು.

ರಾಜ್ಯಾಡಳಿತದ ವಿಷಯದಲ್ಲಿ ಮಹಾಸ್ವಾಮಿಯವರು ಹಳೆಯ ಸಂಪ್ರದಾಯಗಳನ್ನು ಬಿಡದೆ, ಹೊಸ ಸಂಪ್ರದಾಯಗಳನ್ನು ತಿರಸ್ಕರಿಸದೆ, ಅವೆರಡಕ್ಕೂ ಉತ್ತಮವಾದ ಸಾಮರಸ್ಯವನ್ನು ಕಲ್ಪಿಸಿ ಅದರಂತೆಯೇ ನಡೆಯುತ್ತಿದ್ದರು. ಕಾಲಸ್ಥಿತಿಗನುಸಾರವಾಗಿ ಆಧುನಿಕ ಪರಿಸ್ಥಿತಿಗಳನ್ನು ಗಮನಿಸಿ ಅದರಂತೆಯೇ ಸೂಕ್ತವಾದ ಹಲವು ಏರ್ಪಾಡುಗಳನ್ನು ಆಚರಣೆಗೆ ತಂದಿರುತ್ತಾರೆ. ಬ್ರಿಟಿಷ್ ಸರ್ಕಾರದಿಂದ ಮೈಸೂರು ರಾಜ್ಯವು ಮಹಾಸ್ವಾಮಿಯವರ ಮುನೆತನದವರಿಗೆ ಬಂದಲಾಗಾಯಿತು ಇಲ್ಲಿಯವರೆಗೆ ಅನೇಕ ರಾಜಕೀಯ ಸುಧಾರಣೆಗಳು ಜಾರಿಗೆ ಬಂದಿವೆ. ಮಹಾಸ್ವಾಮಿಯವರ ಆಳಿಕೆಯನ್ನು ಸ್ವರ್ಣಾಕ್ಷರಗಳಲ್ಲಿ ಬರೆದಿಡಬೇಕು. ಅದು ಅಂತಹ ಪ್ರಭಾವಯುತವಾದ ರಾಜ್ಯಭಾರ.

**ರೆವರೆಂಡ್ ಸಾಡೇಘಾಹೇಬರು.**—ಆಗಸ್ಟ್ ೭ನೆಯ ತಾರೀಖಿನ ದಿನ ಮೈಸೂರಿನಲ್ಲಿ ಸೇರಿದ ಸಂತಾಪಸೂಚಕ ಸಭೆಯಲ್ಲಿ ಮಾಡಿದ ಭಾಷಣ :—

ಮಹಾಸ್ವಾಮಿಯವರ ನಿಧನದಿಂದ ಮೈಸೂರು ಸಂಸ್ಥಾನದಲ್ಲಿರುವ ಪ್ರತಿಯೊಬ್ಬ ಪ್ರಜೆಯ ಹೃದಯವನ್ನೂ ಎಂತಹ ಅಪಾರ ದುಃಖವು ಆವರಿಸಿದೆ ಎಂಬುದನ್ನು ಸೂಚಿಸಲು ನಾವಿಂದು ಸಭೆ ಸೇರಿರುತ್ತೇವೆ. ನನಗೆ ಮಹಾರಾಜ ಶ್ರೀಕೃಷ್ಣರಾಜ ಒಡೆಯರವರ ನಿಧನದಿಂದುಂಟಾಗಿರುವ ದುಃಖವನ್ನು ಸೂಚಿಸಲಕಾಗಲ್ಲ. ಈ ಸಂದರ್ಭದಲ್ಲಿ ಮಾತನಾಡಲು ಬಾಯಿಯೇ ಬಾರದಂತಾಗಿದೆ. ದುಃಖಪೂರಿತವಾದ ಹೃದಯದಿಂದ ಬಂದ ಒಂದೆರಡು ಮಾತುಗಳನ್ನು ಮಾತ್ರ ನಿಮ್ಮ ಮುಂದಿಡುತ್ತೇನೆ.

ಮಹಾಸ್ವಾಮಿಯವರು ಬಹಳ ಸಂಪ್ರದಾಯಬದ್ಧರಾದ ಮತ್ತು ದೈವ ಭಕ್ತರಾದ ಹಿಂದೂಗಳು ಅಲ್ಲದೆ, ಇತರ ಮತತತ್ವಗಳಲ್ಲಿರುವ ವೈಶಿಷ್ಟ್ಯಗಳನ್ನೂ ಅರಿತು ಅವುಗಳನ್ನೂ ಗೌರವಿಸಿ ತಮ್ಮ ಪ್ರಜೆಗಳಲ್ಲಿ ಸರ್ವರನ್ನೂ ಪ್ರೀತಿಯಿಂದ ನೋಡುತ್ತಿದ್ದರು. ಹಿಂದೂಗಳಾಗಲೀ, ಮುಸಲ್ಮಾನರಾ

ಗಲೀ, ಕ್ರೈಷ್ಟಿಯನರಾಗಲೀ, ಸರ್ವರೂ ಅವರಿಗೆ ತಮ್ಮ ಪ್ರೀತಿಪಾತ್ರರಾದ ಪ್ರಜೆಗಳೇ ಆಗಿದ್ದರು. ಮಹಾಸ್ವಾಮಿಯವರಿಗೆ ತಮ್ಮ ಪ್ರಜೆಗಳಲ್ಲಿದ್ದ ಪ್ರೀತಿಯನ್ನು ವರ್ಣಿಸಲಳವಲ್ಲ.

ಮಹಾಸ್ವಾಮಿಯವರ ಔದಾರ್ಯವು ಎಲ್ಲರಿಗೂ ತಿಳಿದಿರಲಾರದು. ಅವರು ಮಾಡಿರುವ ದಾನಧರ್ಮಗಳ ಪಟ್ಟಿಯೊಂದನ್ನು ತಯಾರಿಸಿದಲ್ಲಿ ಅದನ್ನು ನೋಡಿ ಎಂಥವರಿಗಾದರೂ ಆಶ್ಚರ್ಯವಾಗದೆ ಇರದು. ಅವರ ಔದಾರ್ಯಕ್ಕೆ ಮಿತಿಯೇ ಇರಲಿಲ್ಲ. ಎಲ್ಲರೂ ಸುಖವಾಗಿರುವುದೇ ತಮ್ಮ ಸುಖವೆಂಬುದು ಅವರ ಮತವಾಗಿದ್ದಿತು. ನವರಾತ್ರಿ ಮತ್ತು ಪರ್ವಾಂತಿಗಳ ಕಾಲದಲ್ಲಿ ಭರತಖಂಡದ ನಾನಾ ಭಾಗಗಳಿಂದ ಬರುತ್ತಿದ್ದ ಮಹಸೀಯರು ಮಹಾಸ್ವಾಮಿಯವರ ಔದಾರ್ಯವನ್ನು ಚೆನ್ನಾಗಿ ವರ್ಣಿಸಬಲ್ಲರು.

ಎಲ್ಲಕ್ಕೂ ಮಿಗಿಲಾಗಿ, ಮಹಾಸ್ವಾಮಿಯವರ ದೈವಭಕ್ತಿಯು ಪರಿಪೂರ್ಣವಾಗಿತ್ತು. ಎಂತಹ ಸನ್ನಿವೇಶದಲ್ಲಿಯೇ ಆಗಲಿ, ಅವರ ದೈವಭಕ್ತಿಯು ಸ್ವಲ್ಪವೂ ಕದಲುತ್ತಿರಲಿಲ್ಲ. ಭಗವಂತನ ಅನುಗ್ರಹವಿಲ್ಲದೆ ಯಾವ ಜೀವವೇ ಆಗಲಿ, ಯಾವ ನಾಡೇ ಆಗಲಿ ಅಭಿವೃದ್ಧಿ ಹೊಂದಲಾರದೆಂದು ಅವರು ದೃಢವಾಗಿ ನಂಬಿ ನಿರಂತರವೂ ಜಗತ್ತಿಗೆ ಸುಖಸಂತೋಷಗಳನ್ನು ಸೀಡೆಂದು ಭಗವಂತನಲ್ಲಿ ಪ್ರಾರ್ಥಿಸುತ್ತಿದ್ದರು. ಭಗವಧ್ಯಾನವು ಇವರ ಮನಸ್ಸಿಗೆ ದಿವ್ಯ ಶಾಂತಿಯನ್ನು ಕೊಡುತ್ತಿದ್ದಿತು. ಮಹಾಸ್ವಾಮಿಯವರ ಪ್ರಜೆಗಳಿಗೂ ಸಹ ಈ ವಿಷಯವು ಚೆನ್ನಾಗಿ ಗೊತ್ತು. ಅವರು ತಮ್ಮ ಪ್ರಭುಗಳವರನ್ನು ಮಹರ್ಷಿಗಳೆಂದೇ ಭಾವಿಸಿದ್ದರು.

ಇತರರ ಕಷ್ಟಸುಖಗಳನ್ನು ಮಹಾಸ್ವಾಮಿಯವರು ಎಷ್ಟರ ಮಟ್ಟಿಗೆ ಗಮನಿಸುತ್ತಿದ್ದರೆಂಬುದಕ್ಕೆ ನಾನು ಒಂದೇ ಒಂದು ವಿಷಯವನ್ನು ತಿಳಿಸುತ್ತೇನೆ. ಕೆಲವು ಕಾಲದ ಹಿಂದೆ, ಮಹಾಸ್ವಾಮಿಯವರಿಗೆ ಸ್ವಲ್ಪ ದಿನಗಳ ವರೆಗೂ ದೇಹಾಲಸ್ಯವಾಗಿದ್ದಿತು. ಅವರು ಗುಣಮುಖರಾದ ಸ್ವಲ್ಪ ಕಾಲದಲ್ಲಿಯೇ ನಾನು ಅವರನ್ನು ಸಂದರ್ಶಿಸಿ ಸಂಭಾಷಿಸುತ್ತಿದ್ದಾಗ, "ಜೀವಿತದ ಕಡೆಯ ಅವಧಿಯಲ್ಲಿ, ಬಹುಕಾಲ ನರಳುವಂತಹ ಸ್ಥಿತಿಯು ಮಾತ್ರ ನಮಗೆ ಬಾರದಿರಲಿ. ಏಕೆಂದರೆ ನಮ್ಮ ಸುತ್ತಮುತ್ತ ಇರುವವರಿಗೆ ನಮ್ಮಿಂದ ಬಹು ತೊಂದರೆಯಾಗುತ್ತದೆ. ಇತರರಿಗೆ ನಮ್ಮಿಂದ ತೊಂದರೆಯಾಗದಂತೆ ಅನುಗ್ರಹಿಸಲೆಂದು ನಾವು ಭಗವಂತನನ್ನು ಪ್ರಾರ್ಥಿಸುತ್ತೇವೆ"

ಎಂದು ಸೂಚಿಸಿದನು. ಇತರರು ತಮ್ಮ ಸಲುವಾಗಿ ಕಷ್ಟಪಡುವುದು ಮಹಾ ಸ್ವಾಮಿಯವರಿಗೆ ಸ್ವಲ್ಪವೂ ಸಹಿಸುತ್ತಿರಲಿಲ್ಲ. ದಯಾಳುವಾದ ಭಗವಂತನು ಮಹಾಸ್ವಾಮಿಯವರ ಈ ಪ್ರಾರ್ಥನೆಯನ್ನು ಲಾಲಿಸಿ ಅನುಗ್ರಹಿಸಿದನು. ಇಂದು ಮಹಾಸ್ವಾಮಿಯವರ ಸಿಧನಕ್ಕಾಗಿ ನಾವೆಲ್ಲರೂ ಕಣ್ಣೀರು ಸುರಿಸುತ್ತಿದ್ದೇವೆ. ಆ ಗಂಭೀರವಾದ ಮುಖವು ನಮ್ಮ ಕಣ್ಣಿಗೆ ಮರೆಯಾಯಿತು. ಆದರೆ ಮಹಾಸ್ವಾಮಿಯವರು ಮಾತ್ರ ನಮ್ಮೆಲ್ಲರ ಹೃದಯದಲ್ಲಿ ಎಂದೆಂದಿಗೂ ಸಿಲ್ಲುವರು. ಅವರು ಅಮರರು. ಅವರನ್ನು ನಾವೆಂದಿಗೂ ಮರೆಯಲಾರೆವು.

**ಲಾರ್ಡ್ ಲೋಥಿಯರ್ಸ್‌ರು.**—ಅಂತಹ ಆದರ್ಶ ಮಹನೀಯರನ್ನು ನಾವು ನೋಡಬೇಕಾದರೆ ಇನ್ನು ಬಹಳಕಾಲ ಹಿಡಿಯುವುದು.

**ಹೈದರಾಬಾದಿನ ನವಾಬ್ ಮೊಯಿನ್ ಉದ್ದೌಲ ಬಹದ್ದೂರ್ ರವರು.**—ನಿಜಂಗತರಾದ ಶ್ರೀಮನ್ಮಹಾರಾಜರವರು ತಮ್ಮ ಪ್ರಜೆಗಳು ಮಾತ್ರವೇ ಅಲ್ಲದೆ ಭಾರತೀಯರೆಲ್ಲರ ಪ್ರೀತಿಗೌರವಗಳಿಗೂ ಪಾತ್ರರಾಗಿದ್ದರು. ಅವರ ಜೀವನವು ಸರಳ. ಅವರು ಮಹಾ ದೈವಭಕ್ತರು. ಭಾರತೀಯ ಸಾಹಿತ್ಯ ಸಂಗೀತಕಲೆಗಳಿಗೆ ಆಶ್ರಯದಾತರಾಗಿದ್ದರು. ಹಲವು ಸದ್ಗುಣಗಳಿಂದ ಶೋಭಿಸುತ್ತಿದ್ದ ಮತ್ತು ನಮ್ಮ ಪ್ರಭುಗಳ ಮತ್ತು ಸಂಸ್ಥಾನದ ಮಿತ್ರರಾಗಿದ್ದ ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್‌ರವರ ಸಿಧನಕ್ಕಾಗಿ ನಾವೆಲ್ಲರೂ ದುಃಖಿಸುತ್ತೇವೆ.

**ಕರ್ನಲ್ ಡಬ್ಲ್ಯೂ. ಎಲ್. ಕ್ರಾಫರ್ಡ್.**—ಕ್ರೂರ ವಿಧಿಯು ಅವರನ್ನು ನಮ್ಮ ಕಣ್ಣಿಗೆ ಮರೆಯಾಗುವಂತೆ ಮಾಡಿದರೂ ನಮ್ಮ ಹೃದಯದಿಂದ ಮಹಾಸ್ವಾಮಿಯವರನ್ನು ಎಂದಿಗೂ ಮರೆಮಾಡಲಾರದು. ಶ್ರೀಮನ್ಮಹಾರಾಜರವರ ಸಮಿಸೆನಪನ್ನು ದೊಡ್ಡ ಆಸ್ತಿ ಎಂಬುದಾಗಿ ನಾವೆಲ್ಲರೂ ಕಾಪಾಡಿಕೊಂಡು ಬರುವೆವು.

**ವಿಜಯನಗರದ ಮಹಾರಾಜರವರು.**—ಮೈಸೂರು ಮಹಾರಾಜರವರ ಮರಣದಿಂದ ಭಾರತವು ಆದರ್ಶ ನರಪತಿಗಳೊಬ್ಬರನ್ನು ಕಳೆದುಕೊಂಡಿದೆ. ಶ್ರೀಮನ್ಮಹಾರಾಜರನ್ನು ಮೈಸೂರು ಪ್ರಜೆಗಳು ಅರಸರೆಂದು ಮಾತ್ರವಲ್ಲ, ತಮ್ಮ ಪ್ರತ್ಯಕ್ಷದೈವವೆಂದು ಭಾವಿಸಿದ್ದರು. ಅವರಿಗಿದ್ದ ಪ್ರಜಾವಾತ್ಸಲ್ಯ ಸಾರವಿಲ್ಲದ್ದು. ಅವರ ಜೀವನವಿಧಾನವು ಅವರು

ಮಹರ್ಷಿಗಳೋ ಎಂಬಂತಿತ್ತು. ಅಂತಹ ಅರಸರು ಭಾರತವರ್ಷದಲ್ಲಿ ಇನ್ನು ಕೆಲವು ಮಂದಿ ಇದ್ದಿದ್ದರೆ ನರೇಂದ್ರವರ್ಗವು ಶಾಶ್ವತವಾಗಿ ಭುಕ್ತಿಯುತ್ತಿತ್ತೆಂದು ನನ್ನ ಭಾವನೆ.

**ಪಾಟ್ನಾ ವಿಶ್ವವಿದ್ಯಾನಿಲಯದ ಸ್ಥಾನಾಧಿಪತಿಗಳಾದ ಡಾಕ್ಟರ್ ಸಚ್ಚಿದಾನಂದ ಸಿನ್ಹರವರು.**—ಮೈಸೂರು ಸಂಸ್ಥಾನವು ಮಹಾರಾಜ ನೀತಿಜ್ಞರಾದ ಪ್ರಭುಗಳನ್ನು ಕಳೆದುಕೊಂಡಿತು. ಅವರು ಕಳೆದ ನಲವತ್ತು ವರ್ಷಗಳಿಂದಲೂ ತಮ್ಮ ಪ್ರತಿಭೆಯಿಂದ ಅತ್ಯಂತ ಸ್ವಭಾವಶಾಲಿಯಾದ ರೀತಿಯಲ್ಲಿ ರಾಜ್ಯಭಾರಮಾಡಿ ಪ್ರಜೆಗಳ ಪುರೋಭಿವೃದ್ಧಿಯನ್ನು ಸಾಧಿಸಿದರು. ಅವರ ಮರಣದಿಂದ ಭಾರತೀಯರು ಯಾರನ್ನು ತಮ್ಮ ಹೆಮ್ಮೆಯೆಂದು ಭಾವಿಸಿದ್ದರೋ ಅಂತಹ ಮಹಸ್ವೀಯರನ್ನು ಕಳೆದುಕೊಂಡಂತಾಯಿತು.

**ದಿವಾನ್ ಬಹದ್ದೂರ್ ಪಿ. ರಾಘವೇಂದ್ರರಾಯರು.**—ಶ್ರೀಮನ್ಮಹಾರಾಜರು ಬಾಲ್ಯದಿಂದಲೂ ಅಭಿನಂದನೀಯವಾದ ಪರಿಶೀಲನಾ ಶಕ್ತಿಯನ್ನೂ ಮನಸ್ಥೈರ್ಯವನ್ನೂ ಪಡೆದಿದ್ದರು. ಆಚಾರ ಶೀಲರು. ಚಿಕ್ಕಂದಿನಲ್ಲೇ ಅವರು ವಿಶಾಲಮನೋಭಾವನೆಯನ್ನು ವ್ಯಕ್ತ ಪಡಿಸಿದರು. ವಿದ್ಯಾಭ್ಯಾಸವು ನಡೆಯುತ್ತಿದ್ದಾಗ ಅವರ ತೀಕ್ಷ್ಣ ವರ್ತನೆ, ಅಧ್ಯಯನದಲ್ಲಿ ಆಸಕ್ತಿ, ಅಸಾಧಾರಣ ಬುದ್ಧಿಚತುರತೆ ನಮಗೆ ಆಶ್ಚರ್ಯವನ್ನು ಹುಟ್ಟಿಸುತ್ತಿದ್ದವು. ಇಂಗ್ಲಿಷ್, ಉರ್ದು ಮತ್ತು ಕನ್ನಡದಲ್ಲಿ ಶ್ರೀಮನ್ಮಹಾರಾಜರು ಜೆನ್ನಾಗಿ ಭಾಷಣ ಮಾಡಬಲ್ಲವರಾಗಿದ್ದರು. ಸಂಸ್ಕೃತದಲ್ಲಿಯೂ ಅವರು ವಿದ್ವಾಂಸರು. ಮರಾಠಿ, ತಮಿಳು ಮತ್ತು ಇತರ ಕೆಲವು ಭಾಷೆಗಳಲ್ಲಿ ಮಾತನಾಡಲು ಕಲಿತಿದ್ದರು. ಅವರ ಸಮ ಚಿತ್ತತ್ವ ಮತ್ತು ನ್ಯಾಯತತ್ಪರತೆ ಪ್ರಶಂಸಾರ್ಹವಾದುವು.

**ಸರ್ ಸಿ. ಪಿ. ರಾಮಸ್ವಾಮಿ ಐಯ್ಯರ್.**—ಸರ್ ಕೆ. ಶೇಷಾದ್ರಿ ಐಯ್ಯರವರಾದಿಯಾಗಿ ಸರ್ ಮಿರ್ಜಾ ಇಸ್ಮಾಯಿಲರವರೆಗೆ ಸಾಮರ್ಥ್ಯ ಶಾಲಿಗಳಾದ ಬಹುಮಂದಿ ದಿವಾನರ ಸೇವೆಯನ್ನು ಪಡೆದಿದ್ದುದು ದಿವಂಗತರಾದ ಮೈಸೂರು ಮಹಾರಾಜರ ಸುಯೋಗ. ಆದರೆ ಮಹಾರಾಜರ ಸ್ಫೂರ್ತಿದಾಯಕವಾದ ಸಮರ್ಗದರ್ಶಿತ್ವವು ಅವರಿಗಿದ್ದದ್ದರಿಂದ ಸಂಸ್ಥಾನದ ಸರ್ವತೋಮುಖವಾದ ಪ್ರಗತಿಯು ಸಾಧ್ಯವಾಯಿತು. ಭಾರತ

ನರೇಂದ್ರವರ್ಗದಲ್ಲಿ ಮೈಸೂರು ಮಹಾರಾಜರು ಮಹಿಮಾಸ್ಪದರೂನವರು. ಆದರ್ಶಪ್ರಾಯರು, ಪ್ರಜಾವತ್ಸಲರು.

**ಸರ್ ಪಿ. ಎಸ್. ಶಿವಸ್ವಾಮಿ ಐಯ್ಯರ್.**—ಆದರ್ಶ ಹಿಂದೂ ನಿರವತಿಗೆ ಬರಬೇಕಾದ ಮಹತ್ವದ ಗುಣಗಳೂ, ಸೌಜನ್ಯ ಗಾಂಭೀರ್ಯಾದಿಗಳೂ ಶ್ರೀಮನ್ಮಹಾರಾಜರವರಲ್ಲಿ ನೆಲೆಸಿದ್ದವು. ಮಹಾರಾಜರ ಸರಳತೆ, ಸದಾಚಾರ, ಪವಿತ್ರ ಜೀವನ, ಗಾಂಭೀರ್ಯ ವರ್ತನೆ, ಮಹತ್ವದ ಆದರ್ಶಗಳು ಇವು ಅವರ ವಿಷಯವಾಗಿ ಸಂಸ್ಥಾನಪ್ರಜೆಗಳೂ ಹೊರಗಿನವರೂ ಅನರಮಿತವಾದ ಭಕ್ತಿಗೌರವಗಳನ್ನುಂಟಾಗಿರುವಂತೆ ಮಾಡಿದ್ದವು. ಶ್ರೀಮನ್ಮಹಾರಾಜರವರು ಯಾವಾಗಲೂ ಸಂಸ್ಥಾನದ ಮತ್ತು ಪ್ರಜೆಗಳ ಹಿತಸಾಧನೆಯಲ್ಲಿ ತತ್ಪರರಾಗಿದ್ದರು. ಅವರು ಯಾವಾಗಲೂ ಸಾಂಕುಶ ಪ್ರಭುತ್ವದ ಆದರ್ಶಗಳನ್ನು ತಮ್ಮ ಮುಂದಿಟ್ಟುಕೊಂಡಿದ್ದರು.

**ಪಂಡಿತ ಮಾಧವರಾಂ, ಬೆನಾರಿಸ್.**—ಕಾಶೀ ನಗರದಲ್ಲಿ ಆಗಸ್ಟು ೧೬ನೆಯ ತಾರೀಖು ಘನ ಶ್ಯಾಮಭವನದಲ್ಲಿ ರಾಜಸೇವಾಸಕ್ತ ರಾಯ ಬಹದ್ದೂರ್ ಪಂಡಿತ್ ಮಾಧವರಾಂ ಸಾಂದ್ರವರ ಅಧ್ಯಕ್ಷತೆಯಲ್ಲಿ ವಿದ್ವನ್ಮಣಿಗಳ ಸಭೆಯೊಂದು ನಡೆಯಿತು. ಅಧ್ಯಕ್ಷರು ಪ್ರಜೆಗಳ ಪುರೋಭಿವೃದ್ಧಿಯ ಸಾಧನೆಯಲ್ಲಿಯೂ ಸನಾತನಧರ್ಮದ ಬೆಳವಣಿಗೆಯಲ್ಲಿಯೂ ತೀವ್ರಾಸಕ್ತಿಯನ್ನು ವಹಿಸಿ ನಡೆಯಿಸಿದ ಹಲವು ಕಾರ್ಯಕಲಾಪಗಳನ್ನು ವಿವರಿಸಿ, ಮಹಾಸ್ವಾಮಿಯವರ ಗುಣಕಥನ ಮಾಡಿದರು. ಈ ಕೆಳಗೆ ಕಂಡ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

"ಪ್ರಜೆಗಳ ಹಿತವೇ ತಮ್ಮ ಹಿತವೆಂದು ಭಾವಿಸಿ, ನಿರಂತರವೂ ಶ್ರಮಿಸುತ್ತ, ಭಾರತದ ಆದರ್ಶಸಂಪ್ರದಾಯಗಳನ್ನು ಗೌರವಿಸುತ್ತ ರಾಜರ್ಷಿಎಂದು ಕೀರ್ತಿಯನ್ನು ಪಡೆದಿದ್ದ ಮಹನೀಯರಾದ, ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜ ಒಡೆಯರವರ ಅಕಾಲಮರಣದಿಂದ ತಮಗುಂಟಾಗಿರುವ ಅಪಾರ ವ್ಯಸನವನ್ನು ಕಾಶಿಯಲ್ಲಿ ನೇರಿದ ಸನಾತನ ವಿದ್ವನ್ಮಣಿಗಳ ಸಭೆಯು ಸೂಚಿಸಲಿಚ್ಛಿಸುತ್ತದೆ.

"ಕಾಶೀಕ್ಷೇತ್ರದಲ್ಲಿ ಮಹಾಸ್ವಾಮಿಯವರಿಗೆ ಬಹಳ ಭಕ್ತಿ ವಿಶ್ವಾಸಗಳಿದ್ದುದರಿಂದ ಕಾಶಿಯ ಶ್ರೀ ವಿಶ್ವನಾಥಸ್ವಾಮಿಯ ದೇವಾಲಯದ ಮುಂಭಾಗದಲ್ಲಿ ಮಹಾರಾಜರ ಶಿಲಾಪ್ರತಿಮೆಯೊಂದನ್ನು ಪ್ರತಿಷ್ಠಿಸಿ ಅದಕ್ಕೆ

ಚಿರಕಾಲ ಪೂಜಾದಿಗಳು ನಡೆಯಲು ತಕ್ಕ ಏರ್ಪಾಡು ಮಾಡಬೇಕೆಂದೂ ಈ ಏರ್ಪಾಡಿಗೆ ಬೇಕಾದ ಕಾರ್ಯಕ್ರಮಗಳನ್ನು ಅಧ್ಯಕ್ಷರು ಕೂಡಲೇ ಕೈಕೊಳ್ಳಬೇಕೆಂದೂ ಸಹ ಈ ಸಭೆಯು ತೀರ್ಮಾನಿಸಿರುತ್ತದೆ.''

**ಮಹಿಳೆಯರ ಸಂತಾಪ.**—೧೯-೮-೪೦ರಲ್ಲಿ ಸರ್ ಪುಟ್ಟಣ್ಣಶೆಟ್ಟರ ಟವರ್‌ಹಾಲಿನಲ್ಲಿ ಲೇಡಿ ಮಿರ್ಜಾರವರು ಕೊಟ್ಟ ಉಪನ್ಯಾಸ.—

ಪ್ರಜೆಗಳ ಹಿತಚಿಂತನೆ ಮುತ್ತು ಅಭಿವೃದ್ಧಿಗಳೇ ತಮ್ಮ ಜೀವನ ಧ್ಯೇಯವನ್ನಾಗಿಟ್ಟುಕೊಂಡು ಆಳಿದ ರಾಜರ್ಷಿಗಳಾದ ಮಹಾರಾಜರ ನಿಧನದಿಂದ ನಿಮ್ಮೆಲ್ಲರಿಗೂ ಉಂಟಾಗಿರುವ ಸಹಿಸಲಸದಳವಾದ ಸಂಕಟವನ್ನೇ ನಾನೂ ವ್ಯಕ್ತಪಡಿಸುತ್ತಿದ್ದೇನೆ. ಅವರು ನಿಜವಾಗಿಯೂ ಎಲ್ಲರಿಗೂ ತಂದೆಯಂತಿದ್ದರು. ಅವರ ಮರಣದಿಂದ ಎಲ್ಲರೂ ಅನಾಥರಾಗಿದ್ದಾರೆ. ಪ್ರಪಂಚದ ನಾನಾ ಕಡೆಗಳಿಂದಲೂ ಆ ಪುಣ್ಯ ಪುರುಷರ ಬುದ್ಧಿ ಶಕ್ತಿಯನ್ನೂ ಪ್ರಜಾವಾತ್ಸಲ್ಯವನ್ನೂ ಕುರಿತು ಕೊಂಡಾಡಿದ್ದಾರೆ. ಪ್ರಪಂಚದ ಮಹಾ ರಾಜರುಗಳಲ್ಲಿ ಒಂದು ಮಹಾವ್ಯಕ್ತಿಯು ಇಂದಿಗೆ ಕಣ್ಮರೆಯಾದರೆಂಬುದಾಗಿ, ಅಮೇರಿಕ, ಯೂರೋಪ್ ಮತ್ತು ಭಾರತದ ಅನೇಕ ಸ್ಥಳಗಳಿಂದ ಸಂತಾಪಸೂಚಕ ಸುದ್ದಿಗಳು ಬರುತ್ತಿವೆ. ಮಹಾರಾಜರು ದಿವಂಗತರಾದುದರಿಂದ ದೇಶದ ಮಹಿಳಾವರ್ಗಕ್ಕೇ ಒಂದು ದೊಡ್ಡ ನಷ್ಟವಾಗಿದೆ. ಈ ಶತಮಾನದ ಪ್ರಾರಂಭದಲ್ಲಿ ಇದ್ದ ಸ್ತ್ರೀಯರ ಸ್ಥಿತಿಯನ್ನು ಗಮನಿಸಿ ಅಲ್ಲಿಂದೀಚೆಗೆ ನಾನಾ ರೀತಿಗಳಲ್ಲಿ ಉಂಟಾಗಿರುವ ಜಾಗೃತಿಗೂ ಮುಖ್ಯ ಕಾರಣರೆಂದರೆ ಕೀರ್ತಿಶೇಷರಾದ ಮಹಾರಾಜರೆಂದೇ ಖಚಿತವಾಗಿ ಹೇಳಬಹುದು. ಮಹಾರಾಜರವರ ತಾಯಿಯವರು ಸ್ತ್ರೀವಿದ್ಯಾಭ್ಯಾಸದ ವಿಷಯದಲ್ಲಿ ಬಹಳ ಉತ್ಸಾಹಿಗಳು ಮತ್ತು ಅವರ ಅಂತಹ ಪ್ರಯತ್ನಗಳನ್ನು ಕಾರ್ಯರೂಪಕ್ಕೆ ತರಲು ನಮ್ಮ ಮಹಾರಾಜರು ಯಾವಾಗಲೂ ಬೆಂಬಲ ಕೊಡುತ್ತಿದ್ದರು. ಬಾಲಿಕೆಯರ ಪಾಠಶಾಲೆಗಳ ಸಂಖ್ಯೆಯು ಹೆಚ್ಚಿದೆ. ಮಹಾರಾಣೀ ಕಾಲೇಜು ಸಮರ್ಪಕವಾಗಿ ಅಭಿವೃದ್ಧಿ ಹೊಂದುತ್ತಿದೆ. ಮೈಸೂರಿನ ಮುಖ್ಯ ಪಟ್ಟಣಗಳಲ್ಲಿಯೂ ಇತರ ಸ್ಥಳಗಳಲ್ಲಿಯೂ ಸುವ್ಯವಸ್ಥಿತವಾದ ಹೆಂಗಸರ ಆಸ್ಪತ್ರೆಗಳೂ, ಹೆರಿಗೆ ಆಸ್ಪತ್ರೆಗಳೂ ಏರ್ಪಾಡಾಗಿವೆ. ಇವುಗಳ ಜೊತೆಗೆ ರಾಜಕೀಯದಲ್ಲಿ ಸ್ತ್ರೀಯರು ಭಾಗವಹಿಸಲು ಅನುಕೂಲಗಳು ದೊರೆತಿವೆ. ನ್ಯಾಯವಿಧಾಯಕ ಸಭೆಗಳಲ್ಲಿಯೂ ವಿಶ್ವ

ಪದಾಸೀನರಾದ ಕಾರ್ಯನಿರ್ವಾಹಕ ಸಮಿತಿಗಳಲ್ಲಿಯೂ ಸ್ತ್ರೀಯರಿದ್ದಾರೆ. ಈ ಸಮ್ಮೇಳನವು ಮಹಾರಾಜರವರ ವಿಶೇಷ ಕೃಪೆಗೆ ಪಾತ್ರವಾಗಿ ಬೆಳೆಯುತ್ತಿದೆ.

ಇಂತಹ ಸಂತೋಷಕರವಾದ ಸಂದರ್ಭಗಳು, ಆದರ್ಶಪ್ರಭುಗಳು, ನಮ್ಮನ್ನಗಲಿ ಹೋದರು. ಮಹಾರಾಣಿಯವರಿಗೂ ಯುವರಾಣಿಯವರಿಗೂ ಇತರ ರಾಜ ಕುಟುಂಬದವರಿಗೂ ಉಂಟಾಗಿರುವ ಅಸಿಹ್ಯಜನೀಯವಾದ ದುಃಖದಲ್ಲಿ ನಾವೂ ಅನುತಾಪವನ್ನು ಸೂಚಿಸುತ್ತೇವೆ. ಇದೇ ಸಮಯದಲ್ಲಿ ನಮ್ಮ ಭಾವಿ ಮಹಾರಾಜರಿಗೂ, ಭಾವಿ ಮಹಾರಾಣಿಯವರಿಗೂ ಈ ವಿಪತ್ತಿ ನಿಂದೊದಗುವ ಸಂಕಟಕ್ಕೆ ನಮ್ಮ ಅನುತಾಪವನ್ನು ಸೂಚಿಸಿ, ದುಃಖವನ್ನು ಸಹಿಸಿಕೊಳ್ಳಲು ಅವರಿಗೆ ಚಿತ್ತಸ್ಥೈರ್ಯವನ್ನು ಕೊಡಬೇಕೆಂದು ಪರಮೇಶ್ವರನನ್ನು ಪ್ರಾರ್ಥಿಸುತ್ತೇವೆ.

## ೨೦ನೆಯ ಅಧ್ಯಾಯ

ನೃತ್ಯ ಪತ್ರಿಕೆಗಳ ಪ್ರಶಂಸೆ, ಜಯಚಾಮರಾಜ ಒಡೆಯರವರ ಪಟ್ಟಾಭಿಷೇಕ

**ಟೈಂಸ್, ಲಂಡನ್.**—ಮಹಾಸ್ವಾಮಿಯವರ ಅಕಾಲಮರಣದಿಂದ, ಭಾರತವು ಆದರ್ಶಪ್ರಭುಗಳೊಬ್ಬರನ್ನೂ, ಬ್ರಿಟಿಷ್ ಚಕ್ರಾಧಿಪತ್ಯವು ಪರಮ ವಿಶ್ವಾಸಿಗಳಾದ ಮಿತ್ರರೊಬ್ಬರನ್ನೂ ಕಳೆದುಕೊಂಡಂತಾಯಿತು. ಶ್ರೀ ಕೃಷ್ಣರಾಜ ಒಡೆಯರವರೂ ಅವರ ಪೂಜ್ಯಜನಕರೂ ಸಹ ಪ್ರಜೆಗಳ ಹಿತವೇ ತಮ್ಮ ಹಿತವೆಂದು ಭಾವಿಸಿ, ಹಲವು ರಾಜಕೀಯ ಸುಧಾರಣೆಗಳನ್ನು ಜಾರಿಗೆ ತರುವುದರ ಮೂಲಕವೂ, ವಿದ್ಯಾಭ್ಯಾಸ ಪ್ರಚಾರವನ್ನು ಹೆಚ್ಚಿಸುವುದರ ಮೂಲಕವೂ, ಅತ್ಯಂತ ಆಧುನಿಕ ವೈಜ್ಞಾನಿಕ ಸಂತೋಷಗಳ ಪ್ರಯೋಜನವನ್ನು ಪ್ರಯೋಗಿಸಿಕೊಂಡು ದೇಶದ ವ್ಯವಸಾಯ ಮತ್ತು ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದರಿಂದಲೂ ಮೈಸೂರು ಸಂಸ್ಥಾನವನ್ನು ಇತರ ಭಾರತೀಯ ಸಂಸ್ಥಾನಗಳಿಗೆ ಮಾತ್ರವೇ ಅಲ್ಲದೆ ಬ್ರಿಟಿಷ್ ಐಂಪೈಯಾಕ್ಕೂ ಸಹ ಮಾದರಿಯನ್ನಾಗಿ ಮಾಡಿದರು.

**ಸ್ಟೇಟ್ಸ್‌ಮನ್, ಕಲ್ಕತ್ತೆ.**—ಶ್ರೀ ಕೃಷ್ಣರಾಜ ಒಡೆಯರ್ ಮಹಾ ಸ್ವಾಮಿಗಳವರು ಭಾರತದ ಸಂಸ್ಥಾನಾಧೀಶ್ವರರ ವೈಕಿ ಬಹಳ ದೊಡ್ಡ

ವ್ಯಕ್ತಿಗಳು. ಒಬ್ಬ ದೊಡ್ಡ ಸಂಸ್ಥಾನದ ಮಹಾರಾಜರೆಂದು ಮಾತ್ರವೇ ಅಲ್ಲ. ಅವರ ಸದ್ಗುಣಗಳಿಗಾಗಿಯೂ ಎಲ್ಲರೂ ಅವರನ್ನು ವಿಶೇಷವಾಗಿ ಗೌರವಿಸುತ್ತಿದ್ದರು. ಮಹಾಸ್ವಾಮಿಯವರ ಅತ್ಯಂತ ಸುಂದರವಾದ ಸೃಷ್ಟಿಯೆಂದರೆ ಮೈಸೂರು ಸಂಸ್ಥಾನವೇ. ಅತ್ಯಂತ ವಿಚಕ್ಷಣೆಯಿಂದ ಅಡಳಿತ ನಡೆಯಿಸುತ್ತಿರುವ ಸೆಕ್ರಾರಿಯಂದ ಕೂಡಿ, ಸಕಲ ಸುಖಸಂತೋಷಗಳಿಂದ ನಲಿಯುತ್ತ ಎಲ್ಲಾ ಸಂಸ್ಥಾನಗಳಿಗೂ ಆದರ್ಶವಾಗಿ ಶೋಭಿಸುತ್ತಿರುವ ಮೈಸೂರು ಸಂಸ್ಥಾನವೇ ಮಹಾಸ್ವಾಮಿಯವರ ಅತ್ಯಂತ ದೊಡ್ಡದಾದ ಸ್ಮಾರಕವಾಗಿದೆ. ಮಹಾಸ್ವಾಮಿಯವರ ಆಳ್ವಿಕೆಯಲ್ಲಿ ಪ್ರಜಾ ಸಂಸ್ಥೆಗಳು ಹೇಗೆ ಬೆಳೆಯುತ್ತಾ ಬಂದಿವೆ ಎಂಬುದನ್ನು ಪರಿಶೀಲಿಸಿದರೆ ಅವರ ದೂರದರ್ಶಿತ್ವವು ವ್ಯಕ್ತವಾಗದಿರದು. ಕಳೆದ ಮೂವತ್ತೈದು ವರ್ಷಗಳಲ್ಲಿ ಮೈಸೂರು ಎಲ್ಲಾ ವಿಷಯಗಳಲ್ಲಿಯೂ, ಅದರಲ್ಲಿಯೂ ಆರ್ಥಿಕ ವಿಷಯಗಳಲ್ಲಿ, ವಿಶೇಷವಾಗಿ ಮುಂದುವರಿದಿದೆ. ಮಹಾಸ್ವಾಮಿಯವರು ನಿಜವಾಗಿಯೂ ಪ್ರಜಾಸೇವಕರಂತಿದ್ದು ಭಾರತದ ಪ್ರಭುತ್ವದ ಆದರ್ಶಗಳಿಗೆ ತಕ್ಕಂತೆಯೇ ಇದ್ದರು.

**ಅಮೃತಬಜಾರ್ ಪತ್ರಿಕೆ, ಕಲ್ಕತ್ತ.**—ಮಹಾಸ್ವಾಮಿಯವರ ಜೀವನವು ಎಷ್ಟು ಸುಸಂಸ್ಕೃತವೋ ಅಷ್ಟು ಸರಳವಾಗಿದ್ದಿತು. ಭಾರತದ ಪ್ರಾಚೀನ ಸಂಸ್ಕೃತಿಯಲ್ಲಿ ಅತ್ಯಾವಶ್ಯಕವಾದ ಆದರ್ಶಗಳೊಂದಿಗೆ ಆಧುನಿಕ ಪಾಶ್ಚಾತ್ಯ ಸಂಸ್ಕೃತಿಯ ವೈಶಿಷ್ಟ್ಯಗಳನ್ನೂ ಗ್ರಹಿಸಿ ಆದಕ್ಕನುಗುಣವಾಗಿ ರಾಜ್ಯಭಾರವನ್ನು ನಡೆಯಿಸುತ್ತಿದ್ದರು. ಸಂಸ್ಕೃತ ಸಾಹಿತ್ಯ ಮತ್ತು ವೇದಾಂತ ವಿಷಯಗಳಲ್ಲಿ ಮಹಾಸ್ವಾಮಿಯವರ ವ್ಯಾಸಂಗವು ಹಿರಿದು. ಆಟಪಾಟಗಳಲ್ಲಿ ಒಳ್ಳೆಯ ಕೌಶಲ. ಸಂಗೀತದಲ್ಲಿ—ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ಸಂಗೀತಗಳಲ್ಲಿ ಬಹಳ ಆಸಕ್ತಿ. ಮೈಸೂರು ಸಂಸ್ಥಾನದಲ್ಲಿ ಭಾರತದ ಅತ್ಯಂತ ಸುಪ್ರಸಿದ್ಧರಾದ ಸಂಗೀತಗಾರರಿರುತ್ತಾರೆ. ಧಾರ್ಮಿಕ ವಿಚಾರಗಳಾದರೂ ಸಹ ಮಹಾಸ್ವಾಮಿಯವರ ಹೃದಯ ವೈಶಾಲ್ಯವು ದೊಡ್ಡದು. ಎಲ್ಲಾ ಜಾತಿ ಮತಗಳನ್ನೂ ಒಂದೇ ಸಮನಾಗಿ ಕಂಡು ಗೌರವಿಸುತ್ತಿದ್ದರು.

**ಹಿಂದೂ, ಮದರಾಸು.**—ಶ್ರೀಮನ್ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರವರ ಸಿಂಹಾಸನದ ಪ್ರಜೆಗಳು ಅತ್ಯಂತ ಪ್ರಜಾ

ಪತ್ರಿಕಾದ ಪ್ರಭುಗಳನ್ನೂ ಭಾರತದ ನರೇಂದ್ರರು ಆದರ್ಶಮಿತ್ರ ರೊಬ್ಬರನ್ನೂ ಕಳೆದುಕೊಂಡರು. ಮಹಾಸ್ವಾಮಿಯವರ ಜೀವನವು ಬಹಳ ಸರಳ ಮತ್ತು ನಾತ್ವಿಕ: ಸಹಸುಟಿಗಳು ಚಿತ್ತಾಕರ್ಷಕ. ಮಹಾರಾಜರಾದರೂ ಅವರು ಕೇವಲ ಮನುಷ್ಯರಂತೆ ಜೀವಿಸುತ್ತಿದ್ದರು. ಅವರ ಧರ್ಮ ಶ್ರದ್ಧೆ, ದೈವಭಕ್ತಿ, ಮಹಾಸ್ವಾಮಿಯವರ ಹೃದಯ ವೈಶಾಲ್ಯವೂ ಮತ್ತು ಪ್ರಸ್ಪಷ್ಟ ಸಮಿಷ್ಟಿಯೂ ಅವರ್ಣನೀಯವಾದುವು. ಜೀವನವನ್ನು ಸುಖ ಮಯವಾಗಿ ಸಾಗಿಸುವ ಮತ್ತು ಜೀವನಕ್ಕೆ ಬೆಳಕನ್ನು ಕೊಡುವ ಕಲಾ ಸಂಸ್ಕೃತಿಗಳಿಗೆ ಅವರು ಆಶ್ರಯದಾತರಾಗಿದ್ದರು. ಮಹಾಸ್ವಾಮಿಯವರ ಆಸ್ಥಾನದಲ್ಲಿ ಸಂಗೀತ ಸಾಹಿತ್ಯ ಸಂಸ್ಕೃತಿ ಮತ್ತು ಇತರ ಲಲಿತಕಲೆಗಳಿಗೆ ಪೂರೈತ ಪ್ರೋತ್ಸಾಹವು ಭಾರತದಲ್ಲೆಲ್ಲ ಪ್ರಸಿದ್ಧವಾಗಿದ್ದಿತು. ಹಿಂದಿ ನಿಂದಲೂ ನಿರಂಕುಶಪ್ರಭುತ್ವದ ಸಂಪ್ರದಾಯದಲ್ಲಿಯೇ ಬೆಳೆದುಬಂದಿ ದ್ದರೂ ಮಹಾಸ್ವಾಮಿಯವರು ಪ್ರಜೆಗಳ ಸುಖದುಃಖಗಳು ತಮ್ಮವೆಂದು ಭಾವಿಸಿ ಪ್ರಜೆಗಳ ಹಿತಕ್ಕಾಗಿ ಹಗಲಿರುಳೆನ್ನದೆ ದುಡಿದುದರ ಫಲವಾಗಿ ಪ್ರಜೆಗಳ ಅನುಪಮವಾದ ಪ್ರೀತಿಗೌರವವನ್ನು ಗಳಿಸಿದ್ದರು. ಪ್ರಜೆಗಳು ಮಹಾಸ್ವಾಮಿಯವರಲ್ಲಿಟ್ಟಿದ್ದ ಭಕ್ತಿವಿಶ್ವಾಸಗಳು ಅನೇಕ ಪ್ರಜಾ ಸತ್ತಾತ್ಮಕ ಸರ್ಕಾರಗಳ ನಾಯಕರಿಗೆ ಸಹ ಆಶ್ಚರ್ಯವನ್ನುಂಟುಮಾಡು ವಂತಿದ್ದವು.

**ಟೈಮ್ಸ್ ಆಫ್ ಇಂಡಿಯಾ, ಮುಂಬಯಿ.**—ಮಹಾಸ್ವಾಮಿ ಯವರು ರಾಜ್ಯಭಾರದ ವಿಷಯದಲ್ಲಿ ಎಷ್ಟು ತೀವ್ರಾಸಕ್ತಿಯನ್ನು ವಹಿಸಿ ದ್ದರೂ ತಾವು ಮಾತ್ರ ದೂರವಾಗಿದ್ದಂತೆಯೇ ಇರುತ್ತಿದ್ದರು. ಪ್ರತಿ ಯೊಂದು ಬಲಾಬಲವು ಪ್ರತಿಯೊಂದು ಕೆಲಸದಲ್ಲಿಯೂ ಮಹಾಸ್ವಾಮಿ ಯವರ ಪ್ರತಿಭಾಕೌಶಲವು ಕಂಡುಬರುತ್ತಿದ್ದಿತು. ಮಹಾಸ್ವಾಮಿಯವರ ಸೌಂದರ್ಯೋಪಾಸನೆಯು ಬಹಳ ಹಿರಿದು. ಸಂಸ್ಥಾನದ ಸುಂದರ ನಗರ ಗಳೂ ಅಂದವಾದ ಬೀದಿಗಳೂ ಜೀತೋಹಾರಿಗಳಾದ ಉದ್ಯಾನಗಳೂ ಭವ್ಯವಾದ ಕಟ್ಟಡಗಳೂ ಮಹಾಸ್ವಾಮಿಯವರ ಸೌಂದರ್ಯೋಪಾಸನೆಯ ಸಾಕ್ಷಿಗಳಾಗಿವೆ. ಧರ್ಮ, ವಿದ್ಯಾಪ್ರೇಮ—ಇವು ಮಹಾಸ್ವಾಮಿಯವರ ಜೀವನದ ಉಸಿರು. ಈ ಗುಣದಿಂದ ಮಹಾಸ್ವಾಮಿಯವರಲ್ಲಿ ಪ್ರಜೆಗಳಿಗೂ ಅತ್ಯಂತ ಗಾಢವಾದ ಪ್ರೇಮವು ಬೆಳೆದಿದ್ದಿತು. ಮಹಾಸ್ವಾಮಿಯವರ

ಪ್ರತಿಭೆಯು ಸಂಸ್ಥಾನದಲ್ಲೆಲ್ಲಿಯೂ ವ್ಯಾಪಿಸಿ ಶೋಭಿಸುತ್ತಿದ್ದಿತು. ಅವರು ತಮ್ಮ ಆಜ್ಞಾಕಿತದ ನೇತೃಗಳಾದ ದಿವಾನರುಗಳನ್ನು ನೇಮಿಸಿದ ಸಂಗತಿಯೊಂದೇ ಮಹಾಸ್ವಾಮಿಯವರ ವಿವೇಕಪೂರ್ಣವಾದ ವಿವೇಚನೆಯನ್ನು ಸೂಚಿಸುತ್ತದೆ. ಮೈಸೂರಿನ ಪ್ರಗತಿಗೆ ಮಹಾಸ್ವಾಮಿಯವರು ಜೊತಾಯಿಸಿದ ದಿವಾನರುಗಳೂ ಬಹುಮಟ್ಟಿಗೆ ಕಾರಣರಾಗಿರುತ್ತಾರೆ. ಜನರ ಸ್ವಭಾವವನ್ನು ಇವರು ಒಹುಬೇಗನೆ ತಿಳಿದುಕೊಳ್ಳುತ್ತಿದ್ದರು. ಈಗಿನ ದಿವಾನರವರಾದ ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರಿಗೂ ಮಹಾಸ್ವಾಮಿಯವರಿಗೂ ಅಸದೃಶವಾದ ಪ್ರೀತಿ ವಿಶ್ವಾಸಗಳಿದ್ದುವು. ಮಹಾಸ್ವಾಮಿಯವರ ನಂಬಿಕೆಗೆ ದಿವಾನರವರೂ ಸಂಪೂರ್ಣವಾಗಿ ಅರ್ಹರಾಗಿದ್ದರು. ಪ್ರಭುಗಳ ಆಶಯಗಳನ್ನು ಕೂಡಲೇ ಗ್ರಹಿಸಿ ಅವನ್ನು ಕಾರ್ಯತಃ ಆಚರಣೆಗೆ ತರುತ್ತಿದ್ದರು. ಬಹಳ ಪುರಾತನವಾದ ಮತ್ತು ಐತಿಹಾಸ ಪ್ರಸಿದ್ಧವಾದ ವಂಶದಲ್ಲಿ ಸಂಭೂತರಾದಾಗ್ಯೂ ಮಹಾಸ್ವಾಮಿಯವರಿಗೆ ಅಧಿಕಾರದ ಆಡಂಬರಗಳ ಮೇಲೆ ಸ್ವಲ್ಪವಾದರೂ ಆಸೆ ಇರಲಿಲ್ಲ. ಮೈಸೂರು ಸಂಸ್ಥಾನವು ಅನಾದಿಯಿಂದ ಪ್ರಖ್ಯಾತವಾದ ನಾಡು. ರಾಮಾಯಣ, ಮಹಾಭಾರತಗಳ ಕಾಲಗಳಲ್ಲಿಯೂ ಕೂಡ ಈ ಸಂಸ್ಥಾನವು ಕೀರ್ತಿಯ ನೆಲೆಯಾಗಿದ್ದಿತು. ಮಹಾಸ್ವಾಮಿಯವರು ಪುರಾತನ ಮಹರ್ಷಿಗಳ ಸರಳ ಜೀವನವನ್ನು ನಡೆಯಿಸುತ್ತಿದ್ದರೂ ರಾಜರಿಗೆ ತಕ್ಕ ಗಾಂಭೀರ್ಯದಿಂದ ಕೂಡಿದ್ದರು. ಇಂತಹ ಪ್ರಭುಗಳನ್ನು ಮೈಸೂರಿನ ಮುಂದಿನ ಜನಾಂಗದವರು ಎಂದೆಂದಿಗೂ ಮರೆಯುವ ಹಾಗಿಲ್ಲ. ಮಹಾಸ್ವಾಮಿಯವರ ಜೀವನವೇ ಮುಂದಿನ ಜನಾಂಗಕ್ಕೆ ಸ್ಫೂರ್ತಿದಾಯಕವಾದ ಆದರ್ಶವಾಗಿದೆ.

**ನ್ಯಾಷನಲ್ ಕಾಲ್, ದೆಹಲಿ.**—ಶ್ರೀಮನ್ಮಹಾರಾಜರ ನಿಧನದಿಂದ ಮೈಸೂರು ಸಂಸ್ಥಾನವು ತನ್ನ ಪ್ರಭುವರ್ಯರನ್ನು ಕಳೆದುಕೊಂಡಂತೆ ಭಾರತವೂ ಮಹನೀಯರೊಬ್ಬರನ್ನು ಕಳೆದುಕೊಂಡಿತು.

## ಕನ್ನಡದ ವೃತ್ತಪತ್ರಿಕೆಗಳ ಪ್ರಶಂಸೆ

**ವಿಶ್ವಕರ್ಣಾಟಕ.**—ನಮ್ಮ ಮಹಾರಾಜರು ದಕ್ಷಿಣ ಜನಕರು, ರಾಜರ್ಷಿಗಳು, ಕರ್ಮಯೋಗಿ, ಆದರ್ಶನರೇಶರು ಎಂದು ಭಾರತದಲ್ಲೆಲ್ಲ

ಪ್ರಭಾವಾತರಾಗಿದ್ದರು. ಅವರಲ್ಲಿ ಯಾವುದೂ ಉಪಚಾರದ ಮಾತುಗಳಲ್ಲ. ಹೃದಯಾಂತರಾಳದಿಂದ ಹೊರಟ ಸ್ನೇಹ ಮತ್ತು ಪೂಜ್ಯಭಾವನೆಯ ಮಾತುಗಳು. ಯಾವಾಗಲೆ ಅವರು ಎಲ್ಲೇ ಬಿಡಾರಲು, ಮೈಸೂರಿನ ಹಳ್ಳಿಗಾಡಿನ ಒಡ ಗೌಡನ ಮಾಲಿಗೆ ಪ್ರತ್ಯಕ್ಷ ಸಂದರ್ಶನವೇ ಆಗಿದ್ದರು.

**ತಾಯಿನಾಡು.**—ಮೈಸೂರಿನ ಪ್ರಭುಗಳಾಗಿದ್ದರೂ, ಆ ಪ್ರಭುತ್ವದ ಆಡಂಬರಗಳು ಅವರಲ್ಲಿ ಕಾಣಿಸುತ್ತಿರಲಿಲ್ಲ. ರಾಜ್ಯದ ಆಡಳಿತವನ್ನು ದರ್ಬಾರಿಂದ ನಿರ್ವಹಿಸುತ್ತಿದ್ದರೂ ಸಿಕ್ಕಟ್ಟಿನ ಮಾತಾಗಿದ್ದ ಮನೋಧರ್ಮವನ್ನು ಅವರ ಜೀವನದ ಪೆಗ್ಗುರಿಯಾಗಿರ್ದಿತು. ಸಮ್ಮತಿಸರ ಮರಣದಿಂದ ಜಗತ್ತಿನ ಸಾಮಾನ್ಯ ಜನರೂ ಇಂದು ಕಣ್ಣೀರಿಡುತ್ತಿದ್ದಾರೆ. ಅದು ಅವರ ನಿಷ್ಕಲಂಕಜೀವನದ ಪರಿಣಾಮವೇ ಸರಿ. ಇಂತಹ ಮಹಾ ಪ್ರಭುಗಳು ಬಿಂದಿರಲಿಲ್ಲ. ರಾಜರ್ಷಿಗಳೆಂದು ಖ್ಯಾತಿಗೊಂಡ ಈ ಪುರುಷಶ್ರೇಷ್ಠರು ಉಚ್ಚರಾಸ್ಪದವಾದ ಕೀರ್ತಿಯನ್ನು ಸಂಪಾದಿಸಿ ಕಣ್ಮರೆಯಾದರು.

**ದೇಶಬಂಧು.**—ಸಾಮ್ರಾಟ್ ಶ್ರೀಮನ್ಮಹಾರಾಜರವರ ಈ ಮೂವತ್ತೆಂಟು ವರ್ಷಗಳ ಆಳಿಕೆಯಲ್ಲಿ ಮಹಾಸಾಮ್ರಾಜ್ಯದ ದೇಶವಾತ್ಸಲ್ಯ, ಪ್ರಜಾವಾತ್ಸಲ್ಯ, ದೂರದರ್ಶಿತ್ವಗಳಿಂದ ಸಂಸ್ಥಾಪಿಸಲ್ಪಟ್ಟಿರುವ ಉಪಕಾರ ಪರಂಪರೆಗಳನ್ನು ಬಣ್ಣಿಸುವುದಸಾಧ್ಯ. ಶ್ರೀಕೃಷ್ಣ ಮಹಾಪ್ರಭುಗಳವರ ಆಳಿಕೆಯು ಮೈಸೂರಿನ ಸ್ವರ್ಣಯುಗ.

**ಪ್ರಜಾಮತ.**—ಕರ್ನಾಟಕ ಕೀರ್ತಿ ತಾಯಿಯು ಹಸ್ತವಾಯಿತು! ಮೈಸೂರನ್ನು ಒಗತ್ತಿನಲ್ಲಿ ಆದರ್ಶ ಸಂಸ್ಥಾನವನ್ನಾಗಿ ಮಾಡಿದ ಮಹಾ ವಿಭೂತಿಯು ಕಣ್ಮರೆಯಾಯಿತು. ಮೈಸೂರಿನ ಪ್ರಜಾ ಸಮುದಾಯವು ಪ್ರತ್ಯಕ್ಷ ದೈವದಂತೆ ಭಾವಿಸಿದ್ದ ಮಹಾಪ್ರಭುಗಳನ್ನು ಕಳೆದುಕೊಂಡು ಸರ್ವಸಾಮಾನ್ಯವಾದ ದುಃಖೋದ್ರೇಕದಿಂದ ಸ್ತಂಭಿತವಾಗಿರುತ್ತದೆ. ಸಮಗ್ರ ರಾಷ್ಟ್ರವು ಏಕಾಏಕಿ ಕಾರ್ಯಶಕ್ತಿಯಿಂದ ಅಚ್ಛನ್ನವಾಗಿದೆ. ಈ ಮಹಾ ಸಂಕಟ ಸಮಯದಲ್ಲಿ ಕಣ್ಣೀರಿನ ಕಾಲುವೆಯನ್ನು ಹರಿಸುತ್ತಾ ಗದ್ಗದ ಕಂಠದಿಂದ, ಛಿದ್ರಿತಾ ಶೂನ್ಯವಾದ ಹಸ್ತಗಳಿಂದ, ಶೋಕಪೂರಿತ ಹೃದಯದಿಂದ ನಾವು ಈ ಲೇಖನವನ್ನು ಬರೆಯುತ್ತಿದ್ದೇವೆ.

**ಒಕ್ಕಲಿಗರ ಪತ್ರಿಕೆ.**—ಮೈಸೂರಿನ ಪ್ರಜೆಗಳಿಗೆ ಶ್ರೀಮನ್ಮಹಾರಾಜ ರವರು ಪ್ರತ್ಯಕ್ಷ ದೈವವಾಗಿದ್ದರು. ಅವರ ೩೮ ವರ್ಷದ ರಾಜ್ಯಭಾರವು ಮೈಸೂರಿನ ಇತಿಹಾಸದಲ್ಲಿ ಸ್ವರ್ಣಾಕ್ಷರಗಳಿಂದ ಬರೆಯಬೇಕಾದ ಕಾಲ. ಭಾರತ ರಾಷ್ಟ್ರನಾಯಕರು, ಪ್ರಮುಖರು ಶ್ರೀಮನ್ಮಹಾರಾಜರವರನ್ನು ಕವಿಯೋಗಿ, ರಾಜಋಷಿ, ಧರ್ಮಸಿಂಹ ಜನಕಮಹಾರಾಜ ಇತ್ಯಾದಿ ಪೆಸರುಗಳಿಂದ ಕರೆಯುತ್ತಿದ್ದದ್ದೇ ಅವರ ಗುಣ ಗೌರವಗಳಿಗೆ ಶಾಶ್ವತವಾದ ಸ್ಮೃತಿಸ್ತಂಭಗಳಾಗಿರುತ್ತವೆ. ಇಂತಹ ಪ್ರಜಾವತ್ಸಲರೂ ಮಹಿಮಾನ್ವಿತರೂ ಆದ ಸ್ವಭೂಗಳ ವರಲೋಕವಾಸದಿಂದ ಇಂದು ಮೈಸೂರು ಸಂಸ್ಥಾನ ಮಾತ್ರವಲ್ಲದೆ ಸಮಗ್ರ ಭಾರತವೂ ಶೋಕಾಬ್ಧಿಯಲ್ಲಿ ಮುಳುಗಿದೆ.

ಭಾರತದ ಸೂರಾರು ಸಹಾನುಭೂತಿಯಿಂದ ಒಂದು ಅನುತಾಪೋಕ್ತಿಗಳನ್ನೂ ಪ್ರೌಢ ಪತ್ರಿಕೆಗಳಲ್ಲಿ ಪ್ರಕಟವಾದ ಉಲ್ಲೇಖನಗಳನ್ನೂ ಪ್ರಕಟಿಸಲು ಸ್ಥಳ ಸಂಕೋಚದಿಂದಲೂ ಗ್ರಂಥವಿಸ್ತಾರ ಭಯದಿಂದಲೂ ಅವುಗಳಲ್ಲಿ ಕೆಲ ವನ್ನು ಮಾತ್ರ ಕೊಟ್ಟಿದೆ.

**ಶ್ರೀ ಜಯಚಾಮರಾಜೇಂದ್ರ ಒಡೆಯರವರ ಪಟ್ಟಾಭಿಷೇಕ.**—ಬಹಳ ನಿರಾಲಂಬನೆಯ ಇಷ್ಟು ದೊಡ್ಡಂಬರ ಲನೆಯ ತಾರೀಖು ಭಾನುವಾರ ಬೆಳಗ್ಗೆ ಒಂಭತ್ತೂವರೆ ಗಂಟೆಯಲ್ಲಿ ಶ್ರೀ ಜಯಚಾಮರಾಜ ಒಡೆಯರವರಿಗೆ ಪಟ್ಟಾಭಿಷೇಕ ಮಹೋತ್ಸವವು ಮಹಾ ವೈಭವದಿಂದ ಜರಿಗಿತು. ಆ ದಿವಸ ಸಕಲ ದೇವಾಲಯಗಳಲ್ಲೂ ವಿಶೇಷವಾದ ಅಭಿಷೇಕೋತ್ಸವಾದಿ ಗಳು ನಡೆದವು. ಸಕಲ ವಿದ್ಯಾಲಯಗಳಲ್ಲಿಯೂ ಸ್ಕೂಲ್ ಬಾಲಕ ಬಾಲಕಿ ಯರಿಗೆಲ್ಲಾ ಸಿಹಿಯಾದ ಪದಾರ್ಥವನ್ನು ವಂಚಿಸಲಾಯಿತು. ರಾಷ್ಟ್ರದ ಸಕಲ ಕಾರಾಗೃಹಗಳಿಂದ ಸೂರಾರು ಮಂದಿ ಖೈದಿಗಳಿಗೆ ಬಿಡುಗಡೆಯನ್ನು ಕರುಣಿಸಲಾಯಿತು. ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರವರು ಲೋಕಕಲ್ಯಾಣಕರಾದ ತಮ್ಮ ದೊಡ್ಡಪ್ಪನವರ ಸಂಗಡ ಇದ್ದ ಸಮಸ್ತ ಖೈದಿಗಳನ್ನೂ ತಕ್ಷಣ ಸಕಲ ಕಲ್ಯಾಣಗುಣಗಳಿಂದ ಕೂಡಿದವರಾಗಿರುತ್ತಾರೆ. ರಾಜ್ಯಭಾರದ ಗುರುತರವಾದ ಜವಾಬ್ದಾರಿಯು ಇವರ ಬಾಳಿಗೆ ಬಂದಿರುವುದು. ಮಹಾನ್ವಿಯವರು ಗುರುಹಿರಿಯರ ಆಶೀರ್ವಾದದಿಂದಲೂ, ಶ್ರೀ ಚಾಮುಂಡಾಂಬಾ ಕ್ಷತ್ರಾಕಟಾಕ್ಷ ದಿಂದಲೂ ಮುಂದಿನ ಪರಂಪರೆಯವರಾಗಿ ಬಂದ ಮಹೋನ್ನತವಾದ ರಾಜ್ಯಭಾರವನ್ನು

ಮಿಸಿ ರಾಷ್ಟ್ರದ ಏಳಿಗೆಯಲ್ಲಿಯೂ, ಪ್ರಜಾರಂಜನೆಯಲ್ಲಿಯೂ, ನಿರತ ರಾಗಿರುವರೆಂಬುದಕ್ಕೆ ಯಾವ ಸಂಶಯವೂ ಇಲ್ಲ.

ಶ್ರೀ ಜಯಚಾಮರಾಜೇಂದ್ರ ಒಡೆಯರವರ ಪಟ್ಟಾಭಿಷೇಕ

ಶ್ರೀ ಜಯಚಾಮರಾಜ ಒಡೆಯರವರು ಸಿಂಹಾಸನಾರೋಹಣವನ್ನು ಮಾಡಿದ ಕೂಡಲೇ ಸಮಸ್ತ ಪ್ರಜೆಗಳಿಗೂ ಈ ಕೆಳಗೆ ಕಂಡುಬರುವ ಸಂದೇಶವನ್ನು ಆಕಾಶವಾಣಿಯ ಮೂಲಕ ಅವರಿಗೆ ಕೂಡಿಸಿದರು.

ಶ್ರೀ ಜಯಚಾಮರಾಜ ಒಡೆಯರವರು ಪಟ್ಟಾಭಿಷೇಕಾನಂತರ ಆಕಾಶವಾಣಿಯ
ಮೂಲಕ ಪ್ರಜೆಗಳಿಗೆ ಸಂದೇಶವನ್ನು ನುಗ್ರಹಿಸುತ್ತಿರುವುದು

ಮೈಸೂರು ಅರಮನೆ.
೨೫ನೆಯ ಸಪ್ಟೆಂಬರ್ 1940

ನನ್ನ ಪ್ರೀತಿಪಾತ್ರರಾದ ಪ್ರಜೆಗಳೆ,

ಪೂಜ್ಯರಾದ ನಮ್ಮ ದೊಡ್ಡಪ್ಪನವರು ಕೀರ್ತಿಶೇಷರಾದ ಯುವರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರವರಲ್ಲಿ ಗೌರವವನ್ನೂ ಪ್ರೇಮವನ್ನೂ ತೋರಿ, ಶ್ರೀಮಂತರುಂದಲೂ ಬಡವರಿಂದಲೂ, ಉನ್ನತಸ್ಥಾನದವರುಂದಲೂ ಸಾಮಾನ್ಯರಿಂದಲೂ, ಸಂನ್ಮಾನದ ಬಲ್ಲಾ ಕಡೆಗಳಿಂದ ಒಂದು ಸುರಿದ ಅಸಂಖ್ಯಾತ ನಿದರ್ಶನಗಳಿಂದ ನನ್ನ ಹೃದಯ ಗಾಢವಾಗಿ ತಟ್ಟಿಹೋಗಿದೆ. ಅವರುಗಳೂ ನಾನೂ ಪಟ್ಟಿರುವ ನಷ್ಟ ಎಂತಹುದೆಂದು ಅನ್ಯ ಸಾಕ್ಷ್ಯವನ್ನು ಹೊದಗಿಸಿ, ನನಗೂ ನನ್ನ ಮನೆತನದ ಕುಟುಂಬ ವರ್ಗಕ್ಕೂ ಒಕ್ಕಾಲಾಗಿ ಮನಸ್ಸಮಾಧಾನವನ್ನು ತಂದಿವೆ: ಮತ್ತು ನಾನು ಹಿಡಿಸಿಕೊಳ್ಳಬೇಕಿರುವ ಮಹತ್ಕಾರ್ಯದಲ್ಲಿ ನನಗೆ ಧೈರ್ಯವನ್ನು ಕೊಡುವ ಬೆಂಬಲದ ಆಧಾರವಾಗಿವೆ.

ಮೈಸೂರು ಸಿಂಹಾಸನಕ್ಕೆ ಅನುಕ್ರಮವಾಗಿ ನಾನು ಬರುವ್ವನಲ್ಲಿ ಮಹಾನುಭಾವರಾದ ರಾಜಶ್ರೇಷ್ಠರನ್ನು ಹಿಂಬಾಲಿಸುತ್ತಿದ್ದೇನೆ: ಅವರು ನಿಮ್ಮೆಲ್ಲರಲ್ಲೂ ಪ್ರೇಮವಿಟ್ಟಿದ್ದರು; ತಮ್ಮ ದೈವಭಕ್ತಿಯಿಂದ, ತಮ್ಮ ಸುಜ್ಞಾನದಿಂದ, ತಮ್ಮ ಕೃಪಾಪ್ರಸನ್ನತೆಯಿಂದ, ತಮ್ಮ ವಿನಯದಿಂದ, ತಮ್ಮ ಕರ್ತವ್ಯನಿಷ್ಠೆಯಿಂದ, ತಮ್ಮ ರಾಜಗಾಂಭೀರ್ಯದಿಂದ, ರಾಜ್ಯ ಭಾರ ಹೊರುವಿಕೆಯಿಂದ, ನಿಮ್ಮೆಲ್ಲರ ಪ್ರೇಮವನ್ನು ಆಕರ್ಷಿಸಿದ್ದರು.

ಅವರ ಸೇವೆ ಎಂದೆಂದಿಗೂ ನಮ್ಮಲ್ಲಿ ನಿಲ್ಲುವುದು. ಈಗ ಆದು ಅವರ ನಷ್ಟದ ಪೂರ್ಣಾಘಾತವನ್ನು, ನಮ್ಮ ಬಾಳಿನಲ್ಲಿ ಅವರು ಬಿಟ್ಟ ದೊಡ್ಡ ಕೊರತೆಯನ್ನು, ಅನುಭವಿಸುತ್ತಿರುವ ನಮಗೆ ದುಸ್ಸಹವಾಗಿರುವುದು. ವರ್ಷಗಳು ಕಳೆದಂತೆಲ್ಲಾ, ಅವರು ನಮಗೆ ಏನಾಗಿದ್ದರು ಆ ಅರ್ಥವನ್ನೆಲ್ಲಾ ಬೆಲೆಗುಂಡು ತೀರದಂತೆಲ್ಲಾ, ಅವರ ಬಾಳಿನಿಂದ ನಮ್ಮ ಬಾಳನ್ನು ನಾವು ತಿದ್ದುವುದನ್ನು ಕಲಿತಂತೆಲ್ಲಾ, ಆ ನೆನಪು ನಮಗೆ ನವೀಯಾದ ಸೇವೆಗಾಗಿ ಬೆಳೆಯುವುದು.

ಈಗ ನಾವು ಅವರ ಮಹತ್ಕಾರ್ಯತ್ವವನ್ನು ಈಡೇರಿಸುವುದಕ್ಕಾಗಿ ನಮ್ಮನ್ನು ಅರ್ಪಣಮಾಡಿಕೊಳ್ಳಬೇಕಾಗಿದೆ. ಒಂದು ದೊಡ್ಡ ಕುಟುಂಬದ

ಭಾವನೆಯಲ್ಲಿ ನಮ್ಮನ್ನು ಮುಂದಿಟ್ಟುಕೊಳ್ಳುವುದಾದರೆ, ನಾವು ಅದನ್ನು ಈಡೇರಿಸುವುದಕ್ಕೆ ಕೈವಾಪೂರಾಗಬಲ್ಲೆವು. ಈ ಕಾಲದಲ್ಲಿ ಲೋಕದ ಬಡತನ ಹೊರಲಾಗಿಂದ ತುಂಬಿಹೋಗಿದೆ; ಈ ಕಷ್ಟಗಳನ್ನು ಬಿಡಿಸಿಕೊಳ್ಳಲು ಸಾಧ್ಯವಾದಷ್ಟೂ ಸಾಧನಗಳನ್ನು ಹುಡುಕಿ ನಾವು ಮಾಡಬೇಕು. ಈ ಭಾವನೆಯಲ್ಲಿ, ನಾನು ನನ್ನ ಪಿಯರ ಸಿಂಹಾಸನವನ್ನೇರಿದ ಈ ಶುಭಸಮಾರಂಭವನ್ನು, ನಮ್ಮನ್ನು ನನ್ನ ಪ್ರೀತಿಪಾತ್ರವಾದವನ್ನು, ನನ್ನ ಸಕಲ ಪರಿವಾರವನ್ನು ದೈವಸೂರು ಸಂಸ್ಥಾನದ ಜನರ ಸೇವೆಗಾಗಿ ಸಮರ್ಪಣ ಬೀಳ್ಕೆಯೆಂಬುದಾಗಿ ಬಗೆಸುತ್ತೇನೆ. ಇದರಲ್ಲಿ ನನ್ನೊಬ್ಬನ ಶ್ರೇಯಸ್ಸಿನಂಬೋ ಬಯಕೆಯಿಲ್ಲ. ಯಜಮಾನರಾದವರು ನಾನು ಜನ್ಮಾಗಿ ಆರಿತಿದ್ದೇನೆ. ನಿಮ್ಮ ನೆರವು, ನಿಮ್ಮ ಸಹಕಾರ, ನಿಮ್ಮ ನಂಬಿಕೆ, ನಿಮ್ಮ ಶ್ರೇಯಸ್ಸು ನನಗೆ ಬೇಕು.

ನನ್ನ ನಿಶ್ಚಿತ್ತ ಬಿಚ್ಚಿಸಿರುವ ಮುಂತ್ರ ಕರ್ತವ್ಯವು ನಿರ್ವಹಣೆಯಲ್ಲಿ ಜೀವನಸ್ಫೂರ್ತಿ, ಶಕ್ತಿಯನ್ನು ಭಗವಂತನು ನನಗೆ ಕರುಣ್ಣಿಸಲಿ; ಮುತ್ತೈದೆ ಅತ್ತೆಗೆ ಮನಸ್ಸಾದಗಲು ಯಶಸ್ಸಿವಾಗಿ ದೈವಸೂರು ಸಂಸ್ಥಾನದ ಶ್ರೇಯಸ್ಸಿನಿಂದು ನುನೆಯಲ್ಲಿಯೂ ತೊಟ್ಟಿಯಲ್ಲಿಯೂ ಹೂಕ್ಕಿ ನೆಲಸಿ ಹೋಗಲು ಜೋಗಲಿ.

## ಶ್ರೀ ಜಯಚಾಮರಾಜ ಒಡೆಯರ್.

ಈ ಬಿಳಿಯಾಗಿ ನಿಬಿಚಿಲ ಕೃಪಾನುಗತಿಯಾದ ರಜ್ಜ ಸಿಂಹಾಸನವನ್ನು ಅಲಂಕರಿಸಿರುವ ಶ್ರೀ ಜಯಚಾಮರಾಜೇಂದ್ರ ಒಡೆಯರವರು ಸಚಿವಾಪ್ತರಾಷ್ಟ್ರ ಪರಿವಾರಗಳೊಡನೆ ಚಿರಕಾಲ ಶ್ರೀಕೃಷ್ಣಸಾಮ್ರಾಜ್ಯವನ್ನು ಗಯ್ಯುತ್ತಿ ಸಕ್ಷಂತಾನವನ್ನು ಪಡೆದು ಭೂಸ್ವರ್ಗಾಚಾ ಪರಂಪರಾಲಸುಂದ ಸುವಿಸಲಿ ಯಶಕೀರ್ತಿಯನ್ನು ಅಚಿಗನಲೆಂದೂ, ರಾಜಮಾತೆಯವರಿಗೂ ರಾಜಮಹಿಷಿಯವರಿಗೂ ರಾಜಕುಂಭೂವರಿಗೂ ರಾಜಸ್ತ್ರೀಜಿಗಳಿಗೂ ಚಿರಕಾಲ ಭಕ್ತಿಪೂರ್ವಕವಾಗಿ ಶ್ರದ್ಧಾಭಕ್ತಿಯಿರಲೆಂದೂ ಭಗವಂತನು ಕೊಟ್ಟು ಸಂಯಮಿಸಲೆಂದೂ ಸಕಲರೂ ಸರ್ವಕಾಲದಲ್ಲಿಯೂ ಪ್ರಾರ್ಥಿಸೋಣ.

# ಪರಿಷತ್ತು

## ದಿವಂಗತ ಮಹಾರಾಜರವರ ಸಂಬಂಧದಲ್ಲಿ ಅಧ್ಯಕ್ಷರಾದ ಲಾರ್ಡ್ ಲಿನ್‌ಲಿತ್‌ಗೊ ರವರು ಮಾಡಿದ ಭಾಷಣ

"His Late Highness the Maharaja of Mysore was a personality whose accomplishments would have won distinction in any walk of life. As a Ruler, the manner in which he discharged the responsibilities of his great position, his close interest in the welfare of his subjects, his zeal for progress for the advancement of justice, for the development of a higher sense of civic duty, and the simplicity of his mode of life, all of them impressed deeply those of us who had the privilege of his friendship and who had been able to see him in his own State and the example which he set enhanced the prestige of the Princely Order not only in this country but far beyond its borders' ಎಂದರು. (ಅದರ ಕನ್ನಡಾನುವಾದವು:—ದಿವಂಗತರಾದ ಶ್ರೀಕಂಠದತ್ತ ಒಡೆಯರವರು ಸಮರ್ಥರಾಜರೂಪದ ಎಷ್ಟರಮಟ್ಟಿಗೆ ಅನುಗಾಲ ಯಾವುದೇ ಕ್ಷೇತ್ರದಲ್ಲಿಯಾದರೂ ಸಹ ಪ್ರಸಿದ್ಧಿಯನ್ನು ಪಡೆಯಬಲ್ಲವರಾಗಿದ್ದರು. ಸಂಸ್ಥಾನದ

ಬಿಡುವಿರುವಾಗ ಅವರು ತಮ್ಮ ಕಚ್ಚೆಪಂಚೆ ಬನಿಯನ್ ಮೇಲೆ ಕೋಟು ಹಾಕಿಕೊಂಡು ಟೋಪಿ ಧರಿಸಿ ಸೈಕಲ್ ಏರಿ ಹೊರಟರೆಂದರೆ ಅವರು ಕನಿಷ್ಠ ಒಂದು ಡಜನ್ ಸ್ನೇಹಿತರ ಮನೆಗಳಿಗಾದರೂ ಭೇಟಿ ನೀಡಿ ಬರುತ್ತಾರೆ ಎಂದೇ ಅರ್ಥ. ಅವರು ಮಾತನಾಡುವ ಶೈಲಿ ಅವರ ಸಂಭಾಷಣೆಯ ವಿಷಯ ಎಲ್ಲವೂ ಅವರ ಸ್ನೇಹಿತರನ್ನು ಆಕರ್ಷಿಸುತ್ತಿದ್ದವು. ಅವರ ಮಿತ್ರರಲ್ಲಿ ಬಹುಪಾಲು ಜನರು ಅವರಿಗಿಂತ ಹಿರಿಯರಾಗಿದ್ದರು. ಅವರು ಮಿತ್ರರನ್ನು ಭೇಟಿ ಮಾಡಲು ಹೋದಾಗ ಅವರ ಮಕ್ಕಳೊಂದಿಗೆ ಆಟವಾಡುತ್ತಿದ್ದರು. ಅವರ ಮಿತ್ರರ ಮಕ್ಕಳಿಗೆ ಅವರು ಚಿಕ್ಕಪ್ಪನಾಗಿದ್ದರು. ಅವರು ಮಕ್ಕಳಿಗೆ ಕಥೆಗಳನ್ನು ಹೇಳುತ್ತಿದ್ದರು. ಅವರು ಮಕ್ಕಳಿಗೆ ಚಿತ್ರಗಳನ್ನು ಬಿಡಿಸಿ ತೋರಿಸುತ್ತಿದ್ದರು. ಅವರು ಮಕ್ಕಳಿಗೆ ಹಾಡುಗಳನ್ನು ಹೇಳಿಕೊಡುತ್ತಿದ್ದರು. ಅವರು ಮಕ್ಕಳಿಗೆ ಆಟಗಳನ್ನು ಆಡಿಸುತ್ತಿದ್ದರು. ಅವರು ಮಕ್ಕಳಿಗೆ ಪದ್ಯಗಳನ್ನು ಹೇಳಿಕೊಡುತ್ತ

ಅಂಗಡಿಗೆ ಶ್ರೀ ಕೃಷ್ಣರಾವು ಬಟ್ಟೆಯಂಗಡಿಯವರು ಪಂಚಾಲಿ ಶ್ರೀಯುತರಲ್ಲಿ ಬಂದು ತಮಗೆ ಅವರ ಕೆಲಸ ಬೇಕೆಂದೂ ಬಗೆಬಗೆಯ ಸಾಮಾನು ಮೂಲೆಗಳಲ್ಲಿ ತುಂಬಿರುವುದೆಂದೂ ಹೇಳಿದ್ದರಿಂದ, ಮಂಚದ ಕಾಲುಮಣೆ ಬಟ್ಟೆ ಮುಂತಾದವನ್ನು ಮಾರಿ ಬಂದ ಹಣವನ್ನು ಅವರಿಗೆ ಕೊಡಬೇಕೆಂದು ರಾಮಭಟ್ಟರಿಗೆ ಸೂಚನೆ ಮಾಡಿದ್ದರು. ಶ್ರೀ ಕೃಷ್ಣರಾವು ಬಂದಿದ್ದರೆಂದು ತಿಳಿದು ಅವರು ಕೆಲಸಕ್ಕೆ ಹೋಗಿದ್ದರು. ಅವರು ಮನೆಗೆ ಬಂದಾಗ ಅವರ ಹೆಂಡತಿಯು ಕಾಲು ಕಳೆದು, ಅವರು ಮನೆಯಲ್ಲಿಲ್ಲವೆಂದು ಹೇಳಿದ್ದಳು. ಆಗ ಅವರು ಮನೆಯ ಹೊರಗೆ ಕುಳಿತುಕೊಂಡಿದ್ದರು. ರಾಮಭಟ್ಟರು ಬಂದಾಗ ಅವರಿಗೆ ಭೋಜನಕ್ಕೆ ಬಡಿಸಿದ್ದರು. ಅವರು ಊಟ ಮಾಡಿ ಎದ್ದ ಮೇಲೆ ಅವರಿಗೆ ಕೊಡಬೇಕಾದ ಹಣವನ್ನು ಕೊಟ್ಟರು. ಅವರು ಅದನ್ನು ಎಣಿಸಿ ನೋಡಿ ಅದರಲ್ಲಿ ಒಂದು ರೂಪಾಯಿ ಕಡಿಮೆ ಇದೆಯೆಂದು ಹೇಳಿದರು. ಆಗ ರಾಮಭಟ್ಟರು ಅವರಿಗೆ ಒಂದು ರೂಪಾಯಿಯನ್ನು ಕೊಟ್ಟು ಅವರನ್ನು ಕಳುಹಿಸಿಕೊಟ್ಟರು. ಅವರು ಹೋದ ಮೇಲೆ ಅವರ ಹೆಂಡತಿಯು ಗಂಡನಿಗೆ ಒಂದು ರೂಪಾಯಿ ಕೊಟ್ಟಿದ್ದರು. ಆಗ

# [illegible]

[illegible] [illegible] [illegible] [


I THINK, THERE'S MORE TO IT THAN MEETS THE EYE.
SITE FOR PAK NUCLEAR POWER PLANT
RIDICULOUS! WHAT MAKES YOU THINK SO?
SITE FOR NUCLEAR POWER PLANT

# Pak. Against Scrutiny of its Nuclear Labs

NEW DELHI June 29

Pakistan has abjured the intention of making nuclear weapons and does not possess the explosion capability necessary for the development of such weapons, Pakistan's Ambassador Mr Abdul Sattar said here today

While rejecting speculative reports about Pakistan's immirent emergence as a nuclear power, Mr Abdul Sattar also said Pakistan could not accept the "unjust and inadmissible" demand for scrutiny of its laboratories

The Ambassador said Pakistan's nuclear programme aimed at the development of peaceful uses of nuclear energy, primarily power, especially in the context of spiralling petroleum prices. His country had reconciled itself to the United States cutting off aid because it could not agree to being 'singled out for imposition of a veto on its nuclear programme'

Pakistan was, however, prepared to sign the non-proliferation treaty or accept the application of full-scope safeguards on a non-discriminatory basis His country was also committed to the view that nuclear energy should be used exclusively for peaceful purposes and to substantiate that commitment, it was prepared to contribute to the achievement of an effective non-proliferation regime and to accept any universal or regional, reciprocal and non-discriminatory inspection and control—PTI.

## Outlay on Nuclear Programme

ISLAMABAD, June 29.

Pakistan will spend nearly $45 million on its controversial nuclear programme during the next financial year beginning July 1, according to budget documents released here yesterday

Besides financing routine administrative expenses, the budgetary provision will finance laboratories and the installation of equipment at the Nuclear Technology Institute, detailed exploration of sources of uranium deposits in the country a 400-000 megawatt nuclear power station and the construction of a nuclear fuel reprocessing plant for treating spent fuel from the present nuclear power station at Karachi

The budget documents revealed that out of the $47 million budgeted last year for the programme, only $28 million were actually spent (UNIDP).

The budget includes an expenditure of $174 million on defence, an increase of nearly 12 per cent over last year.

## Single File System in MP from July 1

BHOPAL June 29

A new experimental operation 'single file system' will be launched in Madhya Pradesh from July 1 with a view to expediting transaction of governmental business This system will also reduce chances of corruption

Initially this scheme cleared by the General Administration Department, the Chief Secretary and the Chief Minister, will be implemented in Public Works Department whose Secretary, Mr Akpandya is enthusiastic about it

Under this scheme proposals originating from engineer-in-chief will go direct to the Deputy Secretary concerned After processing the file will be sent to the Minister The file will then go back with necessary orders to engineer in chief.

Efforts for speeding up work were made some years back when every file had what was called 'Milometer' which showed the date of movement of files but the Secretariat staff including those at the top killed it—PTI

## Call-girl Racket Smashed

MADRAS, June 30.

The police claim to have smashed a call-girl racket that has been in operation in Madras with some time with the co-operation of Nagarajasekhar (45) and [illegible] Iyer Prithi [illegible] Lookin[illegible] rated [illegible] Besant [illegible]

# CRP Men Arrest Striking Colleag[illegible]

## Three Kerala Cong. (I) MLAs to Attend Convention

TRIVANDRUM, June 29.

Defying the party directive, three Congress-I MLAs from Kerala will be attending the special convention convened by the Karnataka Chief Minister, Mr. Devaraj Urs at Bangalore on July 4.

Messrs. Vakkom Purushothaman, P. Balan, both KPCC-I General Secretaries, and P. R. Kurup are the three MLAs. Mr. Kurup told newsmen here today they had decided to attend the convention.

Mr. Kurup said the high command's action against Mr. Urs was an offshoot of his opposition to Mr. Sanjay Gandhi. On many occasions, he said, they had strongly expressed their resentment in the meetings of the KPCC bodies against Mr. Sanjay Gandhi's domination in the party.

The party President in Kerala, Prof. K. M. Chandy, and the Legislature Party Leader, Mr. K. Karunakaran had given an assurance on those occasions that they would raise their voice against this. But these leaders have now chosen to cut at the root of the promise they had given.

The three Congress-I leaders said they were attending the convention at Bangalore because they welcomed Mr. Urs' move for the unity of Congressmen. They, however, said they still continued to be Congress-I men.

Asked whether the stand taken by them would not result in Mr. Karunakaran losing his status as the Leader of the Opposition in the State legislature, they said it was not their concern, whether he retained that position or not. —Our Staff Reporter.

## Holiday Special Trains to Clear Rush

MDARAS, June 30.

To clear the rush of passengers, the Southern Railway will operate holiday specials to different destinations.

A special trains to Hyderabad will leave Madras Central on July 2 at 12-45 p.m. reaching Hyderabad at 10-55 a.m. the next day.

For New Delhi nine special trains will run up to July 26 on Mondays and Thursdays leaving Madras Central at 10-40 p.m. and reaching New Delhi at 2-40 p.m. on the third day. In the return direction, nine specials will leave New Delhi at 6-10 p.m. on Wednesdays and Saturdays, reaching Madras Central at 2 p.m. on the third day.

Five special trains to Trivandrum will run up to July 15, leaving Madras Central on Saturdays and Tuesdays at 10-40 p.m. reaching Tuvandrum Central [illegible] the next day. [illegible] Cen[illegible]

# Panel to Evolve Export Strategy

NEW DELHI, June 29.

A 13-member committee has been constituted by the Commerce Ministry to evolve a long-term strategy on exports.

Mr. P. L. Tandon, Director-General of the National Council of Applied Economic Research, will be its chairman.

The committee, constituted today, will suggest strategies for developing exports both in the agricultural and industrial sectors taking into account development of world trade in the eighties.

This was stated by the Commerce Minister, Mr. Mohan Dharia, while addressing the Consultative Committee of Parliament attached to his Ministry.

The committee has been asked to review the export policy resolution and recommend a suitable policy framework and steps required for creating an adequate production base and surplus for export both in the manufacturing and agricultural sectors.

It would also suggest measures for developing the required institutional infrastructure for export promotion and international marketing and for strengthening the role of the public sector in exports.

The committee has been asked to submit its recommendations within a year.

Mr. Dharia told members that the recommendations of the committee set up by the Marine Products Exports Development Authority would be discussed next month with the Agriculture Ministry. Inter-ministerial discussions on the report had just been completed.

On the question of glut in potatoes, he requested members to persuade State Governments to direct the State Marketing Federations and other marketing organisations to take a more active interest in buying up the surplus from growers.—PTI.

## Obituary

JOACHIM ALVA

NEW DELHI, June 29.

Mr. Joachim Alva, member of Parliament from 1952 to 1974 and veteran journalist, died here on Thursday after a brief illness. He was 78.

Mr. Alva had been admitted to the Dr. Ram Manohar Lohia Hospital on Wednesday for cardiac and respiratory complications. He is survived by two sons.

Mrs. Margaret Alva, Cong. (I) member of Parliament, is the daughter-in-law of the deceased.—UNI.